ಪ್ರಬುದ್ಧ ಕರ್ಣಾಟಕ

ಸಂಪುಟ ೮೯ ಸಂಚಿಕೆ ೩೪೭-೩೪೮

೨೦೧೩

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಪ್ರಬುದ್ಧ ಕರ್ಣಾಟಕ

ಸಂಪುಟ ೮೯

ಸಂಚಿಕೆ ೩೪೭-೩೪೮

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೨೦೧೩

Prabuddha Karnataka : A Kannada Quarterly of the University of Mysore, Volume 89, Nos. 347-348; Edited by Prof. K.N. Ganga Naik and Sri. B.V. Sridhar, Published by the Director, Prasaranga, Manasagangotri, University of Mysore, MYSORE - 570 006. Pages: viii + 80

ಜಾಲತಾಣ: http://www.uni-mysore.ac.in/publications

ಪ್ರಧಾನ ಸಂಪಾದಕರು

ಪ್ರೊ. ಸಿ. ನಾಗಣ್ಣ

ಸಂಪಾದಕರು

ಪ್ರೊ. ಕೆ.ಎನ್. ಗಂಗಾ ನಾಯಕ್

ಶ್ರೀ ಬಾ.ವೇ. ಶ್ರೀಧರ

ಪ್ರಕಾಶಕರು

ಪ್ರೊ. ಸಿ. ನಾಗಣ್ಣ

ನಿರ್ದೇಶಕರು

ಪ್ರಸಾರಾಂಗ

ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಮುದ್ರಕರು

ಶ್ರೀ ಎಸ್. ಆನಂದ

ನಿರ್ದೇಶಕರು

ವಿಶ್ವವಿದ್ಯಾನಿಲಯ ಮುದ್ರಣಾಲಯ

ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಮುನ್ನುಡಿ

ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ಣಾಟಕ – ಇವೆಲ್ಲ ನಮ್ಮ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ತ್ರೈಮಾಸಿಕಗಳು; ಹಾಗೆಯೇ ಆಂಗ್ಲ ಭಾಷೆಯಲ್ಲಿ ಬರುತ್ತಿರುವ *my*SCIENCE ಹಾಗೂ *my*SOCIETY ಅರ್ಧವಾರ್ಷಿಕಗಳು. ಕನ್ನಡದಲ್ಲಿ ಪಡಿಮೂಡುತ್ತಿರುವ ನಿಯತಕಾಲಿಕೆಗಳ ಕೊಡುಗೆ ದೊಡ್ಡದು. ಇಂದಿಗೂ ಸಂಶೋಧನೆ ಹಾಗೂ ಗ್ರಂಥಾಲಯದ ಭಾಷೆ ಇಂಗ್ಲಿಷ್ ಎಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಹಾಗಾಗಿ ಆಂಗ್ಲ ಭಾಷೆಯಲ್ಲಿ ಸಂಶೋಧನಾ ಪ್ರಬಂಧಗಳನ್ನು ರಚಿಸುವವರಿಗೆ ಒಂದು ಅರ್ಥದಲ್ಲಿ ಹಾದಿ ಸುಗಮ; ಏಕೆಂದರೆ ಜಗತ್ತಿನಾದ್ಯಂತ ಈ ಭಾಷೆ ಬಳಕೆಯಲ್ಲಿದ್ದು ಪಾರಿಭಾಷಿಕ ಪದಗಳು ಸಿದ್ಧವಾಗಿ ದಕ್ಕುತ್ತವೆ; ಸಾರ್ವತ್ರಿಕವಾಗಿ ಬಳಕೆ ಮಾಡಲೂ ಒದಗುತ್ತವೆ. ಆದರೆ ಕನ್ನಡದಲ್ಲಿ ವೈಜ್ಞಾನಿಕ ವಿಷಯಗಳ ಮೇಲೆ ಸಂಶೋಧನಾತ್ಮಕ ಪ್ರಬಂಧ ಬರೆಯುವವರಿಗೆ ಅಷ್ಟು ಅನುಕೂಲಗಳಿಲ್ಲ. ಆದಾಗ್ಯೂ ಪ್ರಾದೇಶಿಕ ಭಾಷೆಯ ಮೂಲಕ ವಿಜ್ಞಾನವನ್ನು ಅರ್ಥಮಾಡಿಸುವ ಹೊಣೆಗಾರಿಕೆಯನ್ನು ಕನ್ನಡ ವಿಜ್ಞಾನ ಲೇಖಕರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಇದು ವಿಜ್ಞಾನ ಮತ್ತು ಮಾನವಿಕಗಳ ಮಾತಾಯಿತು. ಇನ್ನು **ಪ್ರಬುದ್ಧ ಕರ್ಣಾಟಕಕ್ಕೆ** ತನ್ನದೇ ಆದ ಹಿನ್ನೆಲೆಯಿದೆ, ಇತಿಹಾಸವಿದೆ. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳಂಥ ಮಹನೀಯರು ಕಟ್ಟಿ ಬೆಳೆಸಿದ ನಿಯತಕಾಲಿಕೆಯಿದು. ಮೈಸೂರು ವಿಶ್ವವಿದ್ಯಾನಿಲಯದ ಜೊತೆ ಜೊತೆಗೇ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡ ಹೆಗ್ಗಳಿಕೆ ಈ ನಿಯತಕಾಲಿಕೆಗಿದೆ. ಹಾಗಾಗಿ ಕರ್ನಾಟಕದ ಪ್ರಬುದ್ಧ ಚಿಂತಕರು ಈ ನಿಯತಕಾಲಿಕೆಯನ್ನು ಪ್ರೀತಿಯಿಂದ ನೋಡಿಕೊಳ್ಳಬೇಕಾದ ಜವಾಬ್ದಾರಿ ಹೊತ್ತಿದ್ದಾರೆ. ಆ ಕಾಲದ ಕಠಿಣವಾದ ಮಾನದಂಡಗಳನ್ನು ಇಟ್ಟು ಪ್ರಕಟಣೆಯ ಪ್ರಕ್ರಿಯೆಯನ್ನು ನಿಧಾನಗೊಳಿಸದೆ ಹೊಸದಾಗಿ ಬರಹ ಕಲಿತು ಸಾಗುತ್ತಿರುವ ಯುವ ವಿದ್ವಾಂಸರನ್ನು ತಿದ್ದಿ ಮುನ್ನಡೆಸುವ ದಿಶೆಯಲ್ಲಿ ನಮ್ಮ ಎಲ್ಲ ನಿಯತಕಾಲಿಕೆಗಳ ಸಂಪಾದಕ ಮಂಡಳಿಗಳ ಸಂಚಾಲಕರು ಹಾಗೂ ಸದಸ್ಯರು ಬಲು ಆಸ್ಥೆಯಿಂದ ಕಾರ್ಯೋನ್ಮುಖರಾಗಿದ್ದಾರೆ. ಅವರಿಗೆ ಹಾಗೂ ಅಂದವಾಗಿ ಇವನ್ನು ಪ್ರಕಟಗೊಳಿಸುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಸಿ. ನಾಗಣ್ಣ ಅವರಿಗೆ ಹಾಗೂ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಎಸ್. ಆನಂದ ಅವರಿಗೆ ನನ್ನ ಶುಭಕಾಮನೆಗಳನ್ನು ತಿಳಿಸಲು ಹರ್ಷಿಸುತ್ತೇನೆ.

ಪ್ರೊ. ಕೆ.ಎಸ್. ರಂಗಪ್ಪ
ಕುಲಪತಿ

ಪ್ರಕಾಶಕರ ನುಡಿ

ಪ್ರಬುದ್ಧ ಕರ್ಣಾಟಕ ನಡೆದು ಬಂದ ದಾರಿಯನ್ನು ನೆನೆದರೆ ಅಭಿಮಾನದ ಜೊತೆಗೆ ದಿಗಿಲೂ ಉಂಟಾಗುತ್ತದೆ. ದಿಗಿಲೇಕೆಂದರೆ ನಮ್ಮ ಹಿರೀಕರು ಈ ಸಾಹಿತ್ಯ ಪತ್ರಿಕೆಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಒಂದು ಗರಿಷ್ಠ ಜಲಚಿಹ್ನೆಯನ್ನು ನಿರ್ಮಿಸಿಬಿಟ್ಟಿದ್ದಾರೆ. ಕಾಲ ಕಳೆದಂತೆ ಸ್ವಲ್ಪ ಸ್ವಲ್ಪವೇ ರಿಯಾಯ್ತಿ ಕೊಟ್ಟುಕೊಂಡು ಇಲ್ಲಿಗೆ ತಲುಪಿದ್ದೇವೆ. ಹೊಸ ಹೊಸ ಜ್ಞಾನಕ್ಷೇತ್ರಗಳು ಅನಾವರಣವಾಗುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಹೊಸ ತಲೆಮಾರಿನ ವಿದ್ವಾಂಸರು ಆ ಎಲ್ಲೆಗಳನ್ನು ಎಟುಕಿಸಿಕೊಳ್ಳಲು ತವಕಿಸುತ್ತಿದ್ದಾರೆ. ಹೊಸದರ ಅನ್ವೇಷಣೆಯ ಭರಾಟೆಯಲ್ಲಿ ಪಾರಂಪರಿಕವಾದ ಶಿಸ್ತು ಕೈಬಿಟ್ಟುಹೋಗಬಾರದು ಎಂಬ ಕಾಳಜಿಯೂ ನಮಗಿದೆ. ಈ ದೃಷ್ಟಿಯಿಂದ ಸಂಪಾದಕರಾದ ಪ್ರೊ. ಕೆ.ಎನ್. ಗಂಗಾ ನಾಯಕ್ ಮತ್ತು ಶ್ರೀ ಬಾ.ವೇ. ಶ್ರೀಧರ ಅವರು ತುಂಬ ಸಂಯಮದಿಂದಲೇ ಪ್ರಬುದ್ಧ ಕರ್ಣಾಟಕ ದ ಈ ಸಂಚಿಕೆಯನ್ನು ಸಿದ್ಧಗೊಳಿಸಿದ್ದಾರೆ.

ಸನ್ಮಾನ್ಯ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರು ನಮಗೆ ಅನವರತ ನೀಡುತ್ತಿರುವ ಪ್ರೋತ್ಸಾಹಕ್ಕಾಗಿ ಅವರಿಗೆ ಆಭಾರಿಯಾಗಿದ್ದೇನೆ. ಮಾನ್ಯ ಕುಲಸಚಿವರಾದ ಪ್ರೊ. ಸಿ. ಬಸವರಾಜು ಅವರಿಗೆ ವಂದನೆಗಳು.

ಈ ಗ್ರಂಥ ನಿರ್ಮಾಣದಲ್ಲಿ ಬೇರೆ ಬೇರೆ ಭೂಮಿಕೆಯ ನನ್ನ ಸಹೋದ್ಯೋಗಿಗಳಾದ ಶ್ರೀ ಸ.ರ. ಸುದರ್ಶನ, ಶ್ರೀಮತಿ ಟಿ. ಕಮಲಮ್ಮ, ಶ್ರೀಮತಿ ಜಿ.ಬಿ. ಮಂಜುಳ ಹಾಗೂ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಎಸ್. ಆನಂದ ಅವರಿಗೆ ಹಾಗೂ ಎಲ್ಲ ಸಿಬ್ಬಂದಿಗಳಿಗೂ ನನ್ನ ನೆನಕೆಗಳು.

ಸಿ. ನಾಗಣ್ಣ
ನಿರ್ದೇಶಕ

ಸಂಪಾದಕರ ನುಡಿ

ಪ್ರಬುದ್ಧ ಕರ್ಣಾಟಕದ ೮೯ ನೇ ಸಂಪುಟದ ಈ ಸಂಯುಕ್ತ ಸಂಚಿಕೆಯನ್ನು (೩೪೭-೪೮) ಓದುಗರ ಕೈಗೊಪ್ಪಿಸಲು ಸಂತೋಷವಾಗುತ್ತಿದೆ.

ಪ್ರೊ. ಕೆ.ಎಸ್. ರಂಗಪ್ಪನವರು ಮೈಸೂರು ವಿ.ವಿ. ನಿಲಯದ ಕುಲಪತಿಗಳಾದ ನಂತರ ಪ್ರಕಟವಾಗುತ್ತಿರುವ ಮೊದಲ ಸಂಚಿಕೆ ಇದು. ವಿ.ವಿ. ನಿಲಯದ ಪ್ರಕಟಣೆಗಳು ಹಾಗೂ ನಿಯತಕಾಲಿಕಗಳ ಬಗೆಗೆ ಮಾನ್ಯ ಕುಲಪತಿಗಳು ಅತೀವ ಆಸಕ್ತಿ ತೋರುತ್ತಿದ್ದಾರೆ.

ಪ್ರಬುದ್ಧ ಕರ್ಣಾಟಕಕ್ಕೆ ಲೇಖನಗಳನ್ನು ಕಳಿಸುವ ಲೇಖಕರು ಲೇಖನದಲ್ಲಿನ ಉದ್ಧರಣಗಳಿಗೆ ಆಕರ ವಿವರಗಳನ್ನೂ, ಕೊನೆಯಲ್ಲಿ ತಮ್ಮ ವಿಳಾಸವನ್ನೂ, ದೂರವಾಣಿ ಸಂಖ್ಯೆಯನ್ನೂ ನೀಡಬೇಕೆಂದು ಕೋರುತ್ತೇವೆ.

ಪ್ರಬುದ್ಧ ಕರ್ಣಾಟಕಕ್ಕೆ ಲೇಖನಗಳನ್ನು ಈ ಕೆಳಕಂಡ ವಿಳಾಸಕ್ಕೆ ಕಳುಹಿಸಬೇಕೆಂದು ಕೋರುತ್ತೇವೆ :

ನಿರ್ದೇಶಕರು
ಪ್ರಸಾರಾಂಗ
ಮೈಸೂರು - ೫೭೦ ೦೦೬

ಸಂಪಾದಕರು

ಪ್ರೊ. ಕೆ.ಎನ್. ಗಂಗಾ ನಾಯಕ್
ಶ್ರೀ ಬಾ.ವೇ. ಶ್ರೀಧರ

ಪರಿವಿಡಿ

ಈ ಸಂಚಿಕೆಯ ಲೇಖಕರು

೧. **ಪ್ರೊ. ಟಿ.ಎಸ್. ಕೃಷ್ಣಮೂರ್ತಿ**
ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು
೨೮೧, ೩ನೇ ಮುಖ್ಯ ರಸ್ತೆ
ಇಸ್ರೋ ಬಡಾವಣೆ
ಬೆಂಗಳೂರು – ೭೮

೨. **ದಿ. ನಾ. ನಾಗಪ್ಪ**
ನಿವೃತ್ತ ಹಿಂದಿ ಪ್ರಾಧ್ಯಾಪಕರು
ಮಾನಸಗಂಗೋತ್ರಿ
ಮೈಸೂರು – ೦೬

೩. **ಡಾ. ಬಿ.ಎಸ್. ಗೀತಾ**

೪. **ಡಾ. ವಿ. ಭಾಗ್ಯಲಕ್ಷ್ಮಿ**
ನಂ. ೨೩೮, ೬ನೇ ಮೇನ್
ಟಿ. ನರಸೀಪುರ ರಸ್ತೆ
ಆಲನಹಳ್ಳಿ ಬಡಾವಣೆ
ಮೈಸೂರು – ೨೮

೫. **ಎಚ್.ಎಸ್. ರುಕ್ಮಿಣಿ**
ಸಂಶೋಧನಾ ವಿದ್ಯಾರ್ಥಿನಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

೬. **ದೊರೆಸ್ವಾಮಿ**
ಸಂಶೋಧನಾ ವಿದ್ಯಾರ್ಥಿ
ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು – ೦೬

೭. **ಶಿವಲಿಂಗಮೂರ್ತಿ**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಚಿಕ್ಕನಾಯಕನಹಳ್ಳಿ
ತುಮಕೂರು ಜಿಲ್ಲೆ

೮. **ಪ್ರೊ. ಕೆ.ಎನ್. ಗಂಗಾ ನಾಯಕ್**
ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು – ೦೬

೯. **ಅಶೋಕ ಜಿ.ಎಸ್**
ಸಹಾಯಕ ಪ್ರಾಧ್ಯಾಪಕರು
ಪ್ರಥಮ ದರ್ಜೆ ಕಾಲೇಜು
ಬಾಪೂಜಿ ನಗರ
ಶಿವಮೊಗ್ಗ – ೫೭೭ ೨೦೧

ಶ್ರೀಮದ್ ವಾಲ್ಮೀಕಿ ರಾಮಾಯಣದ ಸೀತಾ ಪರಿತ್ಯಾಗ ವೃತ್ತಾಂತ : ಮೂಲಕ್ಕೆ ಕೊಂಚ ತಿದ್ದುಪಡಿ

– ಪ್ರೊ. ಟಿ.ಎಸ್. ಕೃಷ್ಣಮೂರ್ತಿ

ರಾಮನು ಸೀತೆಯನ್ನು ಪರಿತ್ಯಾಗ ಮಾಡಿದ ರಾಮಾಯಣದ ವೃತ್ತಾಂತವು ರಾಮನ ಒಂದು ಅಮಾನವೀಯ ನಡವಳಿಕೆ ಎಂದು ಅನೇಕ ವಿಚಾರವಾದಿಗಳು ಭಾವಿಸಿದ್ದಾರೆ. ಈ ವೃತ್ತಾಂತವು ರಾಮಾಯಣದ ಉತ್ತರಕಾಂಡದಲ್ಲಿದೆ. ಸಂಶೋಧಕರ ಪ್ರಕಾರ ವಾಲ್ಮೀಕಿಯ ಮೂಲ ಕೃತಿಯು ಸುಗ್ರೀವ, ವಿಭೀಷಣ ಮತ್ತು ಆಂಜನೇಯ ಮುಂತಾದವರ ಉಪಸ್ಥಿತಿಯಲ್ಲಿ ಅಯೋಧ್ಯೆಯ ರಾಜನಾಗಿ ರಾಮನು ಪಟ್ಟಾಭಿಷಿಕ್ತನಾಗುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ (ಯುದ್ಧಕಾಂಡ, ಸರ್ಗ ೧೩೧). ರಾಮನ ಆಳ್ವಿಕೆಯ ಒಂದು ಸುಂದರ ವಿವರಣೆಯೂ ಅಲ್ಲಿದೆ. ಎಲ್ಲ ವರ್ಗದ ಪ್ರಜೆಗಳೂ ಸುಖಿ, ಸಮೃದ್ಧಿ ಮತ್ತು ಶಾಂತಿಯನ್ನು ಅನುಭವಿಸುತ್ತಿದ್ದರೆಂದೂ ರಾಮನು ಅಭಿಷಿಕ್ತನಾದ ಮೇಲೆ ಅನೇಕ ಯಜ್ಞ–ಯಾಗಾದಿಗಳನ್ನು ನೆರವೇರಿಸುವ ಮೂಲಕ ದೇವತೆಗಳನ್ನೂ ಪ್ರಜೆಗಳನ್ನೂ ಸಂತುಷ್ಟರನ್ನಾಗಿಸಿದನೆಂದೂ ವರ್ಣಿಸಲಾಗಿದೆ. ಸಾಹಿತ್ಯ ಸಂಪ್ರದಾಯದಂತೆ ರಾಮಾಯಣ ಇಲ್ಲಿಗೆ ಮುಕ್ತಾಯವಾಗಬೇಕು.

ಉತ್ತರಕಾಂಡದ ಹೆಸರೇ ಸೂಚಿಸುವಂತೆ ರಾಮನ ಜೀವನದ ಮುಂದಿನ ಭಾಗವನ್ನು ವರ್ಣಿಸುತ್ತದೆ. ಆದರೆ ಈಗಿರುವಂತೆ ಉತ್ತರಕಾಂಡವು ಲಂಕೆಯ ಪೂರ್ವ ಇತಿಹಾಸದಿಂದ ಪ್ರಾರಂಭವಾಗುತ್ತದೆ. ಲಂಕೆಯನ್ನು ಆಳಿದವರೆಂದರೆ ಕ್ರಮವಾಗಿ ಮಾಲ್ಯವಂತ, ಸುಮಾಲಿ, ಮಾಲಿ, ವೈಶ್ರವಣ, ಕೊನೆಗೆ ರಾವಣ. ಇವರೆಲ್ಲರ ಪರಾಕ್ರಮಾದಿ ವಿಷಯಗಳನ್ನು ಮೂವತ್ತು ಮೂರು ದೀರ್ಘ ಸರ್ಗಗಳಲ್ಲಿ ವರ್ಣಿಸಲಾಗಿದೆ. ಸಾಲದ್ದಕ್ಕೆ ಇಂದ್ರಜಿತುವಿನ ಜನನ, ಅವನ ಪರಾಕ್ರಮ ಮತ್ತು ಅವನು ಇಂದ್ರನನ್ನು ಗೆದ್ದ ವಿವರಗಳೂ, ಕೆಲವು ಸರ್ಗಗಳಲ್ಲಿ ಬಂದಿವೆ. ಇವೆಲ್ಲವನ್ನೂ ರಾಮನಿಗೆ ಅಗಸ್ತ್ಯ ಮಹರ್ಷಿಗಳು ವರ್ಣಿಸುತ್ತಾರೆ. ಇಷ್ಟೇ ಸಾಲದೆಂದು ಇನ್ನೂ ಕೆಲವು ಸರ್ಗಗಳಲ್ಲಿ ವಾಲಿ, ಸುಗ್ರೀವ ಇವರ ಜನ್ಮ, ಪರಸ್ಪರ ವಿರೋಧ, ವಾಲಿಯ ಹತ್ಯೆ – ಈ ಕಥೆಗಳೂ, ಆಂಜನೇಯನ ಜನ್ಮ, ಪ್ರವರ್ಧಮಾನ ಮತ್ತು ಅವನ ಇತಿಹಾಸ, ಮುಂತಾದವೂ ಸುದೀರ್ಘವಾಗಿಯೇ

ವರ್ಣಿತವಾಗಿವೆ. ಈ ಎಲ್ಲ ಕಥೆಗಳ ಪ್ರಸ್ತುತತೆಯನ್ನು ತಿಳಿಯುವುದು ಕಷ್ಟವೇ. ಸಾಲದ್ದಕ್ಕೆ ಅಹಲ್ಯೆಯ ಕಥೆಯು ಹಿಂದೆ ಬಾಲಕಾಂಡದಲ್ಲಿ ಹೇಳಿರುವ ಕಥೆಗಿಂತ ಭಿನ್ನವಾಗಿದೆ. ಕವಿಯೇ ತನ್ನ ಕೃತಿಯನ್ನು ಹೀಗೆ ವ್ಯತ್ಯಸ್ತವಾಗಿ ಬರೆದಿರಲು ಸಾಧ್ಯವೇ ? ಎಂಬ ಸಂಶಯ ಮೂಡುತ್ತದೆ. ಪ್ರಸ್ತುತ ಉತ್ತರಕಾಂಡದಲ್ಲಿ ಬಂದಿರುವ ಶತ್ರುಘ್ನನು ಲವಣಾಸುರನನ್ನು ಕೊಂದ ಕಥೆ ಆಶ್ಚರ್ಯವನ್ನು ಹುಟ್ಟಿಸುತ್ತದೆ. ಇಲ್ಲಿಯವರೆಗೆ ಶತ್ರುಘ್ನನಿಗೆ ಯಾವ ಪಾತ್ರವೂ ಇರಲಿಲ್ಲ. ಆದ್ದರಿಂದ ಅವನು ಹೆಸರಿನಿಂದ ಮಾತ್ರವಷ್ಟೇ ಅಲ್ಲ, ಪರಾಕ್ರಮದಿಂದಲೂ ಶತ್ರುಘ್ನ, ಅಂದರೆ, ಶತ್ರುಗಳನ್ನು ವಿನಾಶಗೊಳಿಸಬಲ್ಲವನು–ಎಂದು ತೋರಿಸಲು ಯಾರಿಗೋ ಅನಿಸಿ ಅವರು ಈ ವೃತ್ತಾಂತವನ್ನು ಬರೆದು ಸೇರಿಸಿರಬೇಕು. ಈ ಆಧಾರಗಳ ಮೇಲೆ ಉತ್ತರಕಾಂಡವು ಅನಂತರ ಕಾಲದಲ್ಲಿ ಅನೇಕ ಜನರಿಂದ ಪ್ರಕ್ಷಿಪ್ತವಾಗಿದೆ – ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಮುಂದೆ ಬಂದ ಲೇಖಕರು ಅಯೋಧ್ಯೆಯ ರಾಜನಾದ ರಾಮನ ಕೆಲವು ವೃತ್ತಾಂತಗಳನ್ನು ಸೇರಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು ಎರಡು : ಶಂಬೂಕ ವಧೆ ಮತ್ತು ಸೀತಾಪರಿತ್ಯಾಗ. ಶಂಬೂಕ ವೃತ್ತಾಂತದ ಬಗ್ಗೆ ನಾನು ಡಾ. ಕೆ. ಕೃಷ್ಣಮೂರ್ತಿಗಳಿಗೆ ಸಲ್ಲಿಸಿದ ಗೌರವ ಗ್ರಂಥದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದೇನೆ. ಇನ್ನು ಸೀತಾಪರಿತ್ಯಾಗ ವೃತ್ತಾಂತ ಉತ್ತರಕಾಂಡದಲ್ಲಿ ಕಂಡುಬಂದಿರುವಂತೆ ಸಂಕ್ಷಿಪ್ತವಾಗಿ ಹೀಗಿದೆ :

ರಾಮನು ಅಯೋಧ್ಯೆಯ ರಾಜನಾಗಿ ಸೀತಾದೇವಿಯೊಂದಿಗೆ ಸುಖವಾಗಿ ಕಾಲಕಳೆಯುತ್ತಿದ್ದನು. ಗರ್ಭಿಣಿಯಾದ ಸೀತಾದೇವಿಯು ಕಾಡಿನ ಋಷ್ಯಾಶ್ರಮಗಳಲ್ಲಿ ಕೊಂಚಕಾಲ ಇದ್ದು ಬರಬೇಕೆಂಬ ತನ್ನ ಬಯಕೆಯನ್ನು ರಾಮನ ಮುಂದೆ ವ್ಯಕ್ತಗೊಳಿಸಿದ್ದಳು. ಏತನ್ಮಧ್ಯೆ ಸ್ತ್ರೀಲಂಪಟನಾಗಿದ್ದ ರಾವಣನ ಬಂಧನದಲ್ಲಿದ್ದ ಸೀತೆಯ ಚಾರಿತ್ರ್ಯದ ಬಗ್ಗೆ ಜನರಲ್ಲಿ ಸಂಶಯ ಉಂಟಾಯಿತು. ಈ ಬಗ್ಗೆ ಗೂಢಚಾರನಿಂದ – ರಾವಣನ ಅರಮನೆಯಲ್ಲಿ ಒಂದು ವರ್ಷ ಕಳೆದ ಹೆಂಗಸಿನೊಡನೆ ಪುನಃ ರಾಮ ಜೀವನ ನಡೆಸುವದು ಸಮಂಜಸವೆ? – ಎಂದು ಜನರು ಮಾತನಾಡಿಕೊಳ್ಳುತ್ತಿದ್ದ ವಿಷಯ ರಾಮನ ಕಿವಿಗೆ ಬಿದ್ದಿತು. ಈ ಅಪವಾದವು ರಾಮನಲ್ಲಿ ದಿಗ್ಭ್ರಮೆಯನ್ನೂ ತೀವ್ರ ಮನೋವೇದನೆಯನ್ನೂ ಉಂಟುಮಾಡಿತು. ಇದರ ಬಗ್ಗೆ ಚಿಂತಿಸುತ್ತಾ ಅವನು ತನ್ನ ಸೋದರರನ್ನು ಕರೆದು ಈ ಅಪವಾದವನ್ನು ಅವರಿಗೆ ತಿಳಿಸಿ, ತನ್ನ ತೀರ್ಮಾನವನ್ನು ಪ್ರಕಟಪಡಿಸಿದನು. ಅದು ಹೀಗಿತ್ತು :

"ಸೀತೆಯನ್ನು ಕುರಿತಾದ ಈ ಅಪವಾದವು ತನ್ನ ಹೃದಯವನ್ನು ಕೊರೆಯುತ್ತಿದೆ. ಇಂತಹ ಕುಖ್ಯಾತಿಯ ಫಲವಾಗಿ ನನ್ನ ಮತ್ತು ನನ್ನ ವಂಶದ ಗೌರವವು ಕಲುಷಿತಗೊಂಡು ನನಗೆ ಸ್ವರ್ಗದ ಬಾಗಿಲು ಮುಚ್ಚಲಿದೆ. ಆದರಿಂದ ನಾನು ಎಷ್ಟೊಂದು ಕುಗ್ಗಿ ಹೋಗಿದ್ದೇನೆಂದರೆ ನಾನು ಬದುಕುವುದೇ ಬೇಡವೆನಿಸಿದೆ. ನಿಮ್ಮಿಂದ ದೂರವಾಗಲೂ ನಾನು ಸಿದ್ಧ. ಇನ್ನು ಸೀತೆಯ ಬಗ್ಗೆ ಹೇಳುವುದೇನಿದೆ ? ನಾನು ಸೀತೆಯನ್ನು ಪರಿತ್ಯಜಿಸಲು ತೀರ್ಮಾನಿಸಿದ್ದೇನೆ. ಈ ತೀರ್ಮಾನವನ್ನು ನೀವು ಯಾರೂ ವಿರೋಧಿಸಬಾರದು".

ಅನಂತರ ರಾಮನು 'ಗರ್ಭಿಣಿಯ ಬಯಕೆಯನ್ನು ತೀರಿಸುವ ನೆಪದಲ್ಲಿ' ಸೀತೆಯನ್ನು ವಾಲ್ಮೀಕಿ ಮಹರ್ಷಿಗಳ ಆಶ್ರಮದ ಸಮೀಪದ ಕಾಡಿಗೆ ಕರೆದುಕೊಂಡು ಹೋಗಿ ಅಲ್ಲಿ ಬಿಟ್ಟು ಬರಲು ಲಕ್ಷ್ಮಣನಿಗೆ ಆಜ್ಞೆ ಮಾಡಿದನು. ಲಕ್ಷ್ಮಣನು ಸೀತೆಯನ್ನು ವಾಲ್ಮೀಕಿ ಮಹರ್ಷಿಗಳ ಆಶ್ರಮದ ಸಮೀಪದಲ್ಲಿ ಬಿಟ್ಟು ರಾಮನು ಅಪವಾದ ಭಯದಿಂದ ಅವಳನ್ನು ಪರಿತ್ಯಜಿಸಿರುವ ಘೋರವಾದ ಸಂಗತಿಯನ್ನು ಅವಳಿಗೆ ತಿಳಿಸಿದನು (ಉತ್ತರಕಾಂಡ, ಸರ್ಗ ೪೩–೪೪). ಮಹರ್ಷಿಗಳು ಸೀತೆಯನ್ನು ತಮ್ಮ ಆಶ್ರಮಕ್ಕೆ ಕರೆದುಕೊಂಡು ಹೋಗಿ ಎಲ್ಲ ರಕ್ಷಣೆಯನ್ನೂ ನೀಡಿದರು.

ಈ ವೃತ್ತಾಂತವನ್ನು ಗಮನಿಸಿದಾಗ ವಾಲ್ಮೀಕಿ ಮಹರ್ಷಿಗಳ ಅನಂತರ ಬಂದ ಲೇಖಕನೊಬ್ಬನು ರಾಮನನ್ನು ನಿಃಸ್ವಾರ್ಥ ರಾಜನನ್ನಾಗಿಯೂ, ಪ್ರಜೆಗಳನ್ನು ತೃಪ್ತಿಗೊಳಿಸುವುದಕ್ಕಾಗಿ ತನ್ನ ಸುಖವನ್ನು ತ್ಯಾಗ ಮಾಡಿದವನನ್ನಾಗಿಯೂ ಮಾಡುವುದಕ್ಕೋಸ್ಕರವೇ ಈ ಕಥೆಯನ್ನು ಕಲ್ಪಿಸಿರಬೇಕೆಂದು ತೋರುತ್ತದೆ. ಇದಕ್ಕೆ ಪೋಷಕವಾಗಿ ಉತ್ತರಕಾಂಡದ ಸರ್ಗ ೯೯ ಶ್ಲೋಕ ೨ ರಲ್ಲಿ 'ಉತ್ತರಂ ಕಾವ್ಯಂ' ಎಂಬ ಮಾತು ಬಂದಿದೆ. ಪ್ರಾಯಶಃ ಉತ್ತರಕಾವ್ಯ ಎಂಬ ಬೇರೆ ಕಾವ್ಯವೇ ಇದ್ದು ಅದನ್ನು ರಾಮಾಯಣದ ಕೊನೆಯ ಭಾಗಕ್ಕೆ ಸೇರಿಸಿರಬಹುದೆಂಬ ಊಹೆ ಮಾಡಲು ಸಾಧ್ಯವಿದೆ. ಇದನ್ನು ಸೇರಿಸಿದ ಮೇಲೆ ಉತ್ತರಕಾಂಡದ ಅಂತಿಮ ಸರ್ಗದಲ್ಲಿ ಆಯುಷ್ಕರವೂ ಭವಿಷ್ಯೋತ್ತರಕಾಂಡಸಹಿತವೂ ಆದ ಈ ಇತಿಹಾಸವನ್ನು ಪ್ರಾಚೇತಸರಾದ ವಾಲ್ಮೀಕಿ ಮುನಿಗಳು ರಚಿಸಿದರು (ಸರ್ಗ ೧೧೧, ಶ್ಲೋಕ ೧೧), ಎಂದು ಪುನಃ ಹೇಳಿರುವುದೂ ಈ ಸಂಶಯಕ್ಕೆ ಎಡೆಮಾಡಿಕೊಡುತ್ತದೆ. ವಾಲ್ಮೀಕಿ ರಾಮಾಯಣದ ಬಾಲಕಾಂಡದ ಪ್ರಥಮ ಸರ್ಗವು ಸಮಗ್ರ ರಾಮಾಯಣದ ಕಥೆಯನ್ನು ಸಂಕ್ಷೇಪವಾಗಿ ತಿಳಿಸುತ್ತದೆ. ಇದರಲ್ಲಿ ೯೭ ಶ್ಲೋಕಗಳಿವೆ. ಆದರೆ ಇದರಲ್ಲಿ ಎಲ್ಲಿಯೂ ಸೀತಾಪರಿತ್ಯಾಗದ ವೃತ್ತಾಂತವಿಲ್ಲ. ಆದರೆ ಮುಂದೆ ೩ನೇ ಸರ್ಗದ ಕೊನೆಯ ಶ್ಲೋಕದಲ್ಲಿ 'ವೈದೇಹ್ಯಾಶ್ಚವಿಸರ್ಜನಂ" – ಮುಂತಾದುವನ್ನು 'ಉತ್ತರಕಾವ್ಯ'ದಲ್ಲಿ ರಚಿಸಿದರು ಎಂದಿದೆ. 'ಉತ್ತರಕಾಂಡ' ಎಂಬ ಮಾತು ಇಲ್ಲಿ ಬಂದಿಲ್ಲ. ರಾಮಾಯಣದ ವಿಭಾಗ ಕಾಂಡಗಳಲ್ಲಿದ್ದುದು ಈ ಲೇಖಕನಿಗೆ ತಿಳಿದಿರಲಿಲ್ಲವೆ? ಉತ್ತರಕಾವ್ಯವನ್ನು ಮೂಲರಾಮಾಯಣಕ್ಕೆ ಪ್ರಕ್ಷೇಪಗೊಳಿಸಿದ ಅನಂತರ ಮೂರನೇ ಸರ್ಗದಲ್ಲಿ ಇದನ್ನು ಸೇರಿಸಿರಬಹುದೆಂದು ಊಹಿಸಬಹುದಾಗಿದೆ. ಏಕೆಂದರೆ ರಾಮರಾಜ್ಯದ ವರ್ಣನೆಯು ಉದಾತ್ತವಾಗಿದ್ದು ಇಂತಹ ದುಃಖಗಳಿಗೆ ಎಡೆಯಿರಲಿಲ್ಲವೆಂದು ಹೇಳಿದೆ. "ರಾಮಚಂದ್ರನು ರಾಜ್ಯವಾಳುತ್ತಿರುವಾಗ ಪ್ರಜೆಗಳು ಪರಮಾನಂದಭರಿತರಾಗಿದ್ದರು. ಅವರು ಸಂತುಷ್ಟರಾಗಿದ್ದರು. ಅವರ ಜೀವನವು ಧರ್ಮಮೂಲವಾಗಿದ್ದಿತು. ಅವರಿಗೆ ಯಾವ ದುಷ್ಟ ಹವ್ಯಾಸವಿರಲಿಲ್ಲ" ಇತ್ಯಾದಿಯಾಗಿ ವರ್ಣಿಸಲಾಗಿದೆ. ಅಂದಮೇಲೆ ಪ್ರಜೆಗಳು ಇಂತಹ ಅಪವಾದವನ್ನು ಹೊರೆಸಿದರು ಎಂಬುದು ನಿಜವೆ? ಪೂಜ್ಯರಾದ ವಾಲ್ಮೀಕಿ ಮಹರ್ಷಿಗಳು ೨೪೦೦೦ ಶ್ಲೋಕಗಳು, ೫೦೦ ಸರ್ಗಗಳು, ೬ ಕಾಂಡಗಳು

ಮತ್ತು ಉತ್ತರಕಾಂಡ ಇರುವ ಶ್ರೀಮದ್‌ರಾಮಾಯಣವನ್ನು ರಚಿಸಿದರು – ಎಂದು ಬಾಲಕಾಂಡದ ಸರ್ಗ–೪ ಶ್ಲೋಕ–೨ ಹೇಳುತ್ತದೆ. ಉತ್ತರಕಾಂಡವನ್ನು ಪ್ರತ್ಯೇಕಗೊಳಿಸಿರುವುದನ್ನು ಗಮನಿಸಬೇಕು. ಸಾಲದ್ದಕ್ಕೆ ಈಗ ರಾಮಾಯಣದಲ್ಲಿರುವ ಸರ್ಗಗಳಿಗೂ ಶ್ಲೋಕಗಳಿಗೂ ಈ ಸಂಖ್ಯೆಯು ಅನ್ವಯವಾಗುತ್ತಿಲ್ಲ. 'ಭವಿಷ್ಯ' ಎಂಬ ಪದಕ್ಕೂ ಹಲವು ವ್ಯಾಖ್ಯಾನಗಳಿವೆ. ಈ ಎಲ್ಲ ಆಧಾರಗಳ ಮೇಲೆ ಉತ್ತರಕಾಂಡವು ಪ್ರಕ್ಷಿಪ್ತವೆಂದು ಊಹಿಸಲಾಗಿದೆ.

ಪ್ರಕ್ಷೇಪ ಮಾಡಿದವರ ಮನಸ್ಸಿನಲ್ಲಿ ಇನ್ನೊಂದು ಉದ್ದೇಶವೂ ಇದ್ದಿರಬಹುದು. ಯುದ್ಧಕಾಂಡದ ಕೊನೆಯಲ್ಲಿ ಸೀತೆಯನ್ನು ರಾಮನ ಎದುರಿಗೆ ಕರೆತಂದಾಗ ಅವನು ಅವಳ ಬಗ್ಗೆ ಭಯಂಕರವಾದ ಕೋಪವನ್ನು ಪ್ರದರ್ಶಿಸುತ್ತಾನೆ. ಅತಿಯಾದ ಅಹಂಭಾವದಿಂದ ಕೂಡಿದವನಂತೆ ಸೀತೆಯ ಬಗ್ಗೆ ಆಡಬಾರದಂತಹ ಬಿರುನುಡಿಗಳನ್ನು ಆಡುತ್ತಾನೆ. ಆ ಮಾತುಗಳು ಅವನ ಘನತೆಯನ್ನು ಕೊಂಚಮಟ್ಟಿಗೆ ಕ್ಷೀಣಿಸುವಂತೆ ಮಾಡುತ್ತವೆ. ಈಗ ಪ್ರಕ್ಷೇಪಕಾರನು ರಾಮನು ಸೀತೆಯನ್ನು ಭಾವಿಸಿದ ಬಗ್ಗೆ ಒಂದು ಹೊಸ ಬೆಳಕನ್ನು ಬೀರಲು ಯತ್ನಿಸಿದ್ದಾನೆ. ಸೀತೆಯ ಪರಿಶುದ್ಧತೆ, ಪಾವಿತ್ರ್ಯಗಳ ಬಗ್ಗೆ ತನಗೆ ಯಾವ ಸಂಶಯವೂ ಇಲ್ಲವೆಂದು ತಿಳಿಸಿ, ಇದು ಕ್ರೂರವಿಧಿಯ ಆಟವೆಂದು ಹೇಳುತ್ತಾನೆ. ತನ್ನ ವಂಶದ ಗೌರವವನ್ನು ದೃಷ್ಟಿಯಲ್ಲಿಟ್ಟುಕೊಂಡು ಸೀತೆಯನ್ನು ಪರಿತ್ಯಜಿಸುವ ತೀರ್ಮಾನ ಕೈಗೊಂಡಿದ್ದಾನೆ. ದರ್ಪದಿಂದಲ್ಲ; ಕೋಪದಿಂದಲ್ಲ; ಅಹಂಭಾವದಿಂದಲ್ಲ. ಆದ್ದರಿಂದಲೇ 'ಗೃಹಸ್ಥಃ ನ ಮನಸ್ಥಃ' ಎಂದು ಹೇಳಿರುವುದು. ಮುಂದೆ ಈ ಬಗ್ಗೆ ವಾಲ್ಮೀಕಿ ಮಹರ್ಷಿಗಳ ಕ್ಷಮೆಯನ್ನೂ ಯಾಚಿಸುತ್ತಾನೆ:

'ಪರಿತ್ಯಕ್ತಾ ಮಯಾ ಸೀತಾ ತತ್ ಭವಾನ್ ಕ್ಷಂತುಮರ್ಹಸಿ' । ಈ ಮಾತು ಒಂದು ಮಹತ್ತ್ವದ್ದೆಂಬುದು ರಾಮನ ಪಾತ್ರಚಿತ್ರಣಕಾರರ ಮತ.

ಸೀತಾಪರಿತ್ಯಾಗವನ್ನೊಳಗೊಂಡ 'ಉತ್ತರಕಾಂಡ' ಪ್ರಕ್ಷಿಪ್ತವೆಂದು ನಿರ್ಧರಿಸಿದರೂ ಸೀತಾಪರಿತ್ಯಾಗದ ವೃತ್ತಾಂತ ಒಂದು ಹೃದಯವಿದ್ರಾವಕ ವೃತ್ತಾಂತವಾಗಿ ವರ್ಣಿತವಾಗಿದೆ. ರಾಮಾಯಣವನ್ನು ಆಧರಿಸಿ ಬರೆದ ಮುಂದಿನ ಕವಿಗಳು ಈ ವೃತ್ತಾಂತವನ್ನು ಒಪ್ಪಿಕೊಂಡಿದ್ದಾರೆ. ಕೆಲವರು ರಾಮ–ಸೀತೆಯರ ಪಾತ್ರವನ್ನು ಉದಾತ್ತವಾಗಿಡಲು ಯತ್ನಿಸಿದ್ದಾರೆ. ಅದರಲ್ಲಿ ಬಹುಮಟ್ಟಿಗೆ ಸಫಲರೂ ಆಗಿದ್ದಾರೆ. ಇಂತಹ ನಾಟಕಗಳಲ್ಲಿ ದಿಙ್ನಾಗನ ಕುಂದಮಾಲ (ಕ್ರಿ.ಶ. ೪ ಅಥವಾ ೫ನೇ ಶತಮಾನ) ಒಂದು. ಮೂಲಕಥೆ ರಾಮಾಯಣದ್ದೇ ಆದರೂ, ಅದರಲ್ಲಿಲ್ಲದ ಅನೇಕ ಸಂಗತಿಗಳನ್ನು ಕವಿ ಇದರಲ್ಲಿ ಕಲ್ಪಿಸಿದ್ದಾನೆ. ರಾಮನಿಂದ ಪರಿತ್ಯಕ್ತಳಾದ ಸೀತೆಯು ತನಗೆ ಸುಖಪ್ರಸವವಾದರೆ ಪ್ರತಿದಿನವೂ ಗಂಗೆಗೆ ಕುಂದಪುಷ್ಪದ ಮಾಲೆಯೊಂದನ್ನು ಅರ್ಪಿಸುವುದಾಗಿ ಹರಕೆ ಹೊತ್ತಿರುತ್ತಾಳೆ. ಒಂದು ದಿನ ರಾಮನು ತನ್ನ ಯಜ್ಞಪ್ರದೇಶಕ್ಕೆ ಬಂದಾಗ, ಗಂಗೆಯಲ್ಲಿ ತೇಲಿಬರುತ್ತಿರುವ ಕುಂದಪುಷ್ಪಮಾಲೆಯನ್ನು ಕಂಡು, ಈ

ರೀತಿ ಹೂಮಾಲೆಯನ್ನು ಕಟ್ಟಬಲ್ಲವಳು ಸೀತೆ ಮಾತ್ರ, ಆದ್ದರಿಂದ ಅವಳು ಇಲ್ಲಿಯೇ ಎಲ್ಲೋ ಇರಬಹುದೆಂದು ತಿಳಿಯುತ್ತಾನೆ. ಕುಂದಮಾಲೆಯ ನಿಮಿತ್ತದಿಂದಾಗಿ ರಾಮ ಮತ್ತು ಸೀತೆಯರ ಪುನಃ ಸಮಾಗಮವಾಗುತ್ತದೆ.

ಇನ್ನೊಂದು ಪ್ರಮುಖ ನಾಟಕ (ಕ್ರಿ.ಶ. ೭ ಅಥವಾ ೮ನೇ ಶತಮಾನ) 'ಉತ್ತರರಾಮಚರಿತಮ್'. ಹೆಸರೇ ಹೇಳುವಂತೆ ಇದು ಸೀತಾಪರಿತ್ಯಾಗದ ಕಥೆ. ಸೀತಾಪರಿತ್ಯಾಗದಿಂದ ಪ್ರಾರಂಭವಾಗಿ ರಾಮನು ಪುನಃ ಸೀತೆಯನ್ನು ಪರಿಗ್ರಹಿಸುವಲ್ಲಿಗೆ ಈ ಏಳು ಅಂಕದ ನಾಟಕ ಮುಗಿಯುತ್ತದೆ. ಮೂಲ ಉತ್ತರಕಾಂಡದ ಕಥೆಯಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡು ಕವಿಯು ಈ ನಾಟಕವನ್ನು ಸುಖಾಂತವಾಗಿ ಮಾಡಿದ್ದಾನೆ. ರಾಮಾಯಣದ ಉತ್ತರಕಾಂಡದ ಕಥೆಯ ಬಗ್ಗೆ ಅವನಿಗೆ ಅಭಿಮತವಿಲ್ಲದೆ, ಅಲ್ಲಿ ನಾವು ಕಾಣುವ ದುರಂತವನ್ನು ಇಲ್ಲಿ ಸಂಪೂರ್ಣ ಸುಖವನ್ನಾಗಿ ಮಾರ್ಪಡಿಸಿರುವ ಬಗ್ಗೆ ಭವಭೂತಿಯು ನಿಜಕ್ಕೂ ಶ್ಲಾಘ್ಯನಾಗಿದ್ದಾನೆ.

ಅಂದರೆ ಮುಂದಿನ ಕವಿಗಳಿಗೆ ರಾಮನು ಮಾಡಿದ ಸೀತಾಪರಿತ್ಯಾಗ ಒಪ್ಪಿಗೆಯಾಗಲಿಲ್ಲ. ಆದರೂ ಆ ವೃತ್ತಾಂತವನ್ನು ಇಲ್ಲವೆನ್ನಲೂ ಆಗಲಿಲ್ಲ. ಆದರೆ ಅವರಿಗೆ ರಾಮ ಸೀತೆಯರ ಪಾತ್ರಗಳ ಔನ್ನತ್ಯವನ್ನು ಎತ್ತಿಹಿಡಿಯಬೇಕೆಂಬ ದೃಢಚಿತ್ತತೆ. ಅದಕ್ಕಾಗಿ ಕಥೆಗೆ ಹೊಸ ಕಲ್ಪನೆಗಳನ್ನು ಕೊಟ್ಟರು. ರಾಮ–ಸೀತೆಯರ ಹಿರಿಮೆಯನ್ನು ಎತ್ತಿ ಹಿಡಿದರು.

ಕಾಳಿದಾಸನ ಮಹಾಕಾವ್ಯವಾದ ರಘುವಂಶದಲ್ಲಿ, ಹೆಚ್ಚುಪಾಲು ಸಂದಿರುವುದು ರಾಮನ ಚರಿತ್ರೆಗೆ, ಈ ಮಹಾಕಾವ್ಯದ ಹದಿನಾಲ್ಕನೇ ಸರ್ಗ ಸೀತಾಪರಿತ್ಯಾಗದ ವೃತ್ತಾಂತವನ್ನೊಳಗೊಂಡಿದೆ.

ಲೋಕಾಪವಾದದಿಂದ ಜರ್ಝರಿತ ಮನಸ್ಕನಾದ ರಾಮನು ಲಕ್ಷ್ಮಣನಿಗೆ, "ಸೀತೆಯು ತನ್ನ ಬಯಕೆಯಾಗಿ ತಪೋವನಕ್ಕೆ ಹೋಗಿ ಕೆಲಕಾಲ ಇರಲು ಆಶಿಸಿದ್ದಳು. ಅದೇ ನೆಪಮಾಡಿಕೊಂಡು ಅವಳನ್ನು ವಾಲ್ಮೀಕ್ಯಾಶ್ರಮ ಪ್ರದೇಶದಲ್ಲಿ ಬಿಟ್ಟು ಬಾ" ಎಂದು ಆಜ್ಞೆ ಮಾಡುತ್ತಾನೆ. 'ಅದನ್ನೇ ನೆಪಮಾಡಿ' ಎಂದು ಹೇಳುವುದು ರಾಮನ ಪಾತ್ರಕ್ಕೆ ಅಷ್ಟೇನೂ ಉಚಿತವೆನ್ನಿಸುವುದಿಲ್ಲ. ಅವನು ಅಪಕೀರ್ತಿಗೆ ಹೆದರದವನು, ನಿಜ. ಕುಲದ ಗೌರವವನ್ನು ಕಾಪಾಡುವುದು ಅವನ ಧರ್ಮವೂ ಕರ್ತವ್ಯವೂ ಆಗಿದ್ದುದು ನಿಜ. ರಾಜನ ಸಂಸಾರ ಪ್ರಜೆಗಳ ಸಂಸಾರಕ್ಕೆ ಮಾರ್ಗದರ್ಶಿಯಾಗಿರತಕ್ಕದ್ದೆಂಬುದೂ ನಿಜ. ಆದರೆ ಕಾಳಿದಾಸ ಇದನ್ನು ಹೇಳುವಲ್ಲಿ ಎಲ್ಲೋ ಕೊಂಚ ತೂಕಡಿಸಿದ್ದಾನೆ. ರಾಮಾಯಣದ ಉತ್ತರಕಾಂಡದಲ್ಲಿ ಸೀತೆಯ ಬಗ್ಗೆ ರಾಮನಿಗೆ ಅಪಾರ ಗೌರವ, ಉದಾತ್ತತೆ ಕಾಣುತ್ತದೆ. ಆದರೆ ರಘುವಂಶದಲ್ಲಿ ಕಾಳಿದಾಸನು ಸೀತೆಯ ಬಗ್ಗೆ ಹೀಗೆ ಹೇಳಿದ್ದಾನೆ :

"ಅಪಿ ಸ್ವದೇಹಾತ್ ಕಿಮುತ ಇಂದ್ರಿಯಾರ್ಥಾತ್ ಯಶೋಧನಾನಾಂ
ಹಿ ಯಶೋ ಗರೀಯಃ" ।

ಸೀತೆಯನ್ನು ಕೇವಲ 'ಇಂದ್ರಿಯಾರ್ಥ' ಎಂದಿದ್ದಾನೆ. ಅಂದರೆ ಸೀತೆಯು ರಾಮನಿಗೆ ಲೈಂಗಿಕ ಸುಖವನ್ನು ನೀಡುವವಳು ಮಾತ್ರ ಎಂಬ ಅರ್ಥವಾಗುತ್ತದೆ. ಸೀತೆಯ ವಿವಾಹದ ದಿನ ಜನಕ ಮಹಾರಾಜನು ಹೀಗೆ ಹೇಳುತ್ತಾನೆ : 'ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ'. ಎಷ್ಟು ವ್ಯತ್ಯಾಸ ! ರಾಮನ ಪಾತ್ರಕ್ಕೆ ಉದಾತ್ತತೆಯೇ ಇಲ್ಲದಂತೆ ಮಾಡಿದ್ದಾನೆ – ಮಹಾಕವಿ ಕಾಳಿದಾಸ ಈ ಮೇಲಿನ ಶ್ಲೋಕದಲ್ಲಿ. ಅವನು ಸಂಸ್ಕೃತದ ಅಗ್ರಮಾನ್ಯ ಕವಿ.

ಸೀತಾಪರಿತ್ಯಾಗ ವೃತ್ತಾಂತ ಸಹೃದಯರಲ್ಲಿ ದುಃಖ, ಸಹಾನುಭೂತಿಗಳನ್ನಷ್ಟೇ ಅಲ್ಲದೆ ಕೋಪವನ್ನೂ ಉಂಟುಮಾಡುತ್ತದೆ. ಇಂತಹ ಸಹೃದಯದ ಪ್ರತಿನಿಧಿಯಾಗಿಯೋ ಎನ್ನುವಂತೆ ವಾಲ್ಮೀಕಿ, ಪರಿತ್ಯಕ್ತಳಾದ ಸೀತೆಗೆ ಹೇಳುವ ಗಂಭೀರವಾದ ಉಕ್ತಿ ಇದು :

ಉತ್ಖಾತ ಲೋಕತ್ರಯ ಕಂಟಕೇಪಿ ಸತ್ಯಪ್ರತಿಜ್ಞೇಪ್ಯವಿಕನೇऽಪಿ ।
ತ್ವಾಂ ಪ್ರತ್ಯಕಸ್ಮಾತ್ ಕಲುಷಪ್ರವೃತ್ತೌ ಅಸ್ತ್ಯೇವ ಮನ್ಯುಃ ಭರತಾಗ್ರಜೇ ಮೇ ॥

"ನಿನ್ನ ಪತಿಯು ಮೂರು ಲೋಕಗಳಿಗೂ ಮುಳ್ಳಾಗಿದ್ದ ರಾವಣನನ್ನು ಸಂಹಾರ ಮಾಡಿದ್ದಾನೆ, ನಿಜ; ಅವನು ಸತ್ಯಸಂಧನೂ ನಿಜ; ಇಷ್ಟು ಮಹತ್ತ್ವದ ಕಾರ್ಯ ಸಾಧಿಸಿದರೂ ಸ್ವಲ್ಪವೂ ಆತ್ಮಪ್ರಶಂಸೆಯಿಲ್ಲದ ವ್ಯಕ್ತಿಯೂ ನಿಜ; ಆದರೆ ನಿನ್ನಲ್ಲಿ ಇದ್ದಕ್ಕಿದ್ದಂತೆ ದೋಷವೆತ್ತಿ ಈ ರೀತಿ ಪರಿತ್ಯಜಿಸಿದ್ದಾನಲ್ಲ – ಅಂತಹ ನಿನ್ನ ಪತಿ, ಭರತನಂತಹ ಧರ್ಮಿಷ್ಠನಿಗೆ ಅಣ್ಣನಾದ ರಾಮನ ಬಗ್ಗೆ ನನಗೆ ಕೋಪ ತುಂಬಿ ಬರುತ್ತಿದೆ."

ಹೀಗೆ ಸೀತಾಪರಿತ್ಯಾಗ ವೃತ್ತಾಂತವನ್ನು ವಾಲ್ಮೀಕಿ ರಾಮಾಯಣದ ಉತ್ತರಕಾಂಡದಲ್ಲಿ ನಾವು ಪದೇ ಪದೇ ಓದಿದಾಗ ರಾಮನ ನಡವಳಿಕೆಯನ್ನು ನಾವು ಸುಲಭವಾಗಿ ಅನುಮೋದಿಸಲಾರೆವು. ಸೀತೆಯ ಬಗ್ಗೆ ಆಳವಾದ ಅನುಕಂಪವನ್ನು ತಳೆಯುತ್ತೇವೆ. ರಾಮಾಯಣದ ಮೊದಲ ಆರು ಕಾಂಡಗಳಲ್ಲಿ ಇರುವಂತೆಯೇ ಉತ್ತರಕಾಂಡದಲ್ಲಿಯೂ ಸೀತಾಪರಿತ್ಯಾಗ ವೃತ್ತಾಂತ ಪ್ರಕ್ಷೇಪವಲ್ಲದಿದ್ದರೆ ರಾಮ ಮತ್ತು ಸೀತೆಯ ಪಾತ್ರ ಉದಾತ್ತವಾಗಿರುವಂತೆ ಪುನಃ ರಚಿಸಬೇಕೆಂದು ನಾವು ಆಶಿಸುತ್ತೇವೆ. ಇದಕ್ಕಾಗಿ ಕೊಂಚ ಮಾರ್ಪಾಡು ಮಾಡಲು ಸಹೃದಯರ ಒಪ್ಪಿಗೆ ಬೇಡುತ್ತೇವೆ. ಇದು ಈ ರೀತಿ ಇದೆ:

ರಾಜನಾದ ರಾಮನು ಸೀತೆಯೊಡನೆ ರಾಜನ ಸಭೆಯಲ್ಲಿ ಒಡ್ಡೋಲಗ ನಡೆಸುತ್ತಿದ್ದಾನೆ. ರಾಜಧಾನಿಯ ಅನೇಕ ಗಣ್ಯ ಪೌರರು ಅದರಲ್ಲಿ ಭಾಗವಹಿಸಿದ್ದಾರೆ. ಮಂತ್ರಿಗಳು ಆಡಳಿತದ ವಿವರಗಳನ್ನು ಕೊಡುತ್ತಿದ್ದಾರೆ. ಪೌರಪ್ರತಿನಿಧಿಗಳು ಆಡಳಿತದ ಬಗ್ಗೆ ತಮ್ಮ ಸಂತೋಷವನ್ನು ಬಿನ್ನವಿಸುತ್ತಿದ್ದಾರೆ. ಮಾಹಿತಿ ಹೊತ್ತು ಬಂದಿರುವ ಗೂಢಚಾರರು ಒಬ್ಬೊಬ್ಬರಾಗಿ ಸಭೆಗೆ ಬಂದು ರಾಜ್ಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು

ಮಳೆ-ಬೆಳೆ, ವಾಣಿಜ್ಯ-ವ್ಯವಹಾರ, ಗಡಿರಕ್ಷಣೆ ಮುಂತಾದವುಗಳ ಬಗ್ಗೆ ವರದಿ ಒಪ್ಪಿಸುತ್ತಿದ್ದಾರೆ. ಅವರಲ್ಲಿ ಒಬ್ಬನು ಮಾತ್ರ ವರದಿಯನ್ನು ನೀಡಿದ ಬಳಿಕವೂ ಹಿಂತಿರುಗುತ್ತಿಲ್ಲ. ಬಹುಶಃ ತಾನು ಏನನ್ನೋ ಹೇಳುವುದಿದ್ದು ಅದನ್ನು ಮಹಾರಾಣಿ, ಮಂತ್ರಿಗಳು ಮತ್ತು ಸಭಾಸದರ ಮುಂದೆ ಹೇಳಲು ಇಷ್ಟಪಡುತ್ತಿಲ್ಲ. ಅವನು ತೋರುತ್ತಿದ್ದ ಮುಜುಗರಭಾವವನ್ನು ಗಮನಿಸಿದ ಇಂಗಿತಜ್ಞಳಾದ ರಾಣಿ ಸೀತೆಯು ಗೂಢಚಾರನು ಮಹಾರಾಜರಿಗೆ ಮಾತ್ರ ತಿಳಿಸಬೇಕಾದ ಏನೋ ವಿಷಯವನ್ನು ತಂದಿರಬೇಕೆಂದು ಊಹಿಸಿ, ಸಭೆಯಿಂದ ನಿರ್ಗಮಿಸುತ್ತಾಳೆ. ಅನಂತರ ಆ ಗೂಢಚಾರನು ಸಭಾಸದರ ಕಡೆ ನೋಡುತ್ತಾನೆ. ಅವರೂ ಸಹ ಅವನು ರಾಜನಿಗೆ ಏನೋ ರಹಸ್ಯವನ್ನು ವರದಿಮಾಡಬಯಸುತ್ತಿದ್ದಾನೆಂದು ಭಾವಿಸಿ ಸಭೆಯಿಂದ ನಿರ್ಗಮಿಸುತ್ತಾರೆ. ಮಹಾರಾಜ ರಾಮನೂ ಗೂಢಚಾರನೂ ಇಬ್ಬರೇ ಅಲ್ಲಿ ಆಗ ಇರುತ್ತಾರೆ. ರಾಮನು ಅವನನ್ನು ಕುರಿತು – "ಗಾಬರಿಯನ್ನೋ ಭಯವನ್ನೋ ಹುಟ್ಟಿಸುವಂತಹ ರಹಸ್ಯಸಂಗತಿ ಏನಾದರೂ ಇದೆಯೆ ?" ಎಂದು ಕೇಳುತ್ತಾನೆ. ಅದಕ್ಕೆ ಉತ್ತರವಾಗಿ ಗೂಢಚಾರನು "ನಾನೇ ಸ್ವತಃ ನಂಬದಿರುವ, ಆದರೆ ನಿವೇದಿಸುವುದು ಕರ್ತವ್ಯವಾಗಿರುವುದರಿಂದ ವಿಷಯವನ್ನು ಹೇಳಿದರೆ ನನ್ನನ್ನು ಕ್ಷಮಿಸಬೇಕು" ಎಂದು ನಡುಗುತ್ತಾ ಹೇಳುತ್ತಾನೆ. ಮೊದಮೊದಲು ಬಹಳ ಹಿಂಜರಿದರೂ, ಕೊನೆಗೆ ಅವನು ಹೀಗೆ ತಿಳಿಸುತ್ತಾನೆ :

"ಘೋರ ಸ್ತ್ರೀಲಂಪಟನಾದ ರಾವಣನ ಅಧಿಕಾರ ಹಾಗೂ ವಶದಲ್ಲಿದ್ದ ಸೀತಾಮಾತೆಯ ಪಾತಿವ್ರತ್ಯದ ಬಗ್ಗೆ ಪೌರಸ್ತ್ರೀಯರು ಹಗುರವಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಅಲ್ಲದೆ ಅಂತಹವಳನ್ನು ರಾಣಿಯನ್ನಾಗಿ ಮಾಡಿಕೊಂಡು ರಾಜನಾಗಿ ರಾಮನು ಕೆಟ್ಟ ಸಂಪ್ರದಾಯವನ್ನು ಹಾಕಿಕೊಟ್ಟಿದ್ದಾನೆ" – ಎಂದು ಹೇಳುತ್ತಿದ್ದಾರೆ.

ಇದನ್ನು ಕೇಳಿದ ರಾಮನು ದಿಙ್ಮೂಢನಾಗುತ್ತಾನೆ. ಅಷ್ಟುಹೊತ್ತಿಗೆ ಸೀತೆಯು ರಾಜಸಭೆಗೆ ಮತ್ತೆ ಬರುತ್ತಾಳೆ. ರಾಮನು ಮೌನವಾಗಿರುತ್ತಾನೆ. ಏನೋ ಸಂಕಟಕ್ಕೆ ಒಳಗಾಗಿರುವಂತೆ ಕಾಣುತ್ತಾನೆ. ಗೂಢಚಾರನು ಏನೋ ಘೋರವಾದ ವಾರ್ತೆಯನ್ನು ತಿಳಿಸಿರಬೇಕೆಂದು ಊಹಿಸುತ್ತಾಳೆ. ಆ ಕೂಡಲೇ ಅವಳು ಆ ಗೂಢಚಾರರನ್ನು ಪ್ರತ್ಯೇಕವಾಗಿ ಕರೆದು ಪ್ರಶ್ನಿಸುತ್ತಾಳೆ. ಆದರೆ ಅವನು ಹೇಳಲಾರದೆ ಸುಮ್ಮನಿರುತ್ತಾನೆ. ಆಗ ಸೀತೆಯು ತನ್ನ ರಾಣಿಯ ಅಧಿಕಾರವನ್ನು ಚಲಾಯಿಸಿ ಅವನು ರಾಜನಿಗೆ ಹೇಳಿದ್ದನ್ನು ತನಗೆ ಹೇಳಬೇಕೆಂದು ಆಜ್ಞೆಮಾಡುತ್ತಾಳೆ. ಬೇರೆ ದಾರಿ ಕಾಣದೆ ಅವನು ಅತ್ಯಂತ ವಿನಮ್ರನಾಗಿ ವಿಷಯವನ್ನು ಪುನಃ ಹೇಳುತ್ತಾನೆ. ತಾನು ಅದನ್ನು ಎಳ್ಳಷ್ಟೂ ನಂಬುತ್ತಿಲ್ಲವೆಂದೂ ಜನರ ಮಾತನ್ನು ಪುನರುಚ್ಚರಿಸಿ ವರದಿ ಮಾಡುತ್ತಿರುವುದು ತನ್ನ ಕರ್ತವ್ಯವೆಂದೂ ಬಿನ್ನಹ ಮಾಡಿಕೊಳ್ಳುತ್ತಾನೆ.

ಇದನ್ನು ಕೇಳಿದ ಸೀತೆಯು ಬಹಳವಾಗಿ ನೊಂದುಕೊಳ್ಳುತ್ತಾಳೆ. ಆದರೆ ಕ್ಷತ್ರಿಯ ರಾಣಿಯ ಧೈರ್ಯಕ್ಕನುಗುಣವಾಗಿ ಸಮಾಧಾನಮಾಡಿಕೊಳ್ಳುತ್ತಾಳೆ. ರಾಮನು ತನಗೆ

ಪತಿಯಷ್ಟೇ ಆಗಿರದೆ, ತನಗೂ ಪ್ರಜೆಗಳಿಗೂ ರಾಜನೆಂಬುದನ್ನು ನೆನೆಯುತ್ತಾಳೆ. ರಾಜನಾಗಿ ಅವನು ಪ್ರಜೆಗಳ ಮಾರ್ಗದರ್ಶಕನಾಗಿದ್ದರೆ ಮಾತ್ರ ಪ್ರಜೆಗಳು ಅವನಲ್ಲಿ ನಿಷ್ಠೆ, ಗೌರವವನ್ನು ಹೊಂದಿರಲು ಸಾಧ್ಯವೆಂದು ತಿಳಿಯುತ್ತಾಳೆ. ಇಲ್ಲಿಯವರೆಗೆ ಆತನ ಉನ್ನತಮಟ್ಟದ ಶೀಲ ಮತ್ತು ಕಳಂಕರಹಿತ ನಡವಳಿಕೆ ಅವನಿಗೆ ಪ್ರಜೆಗಳ ಗೌರವವನ್ನು ಸಂಪಾದಿಸಿದೆ. ಅವುಗಳು ಕ್ಷುಲ್ಲಕ ಆಕ್ಷೇಪ ಮತ್ತು ಸಂದೇಹಗಳನ್ನು ಮೆಟ್ಟಿನಿಂತಿರುವಂತಹವು. ತನ್ನ ತಂದೆಯು ರಾಣಿಯಾದ ಕೈಕೇಯಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ರಾಜ್ಯವನ್ನು ತ್ಯಜಿಸಿ ಕಾಡಿಗೆ ಹೋಗಿ ಆದರ್ಶಪುತ್ರನೆನಿಸಿದನು ಎಂಬುದನ್ನು ನೆನೆಯುತ್ತಾಳೆ. ಜೊತೆಗೆ ರಾಜನ ಸಂಸಾರದ ಆಚಾರವಿಚಾರಗಳು ಪ್ರಜೆಗಳ ಸಂಸಾರಕ್ಕೆ ಆದರ್ಶವಾಗಿರಬೇಕೆಂದು ನಿರ್ಧರಿಸುತ್ತಾಳೆ. ಆದ್ದರಿಂದ ತಾನೂ ಸಹ ರಾಜನ ಗೌರವವನ್ನು ಎತ್ತಿಹಿಡಿಯುವುದಕ್ಕಾಗಿ ಅರಮನೆಯನ್ನು ತ್ಯಜಿಸಿ ಸ್ವಯಂಪ್ರೇರಿತಳಾಗಿ ತಾನೇ ರಾಜ್ಯದಿಂದ ಹೊರಗೆ ಹೋಗಲು ನಿರ್ಧರಿಸುತ್ತಾಳೆ. ತಾನು ಹಿಂದೆ ಬಯಸಿದ್ದ ವಾಲ್ಮೀಕಿ ಮಹರ್ಷಿಗಳ ಆಶ್ರಮಕ್ಕೆ ತೆರಳಿ ಅವರಿಗೆ ಭಕ್ತಿ ಗೌರವವನ್ನು ಸಲ್ಲಿಸಲು ಇದು ಸಕಾಲವೆಂದು ತೀರ್ಮಾನಿಸುತ್ತಾಳೆ.

ಕೂಡಲೇ ಲಕ್ಷ್ಮಣನಿಗೆ ಹೇಳಿಕಳುಹಿಸಿ, ಅವನು ಬಂದನಂತರ ಅವನಿಗೆ ತನ್ನನ್ನು ವಾಲ್ಮೀಕಿ ಆಶ್ರಮದಲ್ಲಿ ಬಿಟ್ಟುಬರಬೇಕೆಂದು ತಿಳಿಸುತ್ತಾಳೆ. ದಿಗ್ಭ್ರಮೆಗೊಂಡು ಮೂಕನಾಗಿ ನಿಂತಿದ್ದ ರಾಮನನ್ನು ನೋಡಿ ಲಕ್ಷ್ಮಣನು ಇಂತಹ ಪರಿಸ್ಥಿತಿಗೆ ಏನು ಕಾರಣವೆಂದು ತಿಳಿಯಬಯಸುತ್ತಾನೆ. ಆಗ ಸೀತಾದೇವಿಯೇ ಗೂಢಚಾರನು ತನಗೂ ರಾಮನಿಗೂ ಹೇಳಿದ್ದನ್ನು ಲಕ್ಷ್ಮಣನಿಗೆ ಹೇಳುತ್ತಾಳೆ. ಇಂತಹ ಅಪವಾದವನ್ನು ಸೃಷ್ಟಿಸಿದ ಪ್ರಜೆಗಳ ಬಗ್ಗೆ ಲಕ್ಷ್ಮಣ ಕೋಪಗೊಳ್ಳುತ್ತಾನೆ. ಅವರಿಗೆ ತಕ್ಕ ಶಾಸ್ತಿಮಾಡುವ ಮಾತನ್ನು ಆಡುತ್ತಾನೆ. ಸೀತೆಯು ಅವನನ್ನು ಸಮಾಧಾನಪಡಿಸಿ, ರಾಣಿಯಾಗಿ ರಾಜನ ಗೌರವವನ್ನು ಎತ್ತಿಹಿಡಿಯುವ ತನ್ನ ಕರ್ತವ್ಯವನ್ನು ಬಗೆಬಗೆಯಾಗಿ ಹೇಳುತ್ತಾಳೆ. ಲಕ್ಷ್ಮಣನು ತಾನು ಸೀತೆಯನ್ನು ಕಾಡಿಗೆ ಒಯ್ಯಲು ಒಪ್ಪದಿರಲು, ಸೀತೆಯು ರಾಣಿಯ ಅಧಿಕಾರದಿಂದ ಅವನಿಗೆ ತಾನು ಹೇಳಿದಂತೆ ಮಾಡಲು ಆಜ್ಞೆ ಮಾಡುತ್ತಾಳೆ. ಲಕ್ಷ್ಮಣನು ಪ್ರತಿಭಟನೆ ತೋರುತ್ತಲೇ ಅವಳ ಆಜ್ಞೆಯನ್ನು ಸ್ವೀಕರಿಸುತ್ತಾನೆ. ಅವಳನ್ನು ವಾಲ್ಮೀಕಿ ಮಹರ್ಷಿಗಳ ಆಶ್ರಮಕ್ಕೆ ಕರೆದುಕೊಂಡುಹೋಗಿ ಅತ್ಯಂತ ಭಾವಪೂರಿತ ಮಾತುಗಳಿಂದ ವಾಲ್ಮೀಕಿಮಹರ್ಷಿಗಳಿಗೆ ವಾತ್ಸಲ್ಯದಿಂದ ಅವಳ ರಕ್ಷಣೆಯನ್ನು ಮಾಡುವಂತೆ ಪ್ರಾರ್ಥಿಸಿಕೊಳ್ಳುತ್ತಾನೆ. ಮಹರ್ಷಿಗಳು ತಮ್ಮ ಅಂತರ್ದೃಷ್ಟಿಯಿಂದ ಎಲ್ಲವನ್ನೂ ಅರಿಯುತ್ತಾರೆ. ಸೀತೆಯು ಗರ್ಭಿಣಿ ಎಂಬುದನ್ನೂ ತಿಳಿಯುತ್ತಾರೆ. ಲಕ್ಷ್ಮಣ ತನ್ನ ಪರಿಸ್ಥಿತಿಯನ್ನು ನಿಂದಿಸಿಕೊಳ್ಳುತ್ತಾನೆ.

ಲಕ್ಷ್ಮಣನನ್ನು ಹಿಂದಕ್ಕೆ ಕಳಿಸುವಾಗ ಸೀತೆಯು, ಅವನೂ, ಉಳಿದ ಸಹೋದರರೂ ರಾಜನಾದ ರಾಮನನ್ನು ಮೊದಲಿಗಿಂತಲೂ ಹೆಚ್ಚಿನ ಸೌಹಾರ್ದ ಹಾಗೂ ಶ್ರದ್ಧೆಯಿಂದ ನೋಡಿಕೊಳ್ಳಬೇಕೆಂದೂ, ಸಾಧ್ಯವಾದರೆ ತನ್ನನ್ನು ಮರೆತು ಪ್ರಜಾಕ್ಷೇಮವೊಂದನ್ನೇ

ಗುರಿಯಾಗಿಸಿಕೊಳ್ಳಬೇಕೆಂದೂ – ಒಟ್ಟಿನಲ್ಲಿ ರಾಮನ ಆಳ್ವಿಕೆಯಲ್ಲಿ ಪ್ರಜೆಗಳ ಕಲ್ಯಾಣಕ್ಕೆ ಯಾವ ಕೊರತೆಗೂ ಆಸ್ಪದ ಕೊಡಬಾರದೆಂದೂ, ತಾನೂ ಸಹ ಸರ್ವದಾ ರಾಮನ ಹಿತಕ್ಕಾಗಿ ದೇವರಲ್ಲಿ ಪ್ರಾರ್ಥಿಸುವುದಾಗಿಯೂ ಹೇಳಿಕಳುಹಿಸುತ್ತಾಳೆ.

ಈ ಬದಲಾವಣೆಯಿಂದ ರಾಮನ ವ್ಯಕ್ತಿತ್ವಕ್ಕೂ ಸೀತೆಯ ವ್ಯಕ್ತಿತ್ವಕ್ಕೂ ಹೊಸ ಮೆರಗು ದೊರೆತು ಅವರ ಬಗ್ಗೆ ಗೌರವ ಮತ್ತು ಸಹಾನುಭೂತಿ ಉಂಟಾಗುತ್ತದೆ – ಎಂದು ಭಾವಿಸಬಹುದಾಗಿದೆ.

□□□

2

ಪ್ರೊಫೆಸರ್ ಎ.ಎನ್. ಮೂರ್ತಿರಾವ್

(೧೬-೦೬-೧೯೦೦ - ೨೬-೦೮-೨೦೦೩)

– ನಾ. ನಾಗಪ್ಪ

ಸರಳ ಜೀವನ ಮತ್ತು ಉಚ್ಚವಿಚಾರ – ಇದರಂತೆ ಜೀವನ ನಡೆಸಿದ ಚಿಂತಕರು, ಲೇಖಕರು ಪ್ರೊ. ಎ.ಎನ್. ಮೂರ್ತಿರಾಯರು. ಅವರು ಜೀವನದಲ್ಲಿ ಅನೇಕ ಏಳುಬೀಳುಗಳನ್ನು ಕಂಡವರು, ಉತ್ತಮ ಸಾಹಿತಿಗಳು. ಅವರ ಸಾಹಿತ್ಯಾಭಿರುಚಿ ಉತ್ತಮ ಶ್ರೇಣಿಯದು. ಬರದಿದ್ದೆಲ್ಲ ಚಿನ್ನ. ಅವರು ಇಂಗ್ಲಿಷ್ ಭಾಷೆಯಲ್ಲಿ ಪರಿಣತರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದರು. ಅವರು ಕನ್ನಡದಲ್ಲಿ ಹಾಸ್ಯವ್ಯಂಗ್ಯ ಪ್ರಬಂಧದ ಪ್ರತಿಷ್ಠಾಪಕರು ಎಂದು ಪ್ರಸಿದ್ಧಿ. ರಾಯರ ಕನ್ನಡಭಾಷಾ ಶೈಲಿ ಸರಳ-ಶುದ್ಧ. ಹೇಳಬೇಕಾದ್ದನ್ನು ಹೃದಯಕ್ಕೆ ನಾಟುವಂತೆ ಹೇಳತಕ್ಕವರು – ಬರೆವಣಿಗೆಯಲ್ಲಿಯೂ ಹಾಗೆಯೇ. ಅವರ ಪ್ರಬಂಧ ತಿಳಿಹಾಸ್ಯಕ್ಕೆ ಎತ್ತಿದ ಕೈ. ಎಳನೀರು ಕುಡಿದ ಮೇಲೆ ಜೀವ ಹಗುರವಾಗುವಂತೆ ಅವರ ಪ್ರಬಂಧಗಳು ಹಾಸ್ಯದ ಬುಗ್ಗೆಯಂತೆ ಸ್ಫುರಿತವಾದುದು. ಎಂದಿಗೂ ಯಾರ ಮನಸ್ಸನ್ನೂ ನೋಯಿಸದೆ ತಿಳಿಹಾಸ್ಯದಲ್ಲಿ ಓದುಗರನ್ನು ತೇಲಿಸುವ ಕಲೆಯಲ್ಲೇ ಅವರು ನಿಪುಣರು.

'ಹಗಲುಗನಸುಗಳು', 'ಅಲೆಯುವ ಮನ' ಮತ್ತು 'ಮಿನುಗು ಮಿಂಚು' – ಇವು ಮೂರು ಕೃತಿಗಳಲ್ಲಿ ಅವರ ತಿಳಿಹಾಸ್ಯದ ಪ್ರಬಂಧಗಳು.

'ಹಗಲುಗನಸುಗಳು' ಎಂಬ ಪುಸ್ತಕದಲ್ಲಿ 'ಲಲಿತೆಯ ವಿದ್ಯಾಭ್ಯಾಸ' ಎಂಬ ಪ್ರಬಂಧದಲ್ಲಿ 'ಲಲಿತೆ' ಎಂಬ ಕೃತ್ರಿಮ ಹೆಸರು ಅವರ ಕುಟುಂಬ ಶ್ರೀಮತಿ ಜಯಲಕ್ಷ್ಮಿಯವರದ್ದು. ಈ ವಾಕ್ಯವನ್ನು ಪರಿಶೀಲಿಸಿ –

"ಒಂದು ವಿಧದಲ್ಲಿ ನೋಡಿದರೆ ಲಲಿತೆ ವಿದ್ಯಾವತಿಯಾಗದೆ ನಮ್ಮ ಮನೆಗೆ ಬಂದದ್ದೇ ಒಳ್ಳೆಯದಾಯಿತು. ಈಗ ಅವಳ ಮನಸ್ಸು ಸರಳವಾಗಿದೆ, ತಿಳಿಯಾಗಿದೆ. ಇನ್ನೂ ಶಿಲ್ಪಿಯ ಕೈಗೆ ಸಿಕ್ಕದ ಅಮೃತಶಿಲೆಯಂತೆ ಇದೆ. ಅದಕ್ಕೆ ನಾನು ಯಾವ ರೂಪವನ್ನು ಕೊಟ್ಟರೂ ಕೊಡಬಹುದು. ಅವಳ ಆತ್ಮಕ್ಕೆ ಪೂರ್ಣರೂಪವನ್ನು ಕೊಡುವ ಶಿಲ್ಪಿ ನಾನಾಗುವೆನು. ಮತ್ತೊಬ್ಬರು ನಿರ್ಮಿಸಿದ ಪ್ರತಿಮೆಯನ್ನು ಪಡೆಯುವುದಕ್ಕಿಂತ

ನಾನೇ ಶಿಲ್ಪಿಯಾಗುವುದಲ್ಲವೆ ಮಹತ್ವ? ಲಲಿತೆಯ ವಿದ್ಯಾಭ್ಯಾಸವು ಲಲಿತಕಲೆ. ಅವಳು ವಿದ್ಯಾವತಿಯಾಗುತ್ತಿರುವಾಗ ನಾನು ಕಲೆಗಾರನಾಗುತ್ತಿರುವೆನು – ಹೀಗೆಲ್ಲಾ ಯೋಚನೆ ಮಾಡಿ ನಾನೇ ಉಪಾಧ್ಯಾಯ ವೃತ್ತಿಯನ್ನು ಅವಲಂಬಿಸಬೇಕೆಂದು ನಿಶ್ಚಯಿಸಿದೆನು.

ಯಾರಿಗೆ ಪಾಠ ಹೇಳಿದರೂ ಹೆಂಡತಿಗೆ ಹೇಳುವುದು ಕಷ್ಟ. ಈ ಕಷ್ಟವಾದ ಪರೀಕ್ಷೆಯಲ್ಲಿ ಮೂರ್ತಿರಾಯರು ತೇರ್ಗಡೆಯಾಗಿದ್ದರು – ಏಕೆಂದರೆ ಅವರು ಶಿಷ್ಯೆಯ ಮುಂದೆ – ಲಲಿತಕಲೆಯ ಮುಂದಿರುವಂತೆ – ಸುಖಪಡುತ್ತಾ ಉಪಾಧ್ಯಾಯ ವೃತ್ತಿಯನ್ನು ಸಫಲಗೊಳಿಸಿದರು... ಕೊನೆಗೆ ಹೇಳಿರುವ ಮಾತನ್ನು ಗಮನಿಸತಕ್ಕದ್ದು –

"ಈಗ ಲಲಿತೆಯೂ ನಾನೂ ಒಟ್ಟಿಗೆ 'ರೋಮಿಯೋ ಜೂಲಿಯೆಟ್' ನಾಟಕವನ್ನೂ, ಷೆಲ್ಲಿಯ ಗೀತೆಗಳನ್ನೂ ಓದುತ್ತೇವೆ."

ಮೂರ್ತಿರಾಯರು ಸಫಲ ಉಪಾಧ್ಯಾಯರಲ್ಲವೇ ?

'ಗೌರಜ್ಜಿ' ಒಂದು ಉತ್ಕೃಷ್ಟವಾದ ಕತೆ – ರಾಯರು ಹೆಚ್ಚು ಕತೆಗಳನ್ನು ಬರೆಯಲಿಲ್ಲ.

"ಗೌರಜ್ಜಿ ನಮ್ಮ ತಂದೆಯ ದೊಡ್ಡಮ್ಮ. ಆಗಾಗ ತಮ್ಮ ತೌರೂರಿನ ವಿಷಯವನ್ನು ಹೇಳುವುದುಂಟು. ಅವರ ಮನೆಯವರು ಎರಡು ಎಕರೆ ತೋಟ ಮಾಡಿಕೊಂಡಿದ್ದರು. ತೋಟವೆಂದರೂ ನಂದನವನ – ಮಧ್ಯಾಹ್ನ ಹನ್ನೆರಡು ಘಂಟೆಯಲ್ಲೂ ನೆಲದಮೇಲೆ ಬಿಸಿಲು ಬೀಳುತ್ತಿರಲಿಲ್ಲ.

"ಎಲ್ಲಾ ಹಾಳು ಮಾಡಿಕೊಂಡೆವು .... ಈಗಲೂ ಇದಾರೆ, ಹುಡುಗರು; ಇದ್ದರೇನು, ಲೆಕ್ಕಕ್ಕಿಲ್ಲ, ಜಮೆಗಿಲ್ಲ."

ಗೌರಜ್ಜಿಯ ತೌರಿನ ಒಲವು ಎಷ್ಟು ಚೆನ್ನಾಗಿ ವಾತ್ಸಲ್ಯಪೂರ್ಣವಾಗಿ ವ್ಯಕ್ತವಾಗಿದೆ, ನೋಡಿ. ಈಗಿನ ಹುಡುಗರನ್ನು ಕಂಡರೆ ಪ್ರೀತಿಯೂ ಇಲ್ಲದೇ ಇಲ್ಲ.

ಮಲ್ಲಿಗೆಯ ಗಿಡಗಳಲ್ಲಿ ಬುಟ್ಟಿ ಬುಟ್ಟಿ ಮೊಗ್ಗು ಸಿಕ್ಕುತ್ತಿತ್ತಂತೆ. ಇದನ್ನು ಕೇಳಿದಾಗಲೆಲ್ಲ ನಮ್ಮ ಸರಸುಗೆ ಹೊಟ್ಟೆಕಿಚ್ಚು.

'ಸರಸು' ರಾಯರ ತಂಗಿ – ಹೆಸರು ಬೇರೆ – ಹೂವಿನ ಅಂದ –

ಚೆಂದದೊಂದಿಗೆ ಮಕ್ಕಳ ಹೂ – ಪ್ರೇಮವು ವ್ಯಕ್ತವಾಗಿದೆ.

"ಒಂದು ದಿನ ಮನೆಯವರು ಬೇಡ ಎಂದು ಹೇಳಿದ್ದರೂ ಕೆರೆಯಲ್ಲಿ ಈಜಾಡಿ, ಅಲ್ಲಿಂದ ಜೊತೆಯವರೊಡನೆ ತೋಟಕ್ಕೆ ಹೋಗಿ ಅಲ್ಲಿ ಕೋಡಬಳೆ ಮಾಡಬೇಕೆಂದು ಹವಣಿಸುತ್ತಿದ್ದಾಗ ಸಿಕ್ಕಿಕೊಂಡು ಚೆನ್ನಾಗಿ ಏಟನ್ನು ತಿಂದರಂತೆ, ತಾವು ತಿಂಡಿ ಕೇಳಿದರೆ "ಸದಾ ತಿಂಡಿಯ ಮೇಲೇ ಯೋಚನೆ. ಓದಿಲ್ಲ ಬರಾವಿಲ್ಲ" ಎನ್ನುವರು ನಮ್ಮ ತಂದೆ."

ನಮ್ಮ ತಂದೆಯ ತುಂಟತನದ ವಿಚಾರವನ್ನು ಗೌರಜ್ಜಿ ಬಾಯಲ್ಲಿ ಕೇಳುವುದು ಎಷ್ಟು ಪ್ರಿಯ. ಅದನ್ನು ಕೇಳುವುದು ನಮಗೆ ತಿಂಡಿ ತಿಂದಷ್ಟೇ ಸಂತೋಷಕರ.

"ಹಬ್ಬ ಬಂದರೆ ಮಕ್ಕಳ ಪಾಡು ಬೇಡ. ಬೋನಿನಲ್ಲಿಟ್ಟ ಹುಲಿಯ ಹಾಗೆ ಇಲ್ಲಿಂದ ಅಲ್ಲಿಗೆ ಪರದಾಡುವೆವು. ಇಂಥ ಕಾಲದಲ್ಲಿ ಗೌರಜ್ಜಿಯೇ ನಮಗೆ ಶರಣು. ಅವರು ಹಿಂದಿನ ಕಾಲದವರಾಗಿ ವ್ರತ ನಿಯಮಗಳು ಬಹಳ ಹೆಚ್ಚಾದರೂ ಮಕ್ಕಳ ಮೇಲಿನ ಪ್ರೇಮ ಅದಕ್ಕಿಂತಲೂ ಹೆಚ್ಚು. ಹುಡುಗರ ಪಾಡನ್ನು ನೋಡಿ ತಮ್ಮ ಮೋಕ್ಷವನ್ನು ಮರೆತು ದೇವರ ಪಕ್ಷವನ್ನು ಬಿಟ್ಟು ನಮ್ಮ ಪಕ್ಷವನ್ನು ವಹಿಸುವರು."

"ಪಾಪ, ಮಕ್ಕಳು ದೇವರ ಹಾಗೆ. ಹಬ್ಬ ಬಂದರೆ ಅವಕ್ಕೆ ತಹತಹ. ಅದೇನು ಹಾಗೆ ಅಟ್ಟಕೊಳ್ಳುತ್ತೀರಿರೆ? ಅವಕ್ಕೇನು ಉಪವಾಸದ ಕಟ್ಟು? ಏನಾದರೂ ಕೊಟ್ಟುಬಿಡಬಾರದೆ? ಎಂದು ನಮ್ಮನ್ನು ಕರೆದುಕೊಂಡು ಹೋಗಿ ಅವಲಕ್ಕಿ ಬೆಲ್ಲವೋ ಅರಳೋ ಏನಾದರೂ ಕೊಟ್ಟು ಕಳುಹಿಸುವರು. ಅವರ ಶಾಸ್ತ್ರದ ಪ್ರಕಾರ "ಐದು ವರ್ಷದ ಒಳಗಿನ ಮಕ್ಕಳೆಲ್ಲಾ ದೇವರ ಹಾಗೆ." ನಮ್ಮ ತಾಯಿ ಇದನ್ನೆಲ್ಲಾ ನೋಡಿ ಸ್ವಲ್ಪ ಅಸಮಾಧಾನಪಟ್ಟುಕೊಂಡು "ಹಬ್ಬ ಅನ್ನುವುದಿಲ್ಲ, ಹರಿದಿನ ಅನ್ನುವುದಿಲ್ಲ. ಹೊಟ್ಟೆಯ ಆತುರ ಬಂದಿದೆ ಇವಕ್ಕೆ" ಎನ್ನುವರು. "ನಮ್ಮ ಜೇಬಿನಲ್ಲಿ ಅವಲಕ್ಕಿ ಇರುವವರೆಗೂ ಅವರು ಎಷ್ಟು ರೇಗಿದರೇನು." ಇಲ್ಲಿನ ತಿಳಿಹಾಸ್ಯ ನೋಡಿ. ಜೇಬಿನಲ್ಲಿ ಅವಲಕ್ಕಿ ಇರುವವರೆಗೂ ಅವರು ಎಷ್ಟು ರೇಗಿದರೇನು ಆ ರೇಗಾಟಕ್ಕೆ ಲಕ್ಷ್ಯವಿಲ್ಲ. ಮಕ್ಕಳ ಮನಸ್ಸು ದೇವರ ಮನಸ್ಸು. ಅಜ್ಜಿಗೆ ಮಕ್ಕಳ ಪ್ರೀತಿಯೇ ದೇವರಿಗೆ ಪ್ರೀತಿ. ಇದಲ್ಲವೆ ನಿಜವಾದ ಮೋಕ್ಷ ! ಮಕ್ಕಳು ನಲಿದರೆ ಅಜ್ಜಿಗೆ ಆತ್ಮತೃಪ್ತಿ.

"ಗಾಡಿಯ ಪ್ರಯಾಣ" ಎಂಬ ಪ್ರಬಂಧದಲ್ಲಿ ಗಾಡಿಯು ಹೊಳೆ ದಾಟುವ ಸಂಭ್ರಮ ನೋಡಿ :

"ರಾತ್ರಿಯ ಕಾಲದಲ್ಲಿ ಹೊಳೆ ದಾಟುವಾಗ ನಿಜವಾಗಿಯೂ ಸ್ವಲ್ಪ ಮೈ ನಡಗುತ್ತಿತ್ತು. ಎಲ್ಲಿ ಯಾವ ಮಡುವಿನಲ್ಲಿ ಗಾಡಿ ಮೊಗಚಿಕೊಳ್ಳುವುದೋ ಎಂದು ನಮಗೆ ಹೆದರಿಕೆ. ಇಳಿದು ಚಕ್ರವನ್ನು ಹಿಡಿದುಕೊಂಡು ಬರುತ್ತಿರುವುದನ್ನು ಮೊಸಳೆ ಎಳೆದುಕೊಂಡು ಹೋಗಬಹುದೆಂಬ ಭಯ ಬೇರೆ. ಮಧ್ಯೆ ಮಧ್ಯೆ ಚಕ್ರವನ್ನು ನೂಕುತ್ತಿರುವವರು – "ಎಡಗೋಲು ಹೊಡೆದುಕೊ" ಎಂದು ಎಚ್ಚರಿಕೆ ಕೊಡುವರು. ಒಂದೊಂದು ವೇಳೆ ಗಾಡಿಯ ಮೂಕಿಯವರೆಗೂ ನೀರು ಬಂದುಬಿಡುವುದು. ಆ ವೇಳೆಯಲ್ಲಿ ನಮ್ಮ ಸಂಭ್ರಮವೆಷ್ಟೋ ದಿಗಿಲೆಷ್ಟೋ."

ಗಾಡಿಯ ಪ್ರಯಾಣದ ಯಥಾರ್ಥ ವರ್ಣನೆ ನನಗೆ ತಿಳಿದಂತೆ ಮತ್ತೆಲ್ಲೂ ಇಲ್ಲ. ಗಾಡಿ ಚೌಕದ ವರ್ಣನೆ ಕಣ್ಣಿಗೆ ಕಟ್ಟಿದಂತೆ ಇದೆ:

"ಚೌಕದ ಮಾಲೀಕಳಾದ ಮುದುಕಿಯೊಬ್ಬಳ ನೆನಪು ನನ್ನ ಮನಸ್ಸಿನಲ್ಲಿ ಚೆನ್ನಾಗಿ ನಿಂತಿದೆ. ಆಕೆಗೆ ಮುಪ್ಪಿನಿಂದ ಬೆನ್ನು ಬಿಲ್ಲಿನಂತೆ ಬಾಗಿ ಹಲ್ಲು ಬಿದ್ದುಹೋಗಿ ಮೈಯೆಲ್ಲಾ ವಿಕಾರವಾದ ರೂಪ ಬಂದಿತ್ತು. ಆದರೂ ಅವಳ ನಡೆನುಡಿಯಲ್ಲಿ ಏನೋ ಒಂದು ಅದ್ಭುತವಾದ ಚಟುವಟಿಕೆಯಿದ್ದಿದ್ದರಿಂದ ಅವಳ ಮುಖವನ್ನು ನೋಡಿದವರಿಗೆ ಮರುಕಕ್ಕೆ ಬದಲಾಗಿ ಭಯವುಂಟಾಗುತ್ತಿತ್ತು...." ಅವಳನ್ನು ಎದುರಿಸಿ ಜಗಳವಾಡಿ ಗೆದ್ದವರನ್ನು ನಾನು ಕಾಣೆ.... ಅವಳು ಬಂದೊಡನೆಯೇ 'ದುಡ್ಡು ಮಡಗೋ ತನಕ ಗಾಡಿ ಬಿಡಾಕಿಲ್ಲ ಕಣಯ್ಯ" ಎಂದು ಸಂಶಯಕ್ಕೆ ಆಸ್ಪದವೇ ಇಲ್ಲದಂತೆ ಹೇಳಿ ಅವರ ಸೊಲ್ಲು ಅಡಗಿಸಿಬಿಡುತ್ತಿದ್ದಳು. ಅವಳ ಕೈಯಿಂದ ಪಾರಾದ ಮೇಲೆ ಗಾಡಿ ಚೌಕದಿಂದ ಹೊರಡುವ ಸಂಭ್ರಮ. "ಜೊತೆಯವರನ್ನು ಅವಸರಿಸುವುದು. ಎತ್ತುಗಳಿಗೆ ಕೋಪದ ಮತ್ತು ಪ್ರೀತಿಯ ಬೈಗುಳ, ಜೊತೆಗೆ ಅಲ್ಲಲ್ಲೇ ಚಾವಟಿಯ ಪ್ರದರ್ಶನ – ಇವೆಲ್ಲಾ ಆದ ಮೇಲೆ ಒಂದೊಂದಾಗಿ ಗಾಡಿಗಳು ಹೊರಡುವುವು."

ಗಾಡಿಚೌಕದ ವರ್ಣನೆ ಬಹಳ ಸ್ವಾರಸ್ಯವಾಗಿದೆ. ಈಗಿನ ತರುಣರಿಗೆ ಗಾಡಿಚೌಕದ ಇಂಥ ಅನುಭವ ಅಪರೂಪ.

"ಬೆಳದಿಂಗಳಲ್ಲಿ ನೆನೆದು ಹರಿಯುತ್ತಿರುವ ಹುಣ್ಣಿಮೆ ರಾತ್ರಿ, ಸಾಲುಮರಗಳ ನಡುವೆ ಸುತ್ತಿಸುತ್ತಿಕೊಂಡು ಹೋಗುವ ರಸ್ತೆ. ಒಳ್ಳೆಯ ಜಾತಿಯ ಎತ್ತುಗಳು ತುಯ್ಯುತ್ತಿರುವ ಗಾಡಿ, ಜೊತೆಯಲ್ಲಿ ನನ್ನ ನಲ್ಲೆ – ಪ್ರಯಾಣವು ನಿಧಾನವಾದರೇನು ನಿಶ್ಚಿತ ಸ್ಥಳವನ್ನು ಎಂದು ತಲುಪಿದರೇನು – ತಲಪದಿದ್ದರೆ ತಾನೇ ಏನು" ಎಂದು ಹೇಳಿ 'ಗಾಡಿಯ ಪ್ರಯಾಣ' ಎಂಬ ಪ್ರಬಂಧವನ್ನು ಮುಗಿಸಲಾಗಿದೆ – ಬರಹಗಾರರ ನಿಸೂರು, ರಸಿಕತೆ ಮತ್ತು ಸುಖ–ಕಲ್ಪನೆ ಎಷ್ಟು ಎಂಬುದು ವೇದ್ಯವಾಗುತ್ತದೆ.

ರಾಯರು ಕನ್ನಡದಲ್ಲಿ ತಿಳಿಹಾಸ್ಯಕ್ಕೆ ಎತ್ತಿದ ಕೈ. ತಿಳಿಹಾಸ್ಯದ ಪ್ರತಿಮೆಗಳ (Imageries) ಮೂಲಕ ಓದುಗರ ಮನಸ್ಸನ್ನು ಆಕರ್ಷಿಸುವುದರಲ್ಲಿ ಅವರು ನಿಪುಣರು. 'ಅಲೆಯುವ ಮನ' ಎಂಬ ಗ್ರಂಥದಲ್ಲಿ 'ಸಾಹಿತಿಯ ಚಹರೆ' ಎಂಬ ಒಂದು ಪ್ರಬಂಧವಿದೆ. ಅದರಲ್ಲಿ ರಾಯರು ಹಿಂದಿನ ಸಾಹಿತ್ಯ ಮತ್ತು ಈಗಿನ ಸಾಹಿತ್ಯವನ್ನು ಕುರಿತು ಹೀಗೆ ಹೇಳಿದ್ದಾರೆ–

"ಸುಮಾರು ೬೦–೭೦ ವರ್ಷಗಳ ಕೆಳಗೆ ಸಾಹಿತ್ಯ ಸಾಮ್ರಾಜ್ಯದಲ್ಲಿ ಏಕಾದಿನಸ್ಯ ಮಾಡುತ್ತಿದ್ದ ಗುಂಪಿನವರನ್ನು ಶಾಲು ಸಾಹಿತಿಗಳೆಂದು ಕರೆಯಬಹುದು. ಅವರ ವೇಷಭೂಷಣಗಳಲ್ಲಿ ಶಾಲೇ ಮುಖ್ಯವಾದ ಅಂಶ. ಅವರಿಗೆ ಆಗದವರು 'ಶಾಲು ಹೊದ್ದವನು ಸಾಹಿತಿ. ತಲೆಗೊಂದು ಶಾಲು ಸುತ್ತಿದವ ಉದ್ದಾಮ ಸಾಹಿತಿ. ಎಲ್ಲ ಸಾಹಿತಿಗಳಂತೆ ಅವರೂ ಬಡವರೇ. ಆದರೆ ಬಡತನದಲ್ಲೇ ಇರಲಿ, ಹೊದ್ದ ಶಾಲು ಎಷ್ಟೇ ಹಳೆಯದಾಗಿರಲಿ, ನೆಸ್ಯದ ಡಬ್ಬಿ ಬೆಲ್ಲದ ಬಿರುಡೆಯೇ ಆಗಿರಲಿ, ಅವರು ವಸಿಷ್ಠ ವಿಶ್ವಾಮಿತ್ರರ ಕಾಳಿದಾಸ ಭವಭೂತಿಗಳ ಕೀರ್ತಿಗೂ ಪ್ರತಿಷ್ಠೆಗೂ ಉತ್ತರಾಧಿಕಾರಿಗಳು. ಅಂದ ಮೇಲೆ ಅವರು ವಿಶ್ವಕ್ಕೆ ಆಶೀರ್ವಾದ ಮಾಡುವ ಹಕ್ಕುಳ್ಳವರು.

ಶಾಲು ಸಾಹಿತಿಗಳು ಒಂದು ದೊಡ್ಡ ಅಪರಾಧವನ್ನು ಮಾಡಿದರು ಎಂಬ ಪ್ರತೀತಿ ಇದೆ. ಅವರು ಸ್ವಂತ ತಾಯಿಯ ವಿಷಯದಲ್ಲಿ ಅನಾದರದಿಂದ ವರ್ತಿಸಿ ಆಕೆಯನ್ನು ಸಂಸ್ಕೃತದ ಮನೆಯಲ್ಲಿ ಊಳಿಗಕ್ಕಿಟ್ಟರಂತೆ. ಅವರ ಕೋಟಲೆಯಿಂದಾಗಿ "ಪುನಃ ಪುನರ್ಜಾಯಮಾನಾ ಪುರಾಣೀ" ಆಗಬೇಕಾದ ಕನ್ನಡ ರಾಣಿ ಕೇವಲ ಪುರಾಣಿಯಾಗಿಯೇ ಉಳಿದಳು. ಆಕೆ ಶ್ಲೇಷ, ಪ್ರಾಸಾದಿಗಳಿಂದ ನೇಯ್ದ ಜೀರ್ಣಾಂಬರವನ್ನು ಉಟ್ಟು ಬಾಡಿದ ಹೂವು ಮುಡಿದು ಕಂದವೃತ್ತಗಳ ಕಾರಾಗಾರದಲ್ಲಿ ಕೊಳೆಯಬೇಕಾಗಿ ಬಂದಿತಂತೆ. ಕನ್ನಡಮ್ಮನ ಉದ್ಧಾರಕರಿಗೂ ಶಾಲು ಸಾಹಿತಿಗಳಿಗೂ ಘೋರವಾದ ಯುದ್ಧವೇ ನಡೆಯಿತು. ಯಾರಿಗೂ ಸ್ಪಷ್ಟವಾದ ಜಯ ದೊರೆಯದೆ ಉಭಯವರ್ಗದವರೂ ಸೇರಿ ಒಂದು ಬಗೆಯ ಅನಧಿಕೃತ ಒಪ್ಪಂದಕ್ಕೆ ಬಂದರು."

ಅವರ ಷರತ್ತುಗಳ ಪ್ರಕಾರ ಯುದ್ಧಪೂರ್ವದಲ್ಲಿ ಇದ್ದಂತೆ ಅವರವರ ರಾಜ್ಯ ಅವರವರ ವಶದಲ್ಲಿಯೇ ಇರಬಹುದೆಂದು ತೀರ್ಮಾನವಾಯಿತು. ಶಾಲುಸಾಹಿತಿಗಳು ತಮ್ಮ ಕಮಲ ಕಲ್ಹಾರಗಳನ್ನು ಚಕೋರ ಚಕ್ರವಾಕಗಳನ್ನು, ನೀರಕ್ಷೀರಗಳನ್ನು ಬೇರ್ಪಡಿಸುವ ಹಂಸಗಳನ್ನು ಉಳಿಸಿಕೊಂಡರು. ಪಟಾಕಿ, ಬುರುಬುರು ನೊರೆಯ ಸಾಬೂನು, ಮುದ್ದಿನ ಕುರಿಮರಿ, ತೀರೆಯ ಹೂವು ಮುಂತಾದ ವಿಷಯದಲ್ಲಿ ಹೊಸಬರಿಗೆ ಸರ್ವಸ್ವಾತಂತ್ರ್ಯ ದೊರೆಯಿತು. ಕೋಗಿಲೆಯ ಮೇಲೆ ಎರಡು ಪಕ್ಷದವರಿಗೂ ಸಮಾನಾಧಿಕಾರವಿರತಕ್ಕದ್ದೆಂದು ಗೊತ್ತಾಯಿತು. ಶಾಲುಸಾಹಿತಿಗಳು ಉದಾರಬುದ್ಧಿಯಿಂದ "ಕಂದವೃತ್ತಗಳನ್ನು ಮಾತ್ರ ನಮಗೆ ಬಿಟ್ಟುಕೊಡಿ, ರಗಳೆಯೇನಿದ್ದರೂ ನಿಮಗೇ ಇರಲಿ" ಎಂದರು. ಶಾಲು ಸಾಹಿತಿಗಳು ತಮಗೆ ಪ್ರಿಯವಾದ ಶಲ್ಯವನ್ನು ಉಳಿಸಿಕೊಂಡರು. ಆದರೆ ಇತ್ತೀಚೆಗೆ ಅವರ ಸರಕುಗಳ ಬೆಲೆ ಇಳಿದು ಅವರು ಮುಗ್ಗಟ್ಟಿಗೆ ಸಿಕ್ಕಿದ್ದಾರೆ. ಹಿಂದೆ ವರದಹಸ್ತವನ್ನು ತಲೆಯ ಮೇಲಿಟ್ಟು ಅನುಗ್ರಹಿಸುತ್ತಿದ್ದವರು, ಕಾಲದ ಮಹಿಮೆಯಿಂದ ದೈನ್ಯಸ್ಥಿತಿಗೆ ಬಂದಿದ್ದಾರೆ.

ಶಾಲು ಸಾಹಿತಿಗಳ ಮೇಲೆ ದಂಗೆಯೆದ್ದು ಕನ್ನಡಮ್ಮನನ್ನು ಸೆರೆಯಿಂದ ಬಿಡಿಸಿದವರೇ ಎರಡನೆಯ ಗುಂಪಿನ ಸಾಹಿತಿಗಳು. "ಇವರಲ್ಲಿ ಹಲವರು ವಿಶ್ವವಿದ್ಯಾನಿಲಯಗಳ ಪದವೀಧರರು. ಇವರು ಜರಿ ರುಮಾಲಿನ ಸಾಹಿತಿಗಳೆಂದು, ಮಡಿಸಾಹಿತಿಗಳೆಂದು ಹಾಸ್ಯಮಾಡುವುದುಂಟು."

"ಈ ಶತಮಾನದ (ಅಂದರೆ ಇಪ್ಪತ್ತನೆಯ ಶತಮಾನದ) ಎರಡನೇ ದಶಕದಲ್ಲಿ ಯಾವುದೋ ಒಂದು ರಾತ್ರಿ ಅವರು ಇಂಗ್ಲಿಷ್ ರೊಮ್ಯಾಂಟಿಕ್ ಕವಿತೆಗಳನ್ನು ಓದಿ ಮಲಗಿದರು. ಬೆಳಗ್ಗೆ ಕಣ್ಣು ತೆರೆದು ನೋಡಿದರೆ – ಕನ್ನಡ ನಾಡೆಲ್ಲ ಹೊಸದೊಂದು ಹೊಂಬೆಳಕಿನಲ್ಲಿ ತೊಯ್ದಿದೆ. ಎಲ್ಲೆಲ್ಲೂ ವಸಂತದ ಸೊಬಗು. ಗಿಡಮರಗಳ ಕಾಂಡ ಕಾಂಡಗಳಲ್ಲೂ ಜೀವರಸ ಏರುತ್ತಿದೆ. ಬಳ್ಳಿಗಳು ದಾಂಗುಡಿಯಿಟ್ಟು ಹೊರಟಿವೆ. ಪಕ್ಷಿಗಳ ಗಾನವೂ ದುಂಬಿಗಳ ಝೇಂಕಾರವೂ ಭೂಮ್ಯಂತರಿಕ್ಷಗಳನ್ನು ತುಂಬಿವೆ. ಪ್ರಕೃತಿಯ ಈ ಸರಸರ ವರ್ಷವರ್ಷವೂ ನಡೆದುಬಂದದ್ದೆ. ಅಂದೇನೋ ಸಾಹಿತಿಗಳ ಕಣ್ಣಿ ಪೊರೆ ಕಳೆದು ಈ ದಿವ್ಯದರ್ಶನವಾಯಿತು."

ಈ ಸಾಹಿತಿಗಳು ಮಾನವನ ಹೃದಯದ ಅಂತರ್ಯುದ್ಧದ ತುಮುಲವನ್ನು ವಿಶ್ಲೇಷಣೆ ಮಾಡಲು ಹೊರಟವರು. ಜನರ ಹೃದಯಾಂತರಾಳದ ರಹಸ್ಯವೇನು – ಎಂಬುದನ್ನು ವಿಚಾರಿಸಲು ಹೊರಟವರು.

ಈ ಬಗೆಯ ಸಾಹಿತಿಗಳಲ್ಲದೆ ಇನ್ನೊಂದು ಬಗೆಯ ಸಾಹಿತಿಗಳುಂಟು. ಇವರು ಸಾಹಿತ್ಯ ಸೃಷ್ಟಿಯನ್ನೇ ಮಾಡಬಲ್ಲರು ಎಂಬ ಭ್ರಮೆಗೆ ತುತ್ತಾಗಿದ್ದಾರೆ. ಇವರಲ್ಲಿ ಪ್ರತಿಗಾಮಿ ಮನೋವೃತ್ತಿ ಬೆಳೆದಿರುತ್ತದೆ. ಇವರು ವಾಸ್ತವಿಕ ಜೀವನದಿಂದ ದೂರ ಇರುವವರು. ಇವರು "ಕಲೆಗಾಗಿ ಕಲೆ" (Art for art's sake) ಎಂಬ ಗುಂಪಿಗೆ ಸೇರಿದವರು. ಇವರೆಲ್ಲರೂ ಸ್ವಾತಂತ್ರ್ಯಪ್ರಿಯರುಗಳು." ಇವರು "ಬಿಳಿಯ ಜುಬ್ಬ ಧರಿಸುತ್ತಾರೆ. ಕೃಷ್ಣನಿಗೆ ಪೀತಾಂಬರವೂ ಶಿವನಿಗೆ ಚರ್ಮಾಂಬರವೂ ಇರುವಂತೆ ಈ ವರ್ಗದ ಸಾಹಿತಿಗಳಿಗೆ ಜುಬ್ಬವೇ ಅಧಿಕೃತಾಂಬರವಾಗುವಂತೆ ತೋರುತ್ತದೆ". ಇವರು ಪ್ರಕೃತಿಯಿಂದ ಸ್ಫೂರ್ತಿ ಪಡೆಯಬಹುದು ಎಂದು ವರ್ಣಿಸುತ್ತಾರೆ. ವ್ಯಕ್ತಿಸಾಹಿತ್ಯಕ್ಕಿಂತ ಸಾಮಾಜಿಕ ಸಾಹಿತ್ಯಕ್ಕೆ ಇವರಿಗೆ ಹೆಚ್ಚು ಒಲವು. ಇವರು ಕಲಿತವರ ಪರವಹಿಸಿ ಅವರ ದುಃಖದ ಜ್ವಾಲೆ ಒಂದು ದಿನ ವಿಶ್ವವನ್ನೇ ಸುಟ್ಟೀತು ಎಂದು ನಂಬಿದವರು."

ಇವರು 'ಮಾರ್ಕ್ಸ್ ಮನೋಜನ್ಯವಾದ ಕಾಮಧೇನು. ಕಾರ್ಮಿಕರ ತಣಿವಿಗಾಗಿಯೇ ಹಾಲುಜೇನಿನ ಹೊಳೆ ಹರಿಸುತ್ತದೆ' ಎಂದು ನಂಬಿರುವರು.

ಈ ರೀತಿ ಮನೋಜ್ಞವಾಗಿ ಸಾಹಿತಿಗಳ ಬಗ್ಗೆ ಬರೆದವರು ರಾಯರು. ಅವರು ಒಂದು ಮಾತಿನಲ್ಲಿ ವಿಚಾರ ಸಾಹಿತ್ಯ ಯಾರಿಗೂ ಬೇಕಿಲ್ಲ ಎಂದು ವಿಷಾದ ವ್ಯಕ್ತಪಡಿಸುತ್ತಾರೆ. ಇತರ ದೇಶಗಳಲ್ಲಿ ಎರಡು ಬಗೆಯ ಸಾಹಿತಿಗಳಿದ್ದಾರೆ. ಮೊದಲ ಬಗೆಯವರು ಜನರಿಗೆ ಜ್ಞಾನದಾನ ಮಾಡಲು ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಮುಂತಾದುವನ್ನು ಬರೆಯುವವರು. ಇವರಿಗೆ ನಮ್ಮಲ್ಲಿ ಅಷ್ಟೇನೂ ಪುರಸ್ಕಾರ ದೊರೆತಿಲ್ಲ. ಇನ್ನೊಂದು ಬಗೆಯವರು ಶುದ್ಧ ಸಾಹಿತ್ಯವನ್ನು – ಅಂದರೆ ಕಥೆ ಕಾದಂಬರಿ ಕವನ ಮುಂತಾದವನ್ನು ಬರೆಯುವವರು. ನಮ್ಮ ಜನರಿಗೆ ವಿಚಾರ ಸಾಹಿತ್ಯದಲ್ಲಿ ಆಸಕ್ತಿ ಇಲ್ಲ.

ರಾಯರು ವೈಚಾರಿಕ ಸಾಹಿತ್ಯವನ್ನು ಮನೋಜ್ಞವಾಗಿ ನಿರೂಪಿಸುವುದರಲ್ಲಿ ನಿಷ್ಣಾತರು. "ಸಾಹಿತ್ಯ ಮತ್ತು ಸಂಸ್ಕೃತಿ" ಎಂಬ ಪ್ರಬಂಧದ ಭೂಮಿಕೆಯನ್ನು ಗಮನಿಸತಕ್ಕದ್ದು.

ಶಾಸ್ತ್ರ ವ್ಯಾಸಂಗವು ಒದಗಿಸುವ ಜ್ಞಾನ ಸಂಸ್ಕೃತ ಜೀವನಕ್ಕೆ ಅವಶ್ಯವಾದ ತಳಹದಿ. ಸಂಸ್ಕೃತಿಯೇ ಬೇರೆ, ಸಾಹಿತ್ಯವೇ ಬೇರೆ ಎನ್ನುವುದೇನೋ ನಿಜ. ವ್ಯಾಕರಣಶಾಸ್ತ್ರದ ಮೇಲಿನ ಪ್ರಭುತ್ವ ಪಡೆದವರು, ಪ್ರಪಂಚದ ಇತಿಹಾಸವನ್ನು ಕ್ರಮವಾಗಿ ಅಧ್ಯಯನ ಮಾಡಿದವರು, ಅಣುವನ್ನು ಸೀಳಿ ಅದರಲ್ಲಿ ಅಡಗಿರುವ ಶಕ್ತಿಯನ್ನು ಉಪಯೋಗಿಸಬಲ್ಲವರು. ಇಂದಿನ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿ, ಅಧಿಕಾರವಾಣಿಯಿಂದ ಗ್ರಂಥ ಬರೆಯಬಲ್ಲವರು – ಇವರು ಯಾರೂ ಸುಸಂಸ್ಕೃತರಲ್ಲದಿರುವುದು ಸಾಧ್ಯ. ಆದರೆ ದೇಶದಲ್ಲಿ ಇಂಥ ಶಾಸ್ತ್ರಗಳ ಜ್ಞಾನ

ತೆಳುವಾಗಿಯಾದರೂ ಹರಡದಿದ್ದರೆ ನಮ್ಮ ಸಂಸ್ಕೃತಿ ಉನ್ನತಮಟ್ಟಕ್ಕೆ ಏರುವುದು ಕಷ್ಟ. ಜ್ಞಾನಸಮುದ್ರವನ್ನು ಜನತೆಯೆಲ್ಲಾ ಸೇರಿ ಕಡೆಯುತ್ತಲೇ ಇರಬೇಕು. ಈ ಸಮುದ್ರಮಥನವನ್ನು ನಾವು ಯಾವ ಮಟ್ಟದಲ್ಲಿ ನಿಲ್ಲಿಸಿದರೂ ಆ ಮಟ್ಟಕ್ಕೆ ತಕ್ಕ ಫಲ ದೊರೆಯುತ್ತದೆ. ಅದರಿಂದ ಹಾಲಾಹಲದಂತಹ ವಿಷ ಹುಟ್ಟಿದೆಯೆಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯ. ಇಂದಿನ ಪ್ರಪಂಚದಲ್ಲಿ ಆ ವಿಷಯವನ್ನು ನುಂಗಬಲ್ಲ ಶಿವನಿಲ್ಲದೆ ಜಗತ್ತು ತಲ್ಲಣಿಸುತ್ತಿದೆ. ಆದರೆ ಹುಟ್ಟಿರುವುದು ವಿಷವೊಂದೇ ಅಲ್ಲ. ಉಚ್ಚೈಶ್ರವಸ್ಸು, ಐರಾವತ, ಅಪ್ಸರೆಯವರು ಮೊದಲಾದವುಗಳನ್ನೂ – ಆಧುನಿಕ ರೂಪದಲ್ಲಿ – ವಿಚಾರಸಮುದ್ರದ ಮಥನ ಒದಗಿಸಿಕೊಟ್ಟಿದೆ. ಭೋಗಜೀವನದ ಈ ಅಂಗಗಳೆಲ್ಲಾ ಇಂದಿನ ಇಂದ್ರಾದಿಗಳ – ಶ್ರೀಮಂತರ – ಪಾಲು. ಆದರೆ ಭೋಗದ ಮಟ್ಟದಲ್ಲಿ ನಿಂತ ಈ ಜನರಿಗೆ ಕಷ್ಟ ತಪ್ಪಿದ್ದಲ್ಲ. ಅವರ ಪದವಿಯನ್ನು ಆಕ್ರಮಿಸಲು ಹಾತೊರೆಯುತ್ತಿರುವ ಜನರ ಭಯವಿದೆ. ಅಲ್ಲದೆ ಅವರ ಆತ್ಮದ ಹಸಿವು ಈ ಭೋಗ ಸಾಮಗ್ರಿಗಳಿಂದ ಇಂಗುವುದಿಲ್ಲ. ಮೇಲೆ ಹೇಳಿದ ಯಾವ ಮಟ್ಟದಲ್ಲೂ ತೃಪ್ತರಾಗಿ ನಿಲ್ಲದೆ ಮಥನವನ್ನು ಮುಂದುವರಿಸಿದರೆ ಕೊನೆಗೆ ಅಮೃತ ಹುಟ್ಟುತ್ತದೆ. ಆ ಅಮೃತವೇ ಸಂಸ್ಕೃತಿ. ಅದನ್ನು ನಮಗೆ ಹಂಚಿಕೊಡುವ ವಿಶ್ವಮೋಹಿನಿಯೆಂದರೆ ಸಾಹಿತ್ಯ.

ಮೇಲ್ಕಂಡ ಪ್ರಬಂಧಗಳಲ್ಲಿ – ಒಂದು ಕೃತಿಯ ತಂತ್ರ (technique) ಇನ್ನೊಂದರಲ್ಲಿಲ್ಲ. ಹೊಳೆಯಂತೆ ಸಲೀಸಾಗಿ ಹರಿಯುವ ಭಾಷೆ– ಓದಲು ಪ್ರಾರಂಭಿಸಿದರೆ ಅದನ್ನು ಪೂರ್ಣಮಾಡಿಯೇ ಮುಗಿಸುವ ಭಾಷಾ ಶೈಲಿ.

ಅವರ ನಾಟಕಗಳು : ಆಷಾಢಭೂತಿ – ಫ್ರೆಂಚ್ ಭಾಷೆಯ ಮೋಲಿಯೇರನ 'ತಾರ್ತುಫ್' ನಾಟಕದ ಕನ್ನಡ ರೂಪಾಂತರ, ಷೇಕ್ಸ್‌ಪಿಯರ್‌ನ Tempest ನಾಟಕವನ್ನು ಕನ್ನಡದ Blank verse ಶೈಲಿಯಲ್ಲಿ ಕಾವ್ಯಾನುವಾದ ಮಾಡಿದ್ದಾರೆ.

'ಚಿತ್ರಗಳು ಪತ್ರಗಳು' ರಾಯರ ಮತ್ತೊಂದು ಗದ್ಯ ರಚನೆ. ಅದರಲ್ಲಿ ಎರಡು ಭಾಗ – ಮೊದಲನೆಯದರಲ್ಲಿ ವ್ಯಕ್ತಿ ಚಿತ್ರಗಳು –ಬಿ.ಎಂ.ಶ್ರೀ – ಶ್ರೀ ಟಿ.ಎಸ್. ವೆಂಕಣ್ಣಯ್ಯನವರು, ಶ್ರೀ ಜಿ. ಹನುಮಂತರಾಯರು, ಪ್ರಿನ್ಸಿಪಲ್ ರಾಲೋ, ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿ, ಪ್ರೊ. ಆರ್.ಎಲ್. ನರಸಿಂಹಯ್ಯ, ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ (ತೆಲುಗು ಪಂಡಿತರು ಮತ್ತು ಸಂಗೀತಗಾರರು) ಮತ್ತು ಇತರರ ವ್ಯಕ್ತಿಚಿತ್ರಗಳನ್ನು ಒಳಗೊಂಡಿರುವ ಭಾಗ. ಎರಡನೆಯ ಭಾಗದಲ್ಲಿ ರಾಯರು ಪ್ರೊ. ತೀ.ನಂ. ಶ್ರೀಕಂಠಯ್ಯನವರಿಗೆ ಬರೆದ ಕನ್ನಡ ಪತ್ರಗಳಿವೆ. ಇವು ತಮ್ಮದೇ ಆದ ವೈಶಿಷ್ಟ್ಯವನ್ನು ಒಳಗೊಂಡಿವೆ. ಈ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ೧೯೭೭ ರಲ್ಲಿ ಬಹುಮಾನ ದೊರಕಿತು.

ಸಂಸ್ಕೃತ ಸಾಹಿತ್ಯದ ಸಾರವನ್ನು ಹೀರಿ ಅದರ ಸ್ವಾರಸ್ಯವನ್ನು ರಕ್ತಗತ ಮಾಡಿಕೊಂಡಿರುವ ರಾಯರು 'ಪೂರ್ವಸೂರಿಗಳೊಡನೆ' ಎಂಬ ಗ್ರಂಥದಲ್ಲಿ ಕಾಳಿದಾಸ, ಭವಭೂತಿ, ವಾಲ್ಮೀಕಿ ರಾಮಾಯಣ – ಇವನ್ನು ಕುರಿತು ವಿಮರ್ಶಾತ್ಮಕ ಪ್ರಬಂಧಗಳನ್ನು ಬರೆದಿದ್ದಾರೆ.

'ಸಂಜೆಗಣ್ಣಿನ ಹಿನ್ನೋಟ' ರಾಯರ ಜೀವನ ಚರಿತ್ರೆ. ಅದು ಹಿಂದೀ ಭಾಷೆಗೆ ರೂಪಾಂತರವಾಗಿದೆ – ರೂಪಾಂತರಕಾರರು ಮಹಾರಾಜಾ ಕಾಲೇಜಿನ ಗಣಿತ ವಿಭಾಗದ ಪ್ರಾಧ್ಯಾಪಕರಾಗಿದ್ದ ಶ್ರೀ ಟಿ. ಕೃಷ್ಣಮೂರ್ತಿ ಅವರ ಶ್ರೀಮತಿ ಸ್ವರ್ಗೀಯ ಇಂದಿರಾಬಾಯಿ. ಈ ಅನುವಾದಕ್ಕೆ ಕೇಂದ್ರೀಯ ಹಿಂದೀ ನಿರ್ದೇಶನಾಲಯದಿಂದ ಬಹುಮಾನ ದೊರಕಿದೆ.

'ದೇವರು' ರಾಯರ ಮೇರು ಕೃತಿ. ಅದಕ್ಕೆ ೧೯೯೪ರಲ್ಲಿ ಕರ್ನಾಟಕ ರಾಜ್ಯದ ಪಂಪ ಪ್ರಶಸ್ತಿ ದೊರಕಿದೆ. ಈ ಉದ್ಗ್ರಂಥದಲ್ಲಿ ನಾವು ದೇವರ ಮೇಲೆ ಎಲ್ಲಾ ಭಾರವನ್ನೂ ಹಾಕಿ ಮನಸ್ಸನ್ನು ಹಗುರ ಮಾಡಿಕೊಳ್ಳುವ ಪ್ರವೃತ್ತಿಯನ್ನೂ ದೇವರಿಗೆ ಹರಕೆ ಹೊರುವ ಅಭ್ಯಾಸವನ್ನೂ ಖಂಡಿಸಿ ನಮ್ಮ ಏಳಿಗೆಗೆ ನಾವೇ ಹೊಣೆ – ಮತ್ತೊಬ್ಬರಾರೂ, ದೇವರೂ ಅಲ್ಲ – ಎಂಬ ತೀರ್ಮಾನವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದು ಎಲ್ಲರೂ ಓದಬೇಕಾದ ಗ್ರಂಥ. ಇದೂ ಹಿಂದೀ ಭಾಷೆಗೆ ಅನುವಾದವಾಗಿದೆ. ಕನ್ನಡದ ಮೂಲ ಗ್ರಂಥದ ಹತ್ತು ಸಂಸ್ಕರಣಗಳು ಇದುವರೆಗೆ ಬಂದಿವೆ.

'ಷೇಕ್ಸ್‌ಪಿಯರ್' ಕುರಿತು ರಾಯರ ಉದ್ಗ್ರಂಥವೊಂದನ್ನು ಮೈಸೂರು ವಿಶ್ವವಿದ್ಯಾನಿಲಯದವರು ಪ್ರಕಟಿಸಿದ್ದರು. ಈಚೆಗೆ ಈ ಗ್ರಂಥವನ್ನು ವಿಸ್ತರಿಸಿ ಡಿ.ವಿ.ಕೆ. ಮೂರ್ತಿ – ಮೈಸೂರು ಇವರಿಂದ ಪ್ರಕಟಿಸಲಾಗಿದೆ.

'ಅಪರವಯಸ್ಕನ ಅಮೆರಿಕಾ ಯಾತ್ರೆ' ಎಂಬುದು ಮತ್ತೊಂದು ಉದ್ಗ್ರಂಥ, ಪ್ರವಾಸಕಥನ. ಇದರಲ್ಲಿ ರಾಯರ ವಿಶ್ವಪರ್ಯಟನದ ಸ್ವಾರಸ್ಯಮಯ ವರ್ಣನೆಯೊಂದಿಗೆ ನಮ್ಮ ಕನ್ನಡಿಗರು ಪರದೇಶದಲ್ಲಿ ಹೇಗಿದ್ದಾರೆ ಎಂಬುದನ್ನು ವಿವರಿಸಿದ್ದಾರೆ.

ಮೂರ್ತಿರಾಯರು ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗಲೇ ಮೂರು ವರ್ಷ ಮೈಸೂರು ಆಕಾಶವಾಣಿಯ ನಿರ್ದೇಶನದ ಉತ್ತರದಾಯಿತ್ವವನ್ನು ಬಹು ತೃಪ್ತಿಕರವಾಗಿ ನಿರ್ವಹಿಸಿದ್ದರು. ೧೯೫೫ರಲ್ಲಿ ನಿವೃತ್ತರಾದ ನಂತರ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ವಿಭಾಗದ ನಿರ್ದೇಶಕರಾಗಿ ಮೂರು ವರ್ಷ ಕೆಲಸ ಮಾಡಿ ಒಳ್ಳೆಯ ಹೆಸರನ್ನು ಗಳಿಸಿದರು. ಅವರು ಈ ವಿಭಾಗದಲ್ಲಿದ್ದಾಗ ಗದುಗಿನ ಭಾರತದ ಒಂದು ಲಕ್ಷ ಪ್ರತಿಗಳನ್ನು ಅಚ್ಚು ಮಾಡಿಸಿ – ಒಂದು ಪ್ರತಿಗೆ ಕೇವಲ ಎರಡು ರೂ. ಬೆಲೆಗೆ ಮಾರಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಮತ್ತು ಗೌರವ ಅಧ್ಯಕ್ಷರಾಗಿ ಕೆಲಸ ಮಾಡಿದ್ದಲ್ಲದೆ ೧೯೮೪ರಲ್ಲಿ ಕೋಲಾರ ಜಿಲ್ಲೆಯ ಕೈವಾರದಲ್ಲಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅದೇ ವರ್ಷ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದರು. ಈ ಪ್ರಶಸ್ತಿಗಳ ಜೊತೆಗೆ ರಾಯರಿಗೆ ನಮ್ಮ ರಾಜ್ಯದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಭಾರತೀಯ ವಿದ್ಯಾಭವನದ ಫೆಲೋಷಿಪ್‌ಗಳು ದೊರೆತಿವೆ. ಇವರಿಗೆ ೧೯೭೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು.

□□□

'ಹಂಪೆ'ಯ ಐತಿಹಾಸಿಕ ನೆಲೆಗಳು – ಸಾಹಿತ್ಯ ಕೃತಿಗಳ ಹಿನ್ನೆಲೆಯಲ್ಲಿ

– ಡಾ. ಬಿ.ಎಸ್. ಗೀತಾ

ಸಾಹಿತ್ಯ ಕೃತಿಗಳು ಐತಿಹಾಸಿಕ ದೃಷ್ಟಿಯಿಂದಲೂ ಬಹು ಮಹತ್ವದವು. ಪಂಪಾಕ್ಷೇತ್ರದ ಬಗ್ಗೆ ಹರಿಹರ ಮತ್ತು ಸೋಮರಾಜ ಕವಿಗಳು ವರ್ಣಿಸುತ್ತಾರೆ.

ಈ ಕವಿಗಳಿಗೆ ಹಂಪೆಯ ದೈವನಾದ ವಿರೂಪಾಕ್ಷನೇ ಅರಸ, ಒಡೆಯನಾಗಿದ್ದಾನೆ. ಅವರು ಭಕ್ತಿಯನ್ನು ತೋರಗೊಡುವ ಆವೇಶದಲ್ಲಿ ಪಂಪಾಪುರದ ಸಮಗ್ರ ವರ್ಣನೆಯನ್ನು ಕೊಡುತ್ತ, ಇತಿಹಾಸದ ದರ್ಶನವನ್ನು ಮಾಡಿಸುತ್ತಾರೆ. 'ಹಂಪೆ' (<ಪಂಪ) ಮೂಲತಃ ಏನನ್ನು ಹೇಳುತ್ತದೆ ? ದೈವವನ್ನೇ, ಊರನ್ನೇ, ನದಿಯನ್ನೇ ? ಈ ಪದ ಸಂಸ್ಕೃತವೇ, ದ್ರಾವಿಡವೇ ? ಅದು ಬಹುಶಃ ಸಂಸ್ಕೃತ ಅಲ್ಲ. ಮಹಾಭಾರತ, ರಾಮಾಯಣಗಳಲ್ಲಿ "ಪಂಪಾ" ದಕ್ಷಿಣ ಭಾರತದ ಒಂದು ನದಿಯ ಹೆಸರಾಗಿದ್ದರೆ, ರಘುವಂಶದಲ್ಲಿ ಒಂದು ಸರೋವರದ ಹೆಸರಾಗಿ ಕಾಣಿಸಿಕೊಳ್ಳುತ್ತದೆ. ಅಲ್ಲದೆ, "ಪಂಪಾ" ಹೆಸರು ಹಂಪೆಯ ಹೆಸರಾಗಿರುವುದನ್ನು ಬಿಟ್ಟರೆ ಸಂಸ್ಕೃತ ಸಾಹಿತ್ಯದಲ್ಲಿ ಇನ್ನೆಲ್ಲೂ ಕಾಣಿಸದಿರುವುದರಿಂದ ಅದು ಖಚಿತವಾಗಿಯೂ ಸಂಸ್ಕೃತೀಕೃತ ಪದ; ಬಹುಶಃ ದ್ರಾವಿಡ ಪದ. "ಪಂಪಾ" ಎಂಬುದು ಕರ್ನಾಟಕದ ತುಂಗಭದ್ರಾ ನದಿಗೆ ಅಥವಾ ಅದರ ಪಕ್ಕದ ಊರಿಗೆ, ಅಲ್ಲಿನ ದೈವಕ್ಕೆ ಹೆಸರಾಗಿದೆ. ಮಾತ್ರವಲ್ಲದೆ ಅದು ಒಂದು ನದಿಯ ಹೆಸರಾಗಿ ಕೇರಳದಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತದೆ. ಕರ್ನಾಟಕದಲ್ಲಿ "ಹಂಪಿಹೋಳಿ" ಎಂಬ ವಂಶನಾಮದ ಹಲವು ವ್ಯಕ್ತಿಗಳು ಉತ್ತರ ಕರ್ನಾಟಕದಲ್ಲಿರುವರಲ್ಲದೆ, ತುಂಗಭದ್ರಾ ನದಿಯನ್ನು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ಪ್ರದೇಶದಲ್ಲಿ "ಹಂಪಿಹೋಳಿ" ಎಂದೇ ಈಗಲೂ ಕರೆಯುತ್ತಾರೆ. 'ಪಂಪೆ' ಮೂಲತಃ ನದಿಯ ಹೆಸರಾಗಿದ್ದು ಆಮೇಲೆ ಅದರ ಪಕ್ಕದಲ್ಲಿ ಜನ ಆರಾಧಿಸಲು ಆರಂಭಿಸಿದ ದೈವಕ್ಕೆ, ಆಮೇಲೆ ಆ ದೈವದಿಂದಾಗಿ ಬೆಳೆದ ಊರಿಗೆ ಹೆಸರಾಗಿ ಪರಿಣಮಿಸಿರುವ ಸಾಧ್ಯತೆಗಳಿವೆ (ಚಿದಾನಂದಮೂರ್ತಿ ಎಂ. ೧೯೯೮; ೪೪೫). ಆದರೆ ಉದ್ಭಟ ಕಾವ್ಯದಲ್ಲಿ ಸೋಮರಾಜಕವಿ ಪಂಪಾಪುರವೆಂಬ ಹೆಸರು ಬಂದ ಬಗ್ಗೆ ಉಲ್ಲೇಖಿಸುತ್ತಾನೆ.

ಕಡುನಲವಿಂ ಪಂಪಾಂಬಿಕೆ
ಬಿಡದೋವುವ ಕಥನದಿಂದೆ ಪಂಪಾಪುರಮೆಂ ।
ದೆಡೆವಿಡದೀಕ್ಷೇತ್ರಂ ಪೆಸೆ
ರ್ವಡೆದೊಪ್ಪುವುದಾಲಿಸುದ್ಭಟಕ್ಷಿತಿಪಾಲಾ ॥ (ಉ.ಕಾ. ೩–೫೬)

ಅಂದರೆ ಪಂಪಾಂಬಿಕೆಯಿಂದಾಗಿಯೇ ಪಂಪಾಪುರವೆಂಬ ಹೆಸರು ಬಂದಿರುವುದಾಗಿ ತಿಳಿದುಬರುತ್ತದೆ. ಅತ್ಯಾನಂದದಿಂದ ಪಂಪಾಂಬಿಕೆಯು ತಪ್ಪದೆ ಕಾಪಾಡುವ ಕಾರಣದಿಂದ ಪಂಪಾಪುರವೆಂದು ಯಾವಾಗಲೂ ಈ ಕ್ಷೇತ್ರವು ಹೆಸರು ಪಡೆದು ಶೋಭಿಸಿರುವುದಾಗಿದೆ. ಅಲ್ಲದೆ ಪಂಪಾಪುರವು ಶಕ್ತಿಯ ಸ್ಥಾನವಾಗಿದ್ದಿತೆಂದು ಕಾಣುತ್ತದೆ. ಈ ಬಗ್ಗೆ ಮುಂದೆ ಚರ್ಚಿಸಲಾಗುವುದು. ಸಾಮಾನ್ಯವಾಗಿ ಭಾರತೀಯ ಪರಂಪರೆಯಲ್ಲಿ ಹೆಣ್ಣಿನ ಹೆಸರನ್ನು ನದಿಗೆ ಇಡಲಾಗುತ್ತದೆ. ಭಾರತದ ಹೆಸರುಗಳನ್ನು ನೋಡಿ–ಗಂಗೆ, ಸರಸ್ವತಿ, ಕೃಷ್ಣೆ, ನರ್ಮದಾ. ಅಷ್ಟಲ್ಲದೆ ಕರ್ನಾಟಕದ ನದಿಗಳ ಹೆಸರನ್ನೇ ನೋಡಿ–ಕಾವೇರಿ, ಭದ್ರೆ, ತುಂಗೆ, ನೇತ್ರಾವತಿ, ಕಾಳಿ ಹೀಗೆ. ಆದುದರಿಂದ ಹಂಪೆಗೆ ಮೊದಲು ಪಂಪಾಪುರವೆಂಬ ಹೆಸರು ಪಂಪಾಂಬಿಕೆಯಿಂದ ಬಂದುದಾಗಿದೆ (ಗೀತಾ ಬಿ.ಎಸ್. ೨೦೦೫; ೨೦೫). ಪಂಪಾಂಬಿಕೆಯ ಬಗ್ಗೆ ವಿದ್ವಾಂಸರಲ್ಲಿ ಜಿಜ್ಞಾಸೆಯಿದೆ.

"ಹಿರಿಯ ಹಂಪಾದೇವಿ–ಚಿಕ್ಕ ಪಂಪಾದೇವಿ. ಒಬ್ಬ "ಹಂಪಾದೇವಿ" ಯು ಈಗಿನ ವಿರೂಪಾಕ್ಷ ದೇವಾಲಯದ ಪಂಪಾಂಬಿಕೆಯೇ. ಇನ್ನೊಬ್ಬಳು ನಿಶ್ಚಿತವಾಗಿಯೂ ಪಂಪಾ ಸರೋವರ ದಡದಲ್ಲಿ "ಜಯಲಕ್ಷ್ಮಿ" ಎಂದು ಈಚೆಗೆ ನಾಮಕರಣವಾಗಿರುವವಳು. ನಾನು ಆ ಪ್ರದೇಶದ ಹಲವರಿಂದ ಖಚಿತಪಡಿಸಿಕೊಂಡಿದ್ದೇನೆ – ಆ ಹಿರಿಯರು ತಮ್ಮ ಬಾಲ್ಯದಲ್ಲಿ ಆ ದೇವತೆಯನ್ನು "ಅ(ಹ)ಂಪಮ್ಮ" ಎಂದೇ ಕರೆಯುತ್ತಿದ್ದರಂತೆ. ಪಂಪಾ ಸರೋವರದ ದಡದ ಗುಡಿಯು ನಿಶ್ಚಿತವಾಗಿಯೂ ಮೂಲತಃ ಶಿವದೇವಾಲಯ–ಈಗಲೂ ಅಲ್ಲಿ ಶಿವಲಿಂಗವೊಂದಿದೆ. ಆ ಶಿವನ ಪತ್ನಿ ಪಂಪಾಂಬಿಕೆಯೇ. ಈಗ ಜನ "ಜಯಲಕ್ಷ್ಮಿ" ಎಂದು ತಪ್ಪಾಗಿ ಕರೆಯುವ ದೇವತೆ. ಬ್ರಹ್ಮನ ಮಾನಸಪುತ್ರಿಯಾದ ಪಂಪಾದೇವಿಯು ಮೊದಲು ತಪಸ್ಸು ಮಾಡಿದ್ದು ಪಂಪಾ ಸರೋವರದ ದಡದಲ್ಲಾದ್ದರಿಂದ ಅದೇ ಕೆಲವರ ಪ್ರಕಾರ 'ಆದಿ' ಪಂಪಾಕ್ಷೇತ್ರ, ಪಂಪಾದೇವಿಯು ವಿರೂಪಾಕ್ಷನ ಕೈಹಿಡಿದ ಮೇಲೆ ಈಗಿನ ವಿರೂಪಾಕ್ಷನ ಸಮೀಪ ನೆಲಸಿದಳು. ಆ ಕಾರಣ, 'ಹಿರಿಯ ಪಂಪಾದೇವಿ' ಯು ನಿಶ್ಚಿತವಾಗಿ ಪಂಪಾ ಸರೋವರದ ದಡದ ಹಂಪಮ್ಮ (ಈಗಿನ ಜಯಲಕ್ಷ್ಮಿ); ಕಿರಿಯ ಹಂಪಾದೇವಿಯು ವಿರೂಪಾಕ್ಷ ದೇವಾಲಯದ ಆವರಣದ ಪಂಪಾಂಬಿಕೆ (ಚಿದಾನಂದಮೂರ್ತಿ ಎಂ. ೧೯೯೮; ೪೪೮–೪೯, ೬೭). ಉದ್ಭಟ ಕಾವ್ಯದಲ್ಲಿ ಬಾಲಪಂಪಾದೇವಿಯ ಬಗ್ಗೆ ಸ್ಪಷ್ಟ ಉಲ್ಲೇಖಗಳಿವೆ.

ಉದ್ಭಟ ಮಹಾರಾಜನು ಬಾಲಪಂಪಾದೇವಿಯ ಆಲಯವನ್ನು ನೋಡಿದ್ದು ಆಲಯದ ಸುತ್ತ ಇದ್ದ ಪ್ರದೇಶದ ನಕ್ಷೆಯನ್ನು ಕೂಡ ಸೋಮರಾಜಕವಿ ಕೊಡುತ್ತಾನೆ–"

ಸಕಳತೀರ್ಥಂಗಳಿಂ ಪವಿತ್ರಗೋತ್ರಂಗಳಿಂದೆ ನಾನಾದೇವಸ್ಥಾನಂಗಳಿಂ ನವೀನೋದ್ಯಾನಂಗಳಿಂ ಮನೋಹರಪುಷ್ಕರಣಿಗಳಿಂ ಪುಣ್ಯತಟಾಕಂಗಳಿಂ ವರ್ಣಿಗಳ ಪರ್ಣಶಾಲೆಗಳಿಂ ವಿಮಳತಪಸ್ವಿಗಳಿಂ ಕಣ್ಗೆಮಂಗಳವಾಗಿ ಮನಂಗೊಳಿಪ ತತ್ಪಂಪಾಕ್ಷೇತ್ರದಲಂಪಂ ನಡೆನೋಡುತ್ತುರತರ ಭಕ್ತಿರಸಭರಿತಾಂತಃಕರಣನಾಗಿ ಬರೆವರೆ ಮೂಱುಲೋಕಮಾತೆಯಪ್ಪ ಬಾಲಪಂಪಾದೇವಿಯಾಲಯಮಂ ಕಾಣಿಸಲಾನೆಯಿಂದೆೞ್ದು ಮಾದೇಗುಲದುಪಕಂಠಸ್ಥಿತಮುದಿತ ವಿಮಳ ಕಮಳಕಹ್ಲಾರಕೈರವಸಂಚಯದ ಸಮಂಚಿತಸುಗಂಧಮಿಳಿತಾಂಚನ್ಮಕರಂದಧೂಳೀಪಟಲ ಕ್ರೀಡೋಲ್ಲೀಢಭ್ರಮದ್ಭ್ರಮರೀಪುಂಜ ಸಂಜನಿತಮಂಜುಳಝೇಂಕಾರ ಪರಿಪೂರ್ಣರಂಜಿತ ಕಂಜಾತಾಕರಾಚ್ಛೋದಕದೊಳ್ ಕರಚರಣಪ್ರಕ್ಷಾಳನಮಂ ಮಾಡಿಕೊಂಡಾನಂದದಿಂದುದ್ಭಟ ಕ್ಷಿತೀಂದ್ರಚಂದ್ರಮಂ ಪದ್ಮಕುಟೀರಮಂ ಪುಗುವ ರಾಜಹಂಸನಂತೆ ದೇವಾಗಾರಮಂ ಪೊಕ್ಕು ಪಂಪಾಂಬಿಕೆಯಂ ಕಾಣ್ಬ ತಟಕದಿಂದಂ ಬರೆವರೆ" (ಉ.ಕಾ. ೩–೩೫).

ಇಲ್ಲಿ ಉದ್ಭಟ ಮಹಾರಾಜ ಬಾಲಪಂಪಾಂಬಿಕೆ ಎಂದರೆ ಕಿರಿಯ ಪಂಪಾಂಬಿಕೆಯ ದರ್ಶನವನ್ನು ಪಡೆಯುತ್ತಾನೆ. ಇಲ್ಲಿ ಶಿವನ ಶಿವದೇವಾಲಯದ ಪ್ರಸ್ತಾಪವಿಲ್ಲ. ಹಾಗೆಯೇ ಮೂರು ಲೋಕದ ಮಾತೆಯಾದ ಶಕ್ತಿಸ್ವರೂಪಿಯನ್ನು ಸ್ತುತಿಸುವುದರಿಂದ ಆ ಸ್ಥಳಕ್ಕೆ ಈಕೆ ಶಕ್ತಿದೇವತೆಯಾಗಿದ್ದಿರಬಹುದು. ನಂತರ ಉದ್ಭಟ ಮಹಾರಾಜನು ತುಂಗಭದ್ರೆಯ ಆ ಕಡೆ ದಡದಲ್ಲಿ ನೆಲೆಸಿರುವ ಹಿರಿಯ ಪಂಪಾಂಬಿಕೆಯ ದರ್ಶನಕ್ಕೆ ಹೋಗಲು ನದಿಯನ್ನು ದಾಟುತ್ತಾನೆ. ಸೋಮರಾಜ ಕವಿ ನದಿಯ ಇಕ್ಕೆಲಗಳಲ್ಲೂ ಇರಬಹುದಾದ ತೋಟಗಳ ವರ್ಣನೆಯನ್ನು ಮಾಡುತ್ತಾನೆ.

ಕಣ್ಣಿಗೆ ಅಂದವಾದ ತೆಂಗುಗಳ ಸಾಲಿನಿಂದ, ನವಿರಾದ ಕಂಪನ್ನೀಯುವ ಹೂವಿನ ಬಳ್ಳಿಗಳ ಚಪ್ಪರಗಳಿಂದ, ಹಣ್ಣುಗಳ ಭಾರದಿಂದ ಜಗ್ಗಿರುವ ಗಿಡಮರಗಳಿಂದ, ನೀಳವಾದ ಅಡಕೆಯ ಮರಗಳಲ್ಲಿ ತುಂಬಿರುವ ಹೂವುಗಳಿಂದ, ಎಲ್ಲೆಡೆ ಹೂವುಗಳನ್ನು ಹೊಂದಿರುವ ಸಂಪಗೆಯ ಮರಗಳಿಂದ, ಚೆಲುವನ್ನು ತಾಳಿರುವ ಮಾವಿನ ಮರಗಳಿಂದ, ಸುಂದರವಾದ ಹಲಸಿನ ಮರಗಳಿಂದ, ಕೋಮಲವಾಗಿ ಬೆಳೆದು ಕಣ್ಣಿಗೆ ಆನಂದವನ್ನೀಯುವ ರಸಬಾಳೆಯ ಗಿಡದ ಸಾಲುಗಳಿಂದ, ಮನೋಹರವಾದ ಫಲಗಳಿಂದ ತುಂಬಿದ ಕಿತ್ತಳೆ ಗಿಡಗಳಿಂದ, ಕೆಂಪಿರುವೆಗಳಿಂದ ತುಂಬಿದ ನಿಂಬೆಯ ಗಿಡಗಳಿಂದ ಚಿಗುರಿ ಕಂಗೊಳಿಸುವ ಅಶೋಕ ವೃಕ್ಷಗಳಿಂದ, ಪಾದರಿಯ ಮರ ಹಾಗೂ ಅದರ ಹೂವುಗಳ ಚೆಲುವಿನಿಂದ, ಚೆನ್ನಾಗಿ ಬೆಳೆದು ಅಂದಗೊಂಡಿರುವ ಸುರಹೊನ್ನೆಯ ಮರಗಳಿಂದ, ಮಧುರವಾದ ಸುವಾಸನೆಯನ್ನು ತಳೆದ ಶ್ರೀಗಂಧದ ಮರಗಳಿಂದ, ಹೂವಿನ ತೋಟಗಳಿಂದ ತುಂಗಭದ್ರೆಯು ರಂಜಿಸಿದಳು (ಉ.ಕಾ. ೩–೮೮–೧೦೦). ಹಂಪೆಯಲ್ಲಿದ್ದ ಹೂವಿನ ತೋಟಗಳ ಬಗ್ಗೆ ಎಂ. ಚಿದಾನಂದಮೂರ್ತಿಯವರು ಪ್ರಸ್ತಾಪಿಸುತ್ತಾರೆ (೨೯೩–೨೯೪). ಪಂಪಾಪುರದ ಗಡಿಗಳನ್ನು ಹಾಗೂ ಅಲ್ಲಿ ನೆಲೆಸಿದ್ದ ದೇವರುಗಳನ್ನು ಹರಿಹರನು ತನ್ನ ಪಂಪಾಕ್ಷೇತ್ರದ ರಗಳೆಯಲ್ಲಿ ಕೊಡುತ್ತಾನೆ.

ಆ ಪುರದೊಳುಂ ನಾಲ್ಕು ಬಾಗಿಲುಗಳುಂ ನೋಡೆ
ಪಾಪಹರ ಸುತ್ತ ಯೋಜನ ಪ್ರಮಾಣಂ ಕೊಡೆ
ಅಲ್ಲಿ ಮೂಡಣ ಬಾಗಿಲೊಳಗಿರ್ಪನಚಳಿತಂ
ಬಲ್ಲ ಶರಣರ ಜಂಬುಕೇಶ್ವರಂ ಶಾಶ್ವತಂ
ಪಶ್ಚಿಮ ದ್ವಾರದೊಳು ನೆಲಸಿರ್ಪನೊಪ್ಪದಿಂ
ನಿಶ್ಚಯ ದಿಟಂ ಸೋಮನಾಥನತಿಪ್ರೇಮದಿಂ
ಉತ್ತರದ್ವಾರದೊಳು ನೆಲಸಿರ್ಪನೀಶ್ವರಂ
ಉತ್ತಮ ಗುಣಸ್ಥಾಣು ವಾಣಿಭದ್ರೇಶ್ವರಂ
ಇಂತೆನಿಸಿ ಮೆರೆವ ನಾಲ್ಕು ಬಾಗಿಲುಗಳೊಳಗೆ
ತಿಂಥಿಣಿಪ ಶಿವಲಿಂಗವಿಪ್ಪುವಾ ಪುರದೊಳಗೆ (ಹ.ರ. ಪುಟ ೫೬)

ಸೋಮರಾಜ ಕವಿಯು ಈ ಬಗ್ಗೆ ಉಲ್ಲೇಖಿಸುತ್ತಾನೆ. ಪೂರ್ವದಲ್ಲಿ ಅಸಂಖ್ಯ ಕಿನ್ನರರು, ಪಶ್ಚಿಮದಲ್ಲಿ ಜಂಬುಕೇಶ್ವರ, ದಕ್ಷಿಣದಲ್ಲಿ ನೀಲಕಂಠ ಸೋಮೇಶ, ಉತ್ತರದಲ್ಲಿ ವಾಣಿಭದ್ರರು ವಿಜೃಂಭಣೆಯಿಂದ ನೆಲೆಸಿರುವರು. ಹೀಗೆ ನಾಲ್ಕು ಅಂಗಗಳಲ್ಲಿ ನಾಲ್ಕು ಬಾಗಿಲುಗಳಿದ್ದು, ಸಕಲ ಭಕ್ತರಿಗೆ ಅವರವರ ಇಷ್ಟಾರ್ಥಗಳನ್ನು ಅನುಗ್ರಹಿಸುತ್ತ ಶೋಭಿಸಿರಲು ಅದರ ಮಧ್ಯಭಾಗದಲ್ಲಿ ನಾಲ್ಕು ಮೈಲಿ ವಿಶಾಲ ಭೂಮಿಯಲ್ಲಿದ್ದ ಮಹಾಲಿಂಗಗಳನ್ನು ಒಂದೊಂದಾಗಿ ಹೆಸರು ಹಿಡಿದು ಹೇಳುವುದು ಬ್ರಹ್ಮನಿಗೂ ಅಸಾಧ್ಯವಾದದ್ದು. ಖ್ಯಾತಿಪಡೆದು ಯಥೇಚ್ಛ ಶಿವಲಿಂಗಗಳಿಂದ, ಅಪಾರ ಮಹಿಮೆಯನ್ನು ಹೊಂದಿ ಪಂಪಾಕ್ಷೇತ್ರವು ಶೋಭಿಸುತ್ತಿದ್ದುದಾಗಿ ತಿಳಿದುಬರುತ್ತದೆ (ಉ.ಕಾ. ೩–೫೭, ವ).

"ವಿರೂಪಾಕ್ಷ ದೇವಾಲಯದ ಪೂರ್ವಕ್ಕೆ, ಕಮಲಾಪುರದಿಂದ ಕಂಪ್ಲಿ ಗಂಗಾವತಿಗೆ ಹೋಗುವ ರಸ್ತೆಯಲ್ಲಿ ಎಡಕ್ಕೆ, ಹೊಸಪೇಟೆ ತಾಲೂಕಿನ ಬುಕ್ಕಸಾಗರ ಸಮೀಪ ನೆಲದ ಮೇಲೆ "ಕಿನ್ನರೇಶ್ವರ" ದೇವಾಲಯವಿದೆ. ವಿರೂಪಾಕ್ಷ ದೇವಾಲಯದ ದಕ್ಷಿಣಕ್ಕೆ, ಹೊಸಪೇಟೆ ಸಮೀಪ ಬೆಟ್ಟದ ಮೇಲೆ ಜಂಬುಕೇಶ್ವರ ದೇವಾಲಯವಿದೆ. ವಿರೂಪಾಕ್ಷ ದೇವಾಲಯದ ಪಶ್ಚಿಮಕ್ಕೆ, ಕೊಪ್ಪಳ ತಾಲೂಕಿನ ಶಿವಪುರದ ಸಮೀಪದ ಬೆಟ್ಟಗಳ ಮೇಲೆ ಸೋಮನಾಥ ದೇವಾಲಯವೂ, ಉತ್ತರಕ್ಕೆ ಗಂಗಾವತಿ ತಾಲೂಕಿನ ಮಲ್ಲಾಪುರ ಸಮೀಪ ಬೆಟ್ಟದ ಮೇಲೆ ವಾಣಿಭದ್ರೇಶ್ವರ ದೇವಾಲಯವೂ ಇವೆ. ಇವುಗಳಲ್ಲಿ ಕಿನ್ನರೇಶ್ವರ ದೇವಾಲಯವು ಸಾಮಾನ್ಯ ಕಟ್ಟಡವಾಗಿದ್ದು ಅಲ್ಲಿ ಪೂಜೆ ಈಗಲೂ ನಡೆಯುತ್ತದೆ. ಜಂಬುಕೇಶ್ವರ ದೇವಾಲಯವು ವಿಜಯನಗರ ಕಾಲದ ಸುಂದರ ಕಟ್ಟಡವಾಗಿದ್ದು ಉಳಿದೆಲ್ಲ ದೇವಾಲಯಗಳಿಗಿಂತ ಹೆಚ್ಚು ಭಕ್ತಾದಿಗಳು ಬಂದು ಹೋಗುವ ಜಾಗವಾಗಿದೆ. ಸೋಮೇಶ್ವರ ದೇವಾಲಯವು ಬೆಟ್ಟದ ಮೇಲಿನ ಒಂದು ಗುಹೆಯೇ ಆಗಿದೆ. ಅಲ್ಲಿ ಪೂಜಾದಿಗಳು ನಿಂತು ಹೋಗಿವೆ" (ಚಿದಾನಂದಮೂರ್ತಿ ಎಂ. ೧೯೯೮; ೪೪೨). ಪಂಪಾಪುರದ ಸುತ್ತಲೂ ಇದ್ದ ತೀರ್ಥಗಳ ಬಗ್ಗೆ ಉಲ್ಲೇಖವಿದೆ :

ಮತ್ತಂ ಮಹಾನದೀಶ್ವರೀ ತುಂಗಭದ್ರೆಯೊಳು
ಉತ್ತಮ ವಶಿಷ್ಠನಾಶ್ರಮವಿಪ್ಪುದೊಲುಮೆಯೊಳು

ಅಲ್ಲಿ ಪಾಪವಿನಾಶಿ ಎಂಬ ನಾಮದ ತೀರ್ಥ
ಅಲ್ಲಿಂ ದಶಾಶ್ವಮೇಧಾ ವಿಧಾನದ ತೀರ್ಥ
ಅದರೊಳಗೆ ಬದರಿಕಾಶ್ರಮವುಂ ಕೋಟಿತೀರ್ಥ
ವದರೊಳಗೆ ಶಬರಿಕಾಶ್ರಮವುಂ ಕೋಟಿತೀರ್ಥ
ಮಿಗೆ ದೇವಪೂತ ಪಂಪಾಸರೋವರ ಮುಂದೆ
ಸೊಗಮಿಸುವ ಕಾಮದಹನದ ಭಸಿತವದು ಮುಂದೆ
ಅಲ್ಲಿಂದ ಮಾಲುವಂತಾಚಳಮದೊಪ್ಪುವುದು
ಸಲ್ಲಲಿತ ಋಣವಿಮೋಚನ ತೀರ್ಥ ಒಪ್ಪುವುದು
ಉರಿಯಕ್ಷತೀರ್ಥಂ ಗದಾತೀರ್ಥಂ ಧನುತೀರ್ಥಂ
ವರಶಂಖಚಕ್ರತೀರ್ಥಂ ಪದ್ಮದಳತೀರ್ಥ
ಹೇಮಕೂಟದ ಮೇಲೆ ವತ್ಸನಾಭಿಯ ತೀರ್ಥ
ಆ ಮಹಾಕ್ಷೇತ್ರದೊಳಗಗ್ನಿತೀರ್ಥಂ ಸ್ವಾರ್ಥ
ರಾಮತೀರ್ಥಂ ಸಂದ ಪಿತೃತೀರ್ಥವಂತಲ್ಲಿ
ವಮಾತು ಮಾಂಗಲ್ಯತೀರ್ಥ ಒಪ್ಪುವುದಲ್ಲಿ
ಶ್ರೀರುದ್ರಪಾದವಿಪ್ಪುದು ಧರಾರಾಜನದು
ನಾರಾಯಣಾದಿ ದೇವರ್ಕಳಿಗಭೇದ್ಯವದು
ಇನ್ನುಳ್ಳ ತೀರ್ಥಮಂ ಪೆಸರ್ಗೊಳಲೆನ್ನಳವೆ (ಹ.ರ. ಪುಟ. ೫೮).

ತುಂಗಭದ್ರಾನದಿಯ ಪ್ರದೇಶದಲ್ಲಿಯೇ ವಶಿಷ್ಠರ ಆಶ್ರಮವಿದ್ದುದು. ಹಾಗೆಯೇ ಪಾಪವಿನಾಶಿ ಎಂಬ ಹೆಸರಿನ ತೀರ್ಥವಿದ್ದುದಾಗಿಯೂ, ಅಲ್ಲದೆ ದಶಾಶ್ವಮೇಧಾ ತೀರ್ಥ, ಅದರೊಳಗೆ ಬದರಿಕಾಶ್ರಮ, ಅಲ್ಲದೆ ಕೋಟಿತೀರ್ಥವಿದ್ದುದಾಗಿಯೂ, ಕೋಟಿತೀರ್ಥದ ಹತ್ತಿರವೇ ಶಬರಿಕಾಶ್ರಮ, ಹಾಗೆಯೇ ಪಂಪಾಸರೋವರ ಅದರ ಮುಂದೆ ಕಾಮದಹನವನ್ನು ಮಾಡಿದ ಭಸ್ಮವಿರುವಂತಹ ಸ್ಥಳ, ಋಣವಿಮೋಚನತೀರ್ಥ. ಇದಲ್ಲದೆ, ಉರಿಯಕ್ಷ ತೀರ್ಥ, ಗದಾತೀರ್ಥ, ಧನುತೀರ್ಥ, ವರಶಂಖಚಕ್ರತೀರ್ಥ ಪದ್ಮದಳತೀರ್ಥವಿದ್ದುದಾಗಿಯೂ, ಹೇಮಕೂಟದ ಮೇಲೆ ವತ್ಸನಾಭಿತೀರ್ಥ, ಆ ಮಹಾಕ್ಷೇತ್ರದೊಳಗೆ ರಾಮತೀರ್ಥ, ಪಿತೃತೀರ್ಥ, ಮಾಂಗಲ್ಯತೀರ್ಥವಿದ್ದುದಾಗಿಯೂ ಹರಿಹರಕವಿ ವರ್ಣಿಸುತ್ತಾನೆ. ಆದರೆ ಮನ್ಮುಖತೀರ್ಥದ ಬಗ್ಗೆ ಪ್ರಸ್ತಾಪವಿಲ್ಲ.

"ಕಾವ್ಯಗಳಲ್ಲಿ ಮನ್ಮಥತೀರ್ಥ ಎಂದು ಹೆಸರಿಸಿರುವ ತೀರ್ಥ ಈಗಲೂ ಅದೇ ಹೆಸರಲ್ಲಿ ಜನರಲ್ಲಿ ಬಳಕೆಯಲ್ಲಿದೆ. ಮನ್ಮಥತೀರ್ಥವೆಂದರೆ ಅರ್ಥವಾಗುತ್ತದೆ; ಹರಿಹರನ ಗಿರಿಜಾಕಲ್ಯಾಣದ ಕತೆಯ ಪ್ರಕಾರ, ಮನ್ಮಥದಹನವು ನಡೆದುದು ಹಂಪೆಯಲ್ಲೇ. ಆದರೆ, ಶಾಸನೋಕ್ತಿ ಮತ್ತು ಮೌಖಿಕ ಪರಂಪರೆಗಳು ಆ ತೀರ್ಥದ ನಿಜವಾದ ಹೆಸರು ಮನ್ಮುಖತೀರ್ಥವೆಂಬುದನ್ನು ನಿಸ್ಸಂಶಯವಾಗಿ ಹೇಳುತ್ತವೆ. ಮನ್ಮುಖತೀರ್ಥವೆಂಬ ಮಾತು ಅರ್ಥವಾಗುವುದಿಲ್ಲ. ಅದರ ಮೂಲರೂಪ ಬಹುಶಃ ಶ್ರೀಮನ್ಮುಖತೀರ್ಥ. ಮುಖತೀರ್ಥವೆಂದರೆ ಮುಖ್ಯವಾದುದು, ಮೊದಲಿನದು ಎಂದರ್ಥ. ಹಂಪೆಯ ತೀರ್ಥಗಳಲ್ಲೆಲ್ಲ ಅದೇ ಮುಖ್ಯವಾದುದು. ಶ್ರೀಮನ್ಮುಖತೀರ್ಥ

ಎಂಬ ರೂಪವನ್ನು ಶ್ರೀಮತ್+ಮುಖತೀರ್ಥ ಎಂದು ಬಿಡಿಸದೆ 'ಶ್ರೀ+ಮನ್ಮುಖತೀರ್ಥ' ಎಂದು ತಪ್ಪಾಗಿ ಬಿಡಿಸಿದುದರ ಫಲವಾಗಿ ಮನ್ಮುಖತೀರ್ಥವೆಂಬ ಸಾಧುವಲ್ಲದ ರೂಪ ಬಳಕೆಗೆ ಬಂದಿರುವಂತಿದೆ (ಚಿದಾನಂದಮೂರ್ತಿ ಎಂ. ೧೯೯೮; ೨೯೦). ಆದರೆ ಉದ್ಭಟ ಕಾವ್ಯದಲ್ಲಿ ಮನ್ಮುಖತೀರ್ಥವೆಂದು ಸ್ಪಷ್ಟವಾಗಿಯೇ ಹೇಳಲಾಗಿದೆ.

ಅಲ್ಲದೆ ಈ ತೀರ್ಥದ ಬಗ್ಗೆಯೂ ವಿವರವಿದೆ.

ಜನ್ಮಾದಿದುಃಖಮಂ ಕಳೆ
ದುನ್ಮನದಾನಂದಮೀವ ಪಂಪಾಪುರದೊಳ್ ।
ಮನ್ಮುಖತೀರ್ಥಪ್ರಮುಖೋ
ದ್ಯನ್ಮಂಗಳ ತೀರ್ಥ ಮೆಸೆವುದುರ್ವೀಪಾಲ ॥ (ಉ.ಕಾ. ೩-೫೯)

ಅಂದರೆ ಮನ್ಮುಖತೀರ್ಥವು ಪಂಪಾಪುರದೊಳಗೆ ಎಲ್ಲ ತೀರ್ಥಗಳಿಗಿಂತ ಪ್ರಧಾನ, ಮುಖ್ಯ ಎಂಬರ್ಥವು ಸ್ಪಷ್ಟವಾಗುತ್ತದೆ. ತುಂಗಭದ್ರೆಯ ದಡದಲ್ಲಿ ಒಳ್ಳೆಯ ತೀರ್ಥಗಳಷ್ಟೇ ಅಲ್ಲ, ವಸಿಷ್ಠನೇ ಮೊದಲಾದ ಮುಖ್ಯ ಋಷಿಗಳ ಆಶ್ರಮಗಳಿಂದ ಅಂದಗೊಂಡಿರುವುದಾಗಿಯೂ, ಹಾಗೆಯೇ ಬೆಟ್ಟಗಳ ಸಮೂಹಕ್ಕೆ ಕಿರೀಟಪ್ರಾಯವೂ ಕಾಂತಿಪೂರ್ಣವೂ ಆದ ಹೇಮಕೂಟವು ಮನಸ್ಸನ್ನು ಆಕರ್ಷಿಸುವುದಾಗಿ ಸೋಮರಾಜಕವಿ ವರ್ಣಿಸುತ್ತಾನೆ (ಉ.ಕಾ. ೩-೬೦-೬೩). ವಿರೂಪಾಕ್ಷ ದೇವಾಲಯದ ಬಗ್ಗೆ ಒಂದಿಷ್ಟು ಗಮನಹರಿಸೋಣ.

"ಮೂಲ ವಿರೂಪಾಕ್ಷ ಹೆಸರು ವಿರೂಪಾಕ್ಷನ ಗುಡಿ ಮೊದಲು ಬೆಟ್ಟದ ಮೇಲೆ ಇತ್ತೆಂದೂ, ಈಗಿನ ನೆಲದ ಮೇಲಿನ ವಿರೂಪಾಕ್ಷವು ಆಮೇಲಿನದು ಎಂಬುದನ್ನೂ ಧ್ವನಿಸುತ್ತದೆ. ಕ್ರಿ.ಶ. ೧೧೯೯ರ ಹಂಪೆಯ ಶಾಸನವು ಹೇಮಕೂಟದ ತುದಿಯಲ್ಲಿ ಮನೆ ಮಾಡಿಕೊಂಡು ವಿರೂಪಾಕ್ಷನು ಗೌರೀ ಸಮೇತ ನೆಲೆಸಿದ್ದಾನೆ ಎನ್ನುತ್ತದೆ. ಆ ಶಾಸನದ ಪ್ರಕಾರ, ಚೌಡಯ್ಯ ಸುಣ್ಣ ಬಳಸಿದ್ದು ಹೇಮಕೂಟದ ಮೇಲಿನ ವಿರೂಪಾಕ್ಷ ದೇವಾಲಯಕ್ಕೆ. ಗಿರಿಜಾಕಲ್ಯಾಣದಲ್ಲಿ ಹರಿಹರನು ತನ್ನ ಕೃತಿಯ ಆರಂಭದಲ್ಲಿ ಸ್ತೋತ್ರ ಮಾಡಿರುವುದು ಹೇಮಕೂಟದ ಮೇಲಿನ ವಿರೂಪಾಕ್ಷನನ್ನೇ. ಅವನು ಪಂಪಾಕ್ಷೇತ್ರದ ರಗಳೆಯಲ್ಲಿ ಪಂಪಾಪುರದಲ್ಲಿದ್ದ ಇಬ್ಬರು ಪಂಪಾಂಬಿಕೆಯರನ್ನು ಹೇಳಿದವನು ಇಬ್ಬರು ವಿರೂಪಾಕ್ಷರನ್ನು ಹೇಳುವುದಿಲ್ಲ. ಅಲ್ಲಿ ಹೇಳಿರುವುದು ಒಬ್ಬ ವಿರೂಪಾಕ್ಷನನ್ನೇ – ಆ ವಿರೂಪಾಕ್ಷ ಬಹುಶಃ ಬೆಟ್ಟದ ಮೇಲಿನ ವಿರೂಪಾಕ್ಷ; ಮೂಲ ವಿರೂಪಾಕ್ಷ. ಹರಿಹರನ ಕಾಲದಲ್ಲಿ ಈಗ ನೆಲದ ಮೇಲೆ ಇರುವ ವಿರೂಪಾಕ್ಷಲಿಂಗ ಇತ್ತೇ ಅಥವಾ ಇದ್ದುದು ಬೆಟ್ಟದ ಮೇಲಿನ ಮೂಲ ವಿರೂಪಾಕ್ಷ ಮಾತ್ರವೇ ? ಹರಿಹರ ಆರಾಧಿಸಿದ ವಿರೂಪಾಕ್ಷಲಿಂಗ ಯಾವುದು ? ಕಟ್ಟಡಗಳು ಈ ವಿಚಾರ ನಿರ್ಣಯದಲ್ಲಿ ಸಹಾಯಕ್ಕೆ ಬರುವುದಿಲ್ಲ–ಏಕೆಂದರೆ ಹಳೆಯ ಕಟ್ಟಡಗಳು ನಾಶವಾದಾಗ ಹೊಸ ಕಟ್ಟಡಗಳು ಅಸ್ತಿತ್ವಕ್ಕೆ ಬರುವುದು ಸರ್ವೇಸಾಮಾನ್ಯ. ಮೂಲ ವಿಗ್ರಹವು ಮಾತ್ರ ಹೊಸ ಕಟ್ಟಡದಲ್ಲಿಯೂ ಮುಂದುವರಿಯುತ್ತದೆ" (ಚಿದಾನಂದಮೂರ್ತಿ ಎಂ. ೧೯೯೮; ೪೪೪).

ಹರಿಹರನ ನಂತರದ ಕವಿ ಸೋಮರಾಜನೂ ಹೇಮಕೂಟದಲ್ಲಿ ನೆಲೆಸಿರುವ ವಿರೂಪಾಕ್ಷನನ್ನೇ ಹೆಸರಿಸುತ್ತಾನೆ. "ಹೇಮಕೂಟಾಗ್ರದೊಳ್ ಮಧುಮಥನ ವಿಧಿವಿಬುಧಪತಿ ಮುಖ್ಯ ವಿವಿಧ ಬುಧಕೋಟೀರಕೋಟಿ ನವಶಾಣಾಕ್ಷೀಣ ಕಷಣೋಲ್ಬಣನಿಖಿಳಮಣಿ ಗಣವಿರಾಜಿತ ಚರಣಾರುಣತರುಣ ಪಲ್ಲವಂ ಪಂಪಾಂಬಿಕಾವಲ್ಲಭಂ ನಿಗಮದುರ್ಲಭಂ ಜಗದುದಯಸಿತಿ ಲಯಕಾರಣಸ್ವರೂಪಂ ಶ್ರೀ ವಿರೂಪಾಕ್ಷಂ ಸಂತಸಮನೆಸೆದಾಂತುಮಿರ್ಪಂ ॥" (ಉ.ಕಾ. ೩-೬೩ ವ.) ಗುರುವಾದ ವಿರೂಪಾಕ್ಷನೂ, ಪಾರ್ವತೀಪ್ರಿಯನಾದ ಶಂಕರನೂ ಸಂತಸಗೊಂಡಿರಲು ಅವನನ್ನು ಹೊಂದಿ ಪಂಪಾಕ್ಷೇತ್ರವು ಶೋಭಿಸಿರುವುದು (೩-೬೫). ಅಂದರೆ ಹೇಮಕೂಟದ ವಿರೂಪಾಕ್ಷನೇ ಮೂಲ ವಿರೂಪಾಕ್ಷ, ಹರಿಹರ ಆರಾಧಿಸಿರುವ ವಿರೂಪಾಕ್ಷಲಿಂಗವೂ ಇದೇ ಆಗಿದೆ.

ಹರಿಹರಕವಿ ಪಂಪಾಕ್ಷೇತ್ರರಗಳೆಯಲ್ಲಿ ಹೆಸರಿಸುವ ಇಬ್ಬರು ಪಂಪಾಂಬಿಕೆಯರು-ಪುರದೊಳೊಲವಿಂದೆ ಹಿರಿಯ ಹಂಪಾದೇವಿ ಚಿಕ್ಕ ಹಂಪಾದೇವಿ ನಲವಿಂದೆಯೊಪ್ಪುತಿರೆ (ಹ.ರ. ಪುಟ ೫೩). ಹಾಗೆಯೇ ಚಿದಾನಂದಮೂರ್ತಿಯವರ ಮಾತುಗಳನ್ನು ಹಿಂದೆ ಈಗಾಗಲೇ ಪ್ರಸ್ತಾಪಿಸಿದ್ದೇವೆ. ಬಾಲಪಂಪಾಂಬಿಕೆ ಅಂದರೆ ಕಿರಿಯ ಪಂಪಾಂಬಿಕೆಯು ಪಂಪಾಪುರದ ದಡದಲ್ಲಿರುವವಳು. ಉದ್ಭಟ ಕಾವ್ಯದಲ್ಲಿನ ಉಲ್ಲೇಖ ನೋಡಿ-ಬಾಲಪಂಪಾಂಬಿಕೆಯನ್ನು ದರ್ಶನ ಮಾಡಿದ ನಂತರ ಉದ್ಭಟ ರಾಜನು ಭೋರ್ಗರೆದು ಹರಿಯುವ ತುಂಗಭದ್ರಾ ನದಿಯನ್ನು ಕಂಡು ಅತ್ಯಾನಂದದಿಂದ ಆ ನದಿಯನ್ನು ಸಂಭ್ರಮದಿಂದ ದಾಟಿ, ಮೆಲ್ಲನೆ ನಡೆದುಬಂದು ವಶಿಷ್ಠಾಶ್ರಮದ ಭಾಗದಲ್ಲಿ "ವಿರೂಪಾಕ್ಷನರ್ಧಾಂಗಿಯಪ್ಪ ಹಿರಿಯಹಂಪಾದೇವಿಯ ಮಣಿಮಂದಿರಮಂ ಪೊಕ್ಕು ಪರಮೇಶ್ವರಮೂರ್ತಿಯಂ ಕಂಡು ಪೊಂಗಿ ಪೊರೆಯೇಜಿ ಪೊಂಪುಳಿವೋಗಿ ಭಯಭಕ್ತಿಯಿಂ ಸಾಷ್ಟಾಂಗಪ್ರಣತನಾಗಿ" (ಉ.ಕಾ. ೩-೧೦೨ ವ). ಹೀಗೆ ಹಿರಿಯ ಹಂಪಾದೇವಿಯನ್ನು ಸ್ತೋತ್ರ ಮಾಡಿ ತೃಪ್ತಿಗೊಳ್ಳದೆ ಅಲ್ಲಿಂದ ಎದ್ದು ಬಂದು ಗರ್ಭಗೃಹವನ್ನು ಪ್ರವೇಶಿಸಿ ಅತ್ಯಾನಂದದಿಂದ ಪಾರ್ವತೀಮಾತೆಯ ಇದಿರಲ್ಲಿ ಪದ್ಮಾಸನ ಹಾಕಿ ಕುಳಿತು ಪೂಜಿಸಲು ತೊಡಗುತ್ತಾನೆ. ಮೇಲಿನ ಈ ಎಲ್ಲಾ ಉಲ್ಲೇಖಗಳಿಂದ ಹಿರಿಯ ಹಂಪಾದೇವಿಯು ವಿರೂಪಾಕ್ಷನ ಬಳಿಯಿರುವವಳು ಎಂದು. ಹೀಗೆ ಹರಿಹರ ಮತ್ತು ಸೋಮರಾಜಕವಿಗಳಿಂದ ಪಂಪಾಪುರ, ತೋಟಗಳು, ಅಲ್ಲಿರುವ ತೀರ್ಥಗಳು, ಗಡಿಗಳು, ಬೆಟ್ಟ ಹಾಗೂ ವಿರೂಪಾಕ್ಷ, ಪಂಪಾಂಬಿಕೆಯರ ಬಗ್ಗೆ ಪ್ರಾಗೈತಿಹಾಸಿಕ ನೆಲೆಗಳನ್ನು ಗುರುತಿಸಿಕೊಳ್ಳಬಹುದಾಗಿದೆ. ಈಗಿನ ಹಂಪೆಗೂ ಅಂದು ಇದ್ದ ಪಂಪಾಪುರದ ನಕ್ಷೆಗಳಿಗೂ ಇರುವ ಸಾಮ್ಯವನ್ನು ಹರಿಹರ ಹಾಗೂ ಸೋಮರಾಜ ಕವಿಗಳ ಕೃತಿಗಳಿಂದ ಹೀಗೆ ಆಯ್ದುಕೊಳ್ಳಬಹುದಾಗಿದೆ.

ಪರಾಮರ್ಶನ ಗ್ರಂಥಗಳು

೧. ಗೀತಾ ಬಿ.ಎಸ್. ೨೦೦೫. ಕರ್ನಾಟಕ ಸಂಸ್ಕೃತಿ; ಸಂಘರ್ಷ ಮತ್ತು ಸಂಧಾನ-ಒಂದು ಅಧ್ಯಯನ (ಅಪ್ರಕಟಿತ), ಐಸಿಎಚ್‌ಆರ್, ನವದೆಹಲಿ.

೨. ಚಿದಾನಂದಮೂರ್ತಿ ಎಂ., ೧೯೯೮, ಹೊಸತು ಹೊಸತು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨ನೇ ಮುದ್ರಣ.

೩. ಶಾಮಶಾಸ್ತ್ರಿ ಆರ್. (ಸಂ.), ೧೯೨೧, ಉದ್ಭಟ ಕಾವ್ಯಂ, ಪ್ರಾಚ್ಯವಿದ್ಯಾ ಸಂಶೋಧನಾಲಯದ ಗ್ರಂಥಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪. ಹಳಕಟ್ಟಿ ಫ.ಗು. (ಸಂ.), ೧೯೬೮, ಹರಿಹರನ ರಗಳೆಗಳು, ಸಮಾಜ ಪುಸ್ತಕಾಲಯ, ಧಾರವಾಡ.

ಸೌಂದರನಂದ ಮಹಾಕಾವ್ಯದಲ್ಲಿ ಪ್ರತಿಪಾದಿತವಾಗಿರುವ ಜೀವನಮೌಲ್ಯಗಳು

– ಡಾ. ವಿ. ಭಾಗ್ಯಲಕ್ಷ್ಮಿ

ದಾರ್ಶನಿಕನಾದ ಮಹಾಕವಿ ಅಶ್ವಘೋಷನು ತನ್ನ ಮೇರುಕೃತಿಯಾದ 'ಸೌಂದರನಂದ' ಮಹಾಕಾವ್ಯದ ಮೂಲಕ ಮನುಕುಲಕ್ಕೆ ಅತ್ಯಮೂಲ್ಯವಾದ ಸಂದೇಶವನ್ನು ರವಾನಿಸಿದ್ದಾನೆ.

ಇದಕ್ಕಾಗಿ ಅವನು ಆಯ್ದುಕೊಂಡಿರುವ ಮಾರ್ಗ ಕಾವ್ಯ. ಸಮಸ್ತ ವಾಙ್ಮಯವನ್ನು ಶಾಸ್ತ್ರ ಮತ್ತು ಕಾವ್ಯವೆಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಶಾಸ್ತ್ರ ವಿದ್ವದ್ಗ್ರಾಹ್ಯ. ಅವಿವೇಕವೆಂಬ ರೋಗವನ್ನು ನಿವಾರಿಸಲು ಬಳಸುವ ಕಹಿ ಔಷಧದ ಗುಳಿಗೆಯಂತೆ ಶಾಸ್ತ್ರವು ಕುಶಾಗ್ರಬುದ್ಧಿಯವರಿಂದ ಮಾತ್ರ ಗ್ರಹಿಸಲು ಯೋಗ್ಯ. ಕಾವ್ಯ ಹಾಗಲ್ಲ. ಸುಕುಮಾರಮತಿಗಳೂ ಅಮೃತವನ್ನು ಸೇವಿಸಿ ಆನಂದಪಡುವಂತೆ ಕಾವ್ಯಾಮೃತವನ್ನು ಸವಿದು, ಅಜ್ಞಾನವರ್ಜಿತರಾಗಬಹುದು. ಎರಡೂ ಪ್ರಕಾರಗಳ ಫಲ ಒಂದೇ. ಅದೇ ಮೋಕ್ಷ ಸಂಪಾದನೆ. ಮೊದಲನೆಯದು ದುರ್ಗಮವಾದರೆ, ಎರಡನೆಯದು ಸುಗಮ. ಆದ್ದರಿಂದ ಎರಡನೇ ಮಾರ್ಗವನ್ನೇ ಆಯ್ಕೆ ಮಾಡಿಕೊಂಡು ಈ ಲೌಕಿಕ ಜಂಜಾಟದಿಂದ ಮುಕ್ತರಾಗಿ ಅಲೌಕಿಕವಾದ ಆನಂದದಲ್ಲಿ ಏಕೆ ಲೀನರಾಗಬಾರದು ? ಎಂಬ ಚಿಂತನೆ ಮಾಡುವುದು ಸಹಜ. ಇಂತಹ ಚಿಂತನೆಗೆ ಪೂರಕ ಮಾರ್ಗದರ್ಶನವನ್ನು ಈ 'ಸೌಂದರನಂದ' ಮಹಾಕಾವ್ಯ ಒದಗಿಸಿರುವುದು ಸುಸ್ಪಷ್ಟವಾಗಿದೆ.

ಮಹಾಕವಿ ಅಶ್ವಘೋಷನು ತನ್ನ ಈ ಮಹಾಕಾವ್ಯದಲ್ಲಿ ಸಾಮಾನ್ಯರಿಗೂ ಅರ್ಥವಾಗುವಂತೆ ಧಾರ್ಮಿಕ ತತ್ತ್ವಗಳನ್ನು ಸರಳವಾಗಿ ಹೇಳಿದ್ದಾನೆ. ಕಾವ್ಯಮಾಧ್ಯಮವನ್ನು ಬಳಸಿ, ತನ್ನ ಅಪೂರ್ವವಾದ ಉಪದೇಶಾಮೃತವನ್ನು ಸಹೃದಯರ ಮನಸ್ಸಿನಲ್ಲಿ ಸಿಂಚನಗೊಳಿಸಿದ್ದಾನೆ. ರೋಗವನ್ನು ಉಪಶಮನಗೊಳಿಸಲು ವೈದ್ಯರು ಕಹಿಯಾದ ಔಷಧದ ಗುಳಿಗೆಯ ಮೇಲೆ ಸಕ್ಕರೆಯ ಲೇಪವನ್ನು ಮಾಡಿ ಸೇವಿಸಲು ಕೊಡುವಂತೆ ಅಶ್ವಘೋಷನೂ ಸಹ 'ಅಜ್ಞಾನ' ರೂಪವಾದ ರೋಗವನ್ನು ಕಳೆಯಲು 'ಪ್ರೇಮ'ವೆಂಬ ಸಿಹಿಯನ್ನು ಲೇಪನಗೊಳಿಸಿ 'ಕಟುತತ್ತ್ವ'ಗಳನ್ನು ಉಪದೇಶಿಸಿದ್ದಾನೆ. ಲೌಕಿಕ ರೋಗವನ್ನು ನಾಶಪಡಿಸಿ, ಅಲೌಕಿಕವಾದ ಶಾಶ್ವತ

ಸುಖವನ್ನು ಸಂಪಾದಿಸಿಕೊಡುವಲ್ಲಿ ಈತನ ಉಪದೇಶಗಳು ಸಮರ್ಥವಾಗಿವೆ. ಜೀವನವೌಲ್ಯಗಳು ಮಹಾಕಾವ್ಯದ ಆದ್ಯಂತವಾಗಿ ಅರಳಿ, ಆದರದಿಂದ ಮುಮುಕ್ಷುಗಳನ್ನು ಸ್ವಾಗತಿಸುತ್ತವೆ.

ಅಶ್ವಘೋಷನು ತನ್ನ ಈ ಕೃತಿಯಲ್ಲಿ ಆಯ್ದುಕೊಂಡಿರುವ ಕಥಾವಸ್ತು ಭೋಗಕ್ಕೆ ಸಂಬಂಧಪಟ್ಟಿದೆ. ಸುಂದರಿ ಮತ್ತು ನಂದರು ಕಥೆಯ ನಾಯಕಿ-ನಾಯಕರು. ಅವರಿಬ್ಬರೂ ಅತಿ ಸುಂದರರು. ಪ್ರೇಮಲೋಕದಲ್ಲಿ ತಮ್ಮದೇ ಆದ ಸ್ವಾತಂತ್ರ್ಯದಿಂದ ವಿಹರಿಸುವವರು. ಅವರ ಪ್ರೇಮಸಿಂಚನಕ್ಕೆ ಯಾವ ಅಡ್ಡಿ-ಆತಂಕಗಳೂ ಇಲ್ಲ. ಕಾಮ ಸ್ವಚ್ಛಂದವಾಗಿ ಪ್ರವಾಹದಂತೆ ಪ್ರವಹಿಸಿದೆ. ಆಮೋದ-ಪ್ರಮೋದಗಳಲ್ಲಿ ಮೈಮರೆತಿದ್ದ ಅವರಿಗೆ ಸಂವತ್ಸರಗಳು ಕ್ಷಣಗಳಂತೆ ಕಳೆದುಹೋಗುತ್ತಿದ್ದವು. ಅವರು ಕಾಮವನ್ನು ಎಷ್ಟೇ ಸವಿದರೂ ಇನ್ನೂ ಅಧಿಕ ಪ್ರಮಾಣದಲ್ಲಿ ಕಾಮವು ಉದ್ಭವಿಸುತ್ತಿತ್ತು. ಕಾಮದ ಸ್ವಭಾವವೇ ಹಾಗೆ. ಉರಿವ ಬೆಂಕಿಯಲ್ಲಿ ತುಪ್ಪವನ್ನು ಸುರಿದಂತೆ. 'ನ ಜಾತುಕಾಮಃ ಕಾಮಾನಾಮುಪಭೋಗೇನ ಶಾಮ್ಯತೇ'[೧] "ಕಾಮವನ್ನು ಉಪಶಮನಗೊಳಿಸಲು ಯಾವುದೇ ಕಾಮದಿಂದಲೂ ಸಾಧ್ಯವಿಲ್ಲ" ಎಂದು ಸ್ಮೃತಿಕಾರನು ಉಪದೇಶಿಸಿರುವಂತೆ ಪ್ರಪಂಚದಲ್ಲಿ ಕಾಮವನ್ನು ಮೆಟ್ಟಿನಿಲ್ಲುವ ಶಕ್ತಿ ಯಾವುದಕ್ಕೂ ಇಲ್ಲ. 'ಕಾಮಾತುರಾಣಾಂ ನ ಭಯಂ ನ ಲಜ್ಜಾ' ಎಂಬ ನೀತಿವಾಕ್ಯ ಈ ದಂಪತಿಗಳ ಜೀವನದಲ್ಲಿ ಹಾಸುಹೊಕ್ಕಾದಂತಿತ್ತು. ಚಾತಕ ಪಕ್ಷಿಗಳಂತೆ ಅವರು ಯಾವಾಗಲೂ ಒಬ್ಬರನ್ನೊಬ್ಬರು ಬಿಟ್ಟು ಅಗಲುತ್ತಿರಲಿಲ್ಲ. ಇಂದ್ರಿಯಸುಖವೇ ಅವರಿಗೆ ಸಾರಸರ್ವಸ್ವವಾಗಿತ್ತು. ಅನುರಾಗದ ಬಲೆಯಲ್ಲಿ ತೆಕ್ಕೆಗೊಂಡಿದ್ದ ಈ ದಂಪತಿಗಳಿಗೆ ಜೀವನವೆಂದರೆ ಇಷ್ಟೇ ಎಂಬಂತೆ ಅನುಭವವಾಗಿತ್ತು. ಪರಸ್ಪರ ಪ್ರೇಮ-ಕಾಮಗಳು ಹಾಲು-ಜೇನಿನಂತೆ ಬೆರೆತಿದ್ದವು. ಅವರು ಸಾಧಕರಾಗುವುದು ಕನಸೇ ಸರಿ ಎಂದು ಸಹೃದಯರಿಗೆ ಭಾಸವಾಗುವಷ್ಟರ ಸಾಂದ್ರತೆಯಲ್ಲಿ ಕವಿಯು ಕಥಾಹಂದರವನ್ನು ಹೆಣೆದಿದ್ದರೂ, ಕೊನೆಗೆ ಬರಡು ಭೂಮಿಯನ್ನು ಸಸ್ಯಶ್ಯಾಮಲೆಯನ್ನಾಗಿ ಮಾಡಿದ ಆತನ ಅಸಾಧಾರಣ ಕಲೆಗೆ ತಲೆಬಾಗಲೇಬೇಕಾಗುತ್ತದೆ.

'ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು' ಎಂಬ ನೀತಿಸಿದ್ಧಾಂತದಂತೆ ನಂದನ ಕಾಮವನ್ನು ಹೊರಹಾಕಲು ಕಾಮವನ್ನು ಮತ್ತಷ್ಟು ಉಲ್ಬಣಗೊಳಿಸುವ ಪರಿ ಈ ಕೃತಿಯಲ್ಲಿ ಬಿತ್ತರಗೊಂಡಿದೆ. ಬುದ್ಧನ ಮೂಲಕ ಕವಿ ಈ ಸಿದ್ಧಾಂತವನ್ನು ಸಾಧಿಸಿದ್ದಾನೆ. ಕಾಮಲೋಕದಿಂದ ಎಂದೂ ಹೊರಬರಲಾಗದ ಸ್ಥಿತಿಯಲ್ಲಿದ್ದ ನಂದನನ್ನು ಕಾಮಾಸ್ತ್ರವನ್ನು ಪ್ರಯೋಗಿಸಿಯೇ ಬುದ್ಧನು ಹೊರತರುತ್ತಾನೆ. ಕೇವಲ ಆತನ ಮಡದಿಯಾದ ಸುಂದರಿಯೇ ಅತಿ ಸುಂದರಳಲ್ಲ. ಅವಳು ನೀಡುತ್ತಿರುವ ಸುಖ ಅತ್ಯಲ್ಪವಾದುದು. ಅವಳಿಗಿಂತ ಮಿಗಿಲಾದ ಸುಂದರಿಯರು ಅಪಾರವಾಗಿದ್ದಾರೆ. ಅವರು

---

೧. ಮನುಸ್ಮೃತಿ, ಅಧ್ಯಾಯ-೨, ಶ್ಲೋಕ-೯೪

ನೀಡುವ ಸುಖ ಎಲ್ಲೆ ಮೀರಿದ್ದು ಎಂಬ ಆಮಿಷವನ್ನು ತನ್ನ ಶಿಷ್ಯನ ಮೂಲಕ ಒಡ್ಡಿಸಿದ ಬುದ್ಧನು ಪುಷ್ಪಕವಿಮಾನದಲ್ಲಿ ನಂದನನ್ನು ಇಂದ್ರನ ನಂದನವನಕ್ಕೆ ಕರೆದೊಯ್ಯುವಂತೆ ಮಾಡಿ ಸ್ವರ್ಗದರ್ಶನ ಮಾಡಿಸುತ್ತಾನೆ. ಅಲ್ಲಿನ ಅಪ್ಸರೆಯರ ಸೌಂದರ್ಯವನ್ನು ಪರಿಚಯಿಸುತ್ತಾನೆ. ಅವರ ಸೌಂದರ್ಯಕ್ಕೆ ಮಾರುಹೋಗುವಂತೆ ನಂದನ ಮನಸ್ಸನ್ನು ಪ್ರಚೋದಿಸುತ್ತಾನೆ. ಅಂತಹ ಸುಖವನ್ನು ಪಡೆಯಬೇಕಾದರೆ ತಾನು ಉಪದೇಶಿಸುವ ಮಾರ್ಗವನ್ನು ಅನುಸರಿಸುವಂತೆ ಪ್ರೇರೇಪಿಸುತ್ತಾನೆ. ನಂದನು ಇದುವರೆಗೆ ತನ್ನ ಧರ್ಮಪತ್ನಿಯಾದ ಸುಂದರಿಯಲ್ಲಿ ಪಡೆದಿದ್ದ ಸುಖಕ್ಕಿಂತಲೂ ಅಧಿಕ ಸುಖ ಈ ಅಪ್ಸರೆಯರ ಲೋಕದಲ್ಲಿ ಸಿಗುವುದು ನಿಶ್ಚಿತವೆಂದು ದೃಢಪಡಿಸುತ್ತಾನೆ. ನಂದನಿಗೆ ಅಪ್ಸರೆಯರ ಲೋಕವೇ ಪರಮಪ್ರಿಯವೆನಿಸುತ್ತದೆ. ಅವನ ಮೈ ಕಾಮದಿಂದ ಕಂಪಿಸುತ್ತದೆ. ಬಲಿಪೀಠದಲ್ಲಿ ಇಟ್ಟ ಆಹಾರಕ್ಕೆ ಆಮಿಷಗೊಂಡು ಆತುರದಿಂದ ಅರಸಿ ಬರುವ ಪ್ರಾಣಿಯಂತೆ ನಂದನು ಅಪ್ಸರೆಯರ ಸೌಂದರ್ಯದಿಂದ ಆಕರ್ಷಿತನಾಗುತ್ತಾನೆ. ಕ್ಷಣಕಾಲದಲ್ಲಿ ನಂದನ ಮನಸ್ಸು ಸುಂದರಿಯಿಂದ ವಿಚಲಿತವಾಗುತ್ತದೆ. ಇದೇ ಸಂದರ್ಭವನ್ನು ಬುದ್ಧನ ಶಿಷ್ಯನು ಸದುಪಯೋಗಪಡಿಸಿಕೊಳ್ಳುತ್ತಾನೆ. ಈ ಅಪ್ಸರಲೋಕದ ಸುಖವನ್ನು ಶಾಶ್ವತವಾಗಿ ಸವಿಯಬೇಕಾದರೆ ಕ್ಷಣಕಾಲದ ಸುಖ ನೀಡುವ ಈ ಮರ್ತ್ಯಲೋಕದಿಂದ ಹೊರಬರಬೇಕೆಂದು ಬುದ್ಧನು ನಂದನಿಗೆ ತಾಕೀತು ಮಾಡಿಸುತ್ತಾನೆ. ಅದಕ್ಕಾಗಿ ಇಂದ್ರಿಯಗಳನ್ನು ನಿಗ್ರಹಿಸಿ, ಮನಸ್ಸನ್ನು ಏಕಾಗ್ರತೆಗೊಳಿಸಿ, ಕಠಿಣವಾದ ತಪಸ್ಸನ್ನು ಮಾಡಬೇಕೆಂದು ಉಪದೇಶಕೊಡಿಸುತ್ತಾನೆ. ಈಗ ಸಿಗುತ್ತಿರುವ ಅಲ್ಪಸುಖಕ್ಕಿಂತ ಅಧಿಕ ಸುಖ ಸಿಗಬೇಕಾದರೆ 'ಸಾಧನೆ' ಬಹುಮುಖ್ಯವೆಂದು ಸಾರಿಸುತ್ತಾನೆ. ಕೊನೆಗೂ ನಂದನನ್ನು ಭಿಕ್ಷುವಾಗಿ ಪರಿವರ್ತಿಸುತ್ತಾನೆ. ಕಾವಿವಸ್ತ್ರಗಳನ್ನುಡಿಸುತ್ತಾನೆ. ತಪಸ್ಸಿನ ಕ್ರಮಗಳನ್ನು ಹೇಳಿಸಿಕೊಡುತ್ತಾನೆ. ಹೀಗೆ ಬುದ್ಧನು, ಅನೇಕ ಏಳು-ಬೀಳುಗಳ ಸಾಗಾಟದಲ್ಲಿ ನಂದನನ್ನು ಕೊಂಡೊಯ್ಯುವಂತೆ ಮಾಡಿಸಿ ಕಾಮಮುಕ್ತನನ್ನಾಗಿ ಮಾಡಿಸಿ, ಮೋಕ್ಷಸಾಧನೆಗೆ ಅಣಿಗೊಳಿಸುತ್ತಾನೆ. ಜೊತೆಗೆ ಅವನ ಪ್ರಿಯ ಮಡದಿಯಾಗಿದ್ದ ಸುಂದರಿಯನ್ನೂ, ಆಕೆಯ ಪರಿಚಾರಕ ವರ್ಗದವರೆಲ್ಲರನ್ನೂ ಮೋಕ್ಷದ ಅನುಗಾಮಿಗಳನ್ನಾಗಿ ಮಾಡಿಸುತ್ತಾನೆ.

ಅಶ್ವಘೋಷನು ಸುಂದರವಾದ ಕಾವ್ಯದ ಮೂಲಕ ಅಧ್ಯಾತ್ಮ ತತ್ತ್ವವನ್ನು ಸರಳವಾಗಿ ಬೋಧಿಸುತ್ತಾನೆ. ಜೊತೆಜೊತೆಗೆ ಜೀವನದ ಪರಮಮೌಲ್ಯಗಳನ್ನು ಹೃದಯಂಗಮವಾಗಿ ಬಿತ್ತರಿಸಿದ್ದಾನೆ. ಈ ಎಲ್ಲ ಮೌಲ್ಯಗಳಿಗೆ ನೀತಿಬೋಧನೆಯ ಲೇಪನವನ್ನು ಮಾಡಿದ್ದಾನೆ. ಸಾರತಮವಾದ ಅರಿವನ್ನು ಮೂಡಿಸಿದ್ದಾನೆ. ಜೀವನದಲ್ಲಿ ಅವಶ್ಯವಾಗಿ ಗಳಿಸಬೇಕಾದ ಧ್ಯೇಯ-ಆದರ್ಶಗಳನ್ನು ಸೂಚ್ಯವಾಗಿ, ವಾಚ್ಯವಾಗಿ ತಿಳಿಸಿದ್ದಾನೆ. ಇವನ ಮೌಲ್ಯಯುತ ಸಂದೇಶಗಳಲ್ಲಿ ಅರ್ಥವಿದೆ, ಧರ್ಮವಿದೆ, ನೀತಿಯಿದೆ, ಆದೇಶವಿದೆ, ಉಪದೇಶವಿದೆ, ವೈರಾಗ್ಯವಿದೆ. ಉದಾತ್ತವಾದ ತತ್ತ್ವಪ್ರತಿಪಾದನೆಯಿದೆ. ಈಗಿನ ಜೀವನಮೌಲ್ಯಗಳು ಮುಂದಿನ ಪೀಳಿಗೆಗೆ ದಾರಿದೀಪಗಳಾಗಿವೆ.

ಸೂಕ್ತಿರೂಪದಲ್ಲಿ ಪ್ರಸ್ತುತಗೊಂಡಿರುವ ಜೀವನವಮೌಲ್ಯಗಳು ಪಾಂಡಿತ್ಯಪೂರ್ಣವಾಗಿವೆ. ಕವಿಯ ಸರಳವಾದ ವಿದ್ವತ್ತು, ಅಪೂರ್ವ ಕಲಾಪ್ರಜ್ಞೆ ವಿಪುಲ ಶಬ್ದಭಂಡಾರ, ಚಿತ್ತಾಕರ್ಷಕವಾದ ರಸನಿರೂಪಣೆ ಸಹೃದಯಾಸ್ವಾದಕ್ಕೆ ಪುಷ್ಟಿ ನೀಡಿವೆ. ಅವನ ಮಾತುಗಳು ಸಾರ್ವಕಾಲಿಕ ಉಪದೇಶಗಳಾಗಿವೆ. ಸೂಕ್ತಿಸಹಿತವಾಗಿ ಕವಿಯು ಜಗತ್ತಿಗೆ ನೀಡಿರುವ ಮೌಲ್ಯಗಳನ್ನು ಹೀಗೆ ಅರಿಯಬಹುದಾಗಿದೆ:

ನಿಯತಂ ಭವಿಷ್ಯತಿ ಪರತ್ರ ಭವದಪಿ ನ ಭೂತಮಪ್ಯಥೋ ।
ಕರ್ಮಫಲಮಪಿ ಚ ಲೋಕಗತಿರ್ನಿಯತೇತಿ ದರ್ಶನಮವಾಪ ಸಾಧು ಚ ॥[೨]

'ಭೂತ, ಭವಿಷ್ಯತ್ತು ಮತ್ತು ವರ್ತಮಾನಗಳಲ್ಲಿ ಕರ್ಮಫಲವು ನಿಶ್ಚಿತವಾಗಿರುತ್ತದೆ. ಅದಕ್ಕನುಸಾರವಾಗಿಯೇ ಜೀವಿಗಳ ಬದುಕು ನಿಶ್ಚಯವಾಗುತ್ತದೆ' ಎಂಬ ಯೋಗ್ಯವಾದ ದಾರ್ಶನಿಕ ಜ್ಞಾನ ಗೌತಮನಿಗೆ ಇತ್ತು.

ಸಾಧಾರಣಾತ್ ಸ್ವಪ್ನನಿಭಾದಸಾರಾಲ್ಲೋಲಂ ಮನಃ ಕಾಮಸುಖಾನ್ನಿಯಚ್ಛ ।
ಹವ್ಯೈರಿವಾಗ್ನೇಃ ಪವನೇರಿತಸ್ಯ ಲೋಕಸ್ಯ ಕಾಮೈರ್ನ ಹಿ ತೃಪ್ತಿರಸ್ತಿ ॥[೩]

"ಸ್ವಪ್ನದಂತೆ ಸಾರಹೀನವೂ, ಸರ್ವಸಾಧಾರಣವೂ ಆದ ವಿಷಯೋಪಭೋಗದ ಕಡೆ ಸೆಳೆಯುತ್ತಿರುವ ನಿನ್ನ ಚಂಚಲ ಮನಸ್ಸನ್ನು ನಿಯಂತ್ರಿಸಿಕೋ. ಏಕೆಂದರೆ ಗಾಳಿಯಿಂದ ಪ್ರೇರೇಪಿತವಾದ ಬೆಂಕಿಗೆ ತುಪ್ಪ ಸುರಿದಂತೆಲ್ಲ ಮತ್ತೆ ಮತ್ತೆ ಧಗಧಗಿಸುವುದೇ ಹೊರತು ತಣ್ಣಗಾಗುವುದಿಲ್ಲ. ಹಾಗೆ ಭೋಗಿಸಿದಷ್ಟೂ ಕಾಮ ಮತ್ತೇರುವುದೇ ಹೊರತು ಶಮನವಾಗುವುದಿಲ್ಲ" ಎಂಬ ಸೂಕ್ತಿಯಲ್ಲಿ ಕಾಮದ ಪರಾಕಾಷ್ಠೆಯ ತೀವ್ರತೆ ವ್ಯಕ್ತವಾಗಿದೆ.

ಶ್ರದ್ಧಾಧನಂ ಶ್ರೇಷ್ಠತಮಂ ಧನೇಭ್ಯಃ ಪ್ರಜ್ಞಾರಸಸ್ತೃಪ್ತಿಕರೋ ರಸೇಭ್ಯಃ ।
ಪ್ರಧಾನಮಧ್ಯಾತ್ಮಸುಖಂ ಸುಖೇಭ್ಯೋಽವಿದ್ಯಾರತಿರ್ದುಃಖತಮಾರತಿಭ್ಯಃ ॥[೪]

"ಎಲ್ಲ ವಿಧವಾದ ಐಶ್ವರ್ಯಕ್ಕಿಂತ ಶ್ರದ್ಧೆ ಎಂಬ ಐಶ್ವರ್ಯವೇ ಶ್ರೇಷ್ಠವಾದುದು. ಎಲ್ಲ ವಿಧವಾದ ರಸಕ್ಕಿಂತ ಪ್ರಜ್ಞಾರಸವೇ ತೃಪ್ತಿಕರವಾದುದು. ಎಲ್ಲ ವಿಧವಾದ ಸುಖಕ್ಕಿಂತ ಆಧ್ಯಾತ್ಮಸುಖವೇ ಪ್ರಧಾನವಾದುದು. ಎಲ್ಲ ವಿಧವಾದ ದುಃಖಕ್ಕಿಂತಲೂ ಅವಿದ್ಯಾರೂಪವಾದ ದುಃಖವೇ ಅತ್ಯಂತ ದುಃಖಕರವಾದುದು" ಎಂಬ ಉಕ್ತಿಯಲ್ಲಿ ಸರ್ವೋತ್ಕೃಷ್ಟ ಮೌಲ್ಯವನ್ನು ಪರಿಚಯ ಮಾಡಿಕೊಟ್ಟಿದ್ದಾನೆ.

ಹಿತಸ್ಯ ವಕ್ತಾ ಪ್ರವರಃ ಸುಹೃದ್ಭ್ಯೋ ಧರ್ಮಾಯ ಖೇದೋ ಗುಣವಾನ್ ಶ್ರಮೇಭ್ಯಃ ।
ಜ್ಞಾನಾಯ ಕೃತ್ಯಂ ಪರಮಂ ಕ್ರಿಯಾಭ್ಯಃ ಕಿಮಿಂದ್ರಿಯಾಣಾಮುಪಗಮ್ಯ ದಾಸ್ಯಮ್ ॥[೫]

"ಹಿತವನ್ನು ಹೇಳುವವರು ಗೆಳೆಯರಲ್ಲಿ ಶ್ರೇಷ್ಠರು. ಧರ್ಮಸಾಧನೆಗಾಗಿ ಪಡುವ ಶ್ರಮವೇ ಸಾರ್ಥಕವಾದುದು. ಜ್ಞಾನಾರ್ಜನೆಗಾಗಿ ಮಾಡುವ ಕಾರ್ಯವೇ ಎಲ್ಲಾ

---

೨. ಸೌಂದರನಂದ, ಸರ್ಗ-೩, ಶ್ಲೋಕ-೩೬
೩. ಸೌಂದರನಂದ, ಸರ್ಗ-೫, ಶ್ಲೋಕ-೨೩
೪. ಸೌಂದರನಂದ, ಸರ್ಗ-೫, ಶ್ಲೋಕ-೨೪
೫. ಸೌಂದರನಂದ, ಸರ್ಗ-೫, ಶ್ಲೋಕ-೨೫

ಕಾರ್ಯಗಳಿಗಿಂತ ಉತ್ತಮ. ಈ ಶ್ರೇಷ್ಠ ಸಾಧನೆಗಳನ್ನು ಬಿಟ್ಟು ಇಂದ್ರಿಯಗಳಿಗೆ ದಾಸನಾಗುವುದರಿಂದ ಏನು ಪ್ರಯೋಜನ?" ಎಂಬ ಸಂದೇಶದಲ್ಲಿ ಮಾನವ ಅವಶ್ಯವಾಗಿ ಮಾಡಬೇಕಾದ ಉತ್ತಮ ಕಾರ್ಯಗಳನ್ನು ನಿರೂಪಿಸಲಾಗಿದೆ.

ಜರಾಸಮಾ ನಾಸ್ತ್ಯಮೃಜಾ ಪ್ರಜಾನಾಂ ವ್ಯಾಧೇಃ ಸಮೋ ನಾಸ್ತಿ ಜಗತ್ಯನರ್ಥಃ ।
ಮೃತ್ಯೋಃ ಸಮಂ ನಾಸ್ತಿ ಭಯಂ ಪೃಥಿವ್ಯಾಮೇತತ್ತ್ರಯಂ ಖಲ್ವವಶೇಷೇನ ಸೇವ್ಯಮ್ ॥[೬]

"ಈ ಜೀವಕ್ಕೆ ಮುಪ್ಪಿಗಿಂತ ಮಲಿನವಾದದ್ದು ಮತ್ತೊಂದಿಲ್ಲ. ರೋಗಕ್ಕಿಂತ ಅನರ್ಥಕಾರಿಯಾದದ್ದು ಇನ್ನೊಂದಿಲ್ಲ. ಮರಣಕ್ಕೆ ಸಮನಾದ ಭಯಂಕರವಾದದ್ದು ಯಾವುದೂ ಇಲ್ಲ. ಈ ಮೇಲಿನಂತೆ ತಿಳಿಸಿರುವ ಮೂರನ್ನೂ ಅನಿವಾರ್ಯವಾಗಿ ಎಲ್ಲರೂ ಅನುಭವಿಸಲೇಬೇಕಾಗಿದೆ" ಎಂಬ ಸಂದೇಶದಲ್ಲಿ ಹುಟ್ಟಿನಿಂದ ಹಿಡಿದು ಸಾಯುವವರೆಗೆ ನಿಶ್ಚಯವಾಗಿ ಅನುಭವಿಸಬೇಕಾದವುಗಳನ್ನು ವಿವರಿಸಲಾಗಿದೆ.

ಸ್ನೇಹೇನ ಕಶ್ಚಿನ್ನ ಸಮೋಸ್ತಿ ಪಾಶಃ ಸ್ರೋತೋ ನ ತೃಷ್ಣಾಸಮಮಸ್ತಿ ಹಾರಿ ।
ರಾಗಾಗ್ನಿನಾ ನಾಸ್ತಿ ಸಮಸ್ತಥಾಗ್ನಿಸ್ತಚ್ಚೇತ್ತ್ರಯಂ ನಾಸ್ತಿ ಸುಖಂ ಚ ತೇಸ್ತಿ ॥[೭]

"ಸ್ನೇಹಕ್ಕೆ ಸಮನಾದ ಬಂಧನ ಇನ್ನೊಂದಿಲ್ಲ. ಆಸೆಗಿಂತ ಕೊಚ್ಚಿ ಒಯ್ಯುವ ಪ್ರವಾಹ ಮತ್ತೊಂದಿಲ್ಲ. ಅನುರಾಗಕ್ಕೆ ಸಮನಾದ ಸುಡುವ ಬೆಂಕಿ ಯಾವುದೂ ಇಲ್ಲ. ಸ್ನೇಹ–ಆಸೆ–ರಾಗ ಈ ಮೂರೂ ಇಲ್ಲದಿದ್ದರೇನೇ ನಿನ್ನ ಜೀವನ ಸುಖಮಯವಾಗಿರುತ್ತದೆ" ಎಂಬಲ್ಲಿ ಸುಖಜೀವನಕ್ಕೆ ಅಡ್ಡಿಯಾಗುವ ಅಂಶಗಳನ್ನು ವಿವರಿಸಲಾಗಿದೆ.

ಯಥೋಲ್ಕಾ ಹಸ್ತಸ್ಥಾ ದಹತಿ ಪವನಪ್ರೇರಿತಶಿಖಾ
ಯಥಾ ಪಾದಾಕ್ರಾಂತೋ ದಶತಿ ಭುಜಗಃ ಕ್ರೋಧರಭಸಃ ।
ಯಥಾ ಹಂತಿ ವ್ಯಾಘ್ರಃ ಶಿಶುರಪಿ ಗೃಹೀತೋ ಗೃಹಗತಃ
ಯಥಾ ಸ್ತ್ರೀಸಂಸರ್ಗೋ ಬಹುವಿಧಮನರ್ಥಾಯ ಭವತಿ ॥[೮]

"ಹೇಗೆ ಕೈಯ್ಯಲ್ಲಿನ ದೀವಟಿಗೆಯ ಜ್ವಾಲೆಯು ಗಾಳಿಯಿಂದ ಪ್ರೇರೇಪಣೆಗೊಂಡು ಕೈಯನ್ನೇ ಸುಡುವುದೋ, ಹೇಗೆ ಕಾಲಿನಿಂದ ತುಳಿಯಲ್ಪಟ್ಟ ಸರ್ಪವು ಕೋಪದಿಂದ ಉಗ್ರವಾಗಿ ತುಳಿದವನನ್ನೇ ಕಚ್ಚುವುದೋ, ಮನೆಯಲ್ಲೇ ಸಾಕಿದ ಮರಿಯಾದರೂ ಹುಲಿಯು ಹೇಗೆ ಕೊಲ್ಲಲು ಸಮರ್ಥವಾಗುವುದೋ, ಅದೇ ರೀತಿ ಸ್ತ್ರೀಸಹವಾಸವು ಅನೇಕ ಅಮಂಗಳಗಳಿಗೆ ಕಾರಣವಾಗುತ್ತದೆ" – ಎಂಬಲ್ಲಿ ಅಂಗನೆಯ ಸಂಗದ ಅನಾಹುತವನ್ನು ಪ್ರತಿಪಾದಿಸಲಾಗಿದೆ.

ತದೇವಮಾಜ್ಞಾಯ ಶರೀರಮಾತುರಂ ಬಲಾನ್ವಿತೋಸ್ಮೀತಿ ನ ಮಂತುಮರ್ಹಸಿ ।
ಅಸಾರಮಸ್ವಂತಮನಿಶ್ಚಿತಂ ಜಗಜ್ಜಗತ್ಯನಿತ್ಯೇ ಬಲಮವ್ಯವಸ್ಥಿತಮ್ ॥[೯]

---

೬. ಸೌಂದರನಂದ, ಸರ್ಗ–೫, ಶ್ಲೋಕ–೨೭
೭. ಸೌಂದರನಂದ, ಸರ್ಗ–೫, ಶ್ಲೋಕ–೨೮
೮. ಸೌಂದರನಂದ, ಸರ್ಗ–೮, ಶ್ಲೋಕ–೬೧
೯. ಸೌಂದರನಂದ, ಸರ್ಗ–೯, ಶ್ಲೋಕ–೧೬

"ದೇಹವನ್ನು ದುಃಖಮಯವೆಂದು ತಿಳಿದೂ 'ನಾನು ಪರಾಕ್ರಮಿಯಾಗಿದ್ದೇನೆ' ಎಂದು ಭಾವಿಸಿಕೊಳ್ಳುವುದು ಯೋಗ್ಯವಲ್ಲ. ಈ ಜೀವನ ಅಸಾರ, ಅನಿತ್ಯ, ಅನಿಶ್ಚಿತ ಹಾಗೂ ದುಃಖಾಂತವಾದುದು. ಶಾಶ್ವತವಲ್ಲದ ಈ ಜೀವನದಲ್ಲಿ ಬಲ-ಪರಾಕ್ರಮಗಳೂ ಸಹ ಅಶಾಶ್ವತ" – ಎಂಬಲ್ಲಿ ಜೀವನದ ಅಮೂಲ್ಯ ಶಾಶ್ವತ ತತ್ತ್ವವನ್ನು ಮನವರಿಕೆ ಮಾಡಿಕೊಡಲಾಗಿದೆ.

ಋತುರ್ವ್ಯತೀತಃ ಪರಿವರ್ತತೇ ಪುನಃ ಕ್ಷಯಂ ಪ್ರಯಾತಃ ಪುನರೇತಿ ಚಂದ್ರಮಾಃ ।
ಗತಂ ಗತಂ ನೈವ ಸಂನಿವರ್ತತೇ ಜಲಂ ನದೀನಾಂ ಚ ನೃಣಾಂ ಚ ಯೌವನಮ್ ॥[೧೦]

"ಗತಿಸಿದ ಋತು ಮತ್ತೆ ಮರಳಿ ಬರುತ್ತದೆ. ಕ್ಷೀಣಿಸಿದ ಚಂದ್ರ ಮತ್ತೆ ಮೈದುಂಬುತ್ತಾನೆ. ಆದರೆ ಹರಿದು ಹೋದ ನದಿಯ ನೀರು ಹಾಗೂ ಮಾನವರ ತಾರುಣ್ಯ ಮತ್ತೆ ಮರಳಿ ಬರುವುದಿಲ್ಲ" – ಎಂಬ ಸುಭಾಷಿತದಿಂದ ಬದುಕಿನ ಕಟುಸತ್ಯವನ್ನು ಅನಾವರಣಗೊಳಿಸಲಾಗಿದೆ.

ನ ಕಾಮಭೋಗಾ ಹಿ ಭವಂತಿ ತೃಪ್ತಯೇ ಹವೀಂಷಿ ದೀಪ್ತಸ್ಯ ವಿಭಾವಸೋರಿವ ।
ಯಥಾ ಯಥಾ ಕಾಮಸುಖೇಷು ವರ್ತತೇ ತಥಾ ತಥೇಚ್ಛಾ ವಿಷಯೇಷು ವರ್ಧತಿ ॥[೧೧]

"ಪ್ರಜ್ವಲವಾಗಿ ಉರಿಯುವ ಬೆಂಕಿಯು ಅಧಿಕ ಆಹುತಿಗಳಿಂದಲೂ (ಹವಿಸ್ಸುಗಳಿಂದ) ಹೇಗೆ ತೃಪ್ತಿಯನ್ನು ಹೊಂದುವುದಿಲ್ಲವೋ, ಹಾಗೆಯೇ ವಿಷಯೋಪಭೋಗಗಳಿಂದ ಕಾಮದ ತೃಪ್ತಿಯು ಎಂದೂ ತಣಿಯುವುದಿಲ್ಲ. ಹೇಗೆ ಕಾಮಾದಿ ಸುಖಗಳಲ್ಲಿ ಆಸಕ್ತಿ ಹೆಚ್ಚುತ್ತಾ ಹೋಗುತ್ತದೋ ಹಾಗೆ ಇಂದ್ರಿಯಗೋಚರ ಉಪಭೋಗಗಳಲ್ಲಿ ಬಯಕೆಯು ಹೆಚ್ಚುತ್ತಲೇ ಇರುತ್ತದೆ" ಎನ್ನುವುದರಿಂದ "ಆಶಾ ಹಿ ಬಧ್ಯತೇ ಲೋಕಃ, ನ ಲೋಕಃ ಪಾರಮಾರ್ಥಿಕಃ" – "ಇಡೀ ಜಗತ್ತು ಆಸೆಯಿಂದಲೇ ಬಂಧಿತವಾಗಿದೆ. ಪಾರಮಾರ್ಥಿಕ ಚಿಂತನೆ ಕಿಂಚಿತ್ತೂ ಇಲ್ಲ" – ಎಂಬ ಸತ್ಯಸಂಗತಿಯನ್ನು ಸಾರಿದೆ.

ಇಹೈವ ಭೂತ್ವಾ ರಿಪವೋ ವಧಾತ್ಮಕಾಃ ಪ್ರಯಾಂತಿ ಕಾಲೇ ಪುರುಷಸ್ಯ ಮಿತ್ರತಾಮ್ ॥
ಪರತ್ರ ಚೈವೇಹ ಚ ದುಃಖಹೇತವೋ ಭವಂತಿ ಕಾಮಾ ನ ತು ಕಸ್ಯಚಿಚ್ಛಿವಾಃ ॥[೧೨]

"ಈ ಜಗತ್ತಿನಲ್ಲಿ ಕೆಲವು ಸಾರಿ ಹಿಂಸಾಕಾರಕರಾದ ಶತ್ರುಗಳೂ ಸಹ ಮಿತ್ರರಾಗುತ್ತಾರೆ. ಆದರೆ ಕಾಮವೆಂಬುದು ಹಾಗಲ್ಲ. ಅದು ಕೇವಲ ಈ ಲೋಕದಲ್ಲಿ ಮಾತ್ರವಲ್ಲದೆ ಪರಕಾಲದಲ್ಲಿಯೂ ದುಃಖವನ್ನುಂಟುಮಾಡುತ್ತದೆ. ವಿಷಯೋಪಭೋಗಗಳು ಎಂದೂ ಮಂಗಳದಾಯಕವಲ್ಲ" ಎಂಬ ಸೂಕ್ತಿಯಿಂದ "ಇಂದ್ರಿಯಸುಖಗಳನ್ನು ಗೆದ್ದರೆ ಮಾತ್ರ ಸಮಸ್ತವನ್ನೂ ಗೆದ್ದಂತೆ" ಎಂದು ಉಪದೇಶಿಸಲಾಗಿದೆ.

---

೧೦. ಸೌಂದರನಂದ, ಸರ್ಗ-೯, ಶ್ಲೋಕ-೨೮
೧೧. ಸೌಂದರನಂದ, ಸರ್ಗ-೯, ಶ್ಲೋಕ-೪೩
೧೨. ಸೌಂದರನಂದ, ಸರ್ಗ-೯, ಶ್ಲೋಕ-೪೭

ಮಹಚ್ಚ ರೂಪಂ ಸ್ವಣು ಹಂತಿ ರೂಪಂ ಶಬ್ದೋ ಮಹಾನ್ ಹಂತಿ ಚ ಶಬ್ದಮೂಲ್ಯಮ್ ।
ಗುರ್ವೀ ರುಜಾ ಹಂತಿ ರುಜಾಂ ಚ ಮೃದ್ವೀಂ ಸರ್ವೋ ಮಹಾನ್ ಹೇತುರಣೋರ್ವಧಾಯ ॥[೧೩]

"ಅಧಿಕರೂಪವು ಅಲ್ಪರೂಪವನ್ನು ಮರೆಮಾಚುತ್ತದೆ. ದೊಡ್ಡ ಶಬ್ದವು ಸಣ್ಣ ಶಬ್ದವನ್ನು ಅಡಗಿಸುತ್ತದೆ. ಗಂಭೀರವಾದ ರೋಗವು ಅಲ್ಪರೋಗವನ್ನು ಮುಚ್ಚುತ್ತದೆ. ಮಹತ್ತಾದವುಗಳೆಲ್ಲವೂ ಅಲ್ಪವಾದವುಗಳನ್ನು ನಾಶಪಡಿಸುತ್ತವೆ" ಎಂಬಲ್ಲಿ ಮಹತ್ತುಗಳಲ್ಲಿ ಅಣುವಸ್ತುಗಳು ಲೀನವಾಗುವುದನ್ನು ವಿವರಿಸಲಾಗಿದೆ.

ಆರ್ಜವಾಭಿಹಿತಂ ವಾಕ್ಯಂ ನ ಚ ಮಂತವ್ಯಮನ್ಯಥಾ ।
ರುಕ್ಷಮಪ್ಯಾಶಯೇ ಶುದ್ಧೇ ರುಕ್ಷತೋ ನೈತಿ ಸಜ್ಜನಃ ॥[೧೪]
ಅಪ್ರಿಯಂ ಹಿ ಹಿತಂ ಸ್ನಿಗ್ಧಮಸ್ನಿಗ್ಧಮಹಿತಂ ಪ್ರಿಯಮ್ ।
ದುರ್ಲಭಂ ತು ಪ್ರಿಯಹಿತಂ ಸ್ವಾದು ಪಥ್ಯಮಿವೌಷಧಮ್ ॥[೧೫]

"ಹಿತಕರವಾದ ಅಪ್ರಿಯ ಮಾತುಗಳಲ್ಲಿ ಮೈತ್ರೀಭಾವವಿರುತ್ತದೆ. ಅಹಿತಕರವಾದ ಪ್ರಿಯ ಮಾತು ಒರಟಾಗಿರುತ್ತದೆ. ಹಿತಕರವೂ ಮತ್ತು ಪ್ರಿಯವೂ ಆದ ಮಾತು ಸ್ವಾದಿಷ್ಟವೂ, ಗುಣಕಾರಿಯೂ ಆದ ಔಷಧದಂತೆ ದೊರೆಯುವುದು ದುರ್ಲಭ" ಎಂಬ ಉಕ್ತಿಯು ಸನಾತನ ಧರ್ಮದ ಉಪದೇಶವನ್ನು ನೆನಪಿಸುತ್ತದೆ.

ತೃಪ್ತಿರ್ನಾಸ್ತೀಂಧನೈರಗ್ನೇರ್ನಾಂಭಸಾ ಲವಣಾಂಭಸಃ ।
ನಾಪಿ ಕಾಮ್ಯೈಃ ಸತೃಷ್ಣಸ್ಯ ತಸ್ಮಾತ್ ಕಾಮಾ ನ ತೃಪ್ತಯೇ ॥[೧೬]

"ಬೆಂಕಿಗೆ ಅದೆಷ್ಟು ಉರುವಲು ಸುರಿದರೂ ತೃಪ್ತಿಯಾಗುವುದಿಲ್ಲ. ಸಮುದ್ರಕ್ಕೆ ಎಷ್ಟು ನೀರು ಸುರಿದರೂ ತುಂಬುವುದಿಲ್ಲ. ಕಾಮಿಯಾದವನು ಎಷ್ಟು ಭೋಗಿಸಿದರೂ ತೃಪ್ತಿ ಸಿಗುವುದಿಲ್ಲ. ಕಾಮೋಪಭೋಗವು ಎಂದಿಗೂ ತೃಪ್ತಿದಾಯಕವಲ್ಲ" ಎಂದು ಅತಿರೇಕದ ಅನುಭವಗಳನ್ನು ದೃಷ್ಟಾಂತಗಳ ಸಹಿತ ನಿರೂಪಿಸಲಾಗಿದೆ.

ರಿರಂಸಾ ಯದಿ ತೇ ತಸ್ಮಾದಧ್ಯಾತ್ಮೇ ಧೀಯತಾಂ ಮನಃ ।
ಪ್ರಶಾಂತಾ ಚಾನವದ್ಯಾ ಚ ನಾಸ್ತ್ಯಧ್ಯಾತ್ಮಸಮಾ ರತಿಃ ॥[೧೭]

"ನೀನು ಸದಾ ಆನಂದಿಸಲು ಬಯಸುವುದಾದರೆ ಆತ್ಮ ವಿಷಯದ ಜ್ಞಾನದಲ್ಲಿ ಮನಸ್ಸನ್ನು ನೆಡು. ಏಕೆಂದರೆ ಪ್ರಶಾಂತವೂ ನಿರ್ಮಲವೂ ಆದ ಅಧ್ಯಾತ್ಮ ಜ್ಞಾನದಷ್ಟು ಪ್ರಶಸ್ತವಾದದ್ದು ಇನ್ನೊಂದಿಲ್ಲ" ಎಂದು ಅಧ್ಯಾತ್ಮದ ಗರಿಷ್ಠತೆಯನ್ನು ಸಾರಲಾಗಿದೆ.

---

೧೩. ಸೌಂದರನಂದ, ಸರ್ಗ–೧೦, ಶ್ಲೋಕ–೪೫
೧೪. ಸೌಂದರನಂದ, ಸರ್ಗ–೧೧, ಶ್ಲೋಕ–೧೫
೧೫. ಸೌಂದರನಂದ, ಸರ್ಗ–೧೧, ಶ್ಲೋಕ–೧೬
೧೬. ಸೌಂದರನಂದ, ಸರ್ಗ–೧೧, ಶ್ಲೋಕ–೩೨
೧೭. ಸೌಂದರನಂದ, ಸರ್ಗ–೧೧, ಶ್ಲೋಕ–೩೪

ನ ತತ್ರ ಕಾರ್ಯಂ ತೂರ್ಯೈಸ್ತೇ ನ ಸ್ತ್ರೀಭಿರ್ನ ವಿಭೂಷಣೈಃ ।
ಏಕಸ್ತ್ವಂ ಯತ್ರತತ್ರಸ್ಥಸ್ತಯಾ ರತ್ಯಾಭಿರಂಸ್ಯಸೇ ॥[೧೮]

"ಅಧ್ಯಾತ್ಮದಲ್ಲಿ ಆಸಕ್ತನಾದರೆ ನಿನಗೆ ನೃತ್ಯ-ಗೀತ-ವಾದ್ಯ ಬೇಡ. ಬೆಡಗಿಯರೂ ಬೇಡ. ಒಡವೆಗಳು ಬೇಡ. ನೀನು ಎಲ್ಲೇ ಇದ್ದರೂ ಸಹ ಏಕಾಂಗಿಯಾಗಿಯೇ ಅಧ್ಯಾತ್ಮರತಿಯಲ್ಲಿ ಆನಂದವನ್ನು ಅನುಭವಿಸುವೆ" ಎಂದು ನಂದನಿಗೆ ಆಧ್ಯಾತ್ಮಿಕ ವಿಷಯಕವಾದ ಪರಮಸುಖದ ಪರಿಚಯ ಮಾಡಿಕೊಡಲಾಗಿದೆ.

ಮಾನಸಂ ಬಲವತ್ ದುಃಖಂ ತರ್ಷೇ ತಿಷ್ಠತಿ ತಿಷ್ಠತಿ ।
ತಂ ತರ್ಷಂ ಛಿಂಧಿ ದುಃಖಂ ಹಿ ತೃಷ್ಣಾ ಚಾಸ್ತಿ ಚ ನಾಸ್ತಿ ಚ ॥[೧೯]

"ಎಲ್ಲಿಯವರೆಗೆ ಮನಸ್ಸಿನಲ್ಲಿ ಬಯಕೆ ತುಂಬಿರುತ್ತದೆಯೋ ಅಲ್ಲಿಯವರೆಗೆ ಮಾನಸಿಕ ದುಃಖವು ಇದ್ದೇ ಇರುತ್ತದೆ. ಆದ್ದರಿಂದ ಆ ಬಯಕೆಯನ್ನು ಬಿಡು. ಏಕೆಂದರೆ ದುಃಖ ಮತ್ತು ಬಯಕೆ ಒಂದರೊಡನೆ ಒಂದು ಸೇರಿಕೊಂಡೇ ಬರುತ್ತವೆ. ಅಥವಾ ಬರದೆಯೂ ಇರುತ್ತವೆ" ಎಂಬ ಈ ಸಂದೇಶದ ಮೂಲಕ "ಆಸೆಯೇ ದುಃಖಕ್ಕೆ ಮೂಲವಾಗುತ್ತದೆ. ಆಸೆಯೇ ದುಃಖವೂ ಆಗುತ್ತದೆ. ಆಸೆಯಿಲ್ಲದಿದ್ದರೆ ದುಃಖವೇ ಇರುವುದಿಲ್ಲ. ಆದ್ದರಿಂದ ಆಸೆಯನ್ನು ಬಿಡು. ನಿತ್ಯಸುಖಿಯಾಗು" ಎಂದು ಉಪದೇಶಿಸಲಾಗಿದೆ.

ಅಥ ಸ್ಮೃತಿಕವಾಟೇನ ಪಿಧಾಯೇಂದ್ರಿಯಸಂವರಮ್ ।
ಭೋಜನೇ ಭವ ಮಾತ್ರಾಜ್ಞೋ ಧ್ಯಾನಾಯಾನಾಮಯಾಯ ಚ ॥[೨೦]

"ಸ್ಮೃತಿ ಎಂಬ ಬಾಗಿಲಿನ ಮೂಲಕ ಇಂದ್ರಿಯರೂಪವಾದ ಕರ್ಮಗಳು ಒಳ ನುಸುಳದಂತೆ ತಡೆಗಟ್ಟಿ, ಧ್ಯಾನ ಮತ್ತು ಆರೋಗ್ಯಕ್ಕಾಗಿ ಮಾತ್ರ ಭೋಜನವನ್ನು ಸೀಮಿತಗೊಳಿಸು" ಎಂಬ ಉಪದೇಶದಲ್ಲಿ ಊಟ ಮಾಡುವುದು ಇಂದ್ರಿಯಗಳ ಚಟಕ್ಕಲ್ಲ; ಅದು ಧ್ಯಾನ ಮಾಡಲು ಹಾಗೂ ಆರೋಗ್ಯವನ್ನು ಕಾಪಾಡಿಕೊಳ್ಳಲು ಮಾತ್ರ ಎಂಬ ಸಂದೇಶ ಅಡಗಿದೆ.

ಬಾಹ್ಯ ವಿಷಯೇಂದ್ರಿಯಗಳನ್ನು ಜಯಿಸಲು ಯೋಗ್ಯವಾದ ಪ್ರಸ್ಥಾನವನ್ನು ಅನುಸರಿಸುವ ಸಾಧಕನು ದೇವಲೋಕಪ್ರಾಪ್ತಿಗಿಂತಲೂ ಅಧಿಕವಾದ ಮನಶ್ಶಾಂತಿಯನ್ನು ಪಡೆಯುತ್ತಾನೆ.

ಪ್ರಾಣಾಪಾನೌ ನಿಗೃಹ್ಣಾತಿ ಗ್ಲಾನಿನಿದ್ರೇ ಪ್ರಯಚ್ಛತಿ ।
ಕೃತೋ ಹ್ಯತ್ಯರ್ಥಮಾಹಾರೋ ವಿಹಂತಿ ಚ ಪರಾಕ್ರಮಮ್ ॥[೨೧]

---

೧೮. ಸೌಂದರನಂದ, ಸರ್ಗ-೧೧, ಶ್ಲೋಕ-೩೫
೧೯. ಸೌಂದರನಂದ, ಸರ್ಗ-೧೧, ಶ್ಲೋಕ-೩೬
೨೦. ಸೌಂದರನಂದ, ಸರ್ಗ-೧೪, ಶ್ಲೋಕ-೧
೨೧. ಸೌಂದರನಂದ, ಸರ್ಗ-೧೪, ಶ್ಲೋಕ-೨

"ಆಹಾರವನ್ನು ಅತಿಯಾಗಿ ಸೇವಿಸಿದರೆ ಅದರಿಂದ ಪ್ರಾಣ ಮತ್ತು ಅಪಾನವೆಂಬ ಪ್ರಾಣವಾಯುಗಳಲ್ಲಿ ಪ್ರತಿರೋಧ ಉಂಟಾಗುತ್ತದೆ. ಆಯಾಸ ತಲೆದೋರುತ್ತದೆ. ನಿದ್ರೆ ಬರುತ್ತದೆ ಹಾಗೂ ಪರಾಕ್ರಮವು ನಾಶವಾಗುತ್ತದೆ" ಎಂಬಲ್ಲಿ ಅತಿ ಸರ್ವತ್ರ ವರ್ಜಯೇತ್, ಅಜೀರ್ಣಂ ಭೋಜನಂ ವಿಷಂ ಭವತಿ ಎಂಬ ನಿಶ್ಚಿತ ಸಿದ್ಧಾಂತವನ್ನು ಪ್ರತಿಪಾದಿಸಲಾಗಿದೆ.

ಯಥಾ ಚಾತ್ಯರ್ಥಮಾಹಾರಃ ಕೃತೋಽನರ್ಥಾಯ ಕಲ್ಪತೇ ।
ಉಪಯುಕ್ತಸ್ತಥಾತ್ಯಲ್ಪೋ ನ ಸಾಮರ್ಥ್ಯಾಯ ಕಲ್ಪತೇ ॥[೨೨]

"ಅತಿಯಾದ ಆಹಾರ ಸೇವನೆಯು ಅನರ್ಥವನ್ನುಂಟುಮಾಡುವಂತೆ ಅತಿ ಮಿತವಾದ ಆಹಾರಸೇವನೆಯೂ ಶಕ್ತಿಯನ್ನು ಕುಂದಿಸುತ್ತದೆ." ಅತಿ–ಮಿತಿಗಳನ್ನು ಹಿಡಿತದಲ್ಲಿಟ್ಟುಕೊಂಡು ಹಿತ–ಮಿತಗಳನ್ನು ಜೀವನದಲ್ಲಿ ಪಾಲಿಸುವುದರಿಂದ ಯೋಜಿತ ಗುರಿ ತಲುಪಲು ಸಾಧ್ಯ" ಎಂಬ ಸರಳ ಉಪದೇಶ ಇಲ್ಲಿದೆ.

ಯಥಾ ಭಾರೇಣ ನಮತೇ ಲಘುನೋನ್ನಮತೇ ತುಲಾ ।
ಸಮಾ ತಿಷ್ಠತಿ ಯುಕ್ತೇನ ಭೋಜ್ಯೇನೇಯಂ ತಥಾ ತನುಃ ॥[೨೩]

"ತಕ್ಕಡಿಯು ಭಾರವಾದರೆ ಬಗ್ಗುತ್ತದೆ. ಹಗುರವಾದರೆ ಮೇಲೇರುತ್ತದೆ. ಸರಿಯಾಗಿದ್ದರೆ ಸಮವಾಗಿ ನಿಲ್ಲುತ್ತದೆ. ಹಾಗೆಯೇ ಅಧಿಕ, ಕಡಮೆ ಹಾಗೂ ಸಂತುಲಿತವಾದ ಆಹಾರಸೇವನೆಯು ಶರೀರವನ್ನು ಭಾರ, ಕ್ಷೀಣ ಹಾಗೂ ಸಂತುಲಿತ ಸ್ಥಿತಿಯಲ್ಲಿಡುತ್ತದೆ." ಆಹಾರದಲ್ಲಿ ಏರು–ಪೇರಾಗುವುದನ್ನು ತಡೆಗಟ್ಟಿದರೆ ಹೇಗೆ ಆರೋಗ್ಯದಲ್ಲಿ ಸ್ಥಿರತೆ ಕಂಡುಬರುವುದೋ ಹಾಗೂ ಜೀವನದಲ್ಲಿ ಕಷ್ಟ–ಸುಖಗಳನ್ನು ಸಮಸ್ಥಿತಿಯಲ್ಲಿ ಅನುಭವಿಸಿದರೆ ಮೋಕ್ಷಸುಖ ಸಿದ್ಧಿಸುತ್ತದೆ.

ತೃಪ್ತಿಂ ವಿತ್ತಪ್ರಕರ್ಷೇಣ ಸ್ವರ್ಗಾವಾಪ್ತ್ಯಾ ಕೃತಾರ್ಥತಾಮ್ ।
ಕಾಮೇಭ್ಯಶ್ಚ ಸುಖೋತ್ಪತ್ತಿಂ ಯಃ ಪಶ್ಯತಿ ಸ ನಶ್ಯತಿ ॥[೨೪]

"ಹಣವನ್ನು ಗಳಿಸುವುದರಿಂದ ಸಂತೋಷ ಲಭಿಸುತ್ತದೆ; ಸ್ವರ್ಗಲೋಕಕ್ಕೆ ಹೋಗುವುದರಿಂದ ಧನ್ಯತೆ ಲಭಿಸುತ್ತದೆ; ಹಾಗೂ ಕಾಮೋಪಭೋಗದಿಂದ ಸುಖ ಸಿಗುತ್ತದೆ ಎಂದು ಯಾರು ಭಾವಿಸುತ್ತಾರೋ ಅವರು ಖಂಡಿತ ನಾಶವಾಗುತ್ತಾರೆ." ಅಂದರೆ ಕೇವಲ ಹಣಸಂಪಾದನೆ ಸುಖ ಕೊಡುವುದಿಲ್ಲ. ಕೇವಲ ಸ್ವರ್ಗ ಕೃತಾರ್ಥತೆಯ ದ್ಯೋತಕವಲ್ಲ. ಕೇವಲ ವಿಷಯೇಂದ್ರಿಯಗಳ ಭೋಗ ಸುಖಕಾರಕವಲ್ಲ ಎಂಬ ಸಂದೇಶ ಗ್ರಾಹ್ಯವಾಗಿದೆ.

ತಸ್ಮಾದಕುಶಲಂ ತ್ಯಕ್ತ್ವಾ ಕುಶಲಂ ಧ್ಯಾತುಮರ್ಹಸಿ ।
ಯತ್ತೇ ಸ್ಯಾದಿಹ ಚಾರ್ಥಾಯ ಪರಮಾರ್ಥಸ್ಯ ಚಾಪ್ತಯೇ ॥[೨೫]

---

೨೨. ಸೌಂದರನಂದ, ಸರ್ಗ–೧೪, ಶ್ಲೋಕ–೩

೨೩. ಸೌಂದರನಂದ, ಸರ್ಗ–೧೪, ಶ್ಲೋಕ–೫

೨೪. ಸೌಂದರನಂದ, ಸರ್ಗ–೧೫, ಶ್ಲೋಕ–೧೦

೨೫. ಸೌಂದರನಂದ, ಸರ್ಗ–೧೫, ಶ್ಲೋಕ–೧೯

"ಆದ್ದರಿಂದ ಕೆಟ್ಟ ವಿಚಾರಗಳನ್ನು ಬಿಟ್ಟು ಒಳ್ಳೆಯ ವಿಚಾರಗಳನ್ನು ಕುರಿತು ಧ್ಯಾನ ಮಾಡು. ಅದು ನಿನಗೆ ಇಹದಲ್ಲಿ ಲಾಭವನ್ನೂ, ಪರದಲ್ಲಿ ಪರಮಾರ್ಥವನ್ನೂ ಪಡೆಯಲು ಅನುಕೂಲವಾಗುತ್ತದೆ" ಎಂಬ ಸಂದೇಶದಲ್ಲಿ ಕೃತ್ಯಾಕೃತ್ಯ ವಿಚಾರಗಳಿಂದ ಲಾಭಾಲಾಭ ಪ್ರಯೋಜನಗಳ ಸಿದ್ಧಿಯನ್ನು ವಿವರಿಸಲಾಗಿದೆ.

ಹೀಗೆ ಅಶ್ವಘೋಷನು ಈ ಗ್ರಂಥದ ಆರಂಭದಿಂದ ಅಂತ್ಯದವರೆಗೂ ಜೀವನದ ಅತ್ಯಮೂಲ್ಯವಾದ ಸಂದೇಶಗಳನ್ನು ದಾಖಲಿಸಿದ್ದಾನೆ. ಮಾನವಜೀವನ ಮರ್ತ್ಯವಾದುದು. ಅದನ್ನು ಅಮರ್ತ್ಯಗೊಳಿಸಬೇಕಾದರೆ ಈ ಮೌಲ್ಯಯುತ ಸಂದೇಶಗಳನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಬದುಕು ಏಕೆ ದುಃಖಮಯವಾಗುತ್ತದೆ ಹಾಗೂ ಅದನ್ನು ಹೇಗೆ ಸುಖಮಯವನ್ನಾಗಿ ಪರಿವರ್ತಿಸಬಹುದು, ಹುಟ್ಟು ಸಾವುಗಳನ್ನು ದಾಟಿ ಮುನ್ನಡೆದರೆ ಹೇಗೆ ಶಾಶ್ವತ ಸುಖದಲ್ಲಿ ತೇಲಾಡಬಹುದು-ಎಂಬ ಸಂಗತಿಗಳನ್ನು ಅತ್ಯಂತ ವಿದಗ್ಧತೆಯಿಂದ ನಿರೂಪಿಸಿದ್ದಾನೆ. ಆದ್ದರಿಂದ ಅಶ್ವಘೋಷನ ಈ ಮೇರುಕೃತಿಯು ಸಾರ್ವತ್ರಿಕವಾಗಿ ಸದಾಕಾಲವೂ ಮಾರ್ಗದರ್ಶಿಯಾಗಿ ಸ್ಥಿರವಾಗಿ ನಿಂತಿದೆ. ಸಹೃದಯರ ಮನಸ್ಸನ್ನು ಸದಾಕಾಲವೂ ರಂಜಿಸುತ್ತಿದೆ. ಸಂಸ್ಕೃತ ಸಾಹಿತ್ಯ ಇತಿಹಾಸದಲ್ಲಿ ಇಂತಹ ಅಮೂಲ್ಯ ಕೃತಿಯು ಮತ್ತೊಂದಿಲ್ಲ ಎಂದರೆ ಅತಿಶಯೋಕ್ತಿ ಆಗದು. ಇಂತಹ ಪರಮಶ್ರೇಷ್ಠ ಕೃತಿಯನ್ನು ನಮಗೆ ನೀಡಿದ ಮಹಾಕವಿ ಅಶ್ವಘೋಷನಿಗೆ ನಾವು ಕೃತಜ್ಞರಾಗಿರಬೇಕು.

□□□

ಮಹಾಕಾವ್ಯಗಳಲ್ಲಿ ಸ್ತ್ರೀ

– ಎಚ್.ಎಸ್. ರುಕ್ಮಿಣಿ

ಕನ್ನಡ ಸಾಹಿತ್ಯ ಚರಿತ್ರೆಯು ತನ್ನದೇ ಆದ ವೈಶಿಷ್ಟ್ಯಪೂರ್ಣ ಸಾಹಿತ್ಯಿಕ ಹಿನ್ನೆಲೆಯನ್ನು ಒಳಗೊಂಡಿದೆ. ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಹಲವಾರು ಶ್ರೇಷ್ಠ ಕೃತಿಗಳು ಹುಟ್ಟಿರುವುದನ್ನು ಕಾಣಬಹುದು. ಭಾರತೀಯ ಸಂಸ್ಕೃತಿಯ ಪ್ರತೀಕವೆಂಬಂತೆ ಹಲವಾರು ಕೃತಿಗಳು ತಮ್ಮದೇ ಆದ ವಸ್ತುವಿಶಿಷ್ಟತೆಯ ಮೂಲಕ ಸಮಾಜಕ್ಕೆ ಅತ್ಯದ್ಭುತ ಕೊಡುಗೆಗಳೆಂಬಂತೆ ನಿರೂಪಿತವಾಗಿರುವುದನ್ನೂ ಕಾಣುತ್ತೇವೆ. ಇಂತಹ ಅತ್ಯದ್ಭುತ ಸಾಹಿತ್ಯಸೃಷ್ಟಿಯೊಳಗೆ ಸ್ತ್ರೀ ಕೆಲವೊಮ್ಮೆ ವೈಭವದ ತುತ್ತ ತುದಿಗೇರಿ ವಿಜೃಂಭಿಸಿದ್ದರೆ, ಇನ್ನೊಮ್ಮೆ ಸ್ತ್ರೀಯರನ್ನು ಕೆಳಗಿಳಿಸಿರುವುದು ಗೋಚರಿಸುತ್ತದೆ. ಸೃಷ್ಟಿಯ ಎಲ್ಲಾ ಕೊಡುಗೆಗಳಲ್ಲೂ ಸ್ತ್ರೀಯರ ಪಾತ್ರವಿದೆಯೆಂದು ಗೌರವಿಸಿದ ಸಮಾಜವೇ ಸ್ತ್ರೀ ಶೋಷಣೆಗೆ ಮುಂದಾದ ಎಷ್ಟೋ ಸಂದರ್ಭ ಸನ್ನಿವೇಶಗಳನ್ನು ನೋಡಬಹುದಾಗಿದೆ.

ಭಾರತೀಯರ ಮನದಾಳದಲ್ಲಿ ಪೂಜನೀಯ ಸ್ಥಾನವನ್ನಲಂಕರಿಸಿ ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವ ಧಾರ್ಮಿಕ ಗ್ರಂಥಗಳೆಂದರೆ 'ರಾಮಾಯಣ' ಹಾಗೂ 'ಮಹಾಭಾರತ' ಎಂಬ ಮಹಾಕಾವ್ಯಗಳು. ಇಂದಿನ ನಾಗರಿಕ ಸಮಾಜದ ಪ್ರತಿಯೊಂದು ಹೆಜ್ಜೆ ಗುರುತಿನ ಹಿನ್ನೆಲೆಯನ್ನು ನಾವು ಈ ರಾಮಾಯಣ ಮತ್ತು ಮಹಾಭಾರತವೆಂಬ ಮಹಾಕಾವ್ಯಗಳಲ್ಲಿ ಕಾಣಬಹುದು. ರಾಮಾಯಣವನ್ನು ವಾಲ್ಮೀಕಿ ಮಹರ್ಷಿಯೂ ಮಹಾಭಾರತವನ್ನು ವ್ಯಾಸ ಮಹರ್ಷಿಯೂ ರಚಿಸಿದರೆಂಬ ಪ್ರತೀತಿ ಇದೆ. ಇಂತಹ ಶ್ರೇಷ್ಠ ಮುನಿವರ್ಯರ ಮಹಾನ್ ಕೃತಿಗಳಿಂದ ಪ್ರಭಾವಿತರಾದ ಕನ್ನಡದ ಕುಮಾರ ವಾಲ್ಮೀಕಿ, ಲಕ್ಷ್ಮೀಶ, ಕುಮಾರವ್ಯಾಸ, ರನ್ನ, ಪಂಪ ಮುಂತಾದವರು ತಮ್ಮದೇ ಆದ ಕವಿತಾ ಪ್ರೌಢಿಮೆಯನ್ನು ಬಳಸಿ ರಾಮಾಯಣ ಮತ್ತು ಮಹಾಭಾರತದ ಆಶಯಗಳಿಗೆ ಧಕ್ಕೆ ಬರದಂತೆ ತಮ್ಮ ತಮ್ಮ ಕೃತಿಗಳಲ್ಲಿ ನಿರೂಪಣೆ ಮಾಡಿದ್ದಾರೆ. ಅಂತೆಯೇ ತೊರವೆ ರಾಮಾಯಣ, ಜೈಮಿನಿ ಭಾರತ, ಗದುಗಿನ ಭಾರತ, ಗದಾಯುದ್ಧ, ವಿಕ್ರಮಾರ್ಜುನ ವಿಜಯ ಮುಂತಾದ ಕೃತಿಗಳು ಇವುಗಳ ಪ್ರಭಾವದಿಂದಲೇ ರಚಿಸಲ್ಪಟ್ಟಿವೆ.

ವೇದೋಪನಿಷತ್ತುಗಳ ಕಾಲದ ತರುವಾಯ ಪಿತೃಪ್ರಧಾನ ವ್ಯವಸ್ಥೆ ಸಮಾಜದ ಭದ್ರ ಬುನಾದಿಯಾಗಿ ಮಾರ್ಪಾಟು ಹೊಂದಿತು. ಹೆಣ್ಣು ಸಂಸಾರದ ಕಣ್ಣೆಂದು ಹೇಳುತ್ತಿದ್ದ ಅಂದಿನ ಸಮಾಜವೇ ಹೆಣ್ಣು, ಗಂಡಿನ ಸುಖಕ್ಕಾಗಿ ಜೀವಿಸಬೇಕಾದ ಪಶು ಎಂಬ ವಾತಾವರಣವನ್ನು ಸೃಷ್ಟಿಸಿತು. ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀ ತಪ್ಪಿತಸ್ಥಳಲ್ಲದಿದ್ದರೂ ಅವಳನ್ನು ಶಿಕ್ಷೆಗೊಳಗಾಗಿಸುವ ಅನಿವಾರ್ಯ ಪರಿಸ್ಥಿತಿ ತಲೆದೋರಿತು. ಉದಾ: ರಾಮಾಯಣದಲ್ಲಿಯ ಸೀತೆ. ಇವಳು ಬದುಕಿನುದ್ದಕ್ಕೂ ನೋವನ್ನು ಉಂಡವಳೇ. ಮದುವೆಯಾದ ಕೆಲವೇ ತಿಂಗಳುಗಳಲ್ಲಿ ಗಂಡನನ್ನು ಅನುಸರಿಸಬೇಕೆಂಬ ಪತಿಭಕ್ತಿಯಾಧಾರದ ಮೇಲೆ ಪತಿಯೊಟ್ಟಿಗೆ ವನವಾಸಕ್ಕೆ ಹೊರಡಲು ಅಣಿಯಾಗುತ್ತಾಳೆ. ಅಂತೆಯೇ ರಾಮನೊಟ್ಟಿಗೆ ಕಷ್ಟ–ಸುಖಗಳಲ್ಲಿ ಸಮಪಾಲುದಾರಳಾಗಿ ಸುಖೀ ಸಂಸಾರದ ಕನಸನ್ನು ಕಾಣುತ್ತಾಳೆ. ದುರಾದೃಷ್ಟವೋ ಅಥವಾ ಹೆಣ್ಣಾಗಿ ಹುಟ್ಟಿದ ತಪ್ಪಿಗಾಗಿಯೋ ರಾವಣನ ಕೆಟ್ಟ ದೃಷ್ಟಿಗೆ ಬಲಿಯಾಗುತ್ತಾಳೆ. ಹಾಗೆಂದು ಸೀತೆಯ ಕಷ್ಟದ ದಿನಗಳು ಇಲ್ಲಿಗೇ ಮುಗಿಯುವುದಿಲ್ಲ. ಲೋಕಮಾತೆಯೆನಿಸಿದ ಸೀತೆಗೆ ಶೋಕಸಾಗರವೇ ಎದುರು ಕಾಯುತ್ತಿತ್ತು. ಸೀತೆಯ ಪಾತಿವ್ರತ್ಯದ ಬಗೆಗೆ ಅನುಮಾನಗೊಂಡ ರಾಮನು ಸೀತೆಯನ್ನು ಅಗ್ನಿಪ್ರವೇಶಕ್ಕೆ ಒಳಗು ಮಾಡುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪುರುಷ (ಅಗ್ನಿದೇವ)ನೇ ಸ್ತ್ರೀಪಾವಿತ್ರ್ಯವನ್ನು ಪ್ರಮಾಣೀಕರಿಸುವುದು. ಪುರುಷ ಪ್ರಾಧಾನ್ಯತೆಗೆ ಈ ಸಂದರ್ಭ ಕನ್ನಡಿ ಹಿಡಿದಂತಿದೆ. ಅಗ್ನಿದೇವನ ಪಾವಿತ್ರ್ಯತೆಯ ಪ್ರಮಾಣಪತ್ರ ದೊರೆತ ನಂತರ ರಾಮ–ಸೀತೆಯರ ಮಿಲನವಾಗುತ್ತದೆ. ಆದರೂ ಅಗಸನೋರ್ವನ ಮಾತಿನಿಂದಾಗಿ ಮತ್ತೆ ಸೀತಾಮಾತೆಯ ಶೋಷಣೆ ನಡೆಯುತ್ತದೆ. ಭಾರತೀಯರ ಮನದಾಳದಲ್ಲಿ ದೈವೀ ಸ್ಥಾನವನ್ನಲಂಕರಿಸಿರುವ ರಾಮ ಸೀತಾದೇವಿಯ ವಿಷಯದಲ್ಲಿ ನಡೆದುಕೊಂಡದ್ದಾದರೂ ಏನು ? ರಾಮ ಸೀತಾದೇವಿಯ ವಿಷಯದಲ್ಲಿ ತೆಗೆದುಕೊಂಡ ನಿರ್ಧಾರಗಳಾದರೂ ಎಷ್ಟರಮಟ್ಟಿಗೆ ಸರಿ? ಈ ಮಾತುಗಳು ವಿಚಾರಾರ್ಹವೆನಿಸುತ್ತವೆ.

ರಾಮಾಯಣದಲ್ಲಿ ಬರುವ ಪ್ರತಿಯೊಂದು ಸ್ತ್ರೀ ಪಾತ್ರವೂ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಗೊಳಗಾದಂತಹ ದುಃಖಿತ ಪಾತ್ರವೇ ಆಗಿದೆ. ಇದಕ್ಕೆ ಊರ್ಮಿಳೆಯ ಪಾತ್ರಚಿತ್ರಣವನ್ನು ಉದಾಹರಣೆಯಾಗಿ ನೀಡಬಹುದು. ಮದುವೆಯಾಗಿ ಸುಖ–ಸಂಸಾರದ ಕನಸುಗಳನ್ನು ಹೊತ್ತು ಗಂಡನ ಮನೆಗೆ ಆಗಮಿಸಿದ ಊರ್ಮಿಳೆಯ ಬಾಳಲ್ಲಿ ರಾಮನ ವನವಾಸದ ಸಂಗತಿ ಬರಸಿಡಿಲೆರಗಿದಂತಾಗುತ್ತದೆ. ಪತಿಯ (ಲಕ್ಷ್ಮಣ) ಮನದಾಳದಲ್ಲಿನ ಭ್ರಾತೃ ಪ್ರೇಮವನ್ನು ಊರ್ಮಿಳೆ ಮನಃಪೂರ್ವಕವಾಗಿ ಒಪ್ಪಿಕೊಳ್ಳುತ್ತಾಳೆ. ಗಂಡನ ಮನಸ್ಸನ್ನು ಊರ್ಮಿಳೆ ಅರ್ಥಮಾಡಿಕೊಂಡು ನಡೆದದ್ದು ಎಷ್ಟರಮಟ್ಟಿಗೆ ಸರಿ? ಆದರೆ ಲಕ್ಷ್ಮಣ? ಲಕ್ಷ್ಮಣನಂತಹವನಿಗೆ ರಾಮಧ್ಯಾನವನ್ನುಳಿದು ಬೇರೇನೂ ಗೊತ್ತಿರಲಿಲ್ಲ. ತನ್ನನ್ನು ನಂಬಿ ಬಂದ ಹೆಣ್ಣಿನ ಬಗ್ಗೆ ಕ್ವಚಿತ್ತಾದರೂ ಅವನು ಕರುಣೆ ತೋರಿ ಅವಳೊಟ್ಟಿಗೆ ಸಾಂಸಾರಿಕ ಸುಖ–ದುಃಖದಲ್ಲಿ ಪಾಲ್ಗೊಳ್ಳಬೇಕಿತ್ತು. ಆದರೆ ಲಕ್ಷ್ಮಣನಿಗೆ ಊರ್ಮಿಳೆಗಿಂತ

ರಾಮ ಮುಖ್ಯನಾಗುತ್ತಾನೆ. ಇಲ್ಲಿ ಪುರುಷಪ್ರಾಧಾನ್ಯವನ್ನು ಗುರುತಿಸಬಹುದು. ಹೆಂಡತಿಯಾದವಳು ಗಂಡನ ಅರ್ಧಭಾಗವೆಂದು ಹೇಳುವ ಸಂಸ್ಕೃತಿಯೇ ಈ ರೀತಿ ಪುರುಷ ಪ್ರಾಧಾನ್ಯದ ಕಡೆಗೆ ಒಲವನ್ನು ತೋರಿಸಿರುವುದು ದುರ್ದೈವದ ಸಂಗತಿ. ರಾಮಾಯಣದ ಸೀತೆಗೆ ಅಂದಿನ ರಾಮ ಅಗ್ನಿಪರೀಕ್ಷೆಗೆ ಒಡ್ಡಿದಂತೆ ಇಂದಿನ ಸಮಾಜದ ಪುರುಷರು ತಮ್ಮ ಪತ್ನಿಯರಿಗೆ ಅಗ್ನಿಸ್ಪರ್ಶ ಮಾಡುತ್ತಿರುವುದನ್ನು ಕಾಣಬಹುದು. ಇದು ಪರಂಪರಾನುಗತ ಬದುಕಿನ ಅನುಸರಣೆ ಎಂದರೂ ತಪ್ಪಾಗಲಾರದು. ಸೀತೆಯ ದುಃಖ ಅಂತ್ಯವಾದದ್ದು ಕೊನೆಗೂ ರಾಮನಿಂದಲ್ಲ; ತನ್ನ ಮಗಳ ಆರ್ತನಾದವನ್ನು ಕೇಳಿ ಬಾಯ್ತೆರೆದ ಭೂದೇವಿಯಿಂದ. ಸ್ತ್ರೀಮಮತಾಮಯಿ, ಲೋಕಮಾತೆ, ಕರುಣಾಮೂರ್ತಿ, ದೇವತೆ ಹಾಗೆ-ಹೀಗೆ ಎನ್ನುತ್ತಾ ಅವಳನ್ನು ವೈಭವೀಕರಿಸಿರುವ ಪುರಾಣ ಪುಣ್ಯಕತೆಗಳೇ ಅವಳ ವ್ಯಕ್ತಿತ್ವ ಹನನ ಮಾಡಿರುವುದನ್ನು ಕಾಣಬಹುದು.

ರಾಮಾಯಣವೆಂಬ ಮಹಾಕಾವ್ಯವು ಸೀತೆಯ ಪಾತ್ರದ ವಿಶಿಷ್ಟತೆಯನ್ನು ವಿವರಿಸುವುದರ ಜೊತೆಗೆ ಮತ್ತೊಂದೆಡೆ ಮಂಥರೆ, ಕೈಕೆಯಂತಹ ಪಾತ್ರದ ವಿಶ್ಲೇಷಣೆಯನ್ನು ಮಾಡುತ್ತದೆ. ಮಂಥರೆ ಇಡೀ ರಾಮಾಯಣದ ಕಥೆಗೆ ಮೂಲ ಧಾತುವಾಗುತ್ತಾಳೆ. ಇವಳಿಂದಾಗಿಯೇ ರಾಮನ ವನವಾಸ, ಸೀತಾದೇವಿಯ ಅಗ್ನಿ ಪ್ರವೇಶ ನಡೆಯುತ್ತವೆ. ಇವಳ ಕುರುಡು ಪ್ರೇಮದ ಪರಿಣಾಮವೇ ದಶರಥನ ಮುದ್ದಿನ ಕಿರಿಯ ಮಡದಿ ಕೈಕೆ ಸ್ವಾರ್ಥಿಯಾಗುವಂತೆ ಮಾಡುತ್ತದೆ. ಪುತ್ರಮೋಹಕ್ಕೆ ಕಟ್ಟುಬಿದ್ದು ರಾಮನ ವನವಾಸಕ್ಕೆ ಕೈಕೆ ಪ್ರತ್ಯಕ್ಷವಾಗಿ ಕಾರಣವಾದರೆ, ಮಂಥರೆ ಪರೋಕ್ಷವಾಗಿ ಕಾರಣವಾಗುತ್ತಾಳೆ. ದಶರಥ ಮಹಾರಾಜನ ಮತ್ತಿಬ್ಬರು ಮಡದಿಯರಾದ ಕೌಸಲ್ಯ ಮತ್ತು ಸುಮಿತ್ರೆಯರು ಆದರ್ಶ ತಾಯ್ತನದ ಪ್ರತೀಕವಾಗಿ ಸೃಷ್ಟಿಯಾಗಿದ್ದಾರೆ. ರಾಮಾಯಣದಲ್ಲಿ ನೆನೆಯಲೇಬೇಕಾದ ಮತ್ತೊಂದು ಪಾತ್ರ ಮಂಡೋದರಿ. ನಮ್ಮ ಪಂಚಪತಿವ್ರತೆಯರಲ್ಲಿ ಮಂಡೋದರಿಗೂ ಸ್ಥಾನವಿದೆ. ಪತಿ ರಾವಣ ಎಷ್ಟೇ ದುಷ್ಟನಾದರೂ ಪತಿಪ್ರೇಮವೇ ಪರಮ ಸುಖಿ ಜೀವನವೆಂದು ನಂಬಿ ರಾವಣನನ್ನು ಆರಾಧಿಸಿದ ದೈವತಾ ಸ್ವರೂಪಿಯಾಗಿ ಚಿತ್ರಿತವಾಗಿದ್ದಾಳೆ. ಇವಳು ಸೀತಾಮಾತೆಯ ಬಗೆಗೆ ಅಪಾರ ಗೌರವಾದರಗಳನ್ನು ಹೊಂದಿದ್ದಾಕೆ. ಇವಳೂ ಸಹ ಪುರುಷಾಧೀನಳಂತೆಯೇ ಗೋಚರಿಸುತ್ತಾಳೆ. ತನ್ನ ಪತಿಯ ನಡವಳಿಕೆಗಳನ್ನು ಎಲ್ಲಿಯೂ ಪ್ರಶ್ನಿಸುವುದಿಲ್ಲ. ಬದಲಿಗೆ ಮೌನಿಯಾಗಿ ದೇವರಲ್ಲಿ ತನ್ನ ಮೊರೆಯಿಡುತ್ತಾಳೆ.

ಇನ್ನು ದಾಯಾದಿ ಕಲಹವನ್ನು ವಸ್ತುವನ್ನಾಗುಳ್ಳ ಮಹಾಭಾರತದಲ್ಲಿನ ಸ್ತ್ರೀ ಚಿತ್ರಣವನ್ನು ಕುರಿತು ವಿಶ್ಲೇಷಿಸುವುದಾದರೆ, ಮಹಾಭಾರತದ ಸ್ತ್ರೀಪಾತ್ರಗಳು ರಾಮಾಯಣದ ಸ್ತ್ರೀಯರಂತೆ ಮೌನಿಗಳಲ್ಲ; ಪ್ರತಿಭಟನಾತ್ಮಕ ವ್ಯಕ್ತಿತ್ವವುಳ್ಳವುಗಳು. ಈ ಮಹಾಕಾವ್ಯದಲ್ಲಿ ಕಾಣಸಿಗುವ ಮತ್ಸ್ಯಗಂಧಿ (ಯೋಜನಾಗಂಧಿ), ಕುಂತಿ, ಮಾದ್ರಿ, ಗಾಂಧಾರಿ, ಅಂಬೆ, ಅಂಬಿಕೆ, ಅಂಬಾಲಿಕೆ, ದ್ರೌಪದಿ, ಅನಸೂಯೆ, ಊರ್ವಶಿ, ಮೇನಕೆ ಮುಂತಾದ ಸ್ತ್ರೀ ಪಾತ್ರಗಳೆಲ್ಲವೂ ಪುರುಷ ನಿಯಂತ್ರಿತ ಪಾತ್ರಗಳಾದರೂ, ತಮ್ಮ ಸ್ವಾಭಿಮಾನಕ್ಕೆ ಧಕ್ಕೆವುಂಟಾದಾಗ ಕೆಲವೊಂದು ಪಾತ್ರಗಳು ಸಿಡಿದೆದ್ದಿರುವುದನ್ನೂ ಕಾಣಬಹುದು.

ಪ್ರಾಚೀನ ಮಹಾಕಾವ್ಯಗಳ ಕಾಲಘಟ್ಟದಲ್ಲಿ ವಿಧವೆಯರ ಜೀವನ ವೇದೋತ್ತರ ಜೀವನದಷ್ಟು ನಿಕೃಷ್ಟವಾಗಿಲ್ಲ. ಇಲ್ಲಿನ ವಿಧವೆಯರು ಪತಿಯ ಮರಣಾನಂತರವೂ ಸಮಾಜ ಜೀವಿಯಾಗಿ ಬಾಳಿ ಬದುಕಿರುವುದನ್ನು ಕಾಣುತ್ತೇವೆ. ಉದಾ – ಮತ್ಸ್ಯಗಂಧಿ, ಕುಂತಿ, ಅಂಬಿಕೆ, ಅಂಬಾಲಿಕೆ ಮುಂತಾದ ವಿಧವೆಯರು ಮಕ್ಕಳ ಪಾಲನೆ ಪೋಷಣೆಯಲ್ಲಿ ತಮ್ಮ ಬದುಕಿನ ಸುಖ–ಸಂತೋಷಗಳನ್ನು ಕಾಣಬಯಸುತ್ತಾರೆ. ಸ್ತ್ರೀಯು ಸಹಗಮನ ಪದ್ಧತಿಯನ್ನು ಅನುಸರಿಸಿ ಚಿತೆ ಏರುವ ಪದ್ಧತಿ ರೂಢಿಯಲ್ಲಿರಲಿಲ್ಲ. ಇಡೀ ಮಹಾಭಾರತದ ಕಥಾಭಾಗದೊಳಗೆ ಮಾದ್ರಿಯ ಸಹಗಮನ ಬಿಟ್ಟರೆ ಉಳಿದಂತೆ ಎಲ್ಲಿಯೂ ಸಹಗಮನ ಪದ್ಧತಿಯು ಜರುಗಿದಂತೆ ಕಾಣಬರುವುದಿಲ್ಲ. "ಶಿಷ್ಟ ಪರಿಶಿಷ್ಟ ಸಂಸ್ಕೃತಿಗಳ ತಿಕ್ಕಾಟದ ಸನ್ನಿವೇಶದಲ್ಲಿ ಮಹಾಭಾರತ ರಚನೆಯಾಯಿತು. ಶಿಷ್ಟ ಸಂಸ್ಕೃತಿಯ ವಿಜಯದ ಚಿಹ್ನೆಯಾಗಿ ಮಾದ್ರಿ ಚಿತೆ ಏರಿದರೆ ಬುಡಕಟ್ಟು ಸಂಸ್ಕೃತಿಯ ಹೋರಾಟದ ಫಲವಾಗಿ ಕುಂತಿ ಮುಂತಾದವರು ಉಳಿದು ಬದುಕುತ್ತಾರೆ."[೧]

ಈ ಮಹಾಕಾವ್ಯದಲ್ಲಿ ಕಾಣಸಿಗುವ ಸ್ತ್ರೀಪಾತ್ರಗಳೆಲ್ಲವೂ ಪ್ರತಿಭಟನಾ ಸ್ವರೂಪದ ಸ್ತ್ರೀಪಾತ್ರಗಳಲ್ಲ. ಪುರುಷನ ದಬ್ಬಾಳಿಕೆಗೆ, ಸಮಾಜದ ಕಟ್ಟುಪಾಡುಗಳಿಗೆ ಬಲಿಯಾದಂತಹ ಎಷ್ಟೋ ಪಾತ್ರಸೃಷ್ಟಿ ಮಹಾಭಾರತದಲ್ಲಿದೆ. ಅನಸೂಯ, ಅಹಲ್ಯೆ, ರೇಣುಕಾ, ಊರ್ವಶಿ, ಮೇನಕೆ ಮುಂತಾದವರನ್ನು ಮೇಲಿನ ಮಾತಿಗೆ ಉದಾಹರಿಸಬಹುದು. ಅಂತೆಯೇ ಪ್ರತಿಭಟನಾತ್ಮಕ ವ್ಯಕ್ತಿತ್ವವುಳ್ಳ ಸ್ತ್ರೀಯಾಗಿ ಚಿತ್ರಿತವಾದ ಪಾತ್ರಗಳಲ್ಲಿ 'ದ್ರೌಪದಿ'ಯ ಹೆಸರನ್ನು ಮೊದಲಿಗೆ ಉಲ್ಲೇಖಿಸಬಹುದು. ಐದು ಜನ ಪಾಂಡವರ ಪತ್ನಿಯಾಗಿ ಮೆರೆದ ದ್ರೌಪದಿ ಪ್ರತೀಕಾರದ ಜ್ವಾಲಾಮುಖಿಯಂತೆ ಚಿತ್ರಿತಳಾಗಿದ್ದಾಳೆ. ಪುರುಷಸಮಾಜದ ನೀತಿ–ನಿಯಮಗಳನ್ನು ಪ್ರಶ್ನಿಸುವ ಧೀರ ವನಿತೆಯಾಗಿದ್ದಾಳೆ. ಧರ್ಮರಾಯನು ಪಣದಲ್ಲಿ ದ್ರೌಪದಿಯನ್ನು ಸೋತು ಅವಳನ್ನು ದುರ್ಯೋಧನನಿಗೆ ಒಪ್ಪಿಸುತ್ತಾನೆ. ಸಭೆಯ ನಡುಭಾಗದಲ್ಲಿ ದುಶ್ಯಾಸನನು ದ್ರೌಪದಿಯ ಸೀರೆ ಸೆಳೆವಾಗ ಕುಪಿತಳಾದ ದ್ರೌಪದಿ "ಪತಿಗಳೆನ್ನನು ಮಾರಿ ಧರ್ಮ ಸ್ಥಿತಿಯ ಕೊಂಡರು" ಹಾಗೆಯೇ ಪಾಂಡವರಿಗೆ "ಗಂಡರೋ ನೀವ್ ಭಂಡರೋ" ಎಂದು ಪ್ರಶ್ನಿಸಿದ ದಿಟ್ಟ ಮಹಿಳೆಯಾಗಿದ್ದಾಳೆ. ಅವಮಾನಿತಳಾದ ದ್ರೌಪದಿಯ ಮುಡಿಯನ್ನು ಹಿಡಿದೆಳೆಯಲು ಕಾರಣನಾದ ದುರ್ಯೋಧನನ ತೊಡೆ ಮುರಿಸಿದಲ್ಲದೆ, ಹರಡಿರುವ ತನ್ನ ಮುಡಿಯನ್ನು ಕಟ್ಟುವುದಿಲ್ಲವೆಂದು ಶಪಥ ಮಾಡುತ್ತಾಳೆ. ಆ ಶಪಥ ಈಡೇರಿಸುವ ಉದ್ದೇಶದಿಂದಾಗಿ ರಾಜಕೀಯ ಕುತಂತ್ರಗಳಲ್ಲೂ ತನ್ನ ಚಾಣಾಕ್ಷತನವನ್ನು ತೋರುತ್ತಾಳೆ. ಧರ್ಮರಾಯನಿಗೆ ಸಂಧಿಗೊಪ್ಪಕೂಡದೆಂದು ತಿಳಿಹೇಳುತ್ತಾಳೆ. ಉದಾ: ಕೃಷ್ಣಸಂಧಾನದ ಸಂದರ್ಭದಲ್ಲಿ ದ್ರೌಪದಿಯ ವಾದವೈಖರಿಯನ್ನು ಉಲ್ಲೇಖಿಸಬಹುದು. ಅಂತಿಮವಾಗಿ ಭೀಮನಲ್ಲಿ ತನ್ನಂತರಾಳದ ಭಾವನೆಯನ್ನು ಸಮರ್ಥವಾಗಿ ನಿವೇದಿಸಿ ಅವನಲ್ಲಿ ಅರ್ಥೈಸಿ

೧. ಪು. ೫೮, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ. – ಡಾ. ಬರಗೂರು ರಾಮಚಂದ್ರಪ್ಪ.

ದುರ್ಯೋಧನನ ತೊಡೆ ಮುರಿಸುವಲ್ಲಿ ಯಶಸ್ವಿಯಾಗುತ್ತಾಳೆ. "ದೇವಾಸುರ ಯುದ್ಧಕ್ಕೆ ಕರಗಂಬೊತ್ತೆಂಬಂತಿರುವ ಎರಡನೆಯ ಹಿಡಿಂಬೆಯಾದ ರನ್ನನ ದ್ರೌಪದಿಯೂ ಪಂಪನ ಜಾಡಿನಲ್ಲಿಯೇ ಬೆಳೆದ ಪಾತ್ರ"[೨]

ಮಹಾಭಾರತದಲ್ಲಿ ಬರುವ ಮುನಿಶ್ರೇಷ್ಠರು, ತಪಸ್ವಿಗಳು ಕರುಣಾಮಯಿಗಳೂ, ಜ್ಞಾನಿಗಳೂ, ಆಗಿರುವಂಥವರು. ಪುರುಷಪ್ರಧಾನ ಸಮಾಜದ ಪ್ರತೀಕಗಳೆಂಬಂತೆ ಇಲ್ಲಿನ ಮುನಿಶ್ರೇಷ್ಠರ ಪಾತ್ರಚಿತ್ರಣವಿರುವುದನ್ನು ಕಾಣುತ್ತೇವೆ. ಅತ್ರಿ, ಜಮದಗ್ನಿ, ಪರಾಶರಮುನಿ, ವಿಶ್ವಾಮಿತ್ರ, ಗೌತಮ ಮುಂತಾದವರೆಲ್ಲಾ ಸ್ತ್ರೀಶೋಷಕರೇ "ಹೆಣ್ಣನ್ನು ಸಾಮಾಜಿಕ ಶೃಂಖಲೆಯಲ್ಲಿಟ್ಟು ನೋಡುತ್ತದೆ ಭಾರತೀಯ ಮನಸ್ಸು ಎಂಬುದಕ್ಕೆ ಇದುವರೆಗೆ ಹೆಣ್ಣನ್ನು ನಡೆಸಿಕೊಂಡಿರುವ ಮಹರ್ಷಿಗಳ ಕಥೆಗಳೇ ನಿದರ್ಶನಗಳಾಗಿವೆ. ಹೆಣ್ಣು ಪುರುಷನ ಸೇವೆಗೇ ಇರುವವಳು. ಪುರುಷನು ಅವಳನ್ನು ರಕ್ಷಿಸುತ್ತಾನೆ. ಆಕೆಗೆ ಯಾವುದೇ ಸ್ವಾತಂತ್ರ್ಯವಿಲ್ಲ. ಪುರುಷನ ಅಲಕ್ಷ್ಯಕ್ಕೆ ಒಳಗಾದರೆ ಶಿಕ್ಷೆ ಅಥವಾ ಸಾವು. ಸದಾ ಆತನ ಅನುಕಂಪೆಯಲ್ಲಿಯೇ ಸ್ತ್ರೀ ಇರಬೇಕು ಎಂಬ ಅನಾರೋಗ್ಯಕರ ಬೆಳವಣಿಗೆಯೇ ಇದಾಗಿದೆ" ಎಂಬ ಹಾಲತಿ ಸೋಮಶೇಖರ್‌ರವರ ಮಾತುಗಳು ಅಕ್ಷರಶಃ ಸತ್ಯವೆನಿಸುತ್ತವೆ.

ಇಲ್ಲಿನ ಮಹರ್ಷಿಗಳು ಕೋಪಿಷ್ಠರು. ಪತಿವ್ರತಾಶಿರೋಮಣಿಯಾದ ರೇಣುಕಾದೇವಿಯು ಗಂಧರ್ವನೋರ್ವನ ಸೌಂದರ್ಯಕ್ಕೆ ಮೆಚ್ಚಿದಳೆಂಬ ಕಾರಣಕ್ಕಾಗಿಯೇ ತನ್ನ ಮಗನಾದ ಪರಶುರಾಮನಿಂದ ತಲೆ ತೆಗಿಸಿದಂತೆ ಮಹಾಜ್ಞಾನಿ ಜಮದಗ್ನಿಮಹರ್ಷಿ ತಲೆಕಡಿಯುವಂತಹ ಮಹದಪರಾಧ ರೇಣುಕಾದೇವಿಯದಲ್ಲವಾದರೂ; ಪುರುಷ ಪ್ರತಿಷ್ಠೆಯ ಅಹಂಕಾರದ ಪರಮಾವಧಿಗೆ ಅವಳು ಬಲಿಯಾಗುತ್ತಾಳೆ. ನಂತರ ಪುತ್ರನ ಅಪೇಕ್ಷೆಯಂತೆ ರೇಣುಕಾ ಬದುಕಿ ಬಂದರೂ ಇಲ್ಲಿ ಪುರುಷನ ಇಚ್ಛೆಗನುಗುಣವಾಗಿ ಸ್ತ್ರೀಯ ಬದುಕು ನಿರ್ಧಾರವಾಗುತ್ತದೆಂಬಂಶವನ್ನು ಗಮನಿಸಬೇಕಾಗುತ್ತದೆ.

ಮತ್ತೋರ್ವ ಮಹರ್ಷಿ ಗೌತಮನ ವ್ಯಕ್ತಿತ್ವ ಮತ್ತೂ ಅಮಾನವೀಯವೆನಿಸುತ್ತದೆ. ವೈಭೋಗದ ಸುಖದ ಸುಪ್ಪತ್ತಿಗೆಯಲ್ಲಿ ಮೆರೆವ ಇಂದ್ರನಿಗೆ ಗೌತಮನ ಮಡದಿ ಅಹಲ್ಯೆಯ ಮೇಲೆ ಮೋಹವಾಗುತ್ತದೆ. ತನ್ನ ಕಾಮದಾಹವನ್ನು ತೀರಿಸಿಕೊಳ್ಳಲು ಇಂದ್ರ ಗೌತಮನ ವೇಷಧಾರಿಯಾಗಿ ಆಶ್ರಮದಲ್ಲಿದ್ದ ಅಹಲ್ಯೆಯೊಟ್ಟಿಗೆ ಸಂಭೋಗ ಸುಖವನ್ನು ಪಡೆಯುತ್ತಾನೆ. ಇಂದ್ರನ ಕುತಂತ್ರವನ್ನು ಅರಿಯದ ಅಹಲ್ಯೆ ಪತಿಯ ಪ್ರೀತ್ಯಾದರವೆಂದು ನಂಬಿ ಇಂದ್ರನಲ್ಲಿ ತನ್ನನ್ನು ಸಂಪೂರ್ಣ ಸಮರ್ಪಿಸಿಕೊಳ್ಳುತ್ತಾಳೆ. ದಿನನಿತ್ಯದ ಸಂಧ್ಯಾವಂದನೆಯನ್ನು ಮುಗಿಸಿಕೊಂಡು ಬಂದ ಗೌತಮನು ತನ್ನ ದಿವ್ಯಜ್ಞಾನದ ಸಹಾಯದಿಂದ ಆಶ್ರಮದಲ್ಲಿ ನಡೆದ ಸಂಗತಿಯನ್ನೆಲ್ಲಾ ತಿಳಿದುಕೊಳ್ಳುತ್ತಾನೆ. ನಂತರ ಕುಪಿತನಾಗಿ ಅಹಲ್ಯೆ-ಇಂದ್ರ ಇಬ್ಬರಿಗೂ ಶಾಪ

---

೨. ಪು. ೬೨, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ. – ಡಾ. ಬರಗೂರು ರಾಮಚಂದ್ರಪ್ಪ.

ನೀಡುತ್ತಾನೆ. ಇಲ್ಲಿ ಇಂದ್ರನಿಗೆ ಶಾಪಕೊಟ್ಟಿದ್ದು ಸರಿ. ಆದರೆ ತಪ್ಪಿತಸ್ಥಳಲ್ಲದಿದ್ದರೂ ಅಹಲ್ಯೆ ಶಾಪಕ್ಕೆ ಗುರಿಯಾಗಿ ಕಲ್ಲಾದುದು ಶೋಚನೀಯವೇ ಸರಿ. ಇಂತಹ ಪತಿವ್ರತೆ ಅಹಲ್ಯೆಗೆ ಮುಂದೆ ಮೋಕ್ಷ ದೊರಕುವುದೂ ಸ್ತ್ರೀಶೋಷಕ ರಾಮನ ಪಾದಸ್ಪರ್ಶದಿಂದಲೇ ಎನ್ನುವುದೊಂದು ವಿಪರ್ಯಾಸ.

ಪಾಂಡವರು-ಕೌರವರ ಜನ್ಮವೃತ್ತಾಂತದ ಹಿನ್ನೆಲೆಯಲ್ಲಿಯೂ ಶೋಷಣೆಗೆ ಒಳಗಾಗುವವರು ಸ್ತ್ರೀಯರೇ. ಶಂತನು ಮಹಾರಾಜನ ಮಕ್ಕಳಾದ ವಿಚಿತ್ರವೀರ್ಯ ಮತ್ತು ಚಿತ್ರಾಂಗದರ ಮರಣಾನಂತರ ಅಂಬಿಕೆ ಮತ್ತು ಅಂಬಾಲಿಕೆ ಅತ್ತೆಯಾದ ಮತ್ಸ್ಯಗಂಧಿಯ ಮಾತಿನಂತೆ ವ್ಯಾಸ (ಮತ್ಸ್ಯಗಂಧಿಯ ಮೊದಲ ಮಗ) ಮಹರ್ಷಿಯನ್ನು ನಿಯೋಗ ಪದ್ಧತಿಯ ಮೂಲಕ ಕೂಡುತ್ತಾರೆ.

ಇದಕ್ಕೆ ಮನಸ್ಸೊಪ್ಪದೆ ಕಣ್ಣು ಮುಚ್ಚಿಕೊಂಡು ವ್ಯಾಸನನ್ನು ಸೇರಿದ ಕಾರಣದಿಂದಾಗಿ ಅಂಬಿಕೆ ಕುರುಡ ಧೃತರಾಷ್ಟ್ರನಿಗೆ ಜನ್ಮ ನೀಡಬೇಕಾಗುತ್ತದೆ. ಹಾಗೆಯೇ ಅಸಹ್ಯದಿಂದ ಬಿಳಿಚಿಕೊಂಡು ವ್ಯಾಸನನ್ನು ಸೇರಿದ ಕಾರಣದಿಂದಾಗಿ ಅಂಬಾಲಿಕೆಗೆ ಬಿಳುಪು ರೋಗಪೀಡಿತನಾದ ಪಾಂಡು ಹುಟ್ಟುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಪುರುಷನ ಇಂತಹ ಹುಟ್ಟಿಗೆ ಸ್ತ್ರೀಯರೇ ಕಾರಣವೆನ್ನುತ್ತವೆ ನಮ್ಮ ಮಹಾಕಾವ್ಯದಲ್ಲಿನ ಚಿತ್ರಣಗಳು. ಪತಿವ್ರತೆಯ ಪರಿಕಲ್ಪನೆಯನ್ನು ಹುಟ್ಟು ಹಾಕಿದ ಸಾಮಾಜಿಕ ಸಂಸ್ಕೃತಿಯ ಪುರುಷ ಸಮಾಜವೇ 'ನಿಯೋಗ ಪದ್ಧತಿ' ಎಂಬ ವ್ಯಭಿಚಾರಕ್ಕೆ ಹೆಣ್ಣನ್ನು ಪ್ರೋತ್ಸಾಹಿಸುವುದರೊಟ್ಟಿಗೆ ಆ ಕ್ರಿಯೆಗೆ ಹೆಣ್ಣನ್ನು ಬಲಿಪಶುವಾಗಿ ಮಾಡಿದೆ.

ಭಾರತೀಯರ ಮನದಾಳದಲ್ಲಿ ಪೂಜ್ಯಸ್ಥಾನದಲ್ಲಿರುವ ಮಹಾಕಾವ್ಯಗಳು ಹೆಣ್ಣನ್ನು ಮಾತ್ರ ಪುರುಷಾಧೀನಳಂತೆ ಕಂಡಿರುವುದು ಶೋಚನೀಯವೆನಿಸುತ್ತದೆ.

ಪರಾಮರ್ಶನ ಗ್ರಂಥಗಳು

೧. ಮಹಿಳಾ ಸಾಹಿತ್ಯ ಸಮೀಕ್ಷೆ – ಡಾ. ಆರ್ಯಾಂಬ ಪಟ್ಟಾಭಿ

೨ ಸ್ತ್ರೀವಾದ ಮತ್ತು ಭಾರತೀಯತೆ – ಧರಣೀ ದೇವಿ ಮಾಲಗತ್ತಿ

೩. ವಿಚಾರ ಸಾಹಿತ್ಯ – ೨೦೦೦ – ಸಂ. ಡಾ. ಜೆ.ಆರ್. ತಿಪ್ಪೇಸ್ವಾಮಿ

೪. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ – ಡಾ. ಬರಗೂರು ರಾಮಚಂದ್ರಪ್ಪ

೫. ಭಾರತೀಯ ಸಾಹಿತ್ಯ ಸಮೀಕ್ಷೆ – ಪ್ರೊ. ಎಲ್.ಎಸ್. ಶೇಷಗಿರಿರಾವ್

೬. ಕನ್ನಡ ಸಾಹಿತ್ಯದಲ್ಲಿ ದ್ರೌಪದಿ – ಡಾ. ಎಸ್.ವಿ. ಪ್ರಭಾವತಿ

೭. ಮಹಿಳಾ ಚಳುವಳಿ – ಡಾ. ಹಾಲತಿ ಸೋಮಶೇಖರ್

❒❒❒

ಬಂಧುವರ್ಮನ ಸತಿಧರ್ಮಸಾರ

– ದೊರೆಸ್ವಾಮಿ

ಬಂಧುವರ್ಮ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ವಿಶಿಷ್ಟ ಕೃತಿಗಳನ್ನು ರಚಿಸಿ ಉತ್ಕೃಷ್ಟ ಕೊಡುಗೆಯನ್ನು ಸಲ್ಲಿಸಿದ್ದಾನೆ. ಅವನು ಜೀವಸಂಬೋಧನಂ, ಹರಿವಂಶಾಭ್ಯುದಯ, ಸತಿಧರ್ಮಸಾರ ಎಂಬ ಮೂರು ಕೃತಿಗಳನ್ನು ರಚಿಸಿದ್ದಾನೆ. ಇವನನ್ನು ಬ್ರಹ್ಮಶಿವ ಕವಿಯು ತನ್ನ ಸಮಯಪರೀಕ್ಷೆ ಎಂಬ ಗ್ರಂಥದಲ್ಲಿ ಗೌರವಾದರದಿಂದ ನೆನೆದುಕೊಂಡಿದ್ದಾನೆ –

ನಯದಿಂದಂ ತಾಯುಂ ತಂ
ದೆಯುಮೊಳ್ಪನೆ ಶಿಕ್ಷಿಪಂತೆ ಮನುಜಾವಳಿಯಂ
ನಯದಿಂ ಸಂಬೋಧಿಸಿ ಮು
ಕ್ತಿಯೊಳೊಂದಿಪಪೆರ್ಮೆ ಬಂಧುವರ್ಮಂಗೆ ನಿಜಂ

ತಾಯಿತಂದೆಯರು ಉಪಾಯದಿಂದ ಮಕ್ಕಳನ್ನು ತಿದ್ದಿತೀಡಿ ತಿಳಿಯಹೇಳುವಂತೆ ಮಾನವರನ್ನು ದೇವತ್ವಕ್ಕೆ ಏರಿಸುವಂತಹ ಸರಿಮಾರ್ಗ ತೋರಲು ಬಂಧುವರ್ಮನು ತನ್ನ ಕೃತಿಗಳ ಮೂಲಕ ಪ್ರಯತ್ನಿಸಿದ್ದಾನೆ ಎಂದು ಮೇಲಿನ ಬ್ರಹ್ಮಕವಿಯ ಉಕ್ತಿಯಿಂದ ತಿಳಿದುಬರುತ್ತದೆ.

ಬಂಧುವರ್ಮನು ಸುಮಾರು ಕ್ರಿ.ಶ. ೧೧ ರಿಂದ ೧೨ನೇ ಶತಮಾನದ ಅವಧಿಯಲ್ಲಿ ಬದುಕಿದ್ದನೆಂದು ಶ್ರೀ ಬಿ.ಎಸ್. ಸಣ್ಣಯ್ಯನವರು ತಿಳಿಸಿದ್ದಾರೆ.[೧] ಆದರೆ ಇತ್ತೀಚಿನ ಸಂಶೋಧನೆಯ ಫಲವಾಗಿ ಬಂಧುವರ್ಮನು ೧೦೫೦–೧೧೫೦ ರ ಅವಧಿಯಲ್ಲಿ ಬದುಕಿದ್ದನೆಂದು ತಿಳಿದುಬರುತ್ತದೆ. ಈ ವಿಚಾರವನ್ನು ಡಾ. ಸಿದ್ಧಾರ್ಥ ಅವರು ತಮ್ಮ ಸಂಶೋಧನಾ ಪ್ರಬಂಧ "ಬಂಧುವರ್ಮನ ಜೀವಸಂಬೋಧನಂ – ಒಂದು ಅಧ್ಯಯನ" ದಲ್ಲಿ ತಿಳಿಸಿದ್ದಾರೆ.[೨]

೧. ಹರಿವಂಶಾಭ್ಯುದಯ – ಸಂ. ಬಿ.ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೪.

೨. ಬಂಧುವರ್ಮನ ಜೀವಸಂಬೋಧನಂ – ಒಂದು ಅಧ್ಯಯನ : ಡಾ. ಸಿದ್ಧಾರ್ಥ, ಅಪ್ರಕಟಿತ ಸಂಶೋಧನಾ ಪ್ರಬಂಧ.

ಜೀವಸಂಬೋಧನಂ ಕೃತಿಯು ಜೈನಶ್ರಾವಕ ಮತ್ತು ಸಕಲ ಪರಿಗ್ರಹ ತ್ಯಾಗಿಯಾದ ಮುನಿಗಳನ್ನು ಕುರಿತು ಬರೆದಿರುವಂತಹ ಕೃತಿಯಾಗಿದೆ. ಅದರಲ್ಲಿ ಶ್ರಾವಕರ ಆಚಾರ ವಿಧಿಗಳು ವಿವರಿಸ್ಪಟ್ಟಿದ್ದಲ್ಲದೆ ಮುನಿಗಳಿಗೆ ಸಂಬಂಧಿಸಿದ ಧ್ಯಾನವಿಚಾರಕ್ಕೆ ಪೂರಕವಾದ ೧೨ ಅನುಪ್ರೇಕ್ಷೆಗಳನ್ನು ವಿವರಿಸಲಾಗಿದೆ.[೩] ಮತ್ತೊಂದು ಕೃತಿಯಾದ ಹರಿವಂಶಾಭ್ಯುದಯವು ಜೈನಭಾರತ ಸೇರಿದಂತೆ ಶ್ರೀಕೃಷ್ಣನ ಸೋದರನಾದ ೨೨ನೇ ತೀರ್ಥಂಕರ ಶ್ರೀ ನೇಮಿನಾಥರ ಜೀವನ ವಿವರಣೆಗಳನ್ನು ಒಳಗೊಂಡಿದೆ. ಒಟ್ಟಿನಲ್ಲಿ ಈ ಕೃತಿ ಒಂದೆಡೆ ಜೈನರಿಗೆ ಪೌರಾಣಿಕ ಕೃತಿಯಾಗಿ ಕಂಡುಬಂದರೆ ಮತ್ತೊಂದೆಡೆ ಲೌಕಿಕರಿಗೆ ಭಾರತದಂತೆ (ಮಹಾಭಾರತ) ಕಂಡುಬರುತ್ತದೆ.[೪]

ಮೂರನೆಯ ಕೃತಿಯಾದ ಸತಿಧರ್ಮಸಾರವು ನಿರ್ದಿಷ್ಟವಾಗಿ ಜೈನ ಧರ್ಮಾನುಸಾರಿಗಳಾದ ಮಹಿಳೆಯರನ್ನೇ ಉದ್ದೇಶವಾಗಿಟ್ಟುಕೊಂಡು ಬರೆದಿರುವಂತಹ ಕೃತಿಯಾಗಿದೆ.

ಪೃಥಿವಿಯೊಳು ಜೈನರೆನಿಸುವ
ಸತಿಯರಗಿದನಲ್ಪದಿಂದ ಧರ್ಮಾಧರ್ಮ
ಸ್ಥಿತಿಯಂ ಜಿನಪತಿನುಡಿಯಂ
ಹಿತವಹ ಸತಿಧರ್ಮಸಾರವಂ ವಿರಚಿಸುವೆಂ

ಮೇಲಿನ ಪದ್ಯದಲ್ಲಿ – ಲೋಕದಲ್ಲಿ ಜೈನರು ಎನಿಸುವ "ಸತಿ"ಯರಿಗೆ ಧರ್ಮ ಅಧರ್ಮ ಸ್ಥಿತಿಯನ್ನು ಮತ್ತು ಆತ್ಮಹಿತವನ್ನು ಉಂಟುಮಾಡುವಂತಹ ಜಿನೇಂದ್ರನ ನುಡಿಯಂತೆ ಸತಿಧರ್ಮಸಾರ ಎಂಬ ಕೃತಿಯನ್ನು ರಚಿಸುತ್ತೇನೆ ಎಂದು ಇದೇ ಕೃತಿಯ ಎಂಟನೇ ಪದ್ಯದಲ್ಲಿ ಹೇಳಿಕೊಂಡಿದ್ದಾನೆ.

ಸತಿಧರ್ಮಸಾರದಲ್ಲಿ ಒಟ್ಟು ೧೯೦ ಪದ್ಯಗಳಿವೆ. ಸುಲಲಿತವಾದ ಪದ್ಯಶೈಲಿಯಲ್ಲಿ ಕೃತಿಯನ್ನು ಬರೆದಿದ್ದಾನೆ. ಕೃತಿಯ ಪ್ರಾರಂಭದ ಏಳು ಪದ್ಯಗಳಲ್ಲಿ ಪೂರ್ವದ ಜೈನಕವಿಗಳ ಪರಂಪರೆಯಂತೆಯೇ ಬಂಧವರ್ಮನು ಪಂಚಗುರುಸ್ತುತಿಯನ್ನು ಮತ್ತು ಸರಸ್ವತಿಯನ್ನು ವಂದಿಸಿ ಪ್ರಾರ್ಥಿಸಿದ್ದಾನೆ. ಅನಂತರ ೮ನೆಯ ಪದ್ಯದಲ್ಲಿ ಸತಿಧರ್ಮಸಾರ ಎಂಬ ಕೃತಿಯನ್ನು ರಚಿಸುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿದ್ದಾನೆ.

ಅನಂತರ ೯ನೇ ಪದ್ಯದಲ್ಲಿ ಕೃತಿಯ ವಸ್ತು ಮತ್ತು ಉದ್ದೇಶವನ್ನು ಹೇಳುತ್ತಾನೆ.

---

೩. ಎನಿತನುಪ್ರೇಕ್ಷೆಯವಲ್ಲಮ
ನನುವಾಗಿಯೇ ಪೇಳ್ದಿ ಬಂಧುವರ್ಮಕವೀಂದ್ರಂ ।
ಮನವೊಲಿದು ಕೇಳ್ವುದೆಲ್ಲರು
ಘನಸಾರ ಸುಬೋಧೆ ಜೀವಸಂಬೋಧನೆಯಂ ॥

೪. ಹರಿವಂಶಾಭ್ಯುದಯಂ – ಸಂ. ಬಿ.ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೪.

ದೇವರು ಶಾಸ್ತ್ರಂ ಗುರುಗಳ
ಭಾವವನತಿಕಿರಿದೆ ವ್ರತಚರಿತ್ರವ ಕಿರಿದಂ
ಸಾವದ್ಯರಹಿತ ಕಿರಿದಂ
ಶ್ರಾವಕ ವಧುಗಳಿಗೆ ಅರಿದವರಿಗೆ ಪೇಳ್ವೆಂ

ಈ ಪದ್ಯದಲ್ಲಿ ಕವಿಯು ಶ್ರಾವಕ ವಧುಗಳನ್ನು ಉದ್ದೇಶಿಸಿ ಜೈನಪರಿಭಾಷೆಯಲ್ಲಿ ದೇವರು ಎಂದರೆ ಯಾರು, ಶಾಸ್ತ್ರ ಎಂಬುದು ಯಾವುದು, ಗುರುಗಳು ಎಂಬುವರು ಯಾರು, ಜೈನನಾದವನು ಯಾವ ವ್ರತಗಳನ್ನು ಪಾಲಿಸಬೇಕು, ಜೈನಶ್ರಾವಕರ ವ್ರತಗಳು ಯಾವುವು ಎಂಬಿತ್ಯಾದಿಯಾದ ವಿಷಯಗಳನ್ನು ಸ್ವಲ್ಪದರಲ್ಲಿ ತಿಳಿಸುತ್ತೇನೆ ಎಂದು ಪ್ರಾರಂಭಿಸುತ್ತಾನೆ. ಅನಂತರದ ಮೂರು ಪದ್ಯಗಳಲ್ಲಿ (೧೦, ೧೧, ೧೨) ಮೇಲೆ ಹೇಳಿರುವ ಜೈನಗೃಹಸ್ಥರಾದವರು ಎಂತಹ ದೇವರನ್ನು ಆರಾಧಿಸಬೇಕು, ಅವನ ಸ್ವರೂಪ ಏನು, ಜಿನಶಾಸ್ತ್ರ ಯಾವುದು, ಗುರುಗಳು ಯಾರು, ಅವರ ಸ್ವರೂಪ ಏನು ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಜೈನಶ್ರಾವಕಾಚಾರಗಳಲ್ಲಿ ಸಮ್ಯಕ್‌ದರ್ಶನ ಎಂಬ ಮೋಕ್ಷಮಾರ್ಗದ ಮೊದಲ ಹಂತವನ್ನು ಹೇಳಲಾಗಿದೆ. ಅದು ಜೈನಧರ್ಮದ ಮೂಲಬೀಜ ಇದ್ದಂತೆ. ಆ ಬೀಜರೂಪದ ಆಸಕ್ತಿ, ಶ್ರದ್ಧೆ ಅಥವಾ ನಂಬಿಕೆ ಎಂಬುದು ಗಾಢವಾದಾಗ ಯಾವುದೇ ವ್ಯಕ್ತಿಯು ಧರ್ಮದಲ್ಲಿ ಸ್ಥಿರನಾಗುತ್ತಾನೆ ಎಂಬ ಕಾರಣದಿಂದ ಇಲ್ಲಿ ಯಥಾರ್ಥ ದೇವಗುರು ಶಾಸ್ತ್ರಗಳ ಪ್ರಸ್ತಾವನೆಯನ್ನು ಮೊದಲಿಗೆ ಮಾಡಲಾಗಿದೆ. ೧೮ ದೋಷರಹಿತನು ಅನಂತಗುಣಗಳಿಗೆ ಆಶ್ರಯನು, ಕಾಮವನ್ನು ಕೆಡಿಸಿದವನು, ಕಳಂಕರಹಿತನು, ಸಕಲಜೀವಹಿತ ಚಿಂತಕನು, ಕರ್ಮಗಳೆಲ್ಲವನ್ನು ನಷ್ಟಗೊಳಿಸಿರುವವನು ಆದ ವ್ಯಕ್ತಿಯೇ ದೇವನು. ಅಂತಹವನ ವಚನವೇ ಶಾಸ್ತ್ರ. ಏಕೆಂದರೆ ಅದು ಪೂರ್ವಾಪರ ವಿರೋಧವಲ್ಲದ್ದು. ಇದನ್ನು ಬಿಟ್ಟು ಬೇರೆ ಯಾವುದೂ ಶಾಸ್ತ್ರವಲ್ಲ ಎಂದು ಶಾಸ್ತ್ರದ ಸ್ವರೂಪವನ್ನು ಹೇಳಿದ್ದಾನೆ. ಇಂದ್ರಿಯವಿಷಯುಗಳಿಗೆ ಸಿಲುಕದ ೨೪ ಪರಿಗ್ರಹಗಳಿಲ್ಲದವನು ಸುಜ್ಞಾನಿಯಾದವನು, ಶೀಲಗುಣವುಳ್ಳವನು, ಹಿಂಸಾಕ್ರಿಯೆಗಳಲ್ಲಿ ತೊಡಗದವನು ಯಥಾರ್ಥ ಗುರುವಾಗಿದ್ದಾನೆ.

ಮೇಲೆ ಹೇಳಿದ ಸಮ್ಯಕ್‌ದರ್ಶನಕ್ಕೆ ದೃಢತೆಯನ್ನುಂಟುಮಾಡಲು ಪೂರಕವಾದ ೮ ಅಂಗಗಳನ್ನು ಅನಂತರದಲ್ಲಿ ಹೇಳಲಾಗಿದೆ :

೧. ನಿಶ್ಶಂಕಾ ೨. ನಿಃಕ್ಷಾಂಕ್ಷಾ ೩. ನಿರ್ವಿಚಿಕಿತ್ಸಾ ೪. ಅಮೂಢ ದೃಷ್ಟಿ ೫. ಉಪಗೂಹನ ೬. ಸ್ಥಿತೀಕರಣ ೭. ವಾತ್ಸಲ್ಯ ೮. ಧರ್ಮಪ್ರಭಾವನ.

ಈ ಕುರಿತಾಗಿ ೧೩ ನೆಯ ಪದ್ಯದಿಂದ ೨೦ನೆಯ ಪದ್ಯದವರಗೆ ವಿವರಣೆಯನ್ನು ನೀಡಲಾಗಿದೆ. ನಿಶ್ಶಂಕಾ ಎಂದರೆ ಜಿನಶಾಸ್ತ್ರಗಳನ್ನು ಬೋಧಿಸುವ ವಿಶಾಲವಾದ ಧರ್ಮಾಧರ್ಮಗಳನ್ನು ನಿತ್ಯವೂ ಕೇಳಿಸಿಕೊಂಡು ಅವುಗಳ ಬಗೆಗೆ ಸಂದೇಹಪಡದೆ ಇರುವುದು.

ನಿಃಕಾಂಕ್ಷಾ ಎಂದರೆ ಸಪ್ತಧಾತುಗಳಿಂದ ಕೂಡಿದ ಕ್ಲೇಶ ಮತ್ತು ದುಃಖ ಉಂಟುಮಾಡುವ, ಕರ್ಮದಿಂದ ಕೂಡಿರುವ ಈ ಶರೀರದ ಬಗೆಗೆ ಅತಿ ಪ್ರೀತಿ ಇಟ್ಟುಕೊಳ್ಳದಿರುವುದು. ಗುರುಗಳು ಆರ್ಯಿಕೆಯರು ಇತರರ ಶರೀರದಲ್ಲಿ ಹುಟ್ಟುವ ರೋಗಾದಿಗಳ ಬಗೆಗೆ ಅಸಹ್ಯಪಡದೆ ಅದನ್ನು ಪರಿಹರಿಸಲು ಸಹಕರಿಸುವುದು ನಿರ್ವಿಚಿಕಿತ್ಸಾ ಎಂಬ ೩ನೆಯ ಅಂಗವಾಗಿದೆ. ತ್ರಿಕರಣಗಳಿಂದ ವೀತರಾಗ ಜಿನನನ್ನು ಉಳಿದು ಬೇರೆ ಯಾವ ದೈವವನ್ನೂ ನೆನೆಯಬಾರದು, ಪೂಜಿಸಬಾರದು ಎಂಬುದು ೪ನೇ ಅಂಗ. ಚಾತುರ್ವರ್ಣಗಳಲ್ಲಿ ಯಾರೊಬ್ಬರ ಮಾತಿನಲ್ಲಾಗಲಿ ಇರುವ ಕುಂದುಕೊರತೆಯನ್ನು ಯಾರೊಡನೆಯೂ ಪ್ರಚಾರ ಮಾಡದೆ ಗೌಪ್ಯವಾಗಿ ಇಡುವುದಕ್ಕೆ ಉಪಗೂಹನ ಎಂದು ಹೆಸರು. ಜಿನಧರ್ಮವನ್ನು ಬಿಡುವವರನ್ನು ಅಕ್ಕರೆಯಿಂದ ತಿಳಿಯಹೇಳಿ ಧರ್ಮದಲ್ಲಿ ಪುನಃ ನೆಲೆಗೊಳಿಸುವುದೇ ೬ನೇ ಅಂಗವಾದ ಸ್ಥಿತೀಕರಣವಾಗಿದೆ. ಪ್ರೀತಿ ಮತ್ತು ವಿನಯದಿಂದ ನಾಲ್ಕು ವರ್ಣಗಳಲ್ಲಿ ಆಯಾ ಜಾತಿಯವರಿಗೆ ಸಹಾಯವನ್ನು ಒದಗಿಸುವಿಕೆಯು ವಾತ್ಸಲ್ಯ ಎಂಬ ಅಂಗವಾಗಿದೆ (೧೯ನೇ ಪದ್ಯ). ಪೂಜ್ಯ ಜಿನದೇವಾಲಯಗಳಲ್ಲಿ ಜಿನಪೂಜೆಮಾಡುವುದು, ಆಗಮಗಳನ್ನು ನಿತ್ಯ ಪ್ರಕಟಮಾಡುವುದು ೮ನೆಯ ಅಂಗವಾದ ಧರ್ಮಪ್ರಭಾವನ ಎಂಬ ಅಂಗವಾಗಿದೆ.

ಇದರ ನಂತರದಲ್ಲಿ ಬಂಧುವರ್ಮನು ಅಹಿಂಸೆ, ಸತ್ಯ, ಅಚೌರ್ಯ, ಸ್ವಪುರುಷ ಸಂತೋಷ, ಪರಿಗ್ರಹ ಪರಿಮಾಣ ಎಂಬ ಐದು ಅಣುವ್ರತಗಳ ವಿವರಣೆಯನ್ನು ಮಾಡುತ್ತಾನೆ. ಅಹಿಂಸಾಣುವ್ರತಕ್ಕೆ ಒಂದೊಂದು ವಾಕ್ಯದಲ್ಲಿ ದೃಷ್ಟಾಂತಗಳನ್ನು ಹೇಳುತ್ತಾನೆ. ಅಲ್ಲಿ ಹಿಟ್ಟಿನ ಕೋಳಿಯನ್ನು ಕತ್ತರಿಸಿದ ಮಾತ್ರಕ್ಕೆ ಅದರ ಪಾಪದ ಫಲವಾಗಿ ರಾಜ ಯಶೋಧರ ಏಳು ಜನ್ಮಗಳಲ್ಲಿ ದುರ್ಗತಿ, ದುರ್ಮರಣಗಳನ್ನು ಪಡೆಯುವಂತಾಯಿತು. ಬೆಸ್ತನೊಬ್ಬನಿಗೆ ಸಿಗುವ ಮೊದಲನೆಯ ಮೀನೊಂದನ್ನು ಕೊಲ್ಲುವುದಿಲ್ಲ ಎಂದು ಗುರುಗಳಲ್ಲಿ ವ್ರತಕೈಗೊಂಡಿದ್ದರ ಫಲವಾಗಿ ರಾಜನಾದನು ಮತ್ತು ದೇವಲೋಕದ ದೇವನಾದನು ಎಂದು ದೃಷ್ಟಾಂತಗಳನ್ನು ಹೇಳಿದ್ದಾನೆ (೨೧ ನೇ ಪದ್ಯದಿಂದ ೨೮ನೇ ಪದ್ಯದವರೆಗೆ). ಇದಾದನಂತರ

೧. ದಿಗ್ವ್ರತ ೨. ಅನರ್ಥದಂಡ ವ್ರತ ೩. ಭೋಗೋಪಭೋಗಪರಿಮಾಣವ್ರತ
೪. ದೇಶಾವಕಾಶಿಕ ವ್ರತ ೫. ಸಾಮಯಿಕ ವ್ರತ ೬. ಪ್ರೋಷಧೋಪವಾಸವ್ರತ
೭. ಅತಿಥಿ ಸಂವಿಭಾಗವ್ರತಗಳನ್ನು ವರ್ಣಿಸಲಾಗಿದೆ.

ಈ ವ್ರತಗಳಲ್ಲಿ ಮೊದಲ ೩ ವ್ರತಗಳು ಗುಣವ್ರತಗಳು ಆಗಿವೆ. ಇವುಗಳು ಅಹಿಂಸಾದಿ ಐದು ಅಣುವ್ರತಗಳ ಆಚರಣೆಯನ್ನು ಹೆಚ್ಚು ವೃದ್ಧಿಪಡಿಸುತ್ತವೆ. ಆದುದರಿಂದ ಈ ವ್ರತಕ್ಕೆ ಗುಣವ್ರತ ಎಂದು ಹೆಸರಿಸಲಾಗಿದೆ. ಉಳಿದ ನಾಲ್ಕನ್ನು ಶಿಕ್ಷಾವ್ರತವೆಂದು ಹೇಳಲಾಗಿದೆ. ಏಕೆಂದರೆ ಅವು ಅಹಿಂಸಾವ್ರತದ ಮೂಲಕ ಸಮಾಜದಲ್ಲಿ ಧರ್ಮಯುಕ್ತ ಜೀವನ ನಡೆಸುವಂತಹ ಶಿಕ್ಷಣವನ್ನು ನೀಡಿ ಅಹಿಂಸಾ ಮಾರ್ಗದಲ್ಲಿ ಶ್ರಾವಕನು ನಡೆಯುವಂತೆ ಪ್ರೇರೇಪಿಸುತ್ತವೆ. ಇದೇ ಸಂದರ್ಭದಲ್ಲಿ ದೇವಗುರು

ಶಾಸ್ತ್ರಗಳಲ್ಲಿ ಮೂಢತ್ವವನ್ನು ಬೆಳೆಸಬಾರದು ಎಂಬುದಾಗಿಯೂ ಐದು ಪದ್ಯಗಳಲ್ಲಿ ವಿವರಿಸಿದ್ದಾನೆ. ಇದರ ತರುವಾಯ ಜೈನಶ್ರಾವಕಿ ಆದವಳು ನೀರು ಮತ್ತು ಹಾಲು ಇವುಗಳ ಬಳಕೆ ಮತ್ತು ಶುದ್ಧತೆಯನ್ನು ಕಾಪಾಡುವ ವಿಧಾನವನ್ನು ಬಂಧುವರ್ಮನು ತಿಳಿಸುತ್ತಾನೆ. ಜೈನಶ್ರಾವಕರು ಶೋಧಿಸದಿರುವ ನೀರನ್ನು ಉಪಯೋಗಿಸುವಂತಿಲ್ಲ. ಶೋಧಿಸದ ನೀರಿನಲ್ಲಿ ಮುಹೂರ್ತದೊಳಗೆ ತ್ರಸಕಾಯಜೀವಸಮೂಹ ಉತ್ಪತ್ತಿಯಾಗುತ್ತದೆ. ಆದುದರಿಂದ ಆ ಜೀವಗಳ ರಕ್ಷಣೆಗಾಗಿ ನೀರನ್ನು ಶೋಧಿಸಬೇಕು; ಜೀವದಯೆಯನ್ನು ಪಾಲಿಸಬೇಕು ಎಂದು ಹೇಳಲಾಗಿದೆ.

ಜೈನಶ್ರಾವಕಿಯನ್ನು ಕುರಿತಾಗಿ ಕವಿ ಬಂಧುವರ್ಮ ಬಹಳ ಅಕ್ಕರೆಯಿಂದ ಆಚಾರದ ನಿಯಮವನ್ನು ಹಿತೋಪದೇಶ ರೂಪದಲ್ಲಿ ಉಪದೇಶಿಸುತ್ತಾನೆ. ಅಲ್ಲಿ ಬರುವ ಪ್ರಮುಖ ಅಂಶಗಳೆಂದರೆ ನೀರು, ಹಾಲು, ಭತ್ತ, ಒರಳು, ಒನಕೆ, ಗೋಧಿ, ಬೀಸುವಕಲ್ಲು, ದ್ವಿದಳ ಧಾನ್ಯ, ಎಳ್ಳೆಣ್ಣೆ, ತಿನಿಸುಗಳು, ಚಿಬ್ಬಲು, ಅನ್ನ, ಪಾಯಸಾದಿ ಭಕ್ಷ್ಯ ಇತ್ಯಾದಿ ಪದಾರ್ಥಗಳ ಸ್ವಚ್ಛತೆ, ಶುದ್ಧತೆ. ಇದನ್ನು ಅನುಸರಿಸುವ ವಿಧಾನವನ್ನು, ಜೈನಧರ್ಮದ ಆಚಾರಪದ್ಧತಿಯ ಹಿನ್ನೆಲೆಯಲ್ಲಿ ಬಹಳ ಸೂಕ್ಷ್ಮವಾಗಿ ಹೇಳಲಾಗಿದೆ. ಮೇಲೋಗರ, ಅಡಿಗೆಗೆ ಉಪಯೋಗಿಸುವ ಪಾತ್ರೆಗಳು, ತಳಿಗೆ, ತಂಬಿಗೆ, ಮಡಿಕೆ, ಕೈಬಟ್ಟಲು, ಬೆರಣಿ, ದೀವಿಗೆ, ಹೆಂಚು, ಕಾವಲಿ, ಮುಟ್ಟು, ಪಡಗ, ಹಣ್ಣು ತರಕಾರಿ, ಉಪ್ಪಿನಕಾಯಿ, ಇಂಗು ಇತ್ಯಾದಿ ವಸ್ತುಗಳನ್ನು ಬಳಕೆ ಮಾಡುವಿಕೆಯ ವಿಧಾನ, ಅವುಗಳ ಶುದ್ಧತೆಯನ್ನು ಕಾಪಾಡಿಕೊಳ್ಳುವಲ್ಲಿ ಜೈನಶ್ರಾವಕಿಯಾದವಳು ತನ್ನಿಂದಲೂ ಹಾಗೂ ಪರರಿಂದಲೂ ಜೀವವಧೆ ಆಗದಂತೆ ನೋಡಿಕೊಳ್ಳಲು ಕವಿಯು ಜೈನಶ್ರಾವಕರಿಗೆ ನಯದ ಉಪದೇಶವನ್ನು ನೀಡಿದ್ದಾನೆ.[೫]

ಈ ಮಧ್ಯೆ ನಾಲ್ಕು ಪ್ರಕಾರದ ದಾನಗಳಾದ ಆಹಾರದಾನ, ಔಷಧದಾನ, ಅಭಯದಾನ ಮತ್ತು ಶಾಸ್ತ್ರದಾನಗಳನ್ನು ವಿವರಿಸಲಾಗಿದ್ದು ಮುನಿಗಳಿಗೆ ನೀಡುವಂತಹ ಪರಿಶುದ್ಧ ಭಕ್ತಿಯಿಂದ ಕೂಡಿದ ಆಹಾರದಾನ ಶ್ರೇಷ್ಠವಾದದ್ದೆಂದೂ, ದಾನ ಕೊಡುವಾಗ ಸಪ್ತಗುಣಸಹಿತರಾಗಿ ಸಂತೋಷಸಹಿತರಾಗಿ, ದುರ್ವಚನ ಇಲ್ಲದವರಾಗಿ, ವಿನಯವಂತರಾಗಿ, ಅವರನ್ನು ಬರಮಾಡಿಕೊಂಡು ಭಕ್ತಿ ವಿನಯ ಗೌರವಗಳಿಂದ ಆಹಾರದಾನ ಮಾಡಬೇಕೆಂದೂ ಬಂಧುವರ್ಮಕವಿ ಹೇಳುತ್ತಾನೆ. ಶ್ರಾವಕರು ಮತ್ತು ಮುನಿಗಳಿಗೆ ಎದುರಾಗುವ ಆಪತ್ತು ವಿಪತ್ತುಗಳನ್ನು ನಿವಾರಿಸಿ ಅಭಯವನ್ನು ನೀಡಬೇಕು. ರೋಗರುಜಿನಗಳು ಬಾಧಿಸಿದಾಗ ಅಂತಹ ಪೀಡೆಗೊಳಗಾದ ಶ್ರಾವಕ, ಶ್ರಾವಕಿ, ಆರ್ಯಿಕಾ ಮತ್ತು ಮುನಿವರ್ಗವೆಂಬ ಚಾತುರ್ವರ್ಣಕ್ಕೆ ಆರೋಗ್ಯ ಔಷಧೋಪಚಾರಗಳನ್ನು ಮಾಡಬೇಕು. ಹಾಗೆಯೇ ಶಾಸ್ತ್ರದಾನವು ಜ್ಞಾನವನ್ನು ಹೆಚ್ಚಿಸುವ ದಾನ; ಅತಿಸುಖವೆಂಬ ಸ್ವರ್ಗ ಮೋಕ್ಷ ಪದಗಳನ್ನು ದೊರಕಿಸಿಕೊಡುವುದು.

---

೫. ಸತಿಧರ್ಮಸಾರ : ಸಂಪಾದಕ ಮತ್ತು ಅನುವಾದಕ ಶ್ರೀ ಬಿ.ಎಸ್. ಸಣ್ಣಯ್ಯ, ಕನಕಗಿರಿ ಪ್ರಕಾಶನ, ಪದ್ಯ ಸಂಖ್ಯೆ ೪೩ ರಿಂದ ೧೬೩, ಪುಟಸಂಖ್ಯೆ ೧೨ ರಿಂದ ೪೪.

ಆದುದರಿಂದ ಶಾಸ್ತ್ರದಾನವು ಅತ್ಯುತ್ತಮವಾದುದು. ಗುರುಗಳಿಂದ ಧರ್ಮಾಧರ್ಮಸ್ವರೂಪವನ್ನು ಕೇಳಿ ತಿಳಿದುಕೊಳ್ಳಬೇಕು ಹಬ್ಬಹರಿದಿನಗಳಲ್ಲೂ ಜಿನಮಂದಿರಕ್ಕೆ ಹೋಗಿ ವಂದಿಸದಿದ್ದರೆ ಕಾಡುಬೆಟ್ಟಗಳಲ್ಲಿನ ಮೃಗಗಳ ಪಾಡಿನಂತಾಗುತ್ತದೆ. ಕೃತಾರ್ಥವಾದ ಬದುಕು ಇಹಪರಗಳಲ್ಲಿ ಸಫಲತೆ ಉಂಟುಮಾಡುತ್ತದೆ. ಸತಿಯಾದವಳು ಯಾವಾಗಲೂ ಜಿನಪೂಜೆ, ಧರ್ಮಕಾರ್ಯಗಳಲ್ಲಿ ತೊಡಗಿರಬೇಕು. ಲೋಕದಲ್ಲಿ ಇಂದ್ರನಿಂದ ಪೂಜಿತನಾದ ಜಿನನು ಇರಲು, ಹೆಚ್ಚು ಅಜ್ಞಾನಿಯಾದ ಕೀಳುದೈವವನ್ನು ಅನುಸರಿಸುವುದು, ಪೂಜಿಸುವುದು ಸರಿಯೇ? ಕುದೈವಗಳು ಪುಣ್ಯವನ್ನು ಪಾಪವಾಗಿ ಮಾಡಲಾರವು. ಹಾಗೆಯೇ ಪಾಪವನ್ನು ಪುಣ್ಯವಾಗಿಸಲಾರವು. ಜಿನರ ಉಪದೇಶವನ್ನು ಅನುಸರಿಸಿದರೆ ಮೂರು ಲೋಕಗಳಲ್ಲಿ ಸುಖ, ರೂಪ, ಕುಲ, ಸಂಪತ್ತುಗಳಿಂದ ಕೂಡಿದವರಾಗುತ್ತಾರೆ ಮತ್ತು ಅನಂತ ಸುಖದ ಸ್ಥಾನವನ್ನು, ಮೋಕ್ಷವನ್ನು ಪಡೆಯುತ್ತಾರೆ. ನೀರಿನಲ್ಲಿ ಹಾಲನ್ನು ಬೆರೆಸಿದರೆ ಹಂಸವು ನೀರನ್ನು ಬಿಟ್ಟು ಹಾಲನ್ನು ಮಾತ್ರ ಕುಡಿಯುತ್ತದೆ. ಹಾಗೆಯೇ ಜಾಣರಾದವರು ಜಿನನನ್ನು ಪ್ರೀತಿಸುವರು.

ಹೀಗೆ ಬಂಧುವರ್ಮನು ದಾನ ಮತ್ತು ಧರ್ಮಗಳಲ್ಲಿನ ಹಿರಿಮೆಯನ್ನು ಸಾರುತ್ತ ಜೈನಶ್ರಾವಕಿಯರನ್ನು ನಯದಿಂದ ಎಚ್ಚರಿಸುತ್ತಾನೆ.[೬] ಈ ಮಾತುಗಳನ್ನೆಲ್ಲ ಹೇಳಿದ ನಂತರ ಮುಂದೆ ಬಂಧುವರ್ಮನು ಅನುಪ್ರೇಕ್ಷೆಗಳನ್ನು ಜೈನಶ್ರಾವಕಿಯರಿಗೆ ಹೇಳುತ್ತಾನೆ.

ಮೊದಲನೆಯದಾಗಿ, ಅನಿತ್ಯ ಅಥವಾ ಅಧ್ರುವ ಅನುಪ್ರೇಕ್ಷೆಯ ಸಲುವಾಗಿ ದೃಷ್ಟಾಂತ ರೂಪದಲ್ಲಿ ಸಗರ ಚಕ್ರವರ್ತಿಯ ಬಾಳನ್ನು ಉದಾಹರಿಸುತ್ತಾನೆ. ಆ ಚಕ್ರವರ್ತಿಯ ಶರೀರ, ಸಂಪತ್ತು, ಭೋಗಗಳು ಕೂಡ ಶಾಶ್ವತವಲ್ಲ, ಬೇಗ ನಾಶವಾಗುತ್ತವೆ. ಸತ್ಯವಂತ ದೇವತೆ ಕಾಪಾಡಲಾರಳು. ಭದ್ರವಾದ ಕೋಟೆ, ಆನೆ ಕುದುರೆಗಳು, ಹೆತ್ತವರು, ಬಂಧುಗಳು ಕೂಡ ಉಗ್ರ ಯಮನ ಕೋಪವನ್ನು ಎದುರಿಸಲಾರರು ಎಂದು ಅಶರಣ ಅನುಪ್ರೇಕ್ಷೆಯನ್ನು ಕವಿ ಹೇಳಿದ್ದಾನೆ. ಭೂಮಿಯಲ್ಲಿ ಶರೀರ, ಧನ, ಮನೆ, ಬಂಧುವರ್ಗ ಮಕ್ಕಳು ಯಾರೂ ನಿನಗೆ ಸಹಾಯಕರಲ್ಲ. ಯೋಚನೆ ಮಾಡಿದರೆ ಅವೆಲ್ಲವೂ ಅನ್ಯ, ಪರವಸ್ತು. ಇದು ಅನ್ಯತತ್ವ ಅನುಪ್ರೇಕ್ಷೆ. ಹುಟ್ಟುವಾಗ, ಬೆಳೆಯುವಾಗ ನೋವು ರೋಗಗಳನ್ನು ಅನುಭವಿಸುವಲ್ಲಿ ನೀನು ಒಬ್ಬಳೇ ಆಗಿರುವೆ ಎಂಬುದನ್ನು ತಿಳಿ; ಇದು ಏಕತ್ವ ಅನುಪ್ರೇಕ್ಷೆ. ಕೆಳಗೆ ನರಕ, ಮೇಲೆ ಆಕಾಶ, ನಡುವೆ ಮಾನವರು ಲೋಕದ ತುದಿಯಲ್ಲಿ ಮೋಕ್ಷ, ಕೆಳಗೆ ಸ್ವರ್ಗ. ಆದರೆ ಬಹಳ ಸುಖ ಎನಿಸುವ ಮೋಕ್ಷವನ್ನು ಪಡೆಯುವವನೇ ದೇವರು (ಲೋಕಾನುಪ್ರೇಕ್ಷೆ). ೯ ರಂಧ್ರದಿಂದ ನಿರಂತರ ಸುರಿಯುವ ದುರ್ಗಂಧದ ೭ ಧಾತುಗಳ ಶರೀರವನ್ನು ತಿಳಿದುಕೊಂಡು ನೋಡಿದ್ದೇ

೬. ಸತೀಧರ್ಮಸಾರ : ಸಂಪಾದಕ : ಶ್ರೀ ಬಿ.ಎಸ್. ಸಣ್ಣಯ್ಯ, ಕನಕಗಿರಿ ಪ್ರಕಾಶನ, ೧೯೯೮, ಪದ್ಯ ಸಂಖ್ಯೆ ೧೬೩–೧೭೭.

ಆದಲ್ಲಿ ಅದು ದುಃಖದ ಗಣಿ. ಆದ್ದರಿಂದ ಸುವ್ರತಗಳನ್ನು ಕೈಗೊಂಡರೆ ಭವನಾಶವಾಗುತ್ತದೆ (ಅಶುಚಿತ್ವ ಅನುಪ್ರೇಕ್ಷೆ). ಪರಿಗ್ರಹದ ಆಸೆಯಿಂದ ಜೀವಕರ್ಮರಜವನ್ನು ಹೆಚ್ಚಾಗಿ ಹೊಂದುತ್ತದೆ. ಅದು ಹೇಯ, ಅದನ್ನು ದೂರಮಾಡದ ಭಾವ ಕೆಟ್ಟದ್ದು ಎಂದು ಬೇಗನೆ ತಿಳಿ (ಆಸ್ರವಾನುಪ್ರೇಕ್ಷೆ). ಮಿಥ್ಯಾತ್ವ ಎಂಬ ಬಾಗಿಲನ್ನು ಮುಚ್ಚಿದಾಗ ಹಿಂಸೆ ಮೊದಲಾದ ಪಾಪದ್ವಾರವನ್ನು ಉತ್ತಮ ವ್ರತಸಮಿತಿಗಳು ನಾಶಮಾಡುತ್ತವೆ. ಹೀಗೆ ಎಚ್ಚರಿಕೆಯಿಂದ ಇದ್ದು ಒಳಿತನ್ನು ಮಾಡು (ಸಂವರಾನುಪ್ರೇಕ್ಷೆ). ರಾಗ–ದ್ವೇಷ ಪರಿಣಾಮ ವಶದಿಂದ ಕರ್ಮಗಳನ್ನು ಕಟ್ಟಿಕೊಂಡಿರುವುದರಿಂದ ಜೀವ ಬಳಲುತ್ತದೆ. ವ್ರತಗುಣಚಾರಿತ್ರ್ಯಗಳೆಂಬ ನಿರ್ಮಲಜಲದಿಂದ ಕರ್ಮಕಲಂಕವನ್ನು ನೀನು ತೊಳೆದುಬಿಡು (ನಿರ್ಜರಾನುಪ್ರೇಕ್ಷೆ). ಶ್ರಾವಕನಿಗೆ ಹನ್ನೊಂದು ನೆಲೆಗಳಿವೆ; ಮುನಿಗಳಿಗೆ ಧರ್ಮದ ದಶಲಕ್ಷಣಗಳಿವೆ. ಇವುಗಳಿಂದಲ್ಲದೆ ಉನ್ನತವಾದ ಮೋಕ್ಷಸುಖ ದೊರೆಯುವುದಿಲ್ಲ (ಧರ್ಮಾನುಪ್ರೇಕ್ಷೆ). ಮನುಷ್ಯಜನ್ಮ ಅಪೂರ್ವವಾದದ್ದು, ಉತ್ತಮಕುಲದಲ್ಲಿ ಹುಟ್ಟಿದ್ದು ಹೆಚ್ಚು ಅಪೂರ್ವವು, ಜ್ಞಾನಸಂಪಾದನೆಯು ಅಪೂರ್ವವಾದದ್ದು; ದಾನಗುಣ, ತಪಗುಣಗಳಿಂದ ಕೂಡಿರುವುದು ಅತಿ ಅಪೂರ್ವವಾದುದು (ಬೋಧಿದುರ್ಲಭ ಅನುಪ್ರೇಕ್ಷೆ).

ಈ ಮೇಲಿನ ಸಂಗ್ರಹ ವಿವರಗಳಲ್ಲಿ ಕವಿ ಬಂಧುವರ್ಮ ೧೨ ಅನುಪ್ರೇಕ್ಷೆಗಳನ್ನು ಗೃಹಿಣಿಯಾದವಳಿಗೆ ನಯೋಪಾಯದಿಂದ ಬೋಧಿಸಿದ್ದಾನೆ. ಇದನ್ನು ಬಂಧುವರ್ಮನೇ ಸ್ವತಃ ಮುಂದಿನ ಪದ್ಯದಲ್ಲಿ ಹೇಳಿದ್ದಾನೆ. 'ಎನಿತನುಪ್ರೇಕ್ಷೆಯ (ವೆಲ್ಲಮನ)ನುವಾಗಿಯೇ ಪೇಳ್ದಿ ಬಂಧುವರ್ಮಕವೀಂದ್ರಂ ಮನವೊಲಿದು ಕೇಳ್ವದೆಲ್ಲರು ಘನಸಾರ ಸುಬೋಧೆ ಜೀವಸಂಬೋಧನೆಯಂ'.

ಬಂಧುವರ್ಮನ ಸತಿಧರ್ಮಸಾರ ಎಂಬ ಕೃತಿಯಲ್ಲಿ ಒಟ್ಟು ೧೯೦ ಪದ್ಯಗಳಿವೆ. ಅವುಗಳಲ್ಲಿ ಒಬ್ಬ ನವವಿವಾಹಿತೆಯಾದ ಜೈನಶ್ರಾವಕಿ ಅಥವಾ ಜೈನಗೃಹಸ್ಥೆಯಾದವಳು ತನ್ನ ಜೀವನದಲ್ಲಿ ಹೇಗೆ ಧರ್ಮದ ಆಚರಣೆಯನ್ನು ಮಾಡಿಕೊಂಡು ಹೋಗಬೇಕು ಎಂಬುದನ್ನು ಬಹಳ ಸಂಕ್ಷಿಪ್ತವಾಗಿ, ಬಹಳ ನಾಜೂಕಾಗಿ ಹೇಳುತ್ತಾ ಹೋಗುತ್ತಾನೆ. ಅಲ್ಲಲ್ಲಿ ತಂಗಿ, ಮಗಳೇ ಇತ್ಯಾದಿ ಪದಗಳನ್ನು ಬಳಸಿ ಹಿತವಾಗಿ ಮಧುರವಾಗಿ ಶಬ್ದಪ್ರಯೋಗಮಾಡಿ ಒಬ್ಬ ತಂದೆ ತನ್ನ ಮಗಳಿಗೆ ಬುದ್ಧಿಹೇಳುವಂತೆ ಉಪದೇಶ ನೀಡುತ್ತಾ ಹೋಗುತ್ತಾನೆ. ಉದಾಹರಣೆಗೆ,

ಧಾತೇಳರಿಂದಲಾದುದು
ಆತುರದಿಂ ಮರಳಿ ಮರಳಿ ದುಃಖವನುಳ್ಳುದು ।
ಈತನುವಘಕೃತವಸ್ಥಿರ
ಪ್ರೀತಿಯ ಹಿರಿದಾಗಿ ತಂಗಿ ಮಾಡಲು ಬೇಡಂ ॥೧೪॥
ಗುರುಗಳು ಮಜ್ಜಿಯರುಗಳಂ
ವರ ಜೈನರ್ ಜೈನಿತಿಯರ ದೇಹದಿ ಪುಟ್ಟಿದ ।
ಕರಸಿಕೆ ರುಜಿಮಳ (ವುಮಂ)
ಕರುಣದಿ ಪರಿಹರಿಸು ತಂಗಿ ಪೇಸದಿರೆಂದುಂ ॥೧೫॥

ಸತಿಧರ್ಮಸಾರ

ಇದೇ ರೀತಿಯಾಗಿ ಬಂಧುವವರ್ಮಕವಿಯು ಸತಿಧರ್ಮಸಾರದಲ್ಲಿ ಜೈನಶ್ರಾವಕಿಯರನ್ನು ತಂಗಿ, ನಾರಿ ಎಂಬ ವಿಶಿಷ್ಟ ಪದವನ್ನು ಬಾರಿಬಾರಿಗೂ ಬಳಸಿ ಶ್ರಾವಕಿಯರೆಲ್ಲರನ್ನೂ ಸಂಬೋಧಿಸಿ ಶ್ರಾವಕಧರ್ಮವನ್ನು ಉಪದೇಶಿಸಿ ಹೇಳುತ್ತಾನೆ. ಸಂಪೂರ್ಣ ಸತಿಧರ್ಮಸಾರದಲ್ಲಿ ೩೮ ಪದ್ಯಗಳಲ್ಲಿ ಜೈನಶ್ರಾವಕಿಯರೆಲ್ಲರನ್ನೂ ತಂಗಿ, ನಾರಿ ಎಂಬ ಪದಗಳಿಂದ ಸಂಬೋಧಿಸಿದ್ದಾನೆ.

೧೧೩ನೇ ಪದ್ಯವಾಗಿ ಒಂದು ಪ್ರಾಕೃತ ಗಾಥೆಯನ್ನು ಎತ್ತಿಕೊಂಡಿದ್ದಾನೆ. ಅದು ಮುಂದಿನಂತಿದೆ :

ಚವುಏಇಂದಿಯ ತಹಬೀಇಂದಿಯ
ಛಟ ಆಟಉತಿಣ್ಣಿ ಹಂತೀ ।
ದಸಚಉರಿಂದಿಯ ಜೀವಗಣಾ ಬಾರಹ
ಪಂಚಿಂದಿಯಾ ಹೊಂತಿ ॥೧೧೩॥

ನಾಲ್ಕು ದಿನ ಪರಿಯಂತರ ಏಕೇಂದ್ರಿಯವುಂಟು, ಆರು ದಿನಕ್ಕೆ ದ್ವೀಂದ್ರಿಯವುಂಟು; ಎಂಟು ದಿನದೊಳಗೆ ತ್ರೀಂದ್ರಿಯ, ಹತ್ತು ದಿನದೊಳಗೆ ಚತುರೀಂದ್ರಿಯ ಜೀವಗಳಹವು; ಹನ್ನೆರಡು ದಿನಕ್ಕೆ ಪಂಚೇಂದ್ರಿಯ ಜೀವಗಳು ಹುಟ್ಟಿದವು.

ಈ ಗಾಥೆಯನ್ನು ೧೧೨ನೆಯ ಪದ್ಯದ ವಿವರಣೆಗಾಗಿ ಎತ್ತಿಕೊಳ್ಳಲಾಗಿದೆ. ೧೧೨ನೇ ಪದ್ಯದಲ್ಲಿ ಉಪ್ಪಿನಕಾಯಿಯ ಶುದ್ಧತೆ ಎಷ್ಟು ದಿನದವರೆಗೆ ಇರುತ್ತದೆ ಎಂಬುದನ್ನು ಹೇಳಿ, ಅದರ ಸ್ಪಷ್ಟನೆಗಾಗಿ ಮೇಲಿನ ಪ್ರಾಕೃತ ಗಾಥೆಯನ್ನು ಎತ್ತಿಕೊಂಡು ಅದರ ವಿವರಣೆಯನ್ನು ಕನ್ನಡದಲ್ಲಿ ಹೇಳುತ್ತಾನೆ. ಉಪ್ಪಿನಕಾಯಿಯೂ ಹೆಚ್ಚು ದಿನ ಜೀವರಹಿತವಾಗಿ ಇರುವುದಿಲ್ಲ, ಎರಡು ದಿನಕ್ಕೆ ಜೀವಗಳ ಉತ್ಪತ್ತಿ ಅದರಲ್ಲಿ ಆಗುತ್ತದೆ. ಆದುದರಿಂದ ಅದು ಮಾಂಸಸಮಾನ ಮತ್ತು ಅದರ ಉಪಯೋಗದಿಂದ ಪಾಪಬಂಧವಾಗುವುದು ಎಂದಿದ್ದಾನೆ.

ಹೀಗೆಯೇ ವೀಳ್ಯದೆಲೆ, ಜೇನುತುಪ್ಪ, ಹಿಂಗು ಮುಂತಾದ ವಸ್ತುಗಳು ಕೂಡ ಜೈನಶ್ರಾವಕಿಯರಿಗೆ ವರ್ಜ್ಯ ವಸ್ತುಗಳಾಗಿವೆ ಎಂದು ಎಚ್ಚರಿಸುತ್ತಾನೆ. ಸತಿಧರ್ಮಸಾರದಲ್ಲಿ ನಿರೂಪಿತ ಗೃಹಸ್ಥೆಯರ ವ್ರತಗಳ ವಿವರ ಈ ಕೆಳಕಂಡಂತಿದೆ.

ಸಮ್ಯಕ್‌ದರ್ಶನ – ದೇವಗುರುಶಾಸ್ತ್ರಸ್ವರೂಪ – ೯ ರಿಂದ ೧೨
ಸಮ್ಯಗ್‌ದರ್ಶನದ ಎಂಟು ಅಂಗಗಳು – ೧೩ ರಿಂದ ೨೦

ಅಹಿಂಸಾಣುವ್ರತ – ೨೧ ರಿಂದ ೨೩
ಸತ್ಯಾಣುವ್ರತ – ೨೪
ಅಚೌರ್ಯಾಣುವ್ರತ – ೨೫ — ಅಣುವ್ರತಗಳು – ೫
ಸ್ವಪುರುಷ ಸಂತೋಷವ್ರತ – ೨೬ — (೨೧ ರಿಂದ ೨೭ ಪದ್ಯಗಳವರೆಗೆ)
ಪರಿಗ್ರಹ ಪರಮಾಣುವ್ರತ – ೨೭

ದಿಗ್ವ್ರತ – ೨೯
ಅನರ್ಥ ದಂಡವ್ರತ – ೩೦
ಭೋಗೋಪಭೋಗ ಪರಿಮಾಣವ್ರತ – ೩೧

ಗುಣವ್ರತಗಳು – ೩
(೨೯ ರಿಂದ ೩೧ ರವರೆಗಿನ ಪದ್ಯಗಳು)

ದೇಶಾವಕಾಶಿಕವ್ರತ – ೩೨
ಸಾಮ್ರಾಯಿಕ ವ್ರತ – ೩೩
ಪ್ರೋಷೋಥೋಪವಾಸವ್ರತ – ೩೪
ಅತಿಥಿ ಸಂವಿಭಾಗ ವ್ರತ – ೩೫

ಶಿಕ್ಷಾವ್ರತಗಳು – ೪
(೩೨ ರಿಂದ ೨೫ ಪದ್ಯಗಳವರೆಗೆ)

೧೨ ವ್ರತಗಳನ್ನು ಹೇಳಿದ ಬಳಿಕ ಆ ವ್ರತಗಳ ಅತಿಚಾರಗಳನ್ನು ೩೯ನೆಯ ಪದ್ಯದಿಂದ ೧೭೬ನೆಯ ಪದ್ಯದವರೆಗೆ ವಿವರಿಸಿಕೊಂಡು ಬರುತ್ತಾನೆ. ಅತಿಚಾರ ಎಂದರೆ ೧೨ ವ್ರತಗಳನ್ನು ಪಾಲಿಸುವಾಗ ಆ ವ್ರತಗಳನ್ನು ಮೀರಿ ನಡೆಯುವಂತಹ ಅಥವಾ ಘಟಿಸುವಂತಹ ದೋಷಸಹಿತವಾದ ಆಚರಣೆಗಳು. ಅವುಗಳು ಪಾಪಾಚರಣೆಗಳು. ಅವುಗಳನ್ನು ತನ್ನ ಧಾರ್ಮಿಕ ಜೀವನದಲ್ಲಿ ಉಂಟಾಗದಂತೆ ಎಚ್ಚರವಹಿಸಿ ೧೨ ವ್ರತಗಳನ್ನು ಪಾಲಿಸಬೇಕು ಎಂದು ಗೃಹಸ್ಥೆಯಾದ ಶ್ರಾವಕಿಯನ್ನು ಎಚ್ಚರಿಸುತ್ತಾ ಬಂಧುವರ್ಮ ಕವಿ ವಿವರಿಸುತ್ತಾನೆ. ಈ ಎಲ್ಲ ವಿವರಣೆಗಳ ನಂತರ ೧೨ ಅನುಪ್ರೇಕ್ಷೆಗಳನ್ನು ಒಂದೊಂದಾಗಿ ೧೭೮ನೇ ಪದ್ಯದಿಂದ ೧೮೯ನೇ ಪದ್ಯದವರೆಗೆ ವಿವರಿಸುತ್ತಾನೆ.

ಈ ಪ್ರಕಾರ ಬಂಧುವರ್ಮನು ತನ್ನ ಸತಿಧರ್ಮಸಾರ ಎಂಬ ಕೃತಿಯಲ್ಲಿ ಗುಣವ್ರತ, ಸಮ್ಯಕ್‌ದರ್ಶನ, ಶಿಕ್ಷಾವ್ರತ ಮತ್ತು ಅವುಗಳ ಅತಿಚಾರಗಳನ್ನು ಹೇಳುತ್ತಾನೆ. ಇವುಗಳ ನಂತರ ಕವಿಯು ನೇರವಾಗಿ ೧೨ ಅನುಪ್ರೇಕ್ಷೆಗಳನ್ನು ವಿವರಿಸುತ್ತಾನೆ. ಈ ಪ್ರಕಾರದ ವಿವರಣೆ ಬಹುತೇಕ ಯಾವ ಶ್ರಾವಕಾಚಾರಕೃತಿಗಳಲ್ಲಿಯೂ ಕಂಡು ಬರುವುದಿಲ್ಲ. ಬಹುತೇಕ ಎಲ್ಲಾ ಶ್ರಾವಕಾಚಾರ ಕೃತಿಗಳಲ್ಲಿ ೧೨ ವ್ರತಗಳನ್ನು, ಅತಿಚಾರಗಳನ್ನು ಮತ್ತು ಸಮ್ಯಕ್ ದರ್ಶನ ಅದರ ಎಂಟು ಅಂಗ ಸಮ್ಯಕ್‌ಜ್ಞಾನಗಳನ್ನು ಹೇಳಿ, ಅನಂತರ ಸಮ್ಯಕ್‌ಚಾರಿತ್ರ್ಯದ ನಿರೂಪಣೆಯಲ್ಲಿ ಅಷ್ಟಮೂಲಗುಣ ಮತ್ತು ೧೨ ವ್ರತ ಹಾಗೂ ಹನ್ನೊಂದು ಪ್ರತಿಮೆಗಳು ಹಾಗೂ ಸಲ್ಲೇಖನವ್ರತವನ್ನು ಹೇಳಿರುವುದು ಕಂಡುಬರುತ್ತದೆ. ಆದರೆ ಬಂಧುವರ್ಮ ಈ ಕ್ರಮವನ್ನು ಅನುಸರಿಸಿದಂತೆ ಕಂಡುಬರುವುದಿಲ್ಲ. ಹನ್ನೊಂದು ಪ್ರತಿಮೆಗಳ ಬಗೆಗೆ ವ್ರತಗಳ ನಿರೂಪಣೆಯ ನಂತರ ಈ ಮುಂದಿನಂತೆ ಹೇಳುತ್ತಾನೆ :

ಹನ್ನೆರಡು ತೆರದ ವ್ರತಗಳ
ಚೆನ್ನಾಗಿಯೆ ಕೇಳು ಅವರತೀಚಾರಗಳಂ ।
ಸನ್ನುತ ಮುನಿವರರಿಂದಂ
ಹನ್ನೊಂದುಂ ನೆಲೆಯ ಶ್ರಾವಕರ ಕೇಳ್ ತಿಳಿ ನೀಂ ॥

ಎಂದು ಎರಡೇ ಸಾಲುಗಳಲ್ಲಿ ಹನ್ನೊಂದು ನೆಲೆಗಳ ಬಗೆಗಿನ ತನ್ನ ನಿಲುವನ್ನು ತಿಳಿಸುತ್ತಾನೆ. ಇದನ್ನು ಗಮನಿಸಿದಾಗ ಆ ಹನ್ನೊಂದು ನೆಲೆಗಳನ್ನು ಆಚರಿಸುವ

ಸಾಧ್ಯತೆಗಳು ಜೈನಗೃಹಸ್ಥೆಯಾದವಳಿಗೆ ಇಲ್ಲ ಎನ್ನುವಂತೆ ಕಾಣುತ್ತದೆ. ಅದಕ್ಕಾಗಿಯೇ ಕವಿ ಬಂಧುವರ್ಮನು ಮೇಲಿನ ಪದ್ಯದ ಕೊನೆಯ ಎರಡು ಸಾಲುಗಳಲ್ಲಿ ಮುನಿವರರಿಂದ ಹನ್ನೊಂದು ನೆಲೆಯ ಶ್ರಾವಕರ ಆಚಾರವನ್ನು ನೀನು ಕೇಳಿ ತಿಳಿದುಕೊ ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಏಕೆಂದರೆ ಶ್ರಾವಕಿಯರ ಜೀವನದಲ್ಲಿ ಈ ಹನ್ನೊಂದು ನೆಲೆಗಳ ಆಚರಣೆ ಕಠಿಣ ಎಂದು ಬಂಧುವರ್ಮ ಶ್ರಾವಕಿಯರನ್ನುದ್ದೇಶಿಸಿ, ಆ ಹನ್ನೊಂದು ನೆಲೆಗಳು ಯಾವುವು ಎಂಬುದನ್ನು ಕೇಳಿ ತಿಳಿದುಕೊ ಎಂದು ಮಾತ್ರ ಹೇಳಿದ್ದಾನೆ. ಎರಡನೆಯದಾಗಿ, ಜೈನಶ್ರಾವಕರ ಜೀವನದ ಅಂತಿಮ ಆಚರಣೆಯ ಘಟ್ಟವೇ ಸಲ್ಲೇಖನ ಆಗಿದೆ. ಇದನ್ನು ಶ್ರಾವಕನು ಅಥವಾ ಶ್ರಾವಕಿ ಆಚರಿಸಬೇಕು. ಸಲ್ಲೇಖನ ಸ್ವೀಕರಿಸುವವರು ಮರಣಕಾಲದಲ್ಲಿ ಉತ್ತಮ ಭಾವನೆವುಳ್ಳವರಾಗಿ ಶರೀರದ ಸಂಸಾರದ, ಬದುಕಿನ ಕುರಿತ ಆಸೆ ಆಕಾಂಕ್ಷೆಗಳನ್ನು ತೊರೆದು ಉತ್ತಮ ಧರ್ಮಭಾವನೆಗಳನ್ನು ಭಾವಿಸುತ್ತಾ ಪ್ರಾಣ, ಶರೀರ ತ್ಯಾಗವನ್ನು ಮಾಡಬೇಕೆಂದು ನಿಯಮವಿದೆ. ಬಂಧುವರ್ಮನು ಸಲ್ಲೇಖನದ ಬದಲಿಗೆ ಅನುಪ್ರೇಕ್ಷೆಗಳನ್ನು ಹೇಳುತ್ತಾನೆ. ಅನುಪ್ರೇಕ್ಷೆಗಳು ಮನುಷ್ಯಜೀವನದಲ್ಲಿ ಧರ್ಮಭಾವನೆಯನ್ನು ಹೆಚ್ಚಿಸುವಂತಹ ಭಾವನೆಗಳಾಗಿವೆ, ವಿರಕ್ತಿಯನ್ನು ಮೂಡಿಸುವಂತಹುಗಳಾಗಿವೆ. ಜೈನಶಾಸ್ತ್ರಗಳ ಅನುಸಾರ ೧೨ ಅನುಪ್ರೇಕ್ಷೆಗಳು ಧ್ಯಾನ ಎಂಬ ತಪದಲ್ಲಿ ಮಾಡುವಂತಹ ವಿಶೇಷ ಭಾವನೆಗಳಾಗಿವೆ. ಈ ಕಾರಣವಾಗಿ ಸಲ್ಲೇಖನದ ಬದಲಿಗೆ ಗೃಹಸ್ಥೆಯರಾದವರು ಪದೇ ಪದೇ ವಿಚಾರಮಾಡಬೇಕಾಗಿರುವ ಹನ್ನೆರಡು ಅನುಪ್ರೇಕ್ಷಾ ಭಾವಗಳನ್ನು ತಮ್ಮ ಅಂತ್ಯಕಾಲದಲ್ಲಿಯೂ ಅಥವಾ ಮರಣಕಾಲದಲ್ಲಿಯೂ ಭಾವಿಸುತ್ತಾ ದೇಹತ್ಯಾಗ ವಿಧಿಯನ್ನು ಆಚರಿಸಲಿ ಎಂದು ಪರೋಕ್ಷವಾಗಿ ಹೇಳಿರಬೇಕೆಂದು ಭಾವಿಸಬಹುದಾಗಿದೆ. ಈ ಪ್ರಕಾರ ಸತಿಧರ್ಮಸಾರವು ಒಂದು ಉತ್ಕೃಷ್ಟ ಕೃತಿಯಾಗಿದ್ದು, ಜೈನಗೃಹಸ್ಥೆಯರ ಆಚಾರಪಾಲನೆಯ ವಿವರಗಳನ್ನು ನಿರೂಪಿಸುವಂತಹ ಒಂದು ಗಮನಾರ್ಹ ಕೃತಿ ಎಂದು ಹೇಳಬಹುದಾಗಿದೆ.

೦೦೦

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಪ್ರಮುಖ ಸಾಹಿತಿಗಳು

– ಶಿವಲಿಂಗಮೂರ್ತಿ

ಒಂದು ಪ್ರದೇಶದ ಸಂಸ್ಕೃತಿಯ ನಿರ್ಮಾಣದಲ್ಲಿ ಅನೇಕ ಸಂಗತಿಗಳು ಪ್ರಧಾನ ಪಾತ್ರ ವಹಿಸುತ್ತವೆ. ಜೀವನ ವಿಧಾನವನ್ನು ಸಂಸ್ಕೃತಿಯಾಗಿ ಗ್ರಹಿಸುವ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯ, ಶಾಸನ ಸಾಹಿತ್ಯ – ಇವುಗಳು ಸಂಸ್ಕೃತಿ ನಿರ್ಮಾಣದಲ್ಲಿ ಹೇಗೆ ಪಾತ್ರ ವಹಿಸಿವೆ ಎಂಬುದರ ಅಧ್ಯಯನ ಎಷ್ಟು ಮುಖ್ಯವೋ ಶಿಷ್ಟ ಸಾಹಿತ್ಯದ ಅಧ್ಯಯನವೂ ಅಷ್ಟೇ ಮುಖ್ಯವಾಗಿದೆ. ಹೀಗಾಗಿ ಸ್ಥಳೀಯ ಸಂಸ್ಕೃತಿಗೆ ಸಂಬಂಧಿಸಿದ ಲೇಖಕರ/ಕವಿಗಳ ಮುಖ್ಯ ಕೃತಿಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ತೀ.ನಂ.ಶ್ರೀಕಂಠಯ್ಯ : ೧೯೦೬ ರ ನವೆಂಬರ್ ೨೬ ರಂದು ತಾಲ್ಲೂಕಿನ ಪ್ರಸಿದ್ಧ ಸ್ಥಳ ತೀರ್ಥಪುರದಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ತೀರ್ಥಪುರ, ಚಿಕ್ಕನಾಯಕನಹಳ್ಳಿ, ತುಮಕೂರುಗಳಲ್ಲಿ ಮಾಡಿದರು. ೧೯೨೬ರಲ್ಲಿ ಬಿ.ಎ. ಪದವಿಯನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಪಾಸು ಮಾಡಿದರು. ನಂತರ ಇಂಗ್ಲಿಷ್ ಮತ್ತು ಕನ್ನಡ ಎರಡೂ ವಿಷಯಗಳಲ್ಲಿ ಎಂ.ಎ. ಪದವಿ ಗಳಿಸಿದರು. ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಂದಾಯ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದ ಇತರ ಸಾಹಿತ್ಯದ ಬಗ್ಗೆ, ಅಧ್ಯಾಪನದ ಬಗ್ಗೆ ಮೊದಲಿನಿಂದ ಒಲವಿದ್ದ ಕಾರಣ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾದರು.

ಕನ್ನಡ, ಸಂಸ್ಕೃತ, ಇಂಗ್ಲಿಷ್ ಈ ಮೂರೂ ಭಾಷೆಗಳಲ್ಲಿ ಪ್ರಭುತ್ವ ಹೊಂದಿದ್ದು ಕಾವ್ಯ, ಅಲಂಕಾರ, ವ್ಯಾಕರಣ, ಛಂದಸ್ಸು, ಗ್ರಂಥ ಸಂಪಾದನೆ, ಭಾಷಾಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲೂ ನೈಪುಣ್ಯ ಸಾಧಿಸಿದ್ದರು. ಕವಿ. ವಿಮರ್ಶಕ, ಸಂಶೋಧಕ ಎಲ್ಲವೂ ಆಗಿದ್ದರು. ತೀ.ನಂ.ಶ್ರೀಯವರ ಸಮಯ ಪರಿಪಾಲನೆ, ಬೋಧನಾ ವಿಧಾನ, ಶಿಸ್ತು ಇವು ವಿದ್ಯಾರ್ಥಿಗಳ ಮೇಲೆ ತುಂಬಾ ಪ್ರಭಾವ ಬೀರಿದ್ದವು. "ಅವರ ಪಾಠವನ್ನಾಗಲೀ, ಭಾಷಣವನ್ನಾಗಲೀ ಕೇಳುತ್ತ ಕುಳಿತರೆ ವೇಳೆ ಕಳೆದುದೇ ಅರಿವಾಗುತ್ತಿರಲಿಲ್ಲ. ಒಮ್ಮೆ ಪತ್ರಿಕೋದ್ಯಮವನ್ನು ಕುರಿತು ಅವರು ಮಾಡಿದ ಭಾಷಣವೊಂದನ್ನು ಕೇಳಿ ನಾನು ಬೆರಗಾದುದುಂಟು; ಆ

ವಿಷಯದ ಮೇಲೆ ಅಷ್ಟೊಂದು ಸ್ವಾರಸ್ಯಪೂರ್ಣವಾಗಿ ಮಾತನಾಡಬಹುದೆಂಬ ಕಲ್ಪನೆ ನನಗಿರಲಿಲ್ಲ."[೧] ಹೀಗೆಂದು ತೀ.ನಂ.ಶ್ರೀ. ಅವರ ಅಧ್ಯಾಪನಕ್ಕೆ ಮಾರು ಹೋದ ಸಿ.ಪಿ. ಕೃಷ್ಣಕುಮಾರ್ ಅಭಿಪ್ರಾಯಪಡುತ್ತಾರೆ. ಒಲುಮೆ, ನಂಟರು, ಕಾವ್ಯಸಮೀಕ್ಷೆ, ಸಮಾಲೋಕನ, ಪಂಪ, ಬಿಡಿ ಮುತ್ತು – ಇವು ಅವರ ಸೃಜನಶೀಲ ಕೃತಿಗಳು. ರಾಕ್ಷಸನ ಮುದ್ರಿಕೆ ವಿಶಾಖದತ್ತನ ಮುದ್ರಾರಾಕ್ಷಸವೆಂಬ ಸಂಸ್ಕೃತ ನಾಟಕದ ಅನುವಾದ. ಕನ್ನಡ ಮಧ್ಯಮ ವ್ಯಾಕರಣ ಎಂಬುದು ವ್ಯಾಕರಣ ಕುರಿತದ್ದು. ಭಾರತೀಯ ಕಾವ್ಯಮೀಮಾಂಸೆ ಕೃತಿ–ಕಾವ್ಯ ಮೀಮಾಂಸಾ ಕೃತಿ. ಹೆಣ್ಣು ಮಕ್ಕಳ ಪದಗಳು, ನಂಬಿಯಣ್ಣನ ರಗಳೆ, ಗದಾಯುದ್ಧ ಸಂಗ್ರಹ ಇವು ಸಂಪಾದಿತ ಕೃತಿಗಳಾಗಿವೆ.

'ಒಲುಮೆ' ಕೃತಿ ತೀ.ನಂ.ಶ್ರೀ ಯವರ ಕವಿತಾ ಪ್ರತಿಭೆಗೆ ಹಿಡಿದ ಕೈಗನ್ನಡಿ. ಹೊಸಗನ್ನಡ ಸಾಹಿತ್ಯದಲ್ಲಿ ಪ್ರೇಮಗೀತೆಗಳ ಯುಗವನ್ನು ಉದ್ಘಾಟಿಸಿದ ಕೀರ್ತಿ ಈ ಕೃತಿಯದು. ಇದು ೧೯೩೨ ರಷ್ಟು ಹಿಂದೆಯೇ ಪ್ರಕಟವಾಯಿತು. ಇದರಲ್ಲಿ ಬರುವ ಪ್ರಣಯದ ನವುರಾದ ಶುಚಿ ರುಚಿಯಾದ ಚಿತ್ರಗಳು ಕನ್ನಡಕ್ಕೊಂದು ಹೊಸ ಅನುಭವವನ್ನೇ ತಂದುಕೊಟ್ಟವು."[೨] ತೀ.ನಂ.ಶ್ರೀ ಅವರ ಅಪಾರ ವಿದ್ವತ್ತು ಅವರನ್ನು ವಿವಿಧ ಉನ್ನತ ಹುದ್ದೆಗಳಿಗೇರಿಸಿತು. "ಪ್ರೊಫೆಸರ್ ಶ್ರೀಕಂಠಯ್ಯನವರು ಹಲವಾರು ಸಭೆ ಸಮ್ಮೇಳನಗಳಿಗೆ, ವಿದ್ವದ್ಗೋಷ್ಠಿಗಳಿಗೆ ಅಧ್ಯಕ್ಷರಾಗಿದ್ದರು. ಅವರು ೧೯೫೭ರಲ್ಲಿ ಓರಿಯಂಟಲ್ ಕಾನ್ಫರೆನ್ಸಿನ ದೆಹಲಿ ಸಮ್ಮೇಳನದ ದ್ರಾವಿಡ ವಿಭಾಗಕ್ಕೂ, ೧೯೬೦ ರಲ್ಲಿ ಅಖಿಲ ಭಾರತ ಭಾಷಾವಿಜ್ಞಾನಿಗಳ ಸಂಘಕ್ಕೂ ಅಧ್ಯಕ್ಷರಾಗಿದ್ದರು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಸಂಪಾದಕ ಮಂಡಳಿಯ ಅಧ್ಯಕ್ಷರಾಗಿ, ಮೈಸೂರು ಸರ್ಕಾರದ ವಿಶ್ವಕೋಶದ ಭಾಷಾವಿಭಾಗದ ಮುಖ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಮೈಸೂರು ಸರ್ಕಾರ ಹಾಗೂ ಭಾರತ ಸರ್ಕಾರದ ವಿವಿಧ ಸಲಹಾ ಸಮಿತಿಗಳಲ್ಲಿ ಅವರು ಸದಸ್ಯರಾಗಿದ್ದರು. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ಆಕಾಶವಾಣಿ, ಮಲಯಾಳಂ ನಿಘಂಟು ಸಮಿತಿ, ಪೂನಾದ ಡೆಕ್ಕನ್ ಕಾಲೇಜು ಮೊದಲಾದವುಗಳೊಡನೆ ಅವರು ಸಂಪರ್ಕ ಹೊಂದಿದ್ದರು."[೩]

ತೀ.ನಂ.ಶ್ರೀ. ಯವರ ಕೃತಿ 'ಭಾರತೀಯ ಕಾವ್ಯಮೀಮಾಂಸೆ'ಗೆ '೧೯೮೮–೮೯ ನೇ ಸಾಲಿನ ಪಂಪ ಪ್ರಶಸ್ತಿ' ಲಭಿಸಿತು. ಸಂಸ್ಕೃತದ ಅನೇಕ ಕಾವ್ಯ ಮೀಮಾಂಸೆಯ ಕೃತಿಗಳ ತಳಹದಿಯ ಮೇಲೆ ತೀ.ನಂ.ಶ್ರೀ. ಸಮಗ್ರವಾದ ವಿವೇಚನೆ ನಡೆಸಿದ್ದಾರೆ. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಮೂರು ಭಾಗಗಳಿವೆ. ಮೊದಲನೆಯದು, ಶಾಸ್ತ್ರ ಬೆಳವಣಿಗೆಯನ್ನು

---

೧. ಕೃಷ್ಣಕುಮಾರ್ ಸಿ.ಪಿ. – ತೀ.ನಂ.ಶ್ರೀ. ಪಥ – ಪರಿಸರ, ತೀ.ನಂ.ಶ್ರೀ ಸಂಸಾರವರ್ಗ, ಬೆಂಗಳೂರು – ೨೦೦೬, ಪುಟ – ೪೮೪.

೨. ಅದೇ, ೪೮೬

೩. ಅದೇ, ೪೯೦

ನಿರೂಪಿಸುತ್ತದೆ; ಎರಡನೆಯದರಲ್ಲಿ ಕವಿ–ಕಾವ್ಯ–ಸಹೃದಯರ ಬಗೆಗಿನ ವಿವರ; ಮೂರನೆಯ ಭಾಗದಲ್ಲಿ ರಸ–ಧ್ವನಿಗಳ ವಿವೇಚನೆ ಇದೆ. ಬಹುಕಾಲದಿಂದ ಕನ್ನಡ ಕಾವ್ಯಮೀಮಾಂಸೆಗೆ ನಾಡಿನ ಬಹುತೇಕ ಎಲ್ಲ ವಿಶ್ವವಿದ್ಯಾನಿಲಯಗಳು ಈ ಕೃತಿಯನ್ನು ಆಕರ ಕೃತಿಯನ್ನಾಗಿ ಆಯ್ಕೆ ಮಾಡಿವೆ. ಆದರೆ ಪ್ರಸ್ತುತ ದೇಸಿ ಕಾವ್ಯಮೀಮಾಂಸೆಗೆ ಈ ಕೃತಿ ಪೂರಕವಾಗಿಲ್ಲ. ಹಾಗಾಗಿ ಕನ್ನಡಕ್ಕೆ ಬೇಕು ಕನ್ನಡದ್ದೇ ಆದ ಕಾವ್ಯಮೀಮಾಂಸೆ ಎಂಬ ಚರ್ಚೆಗಳು ನಡೆದು ಆ ನಿಟ್ಟಿನಲ್ಲಿ ಸ್ವಲ್ಪ ಕೆಲಸ ಆಗಿದೆ. ಈ ಕೃತಿಯನ್ನು 'Indian Poetics' ಎಂದು ಪ್ರೊ. ಎನ್. ಬಾಲಸುಬ್ರಹ್ಮಣ್ಯ ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ಪಂಪ, ಶ್ರೀವಿಜಯ, ಕುಮಾರವ್ಯಾಸ, ಆಂಡಯ್ಯ, ರತ್ನಾಕರವರ್ಣಿ, ಮುದ್ದಣ ಮೊದಲಾದವರ ಕೃತಿಗಳಲ್ಲಿನ ಕಾವ್ಯಮೀಮಾಂಸಾ ಚರ್ಚೆಗಳನ್ನು ಕಟ್ಟಿಕೊಳ್ಳುವ ಮೂಲಕ ಕನ್ನಡ ಕಾವ್ಯಮೀಮಾಂಸೆಯನ್ನು ತುಮಕೂರು ವಿಶ್ವವಿದ್ಯಾನಿಲಯದ ಪಠ್ಯಗಳಲ್ಲಿ, ಡಾ॥ ವೀರಣ್ಣ ದಂಡೆಯವರ 'ಜನಪದ ಕಾವ್ಯ ಮೀಮಾಂಸೆ' ಹಾಗೂ 'ವಿಮರ್ಶಾ ಪ್ರಸ್ಥಾನಗಳು' ಮುಂತಾದ ಕೃತಿಗಳಲ್ಲಿ ಕಾಣಬಹುದಾಗಿದೆ.

ಲಿಂಗದೇವರು ಹಳೆಮನೆ : (೧೯೪೯) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಾಲುಗೊಣ ಇವರ ಜನ್ಮಸ್ಥಳ. ನಾಡಿನ ಹೆಸರಾಂತ ಚಿಂತಕರಲ್ಲಿ ಒಬ್ಬರಾದ ಇವರು ಪ್ರಸಿದ್ಧ ನಾಟಕಕಾರರು, ಅಂಕಣಕಾರರು ಮತ್ತು ವಿಮರ್ಶಕರು. ರಂಗಭೂಮಿ, ನಾಟಕ, ವಯಸ್ಕರ ಶಿಕ್ಷಣ, ಸಾಹಿತ್ಯ ಮತ್ತು ಭಾಷಾವಿಜ್ಞಾನ ಇವರ ಆಸಕ್ತಿಯ ಕ್ಷೇತ್ರಗಳು. ಚಿಕ್ಕದೇವಭೂಪ, ಹೈದರ್, ಅಂತೆಂಬರಗಂಡ, ತಸ್ಕರ ಮತ್ತು ಶಾಪ ಇವರ ಸ್ವಂತ ನಾಟಕಗಳಾದರೆ, ಡಾ॥ ಬೆಥೂನ್, ಧರ್ಮಪುರಿಯ ದೇವದಾಸಿ, ಮದರ್ ಕರೇಜ್, ಮನುಷ್ಯ ಅಂದ್ರೆ ಮನುಷ್ಯಾನೇ ಮತ್ತು ಮಟಾಶ್ ರಾಜ–ಇವು ಇವರ ಅನುವಾದಿತ ನಾಟಕಗಳು. ಪ್ರಸ್ತುತ, ಸಂದರ್ಭ, ನಿಲುವು, ಆಶಯ ಮತ್ತು ಸಂವಾದ – ಇವು ಅಂಕಣ ಬರಹದಿಂದ ಮೂಡಿ ಬಂದ ಐದು ಸಂಪುಟಗಳು. ವಚನಸಾಹಿತ್ಯ ಕುರಿತ ವಿಮರ್ಶಾಕೃತಿ 'ಹಿಂದೂ ಅನಂತ,; "ನಾಡಿನ ಸಾಂಸ್ಕೃತಿಕ ಸಾಮಾಜಿಕ ವಲಯಗಳ ಮೇಲೆ ಪ್ರಭಾವ ಬೀರುತ್ತಲೇ ಇರುವ ವಚನ ಚಳುವಳಿಯ ಒಳಗನ್ನು, ಹೊರಗನ್ನು ಈ ಪುಸ್ತಕ ವಿಶ್ಲೇಷಿಸುತ್ತದೆ. ಈ ಪುಸ್ತಕದ ಮುಖ್ಯ ಸೊಲ್ಲು ಇರುವುದು ಬಸವೇತರ ವಚನಕಾರರ ಪ್ರತಿಭೆಯನ್ನು ಕುರಿತು. ಬಸವಣ್ಣನಂತೆಯೇ ಆ ಕಾಲದ ನೂರಾರು ವಚನಕಾರರು ಅಂದಿನ ಸಾಮಾಜಿಕ ತಳಹದಿಯನ್ನು ಮರುನಿರ್ಮಿಸುವ ಪ್ರಯತ್ನದಲ್ಲಿ ಬಹಳ ಶಕ್ತಿಯುತವಾದ ವಚನಗಳನ್ನು ರಚಿಸಿದ್ದಾರೆ. . . . ಇಂಥ ಮಹತ್ತರ ವಚನಕಾರರ ಪ್ರತಿಭೆಯನ್ನು, ಸಿಟ್ಟನ್ನು, ತತ್ವಾದರ್ಶಗಳನ್ನು ನೇಮ ನಿಷ್ಠೆಗಳನ್ನು ಹಾಗೂ ಶರಣತ್ವವನ್ನು ಕುರಿತು ಈ ಲೇಖನಗಳು ಮಾತನಾಡುತ್ತವೆ."[೪] ಈ ಮೂಲಕ ಬಸವ ಕೇಂದ್ರಿತ ಚರ್ಚೆಗಳನ್ನು ಕೊಂಚ ಅಲುಗಾಡಿಸಿ ಅದರ ವ್ಯಾಪ್ತಿ, ವಿಸ್ತಾರವನ್ನು ಓದುಗರಿಗೆ ತಿಳಿಸಿಕೊಡುತ್ತಾರೆ.

---

೪. ಲಿಂಗದೇವರು ಹಳೆಮನೆ – ಹಿಂದಿಣ ಅನಂತ – ನಿರಂತರ ಪ್ರಕಾಶನ, ಮೈಸೂರು, ೨೦೦೯ರ ಮುನ್ನುಡಿಯಿಂದ.

"ಏಕೆನ್ನ ಪುಟ್ಟಿಸಿದೆಯಯ್ಯ, ಹೆಣ್ಣು ಜನ್ಮದಲ್ಲಿ ಪುಣ್ಯವಿಲ್ಲದ ಪಾಪಿಯ? ನಾನು ಇಹಪರಕೆ ದೂರಳಯ್ಯ' (ನೀಲಮ್ಮನ ವಚನ) ಎಂದು ತಾನು ಇಲ್ಲಿ ಮತ್ತು ಎಲ್ಲಿಯೂ ಸಲ್ಲದವಳು ಎಂಬ ಅನಾಥ ಸ್ಥಿತಿ ಶೂದ್ರರಷ್ಟೇ ಕಳವಳಕಾರಕ ಬದುಕು. . . . ಆಧುನಿಕ ಕಾಲದಲ್ಲಿ ಶೂದ್ರರ ಎಚ್ಚೆತ್ತ ಪ್ರಜ್ಞೆಯನ್ನು ಸಹಿಸಿಕೊಳ್ಳಲಾಗದೆ ಮೇಲ್ವರ್ಗದವರು ನಡೆಸುತ್ತಿರುವಂತಹ ಹಲ್ಲೆಗಳು ಅಂದು ನಡೆದಿದ್ದವು."[೫] ಎಂಬ ಹಳೆಮನೆಯವರ ನಿಲುವಿನಲ್ಲಿ ಸ್ತ್ರೀ ಮತ್ತು ಶೂದ್ರ ಸಮುದಾಯದ ಬಗೆಗಿನ ಕಾಳಜಿಯನ್ನು ಕಾಣಬಹುದು.

"ಲಿಂಗದೇವರು ಹಳೆಮನೆ ಎಡ ಪಂಥೀಯ ಧೋರಣೆಯಿಂದ, ಮಾರ್ಕ್ಸ್‌ವಾದದ ಪ್ರಭಾವದಿಂದ ನಾಟಕ ಬರೆಯಲಾರಂಭಿಸಿದರು. ಅವರು ಮೈಸೂರು ಇತಿಹಾಸವನ್ನು ಹಿನ್ನೆಲೆಯಾಗಿಟ್ಟುಕೊಂಡು 'ಚಿಕ್ಕದೇವಭೂಪ', 'ಹೈದರ್' ಮತ್ತು ಅಂತೆಂಬರಗಂಡ ಎಂಬ ಮೂರು ನಾಟಕಗಳನ್ನು ಬರೆದಿದ್ದಾರೆ. ಚಿಕ್ಕದೇವಭೂಪ ಕರ್ನಾಟಕದ ಪ್ರಥಮ ರೈತ ಬಂಡಾಯದ ವಸ್ತುವನ್ನು ಒಳಗೊಂಡಿದೆ. ಚಿಕ್ಕದೇವರಾಜನ ಅಧಿಕಾರದ ಅವಧಿಯಲ್ಲಿ ಅರಮನೆಯ ಬೊಕ್ಕಸ ತುಂಬಿಸಲು ಅವನು ರೈತರ ಮೇಲೆ ವಿಪರೀತ ತೆರಿಗೆಗಳನ್ನು ಹೇರುತ್ತಾನೆ. ಅದನ್ನು ಪ್ರತಿಭಟಿಸಲು ರೈತರು ದಂಗೆ ಏಳುತ್ತಾರೆ. ವೀರಶೈವ ಧರ್ಮಾಧಿಕಾರಿಗಳು ಅರಮನೆಯಲ್ಲಿ ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ರೈತರ ದಂಗೆಗೆ ಪ್ರೋತ್ಸಾಹ ನೀಡುತ್ತಾರೆ. ಕಡೆಗೆ ರಾಜ ನಿರ್ದಾಕ್ಷಿಣ್ಯವಾಗಿ ದಂಗೆಯನ್ನು ಹತ್ತಿಕ್ಕುತ್ತಾನೆ. ಎಂಬತ್ತರ ದಶಕದಲ್ಲಿ ನಡೆದ ರೈತರ ಪ್ರತಿಭಟನೆ ಮತ್ತು ಅದನ್ನು ಸರ್ಕಾರ ಹತ್ತಿಕ್ಕಿದ ರೀತಿ ಈ ನಾಟಕದ ರಚನೆಗೆ ಪ್ರೇರಣೆ. 'ಹೈದರ್' ಸಾಮಾನ್ಯ ಯುವಕನೊಬ್ಬ ಮೈಸೂರು ಸಂಸ್ಥಾನದ ನವಾಬರಿಗೆ ತನ್ನ ಚಾಣಾಕ್ಷತೆಯಿಂದ ಏರಿ, ಕಡೆಗೆ ತಾನೇ ಸರ್ವಾಧಿಕಾರಿಯಾಗುವುದನ್ನು ಸಾಮ್ರಾಜ್ಯಶಾಹಿ ಬ್ರಿಟಿಷರೊಂದಿಗೆ ಹೋರಾಡುವುದನ್ನು ಚಿತ್ರಿಸುತ್ತದೆ. 'ಅಂತೆಂಬರಗಂಡ' ಸಂಸರ ಬಿರುದೆಂತೆಂಬರ ಗಂಡ, ಮಂತ್ರಶಕ್ತಿ ನಾಟಕಗಳಿಂದ ಪ್ರೇರಿತವಾದದ್ದು. ಹಳೆಮನೆಯವರ ರಣಧೀರ ಪಕ್ಕಾ ರಾಜಕಾರಣಿ, ಅಧಿಕಾರದ ಮೆಟ್ಟಿಲನ್ನು ಏರುತ್ತಾ, ಅದನ್ನು ಭದ್ರಪಡಿಸಿಕೊಳ್ಳಲು ಬೇರೆ ಬೇರೆ ಸಂದರ್ಭದಲ್ಲಿ ಅವನು ಜನಸಾಮಾನ್ಯರನ್ನು ಹೇಗೆ ಬಳಸಿಕೊಂಡ ಎಂಬುದು ನಾಟಕದ ತಿರುಳು. ಹಳೆಮನೆಯವರ ನಾಟಕಗಳು ಐತಿಹಾಸಿಕ ವಸ್ತುವನ್ನು ಒಳಗೊಂಡರೂ ಅವು ಸಮಕಾಲೀನ ರಾಜಕೀಯ ನಾಟಕಗಳಂತೆಯೇ ಕಾಣಿಸುತ್ತವೆ. ಇತಿಹಾಸ ಬರುವುದು ಪುನರ್ ಸೃಷ್ಟಿಸುವುದಕ್ಕಲ್ಲ, ಪುನರ್ ವ್ಯಾಖ್ಯಾನಕ್ಕೆ ಎಂಬ ಮಾತನ್ನು ಅವರ ನಾಟಕಗಳು ಪುಷ್ಟೀಕರಿಸುತ್ತವೆ."[೬]

ಹಳೆಮನೆಯವರ ನೂರಾರು ಲೇಖನಗಳು ಪರಿಸರ, ನೆಲ, ನೀರು, ಕೃಷಿ, ಸರ್ಕಾರದ ಕ್ರಮಗಳು, ಜನರ ಮೌಢ್ಯಗಳು ಇತ್ಯಾದಿಯನ್ನು ಕುರಿತು ಚರ್ಚಿಸುತ್ತವೆ.

---

೫. ಅದೇ ೧೬

೬. ಲಿಂಗದೇವರು ಹಳೆಮನೆ – ರಂಗ ರೂಪಕ ನಿರಂತರ ಪ್ರಕಾಶನ, ಮೈಸೂರು, ೨೦೦೯, ೩೫

ವಸ್ತು ತತ್ಕಾಲವೆನಿಸಿದರೂ, ಅದರೊಳಗಿನ ಸತ್ವ, ವ್ಯಾಪ್ತಿ ದೂರದೃಷ್ಟಿಯುಳ್ಳವಾಗಿವೆ. ಆ ಬಗೆಯ ಒಂದೆರಡು ಅಂಕಣ ಬರಹಗಳನ್ನು ಪ್ರಾತಿನಿಧಿಕವಾಗಿ ಗಮನಿಸಬಹುದು : 'ಸಂವಾದ' ಕೃತಿಯೊಳಗಿನ 'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ.' ಲೇಖನದಲ್ಲಿ ಮಳೆಬಾರದ್ದಕ್ಕಾಗಿ ಸರ್ಕಾರವು ಸರ್ಕಾರಿ ಹಣದಿಂದ ರಾಜ್ಯದ ದೇವಾಲಯಗಳಲ್ಲೆಲ್ಲಾ ಪೂಜೆ ಮಾಡುವಂತೆ ಆದೇಶ ಹೊರಡಿಸಿದ ಬಗ್ಗೆ ಲೇಖಕರಿಗೆ ಸಿಟ್ಟುಕಟ್ಟೆಯೊಡೆದಿದೆ. ಮರ್ಯಾದೆಗೆಟ್ಟ ಸರ್ಕಾರ, ಮರ್ಯಾದೆಗೆ ಕಿಂಚಿತ್ತೂ ಯೋಗ್ಯರಲ್ಲದ ಜನ ಮಾಡಿಕೊಂಡ ಅನೈತಿಕ ಒಡಂಬಡಿಕೆ ಎಂದು ನಿರ್ದಾಕ್ಷಿಣ್ಯವಾಗಿ ನಿಂದಿಸುತ್ತಾರೆ. ಅಕಾಲಿಕ ಮಳೆ, ಬರ, ಹವಾಮಾನ ವೈಪರೀತ್ಯಗಳಿಗೆ ನಿಸರ್ಗವನ್ನು ಮಾನವ ಕ್ರೂರವಾಗಿ ನಡೆಸಿಕೊಂಡುದಾಗಿದೆ. ಕೆರೆಗಳು ಬತ್ತುತ್ತಿರುವ ಬಗ್ಗೆ ಇನ್ನೂರು ಅಡಿಗೂ (ಇಂದು ಸಾವಿರಾರು ಅಡಿ!) ಮಿಗಿಲಾಗಿ ಬೋರ್‌ವೆಲ್ ತೋಡಬೇಕಾಗಿ ಬಂದುದರಿಂದ ಸರ್ಕಾರ ಮತ್ತು ಸಾರ್ವಜನಿಕರು ಗಮನಹರಿಸಬೇಕಿತ್ತು. ಪರಿಸರದ ಮೇಲಿನ ದಾಳಿಯ ಫಲವನ್ನು ಮಾನವ ಇಂದು ಉಣ್ಣುತ್ತಿದ್ದಾನೆ. ಇನ್ನಾದರೂ ಎಚ್ಚೆತ್ತುಕೊಂಡು ಜಾಗೃತಿಯನ್ನು ಮೂಡಿಸಬೇಕಾದ ಸರ್ಕಾರ, ದೇವಾಲಯಗಳಿಗೆ ಮೊರೆ ಹೋಗಿರುವುದು ಕಳವಳವನ್ನುಂಟುಮಾಡಿದೆ. ಸರ್ಕಾರ ಹೂಳೆತ್ತುವ ಬಗ್ಗೆ ಯೋಜನೆ ರೂಪಿಸಿ ಕೈಬಿಟ್ಟಿದ್ದು ಇಲ್ಲಿ ಟೀಕೆಗೆ ಒಳಗಾಗಿದೆ. ಬೃಹತ್ ಅಣೆಕಟ್ಟೆಗಳ ನೀರು ನೇರ ಕೆರೆಗಳಿಗೆ ಹರಿದರೆ ಅಂತರ್ಜಲ ವೃದ್ಧಿಗೊಳ್ಳುತ್ತದೆ– ಈ ಬಗ್ಗೆ ಗಮನ ಹರಿಸಲಿ ಸರ್ಕಾರ ಎಂದು ಮಾರ್ಗದರ್ಶನವೀಯುತ್ತಾರೆ.

ತಾಲ್ಲೂಕಿನ ಜನಪ್ರತಿನಿಧಿಗಳು ಇದುವರೆಗೂ ಹೇಳಿಕೊಳ್ಳುವಂಥ ಕೆಲಸವನ್ನು ಮಾಡಿಲ್ಲ. ತಾಲ್ಲೂಕಿನ ಪ್ರಗತಿಗೆ ಗಮನಾರ್ಹವಾದ ಕೊಡುಗೆಯೇನೂ ಇಲ್ಲ ಎಂದು ವಿಷಾದದಿಂದ ನುಡಿಯುತ್ತಾರೆ–ಹಳೆಮನಿ. "ಯಾವುದೇ ಚುನಾವಣೆಯಾಗಲಿ– ವಿಧಾನಸಭೆ ತಾಲ್ಲೂಕು ಮಂಡಳಿ, ಗ್ರಾಮ ಪಂಚಾಯ್ತಿ–ಅವೆಲ್ಲಾ ಜಾತಿ ಪ್ರದರ್ಶನದ ಮೇಲೆ ನಡೆದದ್ದೇ ಹೆಚ್ಚು. ಈ ತಾಲ್ಲೂಕಿನ ಜನರ ಮತ ಬೆಂಬಲಗಳಿಸಿದ ಯಾವುದೇ ಪ್ರತಿನಿಧಿ ರಾಜ್ಯದ ಅಥವಾ ಜಿಲ್ಲೆಯ ಯಾವುದೇ ನಿರ್ಣಾಯಕ ತೀರ್ಮಾನಗಳಲ್ಲಿ ಗಮನಾರ್ಹ ಕೊಡುಗೆ ಕೊಟ್ಟಿಲ್ಲವೆಂಬುದು ಗಮನಾರ್ಹ. ಈ ತಾಲ್ಲೂಕಿನ ರಾಜಕೀಯ ಎಂದೂ ಸಿದ್ಧಾಂತದ ಮಟ್ಟದಲ್ಲಿ, ಭಾವಿ ಮುಂದಾಳುಗಳನ್ನು ರೂಪಿಸುವ ಹಂತದಲ್ಲಿ ನಡೆದುದೇ ಇಲ್ಲ."[೭] ಆದ್ದರಿಂದ ತಾಲ್ಲೂಕಿನ ಪ್ರಗತಿ ತೀರಾ ಕುಂಠಿತವಾಗಿದೆಯೆಂದೇ ಹೇಳಬಹುದು. ರಾಜಕೀಯ ಶಕ್ತಿ ಪ್ರಬಲ ಆಯುಧವಾಗಿ ಮಾರ್ಪಟ್ಟಿರುವುದರಿಂದ ತಾಲ್ಲೂಕಿನ ಜನಪ್ರತಿನಿಧಿಗಳ ಸಾಧನೆ ಹಳೆಮನೆಯವರಿಗೆ ಕಿಂಚಿತ್ತೂ ತೃಪ್ತಿ ನೀಡಿಲ್ಲ.

---

೭. ಸಿದ್ಧರಾಮಯ್ಯ ಎಸ್.ಜಿ. – ಕಣ್ಣುಗಾಯದ ಕಾಲುದಾರಿಗಳು – ಮುನ್ನುಡಿ : (ಡಾ. ಕೆ. ಮರುಳಸಿದ್ದಪ್ಪ) – ಪ್ರಕಟಣಾ ವರ್ಷ – ೨೦೦೯.

ಎಸ್.ಜಿ. ಸಿದ್ದರಾಮಯ್ಯ : ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಿಂಗಾಪುರ ಗ್ರಾಮದಲ್ಲಿ ೧೯೪೬ರಲ್ಲಿ ಜನಿಸಿದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಎಂ.ಎ. ಪದವಿಯನ್ನು ೧೯೭೨ರಲ್ಲಿ ಪಡೆದರು. ಸರ್ಕಾರಿ ಪದವಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಕನ್ನಡದ ಕೈಂಕರ್ಯ ಮಾಡಿದರು. ಗಾಂಧಿ, ಲೋಹಿಯಾ, ಅಂಬೇಡ್ಕರ್ ಹಾಗೂ ಕುವೆಂಪುರವರ ವಿಚಾರಗಳಿಂದ ಪ್ರಭಾವಿತರಾದ ಎಸ್.ಜಿ.ಎಸ್. ನೆಲಮೂಲ ಸಂಸ್ಕೃತಿಯ ಬಗ್ಗೆ ಹೆಚ್ಚು ಕಾಳಜಿ ಹೊಂದಿದ್ದಾರೆ.

ಗಾಲ್ಫ್ ಉಬ್ಬಿನ ಮೇಲೆ, ಕಾಡುವ ಬೇಲಿ ಹೂ, ಅವಳೆದೆಯ ಜಂಗಮ, ಸೊಲ್ಲು ಫಲವಾಗಿ, ಮರುಜೇವಣಿ, ಕರೆ ಬಳಗ–ಕವನ ಸಂಕಲನಗಳನ್ನು ಸಾಲಾವಳಿ, ಎಡೆಗುಂಟೆ ಗಣಿಸಾಲು, ಕೇಡಿಲ್ಲವಾಗಿ, ನಿಶ್ಶಬ್ದದ ಜಾಡು–ವಿಮರ್ಶಾ ಕೃತಿಗಳನ್ನು ಪ್ರಕಟಿಸಿದ್ದಾರೆ.

ಕೃಷಿ ಬದುಕನ್ನು ಪ್ರೀತಿಸಿದಷ್ಟೇ ಉತ್ಕಟವಾಗಿ ಸಾಹಿತ್ಯ ಹಾಗೂ ಬೋಧಕನ ವೃತ್ತಿಯನ್ನು ಪ್ರೀತಿಸಿದವರು. ತಮ್ಮ ತಾತ್ವಿಕತೆಯ ಜೊತೆ ಜೊತೆ ರಾಜಿಯಾಗದ ಮನಸ್ಸಿನ ಶ್ರೀ ಎಸ್.ಜಿ. ಸಿದ್ದರಾಮಯ್ಯನವರು ಗದ್ಯವನ್ನು ಕಾವ್ಯದಷ್ಟೇ ನವಿರಾಗಿ ಬರೆಯಬಲ್ಲರು. ತಮಿಳುನಾಡಿನ ಕಾವೇರಿ ನೀರಿನ ಬೇಡಿಕೆಯನ್ನು 'ಷೈಲಾಕನ ಬೇಡಿಕೆ' ಎಂದು ಹೇಳುತ್ತಲೇ, ಟ್ರಾಕ್ಟರ್ ಅನ್ನು 'ಮಾರಿನೇಗಿಲು' ಎಂದು ಕರೆದು ಯಂತ್ರ ಸಂಸ್ಕೃತಿಯ ಘೋರತೆಯನ್ನು ಹಿಡಿದಿಡಬಲ್ಲರು. ಆಧುನಿಕತೆಯ ವೇಗದ ಬದುಕಿನಲ್ಲಿ ಎಲ್ಲೆಲ್ಲೂ ಮಾನವರದೇ ದರ್ಬಾರು. ಪರಿಸರದ ಜೀವವೈವಿಧ್ಯದ ಒಂದು ಭಾಗವಾಗಿರುವ ಮಾನವ, ಉಳಿದ ಜೀವಿಗಳ ಬದುಕಿನ ಜೊತೆ ಅನ್ಯೋನ್ಯವಾಗಿ ಹೆಜ್ಜೆ ಹಾಕುವುದನ್ನು ಕಲಿತರೆ ಅದೇ ಮಾನವತೆ. "ಈ ಹಿನ್ನೆಲೆಯಲ್ಲಿ ಇಂದು ಶಿಕ್ಷಣವನ್ನು ಮಾನವೀಕರಣಗೊಳಿಸುವ ಅಗತ್ಯವಿದೆ. ಮಾನವೀಕರಣಗೊಳಿಸುವುದೆಂದರೆ, ಅಖಂಡವಾಗಿ ನಿಸರ್ಗ ಧರ್ಮಕ್ಕೆ ಎರವಾಗದಂತೆ ಬಾಳಲು ಕಲಿಸುವುದು; ಜೀವ ಪರವಾಗಿರುವುದು. ಎಲ್ಲ ಕಲೆಗಳೂ ಈ ತತ್ವವನ್ನು ಜೀವನಸೂತ್ರವಾಗಿಸಿಕೊಂಡೇ ಉಸಿರಾಡುತ್ತಿವೆ. ಸಾಹಿತ್ಯ ಈ ಮಾತಿಗೆ ಹೊರತಲ್ಲ. ನಿಜವಾದ ಸಾಹಿತ್ಯ ಮನುಷ್ಯಕೇಂದ್ರಿತ ಮಿತಿಯಲ್ಲಿ ಬದುಕನ್ನು ಗ್ರಹಿಸದೇ ಜೀವಕೇಂದ್ರಿತ ವ್ಯಾಪ್ತಿಯಲ್ಲಿ ಸಂವೇದನಾಶೀಲವಾಗಿರುತ್ತದೆ."[೮] ಹೀಗಾಗಿ ಸಾಹಿತ್ಯ ಅಥವಾ ಸಾಹಿತಿಯ ಹೊಣೆಗಾರಿಕೆ ಜೀವಪರವೆಂಬುದನ್ನು ಒತ್ತಿ ಹೇಳುತ್ತಾರೆ ಎಸ್.ಜಿ.ಎಸ್.

ಎಸ್.ಜಿ.ಎಸ್. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಹೊರತಂದ ಕೃತಿಗಳಲ್ಲಿ 'ದೇಸಿ ಕೃಷಿಜ್ಞಾನ ಮಾಲೆ' ಗಮನಾರ್ಹ. ಮಣ್ಣು ಮತ್ತು ನೀರು, ಅರಣ್ಯ, ಬೀಜ, ಆಹಾರ–ಆರೋಗ್ಯ, ಕೃಷಿ ಆಚರಣೆ, ಕೃಷಿ ಉಪಕರಣಗಳು, ನಿರ್ಮಾಣಕಲೆ, ಕೀಟರೋಗ, ಜಾನುವಾರು, ಕುರಿಸಾಕಣೆ, ತೋಟಗಾರಿಕೆ – ವಿಷಯಗಳನ್ನು ಕುರಿತಂತೆ ತಜ್ಞ ಲೇಖಕರಿಂದ ಕೃತಿಗಳನ್ನು ಬರೆಸಿದ್ದು ಅವರ ದೇಸೀ ಪ್ರಜ್ಞೆಗೆ ಸಾಕ್ಷಿ.

---

೮. ಅದೇ ೧೯೫

5

ದುಬಾರಿ ಕೃಷಿಯಿಂದ ಬೇಸತ್ತವರು ಸಾವಯವ ಕೃಷಿ ಮಾಡುವ ಮೂಲಕ ಕೃಷಿ ದುಂದುವೆಚ್ಚವನ್ನು ಕಡಿತಗೊಳಿಸಬೇಕೆನ್ನುವ ಇವರು ಹಳ್ಳಿಯ ಜೀವನವನ್ನು ಬಿಟ್ಟು ನಗರದ ಬದುಕಿಗೆ ಆಕರ್ಷಿತರಾದವರ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರೆ. "ಇಂದು ನಮ್ಮ ಹಳ್ಳಿಗಳಲ್ಲಿ ಉಳಿದಿರುವವರು ಮುದುಕರು, ಕೈಲಾಗದವರು ಹಾಗೂ ಮಕ್ಕಳು." ಇವರು ಬೇಸಾಯ ಮಾಡುವುದಾದರೂ ಹೇಗೆ ಎಂಬುದು ಇವರ ಪ್ರಶ್ನೆ. ನಿವೃತ್ತಿಯ ನಂತರವೂ ನಗರದಲ್ಲಿ ಹಳ್ಳಿ ಬದುಕಿನ ಬಗ್ಗೆ ಮಾತಾಡುವ ಎಸ್.ಜಿ.ಎಸ್. ಅವರನ್ನು ಬಿಳಿಗೆರೆ ಕೃಷ್ಣಮೂರ್ತಿ ತಮ್ಮ ಭಾಷಣದಲ್ಲಿ ಗ್ರಾಮದ ಜನತೆಯೊಂದಿಗೆ ಬದುಕಿ ಸಾಧಿಸಿ ತೋರಬೇಕೆಂದು ಸವಾಲೆಸೆಯುತ್ತಾರೆ. ಕವಿಯಾಗಿಯೂ ಜನಪ್ರಿಯರಾಗಿರುವ ಎಸ್.ಜಿ.ಎಸ್. ದೇಸೀ ಸಂಸ್ಕೃತಿಯ ಬಗ್ಗೆ ಹೆಚ್ಚು ಒಲವನ್ನು ಹೊಂದಿರುವವರು. 'ಜನವಾಣಿ ಬೇರು, ಕವಿವಾಣಿ ಹೂವು' ಎಂದು ಹೇಳುವಂತೆ ಕವಿವಾಣಿಗೆ ಮೂಲವಾದ ಜನವಾಣಿ ಅರ್ಥಾತ್ ಜನಪದ ಕಾವ್ಯ ನಿಜವಾದ ದೇಸೀಕಾವ್ಯ. ಇಂಥ ಜನಪದ ಹಾಡುಗಳನ್ನು 'ನಾಡಿನ ಕಂಬ' ವೆಂಬ ತಮ್ಮ ಪದ್ಯದಲ್ಲಿ ಸೊಗಸಾಗಿ ವರ್ಣಿಸುತ್ತಾರೆ:

"ಬಾಳಿನ ಬೆವರಿನ
ಬದುಕಿನ ತವರಿನ
ಜೀವ ಜೀವದ ಜೀವನ ಗಾಥೆಯ
ದೇಸಿ ದಿಬ್ಬ ನಾಡಿನ ಕಬ್ಬ"

ಕೃಷಿಯೊಂದಿಗೆ ನಿರಂತರ ತೊಡಗಿರುವ ರೈತರ ಬದುಕು ಬವಣೆಯಿಂದ ಕೂಡಿದೆ. ಪ್ರತಿಯೊಬ್ಬ ಕೃಷಿಕನದೂ ಒಂದೊಂದು ವ್ಯಥೆಯ ಕಥೆಯೇ ಆಗಿದೆ. ಆದರೂ ತನ್ನ ದುಡಿತದಲ್ಲಿ ಬಿಡುವಿನ ವೇಳೆಯಲ್ಲಿ ಜನಪದರು ಕಟ್ಟಿದ ಕಾವ್ಯಗಳೆಷ್ಟು? ಸೃಷ್ಟಿಸಿದ ಕಲೆಗಳೆಷ್ಟು? ಕೇರುವಾಗ, ಕುಟ್ಟುವಾಗ, ನಾಟಿ ಮಾಡುವಾಗ, ಯಕ್ಷಗಾನ, ಬಯಲಾಟಗಳಲ್ಲದೆ ಮಂಟೇಸ್ವಾಮಿ, ಮೈಲಾರಲಿಂಗ ಮುಂತಾದವರ ಬಗ್ಗೆ ರಚಿತವಾದ ಹಾಡುಗಳು; ಸೋಮನಕುಣಿತ, ಡೊಳ್ಳು ಕುಣಿತ, ಗೊರವರ ಕುಣಿತ ಮುಂತಾದ ಕಲೆಗಳಲ್ಲಿ ತನ್ನ ದಣಿವನ್ನು ಮರೆತು ಆನಂದದಲ್ಲಿ ಮೈಮರೆಯುತ್ತಿದ್ದ ಗ್ರಾಮೀಣರ ಬದುಕು ನಿಜವಾಗಿ ಕವಿಗೇ ಅನನ್ಯವಾಗಿ ಕಂಡಿದೆ.

ಎಂ.ವಿ. ನಾಗರಾಜರಾವ್ : ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರು ಹೋಬಳಿಯ ಎಚ್. ಮೇಲನಹಳ್ಳಿಯಲ್ಲಿ ೧೯೪೧ರಲ್ಲಿ ಜನಿಸಿದರು. ಕನ್ನಡ ಮತ್ತು ಹಿಂದಿಯಲ್ಲಿ ಸ್ನಾತಕ ಪದವಿಯನ್ನು ಪಡೆದ ಇವರು ಪದವಿಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿ ಪ್ರಾಂಶುಪಾಲರಾಗಿ ಬಡ್ತಿ ಹೊಂದಿ ನಿವೃತ್ತಿ ಹೊಂದಿದರು. ಉಪನ್ಯಾಸಕರಾಗಿದ್ದಾಗಿನಿಂದಲೂ ವೃತ್ತಿಯ ಜೊತೆಗೆ ಬರವಣಿಗೆ, ಪ್ರಕಟಣೆ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಬಹುಮುಖ ವ್ಯಕ್ತಿತ್ವ ಎಂ.ವಿ. ನಾಗರಾಜರಾಯರದು. ಹಿಂದಿ, ಇಂಗ್ಲಿಷ್‌ನಿಂದ ಪತ್ತೇದಾರಿ

ಕಾದಂಬರಿಗಳ ಅನುವಾದ, ಚೀನಾ, ಶ್ರೀಲಂಕಾ ಮುಂತಾದ ದೇಶಗಳ ಮಕ್ಕಳ ಕತೆಗಳ ಅನುವಾದ, ನಾಟಕಗಳ ಅನುವಾದ, ವಿದ್ಯಾರ್ಥಿಗಳಿಗಾಗಿ ಕನ್ನಡ, ಹಿಂದಿ, ಇಂಗ್ಲಿಷ್ ವ್ಯಾಕರಣ ಕೃತಿಗಳ ರಚನೆಯನ್ನು ಮಾಡಿದ್ದಾರೆ.

ಸಿ.ಬಿ. ಮಲ್ಲಪ್ಪ, ಶ್ರೀ ಸಿದ್ಧಗಂಗಾಕ್ಷೇತ್ರ ಮುಂತಾದ ಕೃತಿಗಳು ಸ್ಥಳೀಯ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ತಮ್ಮದೇ ಆದ ಪಾತ್ರ ವಹಿಸುತ್ತವೆ. ಹಿಂದಿ ಲೇಖಕ ಅಬಿದ್ ಸುರತಿಯ 'ವಾಸ್‌ಕ ಲಜ್ಜಾ' ಕೃತಿಯನ್ನು ಮೊದಲಿಗೆ ಕನ್ನಡಕ್ಕೆ 'ಶೃಂಗಾರ ಶಯ್ಯೆ'ಯೆಂದು ಅನುವಾದಿಸಿದರು. ಆರ್. ಬಸವರಾಜು ಎಂಬ ಗೆಳೆಯರ ಮಾರ್ಗದರ್ಶನದಂತೆ 'ತರಂಗ'ಕ್ಕೆ (ವಾರಪತ್ರಿಕೆ) ಕಾದಂಬರಿಯನ್ನು ಕಳುಹಿಸಿದ್ದರಿಂದ ಅದು ಕಂತುಗಳಲ್ಲಿ ಪ್ರಕಟಗೊಂಡು ಓದುಗರನ್ನು ಆಕರ್ಷಿಸಿತು. ಇದರಿಂದ ಉತ್ಸುಕರಾದ ಲೇಖಕರು ಒಂದಾದ ನಂತರ ಒಂದರಂತೆ ಕಂಪನ, ಅಘೋರಿಗಳ ನಡುವೆ, ಪುನರ್ಮಿಲನ, ಸಾಕ್ಷಾತ್ಕಾರ ಮುಂತಾದ ಕಾದಂಬರಿಗಳನ್ನು ಅನುವಾದಿಸಿದರು. ಎಂ.ವಿ. ನಾಗರಾಜರಾಯರ 'ಶೃಂಗಾರ ಪ್ರಕಾಶನ' ತಾಲ್ಲೂಕಿನಲ್ಲಿ ಸಾಂಸ್ಕೃತಿಕ ಕೊಡುಗೆಯನ್ನು ನೀಡಿದೆ.

ಆರ್. ಬಸವರಾಜು : ದಿನಾಂಕ ೦೪.೦೭.೧೯೩೦ ರಂದು ತಿಪಟೂರು ತಾಲ್ಲೂಕಿನ ಪುಟ್ಟ ಹಳ್ಳಿ ಈಡೇನಹಳ್ಳಿಯ ಬಡಕುಟುಂಬದಲ್ಲಿ ರಂಗೇಗೌಡ ಮತ್ತು ಮರುಳಮ್ಮ ದಂಪತಿಗಳಿಗೆ ಜನಿಸಿದರು. ೧೯೫೫ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇರಿ, ಹಂತ ಹಂತವಾಗಿ ಬಡ್ತಿ ಹೊಂದಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿ ಈಗ ನಿವೃತ್ತಿ ಜೀವನ ನಡೆಸುತ್ತಿದ್ದಾರೆ. ಬಹುಕಾಲದಿಂದ ಇವರು ಚಿಕ್ಕನಾಯಕನಹಳ್ಳಿ ನಗರದಲ್ಲಿ ವಾಸಿಸುತ್ತಿದ್ದಾರೆ. ನೌಕರಿಯಿಂದ ೧೯೮೯ರ ಮಾರ್ಚ್ ೩೧ ರಂದು ನಿವೃತ್ತರಾದರು.

ಶಿವಮೊಗ್ಗದಲ್ಲಿ ಶಿಕ್ಷಕರಾಗಿದ್ದಾಗ ೧೯೫೮ರ ಸಂದರ್ಭದಲ್ಲಿ ಜಿ.ಎಸ್. ಸಿದ್ಧಲಿಂಗಯ್ಯ, ಸಣ್ಣಗುಡ್ಡಯ್ಯ ಮೊದಲಾದವರ ಸ್ನೇಹ, ಪರಿಚಯದಿಂದಾಗಿ ಕಥೆಗಳನ್ನು ಬರೆದರು. ತಾಯಿನಾಡು, ಪ್ರಜಾಮತ ಪತ್ರಿಕೆಗಳಲ್ಲಿ ಅವು ಪ್ರಕಟಗೊಂಡವು. ೧೯೫೮ರಲ್ಲಿ ಮೊದಲ ಕಥಾ ಸಂಕಲನ 'ಅನುರಾಗದ ಸುಳಿಯಲ್ಲಿ' ಪ್ರಕಟವಾಯಿತು. ಶೃಂಗೇರಿಯಲ್ಲಿ ಶಿಕ್ಷಕರಾಗಿದ್ದಾಗ (೧೯೬೦–೬೨) ಲವಕುಶ, ಮಾಂಗಲ್ಯ ಭಾಗ್ಯ ನಾಟಕಗಳು ಪ್ರಕಟಣೆ ಮತ್ತು ಪ್ರದರ್ಶನ ಕಂಡವು. ನಂತರದ ದಿನಗಳಲ್ಲಿ ಕಾದಂಬರಿ, ಜೀವನಚರಿತ್ರೆ, ಹಾಸ್ಯ ಲೇಖನ, ಬಿಡಿ ಲೇಖನಗಳನ್ನು ಬರೆಯುತ್ತಾ ಹೋದರು. ಚಿಕ್ಕನಾಯಕನಹಳ್ಳಿಗೆ ಬಂದಾಗ ಮಿತ್ರರಾದ ನಾಗರಾಜರಾಯರ 'ಶೃಂಗಾರ ಪ್ರಕಾಶನ'ದ ಮೂಲಕ ಹಲವಾರು ಕೃತಿಗಳನ್ನು ಪ್ರಕಟಿಸಿದರು. ಚಿಕ್ಕನಾಯಕನಹಳ್ಳಿಯಲ್ಲಿನ ತಮ್ಮ ಬದುಕಿನಲ್ಲಿ ೨೦ ವರ್ಷಗಳಲ್ಲಿ ೭೦ಕ್ಕೂ ಹೆಚ್ಚು ಕೃತಿಗಳನ್ನು ಬರೆದರು. ಇದುವರೆಗೂ ಒಟ್ಟು ಎಂಬತ್ತಕ್ಕೂ ಹೆಚ್ಚು ಕೃತಿಗಳನ್ನು ಬರೆದಿರುವರು.

ಆರ್. ಬಸವರಾಜು ಬಾಲ್ಯದಲ್ಲಿಯೇ ಸ್ವಾತಂತ್ರ್ಯ ಚಳುವಳಿಯನ್ನು ಕಂಡುಂಡವರು. ಬ್ರಿಟಿಷರ ವಿರುದ್ಧ ರಾಷ್ಟ್ರದಲ್ಲಿ ನಡೆದ ಚಳುವಳಿಗಳು ಇವರ ಮೇಲೆ ಪ್ರಭಾವ ಬೀರಿವೆ. ಸ್ವಾತಂತ್ರ್ಯ ಇವರಿಗೆ ಬಹು ದೊಡ್ಡ ಮೌಲ್ಯವಾಗಿ, ಅಭಿಮಾನದ ಸಂಗತಿಯಾಗಿ ಪರಿಣಮಿಸಿತು. ಈಸೂರಿನಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯನ್ನು ಕುರಿತ ಕಾದಂಬರಿ–ಈಸೂರಿನ ಚಿರಂಜೀವಿಗಳು–ಬರೆಯಲು ಅವರಲ್ಲಿದ್ದ ದೇಶಾಭಿಮಾನ ಮತ್ತು ಸ್ವಾತಂತ್ರ್ಯವೀರರ ಸ್ಮರಣೆ ಇವೆರಡೂ ಕಾರಣವಿರಬಹುದು. ಈಸೂರಿನ ಘಟನೆ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯ ಪುಟಗಳಲ್ಲಿ ಮರೆಯಲಾಗದ ಘಟನೆ. 'ಏಸೂರು ಕೊಟ್ಟರೂ ಈಸೂರು ಕೊಡೆವು' ಎಂದು ಶಪಥಗೈದು ಆತ್ಮಾಭಿಮಾನವನ್ನು ಮೆರೆದು ಹೋರಾಡಿದ ಈಸೂರಿನ ಆಬಾಲ ವೃದ್ಧರಾದಿಯಾಗಿ ಇಡೀ ಸಮುದಾಯ ಜನಸಾಮಾನ್ಯರ ಹೋರಾಟದ ನೈಜ ಘಟನೆ ಅದು. ದತ್ತು ಮಗ ಶಂಕರಪ್ಪನನ್ನು ಮುಂಥಿಟ್ಟುಕೊಂಡು ಬಸವಣ್ಯಪ್ಪ ನಡೆಸಿದ ಕ್ರಾಂತಿಕಾರಕ ಹೋರಾಟ ಅದು. ಆದರೆ ಅಲ್ಲಿ ಗುಣಾತ್ಮಕ ಅಂಶವೆಂದರೆ ಯಾವುದೇ ವ್ಯಕ್ತಿ ಮುಖ್ಯವಾಗುವುದಿಲ್ಲ. ಇಡೀ ಊರಿನ ಸಂಘಟನಾತ್ಮಕ ಆತ್ಮಬಲ ಈ ವ್ಯಕ್ತಿಗಳ ಹಿಂದಿನ ಜೀವಶಕ್ತಿಯಾಗಿದೆ. ವ್ಯಕ್ತಿಗಳು ನಿರ್ದೇಶನ ನೀಡುವ ತಲೆಯಾಳುಗಳಾದರೆ ಇಡೀ ಹೋರಾಟದ ಬಗೆಯನ್ನು ಪರಿಪಾಲಿಸುವ ಕೆಚ್ಚಿನಿಂದ ಮುನ್ನುಗ್ಗುವ ಶಕ್ತಿ ಈಸೂರಿನ ಅಖಂಡ ಜನಸಮುದಾಯದ ಆತ್ಮಶ್ರೀಯಾಗಿದೆ. ಬ್ರಿಟಿಷರ ದಬ್ಬಾಳಿಕೆಯ ವಿರುದ್ಧವಾಗಿ ತಮ್ಮ ಗ್ರಾಮಕ್ಕೆ ಸೀಮಿತಗೊಳಿಸಿಕೊಂಡಂತೆ ಸ್ವತಂತ್ರ ಸರ್ಕಾರವನ್ನು ರಚಿಸಿಕೊಂಡು ಬಾಳುವ ಕ್ರಿಯೆಯಲ್ಲಿ ಈ ಆತ್ಮಶ್ರೀ ಮೆರೆದಿದೆ. ಅಂಥ ಸಂದರ್ಭದಲ್ಲಿ ಜರುಗಿದ ಎಲ್ಲ ಹಿಂಸೆ ಪ್ರತಿರೋಧಗಳಿಗೂ ಆತ್ಮಾಭಿಮಾನದಿಂದ ಎದೆಯೊಡ್ಡಿ ಹೋರಾಡಿದ ಹುತಾತ್ಮರಾದವರ ಕಥೆ ಇದಾಗಿದೆ.

ಸ್ಥಳೀಯ ಸಾಂಸ್ಕೃತಿಕ ಸಂಗತಿಗಳನ್ನು ಅನಾವರಣ ಮಾಡುವ ಅನೇಕ ಕೃತಿಗಳನ್ನು ಆರ್.ಬಿ. ರಚಿಸಿದ್ದಾರೆ. ಉದಾ : ರಂಗಭೂಮಿಯ ಮೂವರು ಮೇರು ನಟರು, ಜನಮೆಚ್ಚಿದ ಜನಪ್ರತಿನಿಧಿ ಸಿ.ಎಚ್. ಲಿಂಗದೇವರು, ಬಹುರೂಪಿ ಬಸವಯ್ಯ, ಮದಲಿಂಗನ ಕಣಿವೆ, ಮೋಡಿ ಮಾಟ ಎಂಬ ಅದ್ಭುತ ಮಾಯಾಜಾಲ ಮುಂತಾದವು. ಪ್ರಸ್ತುತ ಒಂದೆರಡು ಕೃತಿಗಳ ಪರಿಚಯ ಮಾಡಬಹುದಾಗಿದೆ. 'ರಂಗಭೂಮಿಯ ಮೂರು ಮೇರು ನಟರು' ಕೃತಿಯು ಚಿಕ್ಕನಾಯಕನಹಳ್ಳಿಯ ಅಭಿನವ ಭಕ್ತ ಶಿರೋಮಣಿ ಶ್ರೀ ಸಿ.ಬಿ. ಮಲ್ಲಪ್ಪ, ಕಲಾತಪಸ್ವಿ ಬಿ.ಕೆ. ಈಶ್ವರಪ್ಪ ಮತ್ತು ಹಾಸ್ಯ ಕಲಾನಿಪುಣ ಪಂಚಲಿಂಗಯ್ಯನವರ ಬದುಕು ಮತ್ತು ಕಲಾಸೇವೆಯನ್ನು ಕುರಿತದ್ದಾಗಿದೆ. ಹಂದನಕೆರೆಯ ಮೋಡಿ ಕಲಾವಿದನಾದ ಕರಿಯಣ್ಣಶೆಟ್ಟಿಯ ಮೋಡಿ ಕಲೆಯನ್ನು 'ಮೋಡಿ, ಮಾಟ ಎಂಬ ಅದ್ಭುತ ಮಾಯಾಜಾಲ' ಕೃತಿಯಲ್ಲಿ ವಿವರಿಸುವರು. ವಿವಿಧ ಊರುಗಳಲ್ಲಿ ಪ್ರದರ್ಶನ ನಡೆಸಿ ಯಶಸ್ವಿಯಾದ ಪ್ರಸಂಗಗಳನ್ನು ಈ ಕೃತಿ ನಮಗೆ ಕಟ್ಟಿಕೊಡುತ್ತದೆ. 'ಮದಲಿಂಗನ ಕಣಿವೆ' ಕಾದಂಬರಿಯು ಸ್ಥಳೀಯವಾಗಿ ನಡೆದಿರುವ ಐತಿಹಾಸಿಕ ಪ್ರೇಮಕಥನವನ್ನು ಕೆಲ ಕಲ್ಪನೆಯ ಸಂಗತಿಗಳೊಂದಿಗೆ ವಿವರಿಸುತ್ತದೆ.

ಸಾ.ಶಿ. ಮರುಳಯ್ಯ : ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ ಹೋಬಳಿಯಲ್ಲಿ ೨೮ನೇ ಜನವರಿ ೧೯೩೧ ರಂದು ಕೂಲಿ ಮಠದ ಓಜಯ್ಯಗಳಾದ ಶ್ರೀ ಶಿವರುದ್ರಪ್ಪ ಮತ್ತು ಶ್ರೀಮತಿ ಸಿದ್ದಮ್ಮನವರಿಗೆ ಹುಟ್ಟಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೧೯೫೫ ರಲ್ಲಿ ಬಿ.ಎ., ೧೯೫೬ ರಲ್ಲಿ ಎಂ.ಎ., ೧೯೭೧ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಯಲದಿಂದ ಪಿಎಚ್.ಡಿ. ಪದವಿ ಪಡೆದರು. ತುಮಕೂರು, ದಾವಣಗೆರೆ, ಶಿವಮೊಗ್ಗ, ಬೆಂಗಳೂರು ಮುಂತಾದ ಕಡೆಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಶಿವತಾಂಡವ, ಕೆಂಗನಕಲ್ಲು, ವಿಪರ್ಯಾಸ, ಮುಂತಾದ ಕವನ ಸಂಕಲನಗಳನ್ನೂ, ನೆಲದ ಸೊಗಡು ಕಥಾಸಂಕಲನವನ್ನೂ, ಭಾರತರತ್ನ, ಹೂವ ತಂದವರು, ದೇವುಡು, ಕನ್ನಡದ ಮೂರು ಕಟ್ಟಾಳುಗಳು ಮುಂತಾದ ಜೀವನಚಿತ್ರಣಗಳನ್ನೂ; ಮರೀಬೇಡಿ, ಎರಡು ನಾಟಕಗಳು, ವಿಜಯವಾತಾಪಿ ಮುಂತಾದ ನಾಟಕಗಳನ್ನೂ ಬರೆದಿದ್ದಾರೆ. ಭಾಸನ ಮಕ್ಕಳು, ಅಭಿವ್ಯಕ್ತಿ ಮುಂತಾದವು ಇವರ ವಿಮರ್ಶಾ ಕೃತಿಗಳು.

ಸೀತಾವನವಾಸ ಸಂಗ್ರಹ, ಹರಿಹರನ ಹತ್ತು ರಗಳೆಗಳು, ಕೃತಾರ್ಥ, ಗದ್ಯ ಕುಸುಮಾಂಜಲಿ ಮುಂತಾದವು ಸಂಪಾದಿತ ಕೃತಿಗಳು. ಸ್ವಪ್ನವಾಸವದತ್ತ, ಪ್ರಾಥಮಿಕ ಶಿಕ್ಷಣದಲ್ಲಿ ಕನಿಷ್ಠ ಕಲಿಕಾ ಹಂತಗಳು ಇವರ ಅನುವಾದಿತ ಕೃತಿಗಳು. "ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ" ಎಂಬ ವಿಷಯವನ್ನು ಕುರಿತು ಸಂಶೋಧನೆ ಮಾಡಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿ ಪಡೆದರು. ಇದುವರೆಗೂ ಅವರು ೮೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

೧೯೫೩ ರಲ್ಲಿ ಅವರ 'ಶಿವತಾಂಡವ' ಪ್ರಥಮ ಕವನ ಸಂಕಲನ ಬೆಳಕು ಕಂಡಿತು. ಅನಂತರ ಒಂದಾದ ನಂತರ ಒಂದು ಕೃತಿಗಳು ಪ್ರಕಟವಾದವು. ಅವರ ಜನಪದ ಕಥೆಗಳು ಎಂಬ ಸಂಪಾದಿತ ಕೃತಿಯಲ್ಲಿ 'ಹುಳಿಯಾರು ಕೆಂಚಮ್ಮ'ನನ್ನು ಕುರಿತ ಐತಿಹ್ಯದ ವಿವರಗಳನ್ನು ಒಂದೆಡೆ ವಿವರಿಸುತ್ತಾರೆ. ಬೂದಿಹಾಳು, ವಿರಕ್ತ ಮಠದ ಅಧಿಪತಿಗಳಾದ ಶ್ರೀ ಸಿದ್ಧಬಸವ ಶಿವಯೋಗಿಗಳು 'ಶ್ರೀ ಮರುಳಸಿದ್ದೇಶ್ವರ ಮಹಾಪುರಾಣ' ಎಂಬ ಪುರಾಣ ಕಾವ್ಯವನ್ನು ರಚಿಸಿದ್ದರು. ಭಾಮಿನಿ ಷಟ್ಪದಿಯಲ್ಲಿರುವ ಈ ಕೃತಿಯನ್ನು ಸಾ.ಶಿ. ಮರುಳಯ್ಯನವರು ಗದ್ಯರೂಪದಲ್ಲಿ ೧೯೮೫ರಲ್ಲಿ 'ಸಾಮರಸ್ಯದ ಶಿಲ್ಪಿ' ಎಂಬ ಹೆಸರಿನಲ್ಲಿ ತಂದಿದ್ದಾರೆ. ಈ ಕೃತಿಯಲ್ಲಿ ಸ್ಥಳೀಯ ಸ್ಥಳನಾಮಗಳ ವಿವರ, ಪಾಳೇಗಾರರ ವಿಚಾರಗಳು, ಸ್ವಾಮಿಗಳ ಪವಾಡದ ವಿಚಾರ, ಮೊದಲಾದವುಗಳ ವಿವರವಿದೆ.

ತೀ.ನಂ. ಶಂಕರನಾರಾಯಣ : ತೀ.ನಂ. ಶ್ರೀಕಂಠಯ್ಯನವರ ಬಂಧುವರ್ಗದವರು ತೀ.ನಂ. ಶಂಕರನಾರಾಯಣ. ತೀರ್ಥಪುರದವರಾದ ಇವರು ತೀರ್ಥಪುರ ಮತ್ತು ಶೆಟ್ಟಿಕೆರೆಗಳಲ್ಲಿ ಪ್ರಾಥಮಿಕ ಶಿಕ್ಷಣ ಮಾಡಿ ಪ್ರೌಢವ್ಯಾಸಂಗವನ್ನು ಮೈಸೂರಿನಲ್ಲಿ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿಯನ್ನೂ ಮಾನಸಗಂಗೋತ್ರಿಯಲ್ಲಿ ಎಂ.ಎ. ಪದವಿಯನ್ನೂ ರ್‍ಯಾಂಕ್‌ನೊಂದಿಗೆ

ಪಡೆದರು. ಪ್ರಸ್ತುತ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದಲ್ಲಿ ಸಂಶೋಧನಾ ವಿಭಾಗದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜಾನಪದ ಮೈಲಿಗಲ್ಲುಗಳು, ಜಾನಪದ ವಿಚಾರ, ಕಾಡುಗೊಲ್ಲರು ಮುಂತಾದವು ಅವರ ಸ್ವತಂತ್ರ ಕೃತಿಗಳು. 'ಸಂಕೀರ್ಣ ಜನಪದ ಕಥೆಗಳು' ಸಂಪಾದಿತ ಕೃತಿ. ತೀ.ನಂ.ಶ್ರೀ ಯವರಿಗೆ ಅರ್ಪಿಸಿದ 'ಶ್ರೀಕಂಠತೀರ್ಥ' ಎಂಬ ಅಭಿನಂದನಾ ಗ್ರಂಥಕ್ಕೆ ಸಹ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ೧೯೯೮ರಲ್ಲಿ ನಡೆದ ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ಎಂಬ ಅವರ ಸಂಶೋಧನಾ ಮಹಾಪ್ರಬಂಧದಲ್ಲಿ ಕಾಡುಗೊಲ್ಲರ ಜೀವನವಿಧಾನವನ್ನು ಸಮಗ್ರವಾಗಿ ಅಧ್ಯಯನ ಮಾಡಿದ್ದಾರೆ. ಬುಡಕಟ್ಟುಗಳ ವಿವರ, ಸಾಮಾಜಿಕ ಸ್ಥಿತಿಗತಿ, ವೇಷಭೂಷಣ, ಸಾಹಿತ್ಯ, ವೈದ್ಯ, ಕಲೆ, ದೈವಗಳು, ಹಬ್ಬ, ಜಾತ್ರೆ, ಆಚರಣೆಗಳು ಮುಂತಾದವುಗಳ ಆಳವಾದ ಅಧ್ಯಯನ ಮಾಡಲಾಗಿದೆ. ಜಾನಪದೀಯವಾದ ಈ ಅಧ್ಯಯನದಲ್ಲಿ ಈ ಭಾಗದ ಕಾಡುಗೊಲ್ಲರ ಸಾಂಸ್ಕೃತಿಕ ವಿವರಗಳು ಕಂಡುಬರುತ್ತವೆ. ಹೀಗಾಗಿ ಸ್ಥಳೀಯ ಕಾಡುಗೊಲ್ಲರ ಸಾಂಸ್ಕೃತಿಕ ವಿವರಗಳನ್ನು ನೀಡುವ ಮಹತ್ವದ ಕೃತಿಯಾಗಿದೆ. 'ಜಾನಪದ ವಿಚಾರ' ಕೃತಿಯಲ್ಲಿ ವಸ್ತುವೈವಿಧ್ಯವನ್ನೊಳಗೊಂಡ ವಿದ್ವತ್ಪೂರ್ಣ ಪ್ರಬಂಧಗಳಿವೆ. ಅವುಗಳಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಂಸ್ಕೃತಿಯ ಒಂದು ಪ್ರಧಾನ ನೆಲೆಯನ್ನು ಒಳಗೊಂಡ 'ಶೆಟ್ಟಿಕೆರೆಯ ಕೆಂಪಮ್ಮ ಜಾತ್ರೆ' ಪ್ರಬಂಧದಲ್ಲಿ ಜಾತ್ರೆಯ ಸಮಗ್ರ ಅಧ್ಯಯನವನ್ನು ಮಾಡಲಾಗಿದೆ. ಸ್ಥಳೀಯ ಸಂಸ್ಕೃತಿಗೆ ಸಂಬಂಧಿಸಿದಂತೆ ಅಪಾರವಾದ ಅರಿವನ್ನು ಮೂಡಿಸುವಲ್ಲಿ ಇವರ ಈ ಕೃತಿ ಮಹತ್ವಪೂರ್ಣವಾಗಿದೆ.

□□□

ಅನುವಾದಕರಾಗಿ ಎಸ್.ಜಿ. ನರಸಿಂಹಾಚಾರ್
(೧೮೬೨-೧೯೦೭)

– ಪ್ರೊ. ಕೆ.ಎನ್. ಗಂಗಾನಾಯಕ್

ಹೊಸಗನ್ನಡ ಅರುಣೋದಯ ಕಾಲದ ಪ್ರವರ್ತಕರು, ಕಣ್ಮಣಿಗಳು, ಪ್ರಸಿದ್ಧ ವಿದ್ವಾಂಸರು ಹಾಗೂ ಶ್ರೇಷ್ಠ ಕವಿಗಳು. ಸಂಸ್ಕೃತ, ತಮಿಳು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದ ಎಸ್.ಜಿ. ನರಸಿಂಹಾಚಾರ್ ಅವರು ಬಿ.ಎಂ.ಶ್ರೀ ಅವರ ಶಿಷ್ಯ ವರ್ಗದಲ್ಲಿ ಪ್ರಮುಖರು. ೧೮೬೨ ರಲ್ಲಿ ಅಳಸಿಂಗಾಚಾರ್ಯ ಮತ್ತು ಸೀತಮ್ಮ ದಂಪತಿಗಳಿಗೆ ಶ್ರೀರಂಗಪಟ್ಟಣದಲ್ಲಿ ಜನಿಸಿದ ಇವರು ಶ್ರೀರಂಗಪಟ್ಟಣ ಮತ್ತು ಮೈಸೂರಿನಲ್ಲಿ ವ್ಯಾಸಂಗ ಮಾಡಿದರು. ಶ್ರೀರಂಗಪಟ್ಟಣದಲ್ಲಿ ಕೆಲಕಾಲ ಉಪಾಧ್ಯಾಯರಾಗಿ ಸೇವೆಸಲ್ಲಿಸಿದ ಇವರು ನಂತರ ೧೮೮೭ ರಲ್ಲಿ ಶಿಕ್ಷಣ ಇಲಾಖೆಯಲ್ಲಿ ಭಾಷಾಂತರಕಾರರಾಗಿ ಸೇವೆ ಸಲ್ಲಿಸಲಾರಂಭಿಸಿದರು. ೧೮೯೧ರಲ್ಲಿ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯಲ್ಲಿ ಸಂಚಾರಿ ಪಂಡಿತರಾಗಿ, ಗ್ರಂಥಪಾಲಕರಾಗಿ ಕಾರ್ಯನಿರ್ವಹಿಸಿದರು. ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಗ ಇವರು ಆದಿಪುರಾಣ (೧೯೦೦) ಮತ್ತು ಜಗನ್ನಾಥವಿಜಯ (೧೯೦೪) ಎಂಬ ಅಮೂಲ್ಯವಾದ ಪ್ರಾಚೀನ ಹಸ್ತಪ್ರತಿಗಳನ್ನು ಸಂಪಾದಿಸಿ, ಪರಿಷ್ಕರಿಸಿ ಪ್ರಕಟಿಸಿದುದು ಕನ್ನಡಕ್ಕೆ ಒಂದು ವರದಾನವಾಗಿ ಪರಿಣಮಿಸಿತು. ಭಾಷಾಂತರಕಾರರಾಗಿದ್ದ ಇವರು ಹಿರಿಯ ಅಧಿಕಾರಿಗಳ ಗಮನ ಸೆಳೆದು ತಮ್ಮ ಹುದ್ದೆಯ ಜೊತೆಗೆ ಆಗಾಗ ಭಾಷಾಂತರಕಾರನ ಕೆಲಸವನ್ನೂ ನಿರ್ವಹಿಸುತ್ತಿದ್ದರೆಂಬುದನ್ನು ಕಾಣಬಹುದು. ಎಂ.ಬಿ. ಶ್ರೀನಿವಾಸಯ್ಯಂಗಾರ್ ಅವರ ಸ್ಥಾನದಲ್ಲಿ ಒಂದು ತಿಂಗಳು ಇಪ್ಪತ್ತಮೂರು ದಿನ ತಾತ್ಕಾಲಿಕ ಭಾಷಾಂತರಕಾರರಾಗಿ ಕೆಲಸ ಮಾಡಿದ್ದ ಇವರು ೧೮೯೨ರಲ್ಲಿ ಶಿಕ್ಷಣ ಇಲಾಖೆಯಲ್ಲಿ ಭಾಷಾಂತರಕಾರರಾಗಿ ನೇಮಕವಾದರು.

೧೮೯೨ರಲ್ಲಿ ಇವರು ಎಂ.ಎ. ರಾಮಾನುಜಯ್ಯಂಗಾರರ ಜೊತೆಗೂಡಿ 'ಕರ್ನಾಟಕ ಕಾವ್ಯಮಂಜರಿ' ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಅದರಲ್ಲಿ ಅನೇಕ ಹಳಗನ್ನಡ ಕಾವ್ಯಗಳನ್ನು ಸಂಗ್ರಹಿಸಲು ಪ್ರಯಾಸಪಟ್ಟು ಯಶಸ್ವಿಯಾಗಿರುವುದನ್ನು ಕಾಣುತ್ತೇವೆ. ಕಾವ್ಯಮಂಜರಿ ಮಾಸಪತ್ರಿಕೆ ಕಾರಣಾಂತರಗಳಿಂದ ನಿಂತುಹೋದ ಮೇಲೆ ೧೮೯೯ ರಲ್ಲಿ ಮತ್ತೆ ಇವರು ಎಂ.ಎ. ರಾಮಾನುಜಯ್ಯಂಗಾರರ ಜೊತೆಗೂಡಿ

'ಕರ್ನಾಟಕ ಕಾವ್ಯಕಲಾನಿಧಿ' ಎಂಬ ಹೊಸ ಪತ್ರಿಕೆಯನ್ನು ಆರಂಭಿಸಿದರು. ಈ ಕಾವ್ಯಮಾಲೆಯಲ್ಲಿ ಆದಿಕಾಲದಿಂದ ಹಿಡಿದು ೨೦ನೆಯ ಶತಮಾನದವರೆಗಿನ ಅನೇಕ ಕವಿಗಳ ಗದ್ಯ, ಚಂಪೂ ಕಾವ್ಯ, ನಾಟಕ, ಕೀರ್ತನೆ, ಶತಕ, ಸಾಂಗತ್ಯ, ನಿಘಂಟು, ಛಂದಸ್ಸು, ವ್ಯಾಕರಣ ಮತ್ತು ಅಲಂಕಾರಶಾಸ್ತ್ರಗಳನ್ನೊಳಗೊಂಡು ಸು. ೭೫ಕ್ಕೂ ಹೆಚ್ಚು ಉದ್ಗ್ರಂಥಗಳನ್ನು ಪರಿಷ್ಕರಿಸಿ ವಿಮರ್ಶಿಸಿರುವುದನ್ನು ಕಾಣಬಹುದು. ಅವುಗಳಲ್ಲಿ ಗದಾಯುದ್ಧ, ಯಶೋಧರ ಚರಿತೆ, ಗಿರಿಜಾ ಕಲ್ಯಾಣ, ಕಬ್ಬಿಗರ ಕಾವ, ರಾಮಾಶ್ವಮೇಧ, ಮೋಹನ ತರಂಗಿಣಿ, ಛಂದೋಂಬುಧಿ, ಮೊದಲಾದವುಗಳು ಪ್ರಮುಖ ಗ್ರಂಥಗಳಾಗಿವೆ. ಹೀಗೆ ಇವರ ಪ್ರತಿಭೆ, ಪಾಂಡಿತ್ಯಗಳೆರಡೂ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ಹೊರಹೊಮ್ಮಿದೆ. 'ಕರ್ನಾಟಕ ಕವಿಚರಿತೆ' ಯ ಪ್ರಥಮ ಸಂಪುಟ ಸಿದ್ಧಗೊಳ್ಳುತ್ತಿದ್ದಾಗ ಇವರು ಆರ್. ನರಸಿಂಹಾಚಾರ್ಯರಿಗೆ ಸಹಾಯಕರಾಗಿದ್ದರಂತೆ.

ಶಿಕ್ಷಣ ಇಲಾಖೆಯಲ್ಲಿ ಭಾಷಾಂತರಕಾರರಾಗಿದ್ದ ಎಸ್.ಜಿ. ನರಸಿಂಹಾಚಾರ್ ಅವರು ಹಳೆಯ ಮೈಸೂರು ಸಂಸ್ಥಾನದಲ್ಲಿ ಕನ್ನಡ ಭಾಷಾ ಸಾಹಿತ್ಯದ ಅಭಿವೃದ್ಧಿಗಾಗಿ ಏರ್ಪಟ್ಟ ಸಮಿತಿಗಳಲ್ಲಿ, ಪಠ್ಯನಿಯಾಮಕ ಸಮಿತಿಗಳಲ್ಲಿ, ವಿವಿಧ ಮಟ್ಟದ ಪರೀಕ್ಷಾ ಮಂಡಳಿಗಳಲ್ಲಿ ಸೇವೆಸಲ್ಲಿಸಿದ್ದಾರೆ. ಹೀಗೆ ಎಸ್.ಜಿ.ನ ಅವರು ವಿದ್ಯಾ ಇಲಾಖೆಯಲ್ಲಿದ್ದುದರಿಂದ ಶಾಲಾಪಠ್ಯಪುಸ್ತಕಗಳ ಅಗತ್ಯವನ್ನು ಪೂರೈಸಬೇಕಾಗಿತ್ತು. ಸ್ವತಃ ಇಂಗ್ಲಿಷ್ ಮತ್ತು ಸಂಸ್ಕೃತ ವಿದ್ವಾಂಸರಾಗಿದ್ದ ಇವರು ಶಾಲಾ ಪಠ್ಯಪುಸ್ತಕಗಳಿಗಾಗಿ ಅನೇಕ ಇಂಗ್ಲಿಷ್ ಕವಿತೆಗಳು ಹಾಗೂ ಸಂಸ್ಕೃತ ಕಾವ್ಯಖಂಡಗಳನ್ನು ಹೊಸಗನ್ನಡಕ್ಕೆ ಅನುವಾದಿಸತೊಡಗಿದರು. ಒಂದು ಹಂತದಲ್ಲಿ ಆಗ ಕನ್ನಡ ಕಾವ್ಯ ಪರಂಪರೆ ತನ್ನ ಸತ್ವವನ್ನು ಕಳೆದುಕೊಂಡಿತ್ತು. ಆಗಿನ ಕನ್ನಡ ಕವಿತೆಗಳು ಸುತ್ತಣ ವಾಸ್ತವ ಬದುಕಿಗೆ ಸ್ಪಂದಿಸದೆ ನೀರಸವೆನಿಸಿದ್ದವು. ಜೊತೆಗೆ ಸಾಂಪ್ರದಾಯಿಕ ಬದುಕಿನಲ್ಲೂ ಇದು ತಲ್ಲೀನತೆಯನ್ನು ಉಳಿಸಿಕೊಳ್ಳದೆ ಅವಸಾನದ ಅಂಚಿನಲ್ಲಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಿದ್ದ ಕಾಲದಲ್ಲಿ ಕನ್ನಡ ಕಾವ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಲು ಎಸ್.ಜಿ. ನರಸಿಂಹಾಚಾರ್ ಅವರು ಶ್ರಮಿಸಿರುವುದನ್ನು ಕಾಣಬಹುದು. ಇವರು ಆಂಗ್ಲ ಕವಿತೆಗಳಲ್ಲಿದ್ದ ಚೆಲುವಿಗೆ ಮನಸೋತು ಅವುಗಳನ್ನು ಕನ್ನಡದಲ್ಲಿ ಅನುವಾದಿಸುವ ಮೂಲಕ ಕನ್ನಡ ಕಾವ್ಯ ಸಂಪ್ರದಾಯವನ್ನು ಶ್ರೀಮಂತಗೊಳಿಸಿದರು. ಇಂಗ್ಲಿಷ್ ಕಾವ್ಯವನ್ನು ಕನ್ನಡದಲ್ಲಿ ಭಾಷಾಂತರ ಮಾಡಿದ ಕೆಲಸಕ್ಕೆ ಸುಮಾರು ಒಂದು ಶತಮಾನದ ಇತಿಹಾಸವಿದೆ. ಎಸ್.ಜಿ.ನ ಅವರು ಈ ದಿಕ್ಕಿನಲ್ಲಿ ಕೆಲಸಮಾಡಿದ ಮೊದಲಿಗರೆಂದು ತಿಳಿದು ಬರುತ್ತದೆ. ಹೀಗೆ ಭಾಷಾಂತರಿಸುವಾಗ ಹೊಸ ಕಾವ್ಯಕ್ಕೆ ಹೊಸ ಭಾಷಾರೂಪ ಹೇಗೆ ಮುಖ್ಯವೋ ಹಾಗೆ ಛಂದಸ್ಸಿನ ವಿಚಾರದಲ್ಲೂ ಹೊಸ ಪ್ರಯೋಗ ನಡೆಯಬೇಕೆಂದು ಹೇಳಿ ಅದನ್ನು ತಮ್ಮ ಕವಿತೆಗಳಲ್ಲಿ ಪ್ರಯೋಗ ಮಾಡಿದ್ದಾರೆ. ಅದರ ಫಲವೇ ಚೌಪದಿ, ಷಟ್ಪದಿ, ಸಾಂಗತ್ಯಗಳಾಗಿ ಇವರ ಕವಿತೆಗಳಲ್ಲಿ ಹೊಸ ರೂಪು ಪಡೆದಿವೆ. ಇವರ ಕಾರ್ಯವೈಖರಿಯನ್ನು ಕುರಿತು ತೀ.ನಂ.ಶ್ರೀ ಅವರು

"ಇಪ್ಪತ್ತನೆಯ ಶತಮಾನದ ಮೊದಲ ದಶಕಗಳಲ್ಲಿ ಪ್ರಚುರವಾಗಿದ್ದ ಕನ್ನಡ ಪಠ್ಯ ಪುಸ್ತಕಗಳಲ್ಲಿ ಸೇರಿದ್ದ ಇಂಗ್ಲಿಷ್ ಪದ್ಯಾನುವಾದಗಳೆಲ್ಲವೂ ನಮಗೆ ತಿಳಿದಮಟ್ಟಿಗೆ ಎಸ್.ಜಿ.ನರಸಿಂಹಾಚಾರ್ಯರವೇ ಎಂದು ತೋರುತ್ತದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ಶ್ರೀ ಅವರಿಗಿಂತ ಮೊದಲು ಇಂಗ್ಲಿಷ್ ಕಾವ್ಯ ಭಾಗಗಳನ್ನು ಅನುವಾದಿಸಿದ ಕೀರ್ತಿ ಎಸ್.ಜಿ.ನ ಅವರಿಗೆ ಸಲ್ಲುತ್ತದೆ. ಆದರೆ ಇವರ ಭಾಷಾಂತರಿತ ಕವನಗಳೆಲ್ಲ ಪಠ್ಯಪುಸ್ತಕಗಳಲ್ಲಿ ಚದುರಿಹೋಗಿವೆ. ಹಾಗಾಗಿ ಅವೆಲ್ಲವೂ ಒಟ್ಟಾಗಿ ಒಂದೆಡೆ ದೊರೆಯದಿರುವುದು ದುರ್ದೈವದ ಸಂಗತಿ.

ಎಸ್.ಜಿ. ನರಸಿಂಹಾಚಾರ್ ಅವರು ಅನುವಾದಿಸಿರುವ ಕೃತಿಗಳು :

೧. ಅಜನೃಪ ಚರಿತೆ – ಕಾಳಿದಾಸನ ರಘುವಂಶ ಕಾವ್ಯದಿಂದ ಅನುವಾದಿಸಿರುವ ಕಾವ್ಯ ಖಂಡಗಳು
೨. ದಿಲೀಪ ಚರಿತೆ – ಮೂಲ ದೊರಕಿಲ್ಲ
೩. ಆರ್ಯ ಮಹಿಮಾದರ್ಶ – ಹೆನ್ರಿ ವರ್ಡ್ಸ್‌ವರ್ತ್ ಲಾಂಗ್‌ಫೆಲೋನ A Pslam of Life – ಎಂಬ ಕವನದ ಒಂದು ಭಾಗದ ಅನುವಾದ.
೪. ಉತ್ತಮ ರಾಜ್ಯ – Felicia Dorothea Hemans ಎಂಬಾಕೆಯ "The Better Land" ಎಂಬ ಕವನದ ಅನುವಾದ.
೫. ಕುರುಡು ಹುಡುಗ – Colley Cibber ಕವಿಯ "The Blind Boy ಎಂಬ ಕವನದ ಅನುವಾದ
೬. ಕೋಗಿಲೆ – William Wordsworth ಕವಿಯ 'To the Cuckoo' ಕವನದ ಅನುವಾದ
೭. ಚಂಡಮಾರುತದ ಪದ್ಯಗಳು – ಷೇಕ್ಸ್‌ಪಿಯರನ 'The Tempest' ನಾಟಕದಲ್ಲಿ ಬರುವ ನಾಲ್ಕು ಪದ್ಯಗಳ ಅನುವಾದ
೮. ನಕ್ಷತ್ರ – Jane Taylor ಕವಿಯ 'The star' ಕವನದ ಅನುವಾದ
೯. ಬಿಡುವು – ಮೂಲ ದೊರಕಿಲ್ಲ
೧೦. ಮಕ್ಕಳು ಮಲಗುವ ಹೊತ್ತು – ಮೂಲ ದೊರಕಿಲ್ಲ
೧೧. ಮರಳಿ ಯತ್ನವ ಮಾಡು – T.H. Palmer ಕವಿಯ Try try again ಕವನದ ಅನುವಾದ
೧೨. ಪ್ರೋಷಿತ ಪ್ರಿಯ ಸಮಾಗಮಂ – ಆಲಿವರ್ ಗೋಲ್ಡ್‌ಸ್ಮಿತ್ ಕವಿಯ The Hermit ಕವನದ ಅನುವಾದ
೧೩. ಉತ್ತರರಾಮಚರಿತಂ – ನಾಟಕದ ಅನುವಾದ
೧೪. ಗಲಿವರನ ದೇಶಸಂಚಾರ – ಜೊನಾಥನ್ ಸ್ವಿಫ್ಟ್‌ನ **'ಗಲಿವರ್ ಟ್ರಾವಲ್ಸ್'** ಕೃತಿಯ ಅನುವಾದ

ಎಸ್.ಜಿ. ನರಸಿಂಹಾಚಾರ್ ಅವರು ಅನುವಾದಿಸಿರುವ, ಆದರೆ ಇದುವರೆವಿಗೂ ಲಭ್ಯವಿಲ್ಲದಿರುವ ಕೃತಿಗಳು :

೧. ಈಸೋಪನ ನೀತಿಕಥೆಗಳು
೨. ಗಯ್ಯಾಳಿಯನ್ನು ಸಾಧು ಮಾಡುವಿಕೆ
೩. ಭಾರವಿ
೪. ಮುಕುಂದಮಾಲೆ

ಈ ಕೃತಿಗಳು ದೊರೆಯುವವರೆಗೆ ಇವುಗಳ ಬಗೆಗೆ ಇದಮಿತ್ಥಂ ಎಂದು ಹೇಳಲು ಸಾಧ್ಯವಿಲ್ಲ. ಆದರೂ ಈಸೋಪನ ನೀತಿಕಥೆಗಳು, ನೀತಿಸಾರವೆಂದೂ, 'ಗಯ್ಯಾಳಿಯನ್ನು ಸಾಧು ಮಾಡುವಿಕೆ' ಷೇಕ್ಸ್‌ಪಿಯರನ 'Taming of the Shrew' ನಾಟಕದ ಅನುವಾದವೆನ್ನಲು ಅವಕಾಶವಿದೆ. ಎಸ್.ಜಿ. ನರಸಿಂಹಾಚಾರ್ ಅವರ ಭಾರವಿ ಕೃತಿಯು ಭಾರವಿಯ ಕಿರಾತಾರ್ಜುನೀಯದ ಪ್ರೇರಣೆಯಿಂದ ರಚಿತವಾದುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. 'ಮುಕುಂದಮಾಲೆ' ಕುಲಶೇಖರ ಆಳ್ವಾರರ ಸಂಸ್ಕೃತ ಶ್ಲೋಕಗಳ ಕನ್ನಡ ರೂಪಾಂತರವೆಂದು ತಿಳಿದುಬರುತ್ತದೆ.

ಎಸ್.ಜಿ.ನ ಅವರ ಕೃತಿಗಳಲ್ಲಿ ಹೆಚ್ಚಿನವು ಅನುವಾದಿತ ಕೃತಿಗಳೇ. ಅವರು ತಮ್ಮ ಅನುವಾದಗಳ ಮೂಲಕ ಹೊಸ ಹಾದಿ ತುಳಿದರೆಂಬುದು ಇದರಿಂದ ತಿಳಿಯುತ್ತದೆ. ಈ ಕಾರಣದಿಂದ ಅವರ ಈ ಕೃತಿಗಳು ಅನುವಾದ ಕ್ಷೇತ್ರದಲ್ಲಿ ಅಮೂಲ್ಯವೂ, ಉಪಯುಕ್ತವೂ ಆದ ಮಾಹಿತಿಗಳಾಗಿವೆ. ಕಾಳಿದಾಸನ 'ರಘುವಂಶ' ಹಾಗೂ ಇನ್ನಿತರ ಕೃತಿಗಳಿಂದ ಪ್ರೇರಣೆ ಪಡೆದು ಭಾಷಾಂತರಿಸಿರುವ ಕೃತಿಗಳು ಹೊಸತನವನ್ನು ಹೆಚ್ಚಾಗಿ ಬಿಂಬಿಸುತ್ತವೆ. ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಯಿಂದ ಅನುವಾದ ಮಾಡುವಾಗಲೂ ಇವರು ಅಚ್ಚಗನ್ನಡ ಶಬ್ದಗಳನ್ನೇ ಹೆಚ್ಚಾಗಿ ಬಳಸಿರುವುದನ್ನು ಕಾಣಬಹುದು. ಇವರ ಅನುವಾದಿತ ಕವಿತೆಗಳೂ ನವನವೀನವಾಗಿದ್ದು, ಹೊಸಗನ್ನಡ ಭಾಷೆಯಲ್ಲಿ ಅವತರಿಸಿದ ಪ್ರಾಚೀನ ಛಂದೋರೂಪವನ್ನು ಒಳಗೊಂಡಿವೆ. ಆದರೂ ಈ ಕವಿತೆಗಳ ವಸ್ತುವಿನಲ್ಲಿ ಹೊಸತನವಿದೆ. ಎಸ್.ಜಿ.ನ ಅವರ ಅನುವಾದಗಳಲ್ಲಿ ಹೆಚ್ಚು ಪದ್ಯಗಳು ಶಾಲೆಯಲ್ಲಿ ಓದುವ ಮಕ್ಕಳಿಗಾಗಿಯೇ ಬರೆದ ಪದ್ಯಗಳಾಗಿವೆ. ಈ ಕವಿತೆಗಳ ಪ್ರಮುಖ ಗುಣವೆಂದರೆ ಸುಲಭವಾಗಿ ಎಲ್ಲರಿಗೂ ಅರ್ಥವಾಗುವಂತಹುದು. ಸರಳತೆ, ಲಾಲಿತ್ಯಗಳು ತುಂಬಿರುವ ಎಸ್.ಜಿ.ನ ಅವರ ಕವನಗಳು ಸುಲಭವಾಗಿ ಎಲ್ಲರಿಗೂ ತಿಳಿಯುವಂತಹ ಶೈಲಿಯಲ್ಲಿವೆ. ಇವರ ಭಾಷೆಯಲ್ಲಿ ಸರಳತೆಯಿದ್ದು, ಅಭಿವ್ಯಕ್ತಿಯಲ್ಲಿ ಒಂದು ಬಗೆಯ ಮಾಧುರ್ಯವಿದೆ. ಇವರು ಇಂಗ್ಲಿಷ್ ಕವಿತೆಗಳನ್ನು ಅನುವಾದಿಸಿದ್ದರೂ ಆ ಅನುವಾದಗಳ ಛಂದಸ್ಸು, ಬಹುಮಟ್ಟಿಗೆ ಹಳೆಯ ಛಂದೋರೂಪದಲ್ಲಿವೆ. ಅದರಲ್ಲೂ ಷಟ್ಪದಿ, ಸಾಂಗತ್ಯ, ಚೌಪದಿಗಳೂ ಪ್ರಮುಖವಾಗಿವೆ. ವರ್ಡ್ಸ್‌ವರ್ತ್ ಕವಿಯ 'To the Cuckoo' ಕನ್ನಡಾನುವಾದದ ಸಾಲುಗಳು ಹೀಗಿವೆ :

"ಬಾರೋ ಬಸಂತದ ಕಂದ ಬಾ ಬಾ ಬಾರೋ
ಹಾರುವ ಹಕ್ಕಿ ನೀನಲ್ಲ
ಸಾರುವ ದನಿ ಮಾಯದ ಗಂಟು ಕಣ್ಣಿಗೆ
ತೋರದ ಹುರುಳಾಗಿ ಸುಳಿವೆ"

ಇದರ ಮೂಲ :

Thrice welcome, darling of spring
Even yet thou art to me
No bird, but an invisible thing
A voice, a mystery

ಮೇಲಿನ ಅನುವಾದದ 'ಬಾರೋ ಬಸಂತದ ಕಂದ ಬಾ ಬಾ ಬಾರೋ' ಎಂಬಲ್ಲಿ 'ಬಾ ಬಾ ಬಾರೋ' ಎಂಬ ಪುನರಾವರ್ತನೆಯ ಮಾತು Thrice welcome ಎಂಬುದರ ಉತ್ತಮ ಭಾಷಾಂತರ. ಉಳಿದ ಭಾಗವನ್ನು ಮೂಲದ ಅನುವಾದ ಎಂಬ ದೃಷ್ಟಿಯಿಂದ ಮೂಲದೊಂದಿಗೆ ತೌಲನಿಕವಾಗಿ ಹೋಲಿಸಿದರೆ ಅಷ್ಟು ಸಂಗತವಾಗಿ ತೋರದಿರಬಹುದು. ಆದರೂ ನವುರಾದ ಭಾವ ಆಸ್ವಾದ ಯೋಗ್ಯವಾಗಿದೆ.

ಎಸ್.ಜಿ.ನ ಅವರ ಲಾಲಿತ್ಯದಿಂದ ಕೂಡಿದ ಅನುವಾದಕ್ಕೆ ಉದಾಹರಣೆಯಾಗಿ 'Twinkle, twinkle, little star' ಎಂಬ ಕವಿತೆಯ ಅನುವಾದವನ್ನು ಇಲ್ಲಿ ಉದಾಹರಿಸಬಹುದು :

ಮಿರುಮಿರು ಹಾ ಕಿರುತಾರಗೆಯೆ
ಅರಿಯೆನು ನಾನೆಲೆ ನೀನಾರೊ
ಧರೆಗಿಳಿಯದೆ ನೀನಿರುತಿಹೆ ದೂರದಿ
ನೆರೆಹೊಳೆಯುವ ವಜ್ರದ ತೆರದಿ

ಇದರ ಮೂಲ :

Twinkle twinkle little star
How I wonder what you are
Up above the world so high
Like a diamond in the sky

ಶರಷಟ್ಪದಿಯ ನಡಿಗೆಯುಳ್ಳ ಹೊಸಗನ್ನಡ ಭಾಷೆಯಲ್ಲಿ ಹರಿಯುವ ಈ ಪದ್ಯದಲ್ಲಿ ಮೂಲದ ಭಾವ ಚೆನ್ನಾಗಿ ಪಡಿಮೂಡಿದೆ. ಇದೇ ಕವಿತೆಯನ್ನು ಪಂಜೆಯವರು ಅನುವಾದಿಸಿದ್ದು ಹಲವು ವಿಧಗಳಲ್ಲಿ ಪಂಜೆಯವರಿಗಿಂತ ಎಸ್.ಜಿ.ನ ಅವರಲ್ಲಿ ಒಂದು ಬಗೆಯ ಹೊಸತನ ತುಂಬಿಕೊಂಡಿರುವುದನ್ನು ಈ ಎರಡು ಅನುವಾದಗಳನ್ನು ತೌಲನಿಕವಾಗಿ ಹೋಲಿಸಿದಾಗ ಗುರುತಿಸುವುದು ಸಾಧ್ಯ. ಅನುವಾದದಲ್ಲಿರುವ 'ಹಾ' ಎಂಬುದು ಮೂಲದಲ್ಲಿರುವ ಭಾವ. ಆದರೂ ಅನುವಾದದಲ್ಲಿ ಬರುವ 'ರ' ಕಾರದ ಪ್ರಚುರತೆಯೇ ಒಂದು ಬಗೆಯ ನಾವೀನ್ಯತೆಗೆ ಕಾರಣವಾಗಿದೆ. ಇಲ್ಲಿರುವ ಕಿರುತಾರಗೆ 'little star' ನ ಯಥಾವತ್ತಾದ ಭಾಷಾಂತರ.

ಇದಲ್ಲದೆ ತಮ್ಮ ಸಮಕಾಲೀನ ಕೃತಿಗಳಿಗೆ ಬೇಕಾದ ಪದ್ಯಭಾಗಗಳನ್ನು ಎಸ್.ಜಿ.ನ ಅವರು ರಚಿಸಿಕೊಟ್ಟ ಉದಾಹರಣೆಗಳಿವೆ. 'ಚಂಡಮಾರುತ' ದಲ್ಲಿರುವ ಪದ್ಯಗಳೂ, ವರದಾಚಾರ್ಯರ ನಾಟಕಗಳಲ್ಲಿ ಬರುವ ಹಾಡುಗಳೂ, ಬಿ. ವೆಂಕಟಾಚಾರ್ಯರ 'ದುರ್ಗೇಶನಂದಿನಿ' ಯಲ್ಲಿ ಬಂದ 'ಶರಣವಿಮಲೆಯ ಚರಣಕೆ' ಎಂದು ಆರಂಭವಾಗುವ ಹಾಡು – ಇವೆಲ್ಲಾ ಎಸ್.ಜಿ.ನ ಅವರವೇ ಎಂಬ ಪ್ರತೀತಿಯಿದೆ.

ಎಸ್.ಜಿ.ನ ಅವರವೇ ಅನುವಾದಗಳನ್ನು ಮೂಲದೊಂದಿಗೆ ತೌಲನಿಕವಾಗಿ ಹೋಲಿಸಿ ನೋಡಿದರೆ ಸಾಕಷ್ಟು ವ್ಯತ್ಯಾಸಗಳಿವೆಯೆಂಬುದು ಸ್ಪಷ್ಟವಾಗುತ್ತದೆ. ಎಸ್.ಜಿ.ನ ಅವರಲ್ಲಿ ಮೂಲ ಎನ್ನುವುದು ಇಡೀ ಅನುವಾದದ ಹಿಂದೆ ಪ್ರೇರಕಶಕ್ತಿಯಾಗಿ ನಿಲ್ಲುತ್ತದೆ. ಆದ್ದರಿಂದ ಮೂಲದ ಭಾವದಿಂದ ಪ್ರೇರಿತವಾದ ಕವಿತಾಶಕ್ತಿ ಸ್ವಂತರಚನೆಯೋ ಎಂಬಷ್ಟು ಮಟ್ಟಿಗೆ ಸ್ವತಂತ್ರ ವಹಿಸುತ್ತದೆ.

ಒಟ್ಟಿನಲ್ಲಿ ಎಸ್.ಜಿ. ನರಸಿಂಹಾಚಾರ್ಯರ ಕವಿತೆಗಳಲ್ಲಿ ತೌಲನಿಕ ದೃಷ್ಟಿಯಿಂದ ಎಷ್ಟೇ ಅರೆ–ಕೊರೆಗಳಿದ್ದರೂ ಐತಿಹಾಸಿಕವಾಗಿ ಅವರ ಪ್ರಯತ್ನಗಳು ಮೌಲ್ಯಯುತವಾದವು. ಇವರ ಅನುವಾದಗಳನ್ನು ಗಮನಿಸಿದಾಗ ಇವರಿಗೆ ಪ್ರಿಯವಾದ ಛಂದೋರೂಪ ಷಟ್ಪದಿಯೆಂಬುದು ತಿಳಿಯುತ್ತದೆ. ಎಸ್.ಜಿ.ನ ಅವರ ಎಲ್ಲಾ ಅನುವಾದಿತ ಕವಿತೆಗಳು ಇಂದು ಉಪಲಬ್ಧವಿಲ್ಲವಾದರೂ, ಉಪಲಬ್ಧವಿರುವ ಅನುವಾದಿತ ಕವಿತೆಗಳು ಅವರ ಪ್ರತಿಭೆಯನ್ನೂ, ಉಭಯ ಭಾಷಾಪ್ರಭುತ್ವವನ್ನೂ, ಸಾಧನೆ– ಸಿದ್ಧಿಗಳನ್ನೂ ಆಮೂಲಾಗ್ರವಾಗಿ ಪ್ರತಿಬಿಂಬಿಸುತ್ತವೆ.

ಹೀಗೆ ಭಾಷಾಂತರದ ಮೂಲಕ ಹೆಸರುವಾಸಿಯಾದ ಎಸ್.ಜಿ. ನರಸಿಂಹಾಚಾರ್ ಅವರು ಅತ್ಯುತ್ತಮ ಸ್ವತಂತ್ರ ಕವಿತೆಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ 'ಗೋವಿನ ಬಾಳು', 'ಕಾವೇರಿಯ ಮಹಿಮೆ' ಮತ್ತು 'ನೇಗಿಲು' – ಪ್ರಸಿದ್ಧವಾದವುಗಳು. ಹೀಗೆ ಎಸ್.ಜಿ.ನ ಅವರು ಶ್ರೇಷ್ಠ ಭಾಷಾಂತರಕಾರರಾಗಿ, ಸೃಜನಶೀಲ ಲೇಖಕರಾಗಿ ಕನ್ನಡ ಸಾರಸ್ವತ ಲೋಕಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

□□□

ಶ್ರೀ ಜಿ.ಎಸ್. ಶಿವರುದ್ರಪ್ಪ ಮತ್ತು ಶ್ರೀ ಚೆನ್ನವೀರ ಕಣವಿ ಕಾವ್ಯದಲ್ಲಿನ ಭಾರತೀಯ ಸಂಸ್ಕೃತಿ, ರಾಷ್ಟ್ರೀಯತೆ, ಸ್ವಾತಂತ್ರ್ಯೋತ್ಸವ ಮತ್ತು ನಾಡು-ನುಡಿ ವಿಚಾರಗಳು (೧೮೬೨-೧೯೦೭)

– ಶ್ರೀ ಅಶೋಕ್ ಜಿ.ಎಸ್.

ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದಲೂ ಕವಿಗಳು ನಾಡು-ನುಡಿ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಸ್ತಾಪ ಮಾಡಿರುವುದು ಕಂಡುಬರುತ್ತದೆ. ಮೊಟ್ಟ ಮೊದಲ ಶಾಸನಗಳಲ್ಲಿ ಕನ್ನಡ ನಾಡಿನ ವಿಚಾರಗಳ ಬಗ್ಗೆ ಚರ್ಚಿಸಿದರೆ ನಂತರದಲ್ಲಿ ನೃಪತುಂಗ, ಅಸಗ, ಗುಣನಂದಿ, ಗುಣವರ್ಮ, ಪಂಪ, ನಾಗವರ್ಮ, ರನ್ನ, ಚಾವುಂಡರಾಯ ಮುಂತಾದ ಪೂರ್ವಕವಿಗಳು ಪ್ರಮುಖವಾಗಿ ಕವಿ-ಕಾವ್ಯ, ನಾಡು ನುಡಿ ಕನ್ನಡ ಎಲ್ಲೆ ಮುಂತಾದವುಗಳ ಬಗ್ಗೆ ಹೇಳುತ್ತಾರೆ.

ಕನ್ನಡ ನಾಡಿನ ಚೆಲುವನ್ನು ಮತ್ತು ಎಲ್ಲೆಯನ್ನು ಕುರಿತು ನೃಪತುಂಗನು **'ಕಾವೇರಿಯಿಂದಮಾ ಗೋದಾವರಿ ವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ'** ಎಂದು ಹೇಳಿದ ಕವಿ ಮುಂದೆ ಈ ನಾಡಿನ ಜನತೆಯ ನಡೆ ನುಡಿ ವಿಚಾರ ಬಂದಾಗ. **'ಪದಸರಿದು ನುಡಿಯಲಂ ನುಡಿದುದನರಿದು ನಡೆಯಲ್ ನಾಡವರ್ಗಳ್' 'ಕುರಿತೋದದೆಯಂ ಕಾವ್ಯ ಪ್ರಯೋಜನ ಪರಿಣತಮತಿಗಳ್'** ಎಂದು ನಾಡಿನ ಜನತೆಯ ಆಚಾರ-ವಿಚಾರಗಳ ಬಗ್ಗೆ ಉದ್ಗಾರ ತೆಗೆಯುತ್ತಾರೆ. ಪಂಪ ಕೂಡ ಈ ದೇಶದಲ್ಲಿ ಮರಿದುಂಬಿಯಾಗಿಯಾದರೂ ಹುಟ್ಟಬೇಕೆಂದು ಆಶಿಸುತ್ತಾನೆ. ಜನ್ನ, ಹರಿಹರ, ರಾಘವಾಂಕ, ಚಾಮರಸ, ರನ್ನ, ಷಡಕ್ಷರಿ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರ ವರ್ಣಿ ಮುಂತಾದ ಮಧ್ಯಕಾಲೀನ ಕವಿಗಳು ಕನ್ನಡ ನಾಡು-ನುಡಿ ವಿಚಾರಗಳ ಬಗ್ಗೆ ತಮ್ಮ ಕಾವ್ಯಗಳಲ್ಲಿ ಹೇಳಿದ್ದಾರೆ.

ಬ್ರಹ್ಮಸಮಾಜ, ಆರ್ಯಸಮಾಜ ಮುಂತಾದ ಸಂಘ ಸಂಸ್ಥೆಗಳು, ರಾಜಾರಾಮ್ ಮೋಹನ್‌ರಾಯ್, ರಾಮಕೃಷ್ಣ ಪರಮಹಂಸ, ವಿವೇಕಾನಂದ, ರವೀಂದ್ರನಾಥ ಟಾಕೂರ್, ಜ್ಯೋತಿ ಭಾಪುಲೆ, ಎಂ.ಎನ್. ರಾಯ್, ಮಹಾತ್ಮಗಾಂಧಿ, ಅಂಬೇಡ್ಕರ್,

ರಾಮಸ್ವಾಮಿ ನಾಯಕರ್ ಮುಂತಾದ ವಿವಿಧ ಬಗೆಯ ಚಿಂತಕರು, ದಾರ್ಶನಿಕರು ಭಾರತೀಯ ಸಮಾಜದ ಮೇಲೆ ಜಾಗತಿಕ ಪ್ರಭಾವವನ್ನುಂಟು ಮಾಡಿದರು. ಈ ಅಂಶಗಳು ರಾಷ್ಟ್ರದ ಇತರ ಪ್ರದೇಶಗಳಂತೆಯೇ ಕನ್ನಡ ನಾಡು–ನುಡಿಯ ಮೇಲೂ ಪ್ರಭಾವ ಕಾಣಿಸಿಕೊಂಡಿತು.

ಆಧುನಿಕ ಸಾಹಿತ್ಯದ ಪ್ರಮುಖ ಘಟ್ಟಗಳಲ್ಲಿ ನವೋದಯ ಸಾಹಿತ್ಯ ತುಂಬಾ ಗಮನಾರ್ಹವಾದುದು. ಈ ನವೋದಯ ಸಾಹಿತ್ಯವು ಭಾವುಕತೆ, ನೈತಿಕತೆ, ಕನಸುಗಾರಿಕೆ, ನಾಡು–ನುಡಿ, ಆಚಾರ–ವಿಚಾರಗಳು ಇನ್ನೂ ಹಲವಾರು ಪ್ರಮುಖ ಅಂಶಗಳು ನವೋದಯ ಸಾಹಿತ್ಯದ ಮೇಲೆ ಪ್ರಭಾವ ಬೀರಿವೆ. ನವೋದಯ ಕಾಲದ ಕವಿಗಳು, ಮಹಾ ಮಾನವತಾವಾದಿಗಳೂ, ವಿಚಾರವಾದಿಗಳೂ ಆದ ದ.ರಾ. ಬೇಂದ್ರೆ, ಕುವೆಂಪು, ಕಾರಂತ, ಕೈಲಾಸಂ ಮುಂತಾದವರು ಸಮಾಜದ ದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿರುವುದರ ಜೊತೆಗೆ ನಾಡು ನುಡಿ ವಿಚಾರಗಳನ್ನು ಪ್ರಮುಖವಾಗಿ ಚರ್ಚಿಸಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆ ಹಲವಾರು ಸ್ಥಿತ್ಯಂತರಗಳನ್ನು ಪಡೆದುಕೊಂಡು ಸಮೃದ್ಧವಾಗಿ ಬೆಳೆದು ಬಂದಿರುವುದನ್ನು ನಾವು ಗಮನಿಸಿದ್ದೇವೆ. ಆಯಾ ಕಾಲದ ಕಾವ್ಯ ಧೋರಣೆ ನಿಜವಾಗಿಯೂ ತತ್ಪೂರ್ವದ ಸಾಹಿತ್ಯ ಪರಂಪರೆಯೊಂದಿಗೆ ಸವಾಲಾಗಿ ನಿಲ್ಲುವ ಮತ್ತು ಸ್ಪಷ್ಟವಾಗಿ ಗುರುತಿಸಬಹುದಾದ ಬದಲಾವಣೆಗಳನ್ನು ಅಭಿವ್ಯಕ್ತಿಯಲ್ಲಿ ಸಾಧಿಸಿದ್ದರಿಂದ ಅದು ವಿಶಿಷ್ಟತೆಯನ್ನು ಪಡೆದಿದೆ. ಹಿಂದಿನ ಕನ್ನಡ ಸಾಹಿತ್ಯವು ಕಾಲ ಸ್ಥಿತಿಯನ್ನು ಅನುಸರಿಸಿ ಪ್ರಗತಿಪರವಾಗಿತ್ತು. ಅಂತೆಯೇ ಆಧುನಿಕ ಕನ್ನಡ ಸಾಹಿತ್ಯವು ಆಯಾ ಪರಿಸ್ಥಿತಿಗೆ ಅನುಗುಣವಾಗಿ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ–ಬಂಡಾಯ ಸಾಹಿತ್ಯ ಪಂಥಗಳಾಗಿ ಹೊರಹೊಮ್ಮಿತು. ಇಲ್ಲಿ ಕನ್ನಡದ ಸಮನ್ವಯ ಕವಿಗಳಾದ ಜಿ.ಎಸ್. ಶಿವರುದ್ರಪ್ಪ ಮತ್ತು ಚೆನ್ನವೀರ ಕಣವಿ ಅವರ ಕಾವ್ಯವನ್ನು ಕುರಿತ ಸಮಗ್ರ ತೌಲನಿಕ ವಿವೇಚನೆಯ ಪ್ರಯತ್ನ ಮಾಡಲಾಗಿದೆ. ಸರಳ ಶೈಲಿಯ ಮೂಲಕ ವಿಶಿಷ್ಟ ಅಂಶಗಳನ್ನು ಅನಾವರಣಗೊಳಿಸಿ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕಾವ್ಯಕೃತಿಗಳನ್ನು ನೀಡಿರುವ ಜಿ.ಎಸ್. ಶಿವರುದ್ರಪ್ಪ ಮತ್ತು ಚನ್ನವೀರ ಕಣವಿಯವರ ಕಾವ್ಯದಲ್ಲಿನ ನಾಡು–ನುಡಿ ವಿಚಾರಗಳನ್ನೂ ತೌಲನಿಕವಾಗಿ ವಿವೇಚಿಸಲಾಗಿದೆ.

ಜಿ.ಎಸ್. ಶಿವರುದ್ರಪ್ಪ

ಸಾಹಿತ್ಯವು ಸಮಾಜದ ಪ್ರತಿಬಿಂಬ. ಸಮಾಜದಲ್ಲಿ ನಡೆಯುವ ಆಗುಹೋಗುಗಳು, ಸಮಸ್ಯೆ ಸವಾಲುಗಳು, ನಾಡಿನ ಸಂಸ್ಕೃತಿ, ಆಚಾರವಿಚಾರಗಳು, ಯಾವುದೇ ಕವಿಗಳ ಮೇಲೆ ಪ್ರಭಾವ ಬೀರುತ್ತವೆ. ಜಿ.ಎಸ್.ಎಸ್.ರವರು ಸ್ವಾತಂತ್ರ್ಯಪೂರ್ವದಲ್ಲಿ ಜನಿಸಿದ್ದರಿಂದ ಸ್ವಭಾವತಃ ಸಂಸ್ಕೃತಿ, ಆಚಾರ–ವಿಚಾರಗಳು, ಸಾಮಾಜಿಕ ಚಿತ್ರಣಗಳು, ನಾಡಿನ ಚಳುವಳಿಗಳು, ರಾಷ್ಟ್ರೀಯ ಚಳುವಳಿಗಳು, ರಾಷ್ಟ್ರೀಯ ಚಳುವಳಿಗಳಲ್ಲಿ ಭಾಗವಹಿಸಿದ ವ್ಯಕ್ತಿಗಳ ಚಿತ್ರಣಗಳು ಮುಂತಾದ ವಿಚಾರಗಳನ್ನು ತಮ್ಮ ಕವನಗಳಲ್ಲಿ ಸಹಜವಾಗಿ ಚಿತ್ರಿಸಿರುತ್ತಾರೆ, ಅವುಗಳಲ್ಲಿ ಕೆಲವು ಜನಪ್ರಿಯ ಭಾವಗೀತೆಗಳೂ ಆಗಿವೆ.

'ನಿನ್ನದೆ ನೆಲ' ಎಂಬ ಕವನದಲ್ಲಿ ಭಾರತಮಾತೆಯ ಸಂಸ್ಕೃತಿ, ನೆಲ-ಜಲ, ಭೌಗೋಳಿಕತೆ, ಪ್ರಾಕೃತಿಕ ಸೌಂದರ್ಯ, ಭಾರತ ದರ್ಶನ ಮತ್ತು ಆದರ್ಶ ಮೌಲ್ಯಗಳನ್ನು ನಿರೂಪಿಸಿದ್ದಾರೆ. ಭಾರತ ದೇಶವನ್ನು ಶತಮಾನಗಳಿಂದ ಎಷ್ಟೋ ರಾಜಮಹಾರಾಜರುಗಳು ಆಳ್ವಿಕೆ ಮಾಡಿ ಮತ್ತು ದಾಳಿ ಮಾಡಿ ಮಡಿದುಹೋದರೂ ಈ ನೆಲ, ಜಲ ಎಲ್ಲವೂ ಭಾರತಮಾತೆಯ ಹೆಮ್ಮೆಯ ಜನಗಳದ್ದು; ಇದಕ್ಕೆ ಅನುಮಾನವೇತಕೆ ? ಇಂತಹ ವಿವಿಧ ಸಂಸ್ಕೃತಿಯ ನಾಡನ್ನು ಶತಮಾನಗಳಿಂದ ಉಳಿಸಿ, ಬೆಳಸಿ, ರಕ್ಷಿಸಿದ್ದಾರೆ. ಗಡಿಯುದ್ದಕ್ಕೂ ಸೈನಿಕರು ಸಿಡಿಗುಂಡಿನಿಂದ ಹತರಾದರೂ ಭಾರತಮಾತೆಯನ್ನು ರಕ್ಷಿಸುವ ಹೆಮ್ಮೆಯು ನಮ್ಮದೇ. ಆದ್ದರಿಂದ ಹಿಮಾಲಯದಲ್ಲಿ ಶಾಂತಿ ನೆಲೆಸಿದೆ.

ನೂರಾಸೆಯ ಹೆಗಲೇರಿಸಿ, ನಡೆದ ದಾರಿ ನಿನ್ನದೆ
ಬರುವ ದಿನದ ಭರವಸೆಗಳ, ಬೆಳೆವ ಹೊಣೆಯು ನಿನ್ನದೆ
ನಿನ್ನದೆ ನೆಲ, ನಿನ್ನದೆ ಜಲ, ನಿನ್ನದೆ ಆಕಾಶ
ಕಿಂಚಿತ್ತೂ ಅನುಮಾನಕೆ, ಇಲ್ಲವೊ ಅವಕಾಶ [ನಿನ್ನದೆ ನೆಲ-ಗೋಡೆ]

ಈ ನಾಡನ್ನು ರಕ್ಷಿಸುವುದು ಮತ್ತು ಉತ್ತುಂಗ ಶಿಖರಕ್ಕೆ ಕೊಂಡೊಯ್ಯುವುದು ನಮ್ಮ ಜವಾಬ್ದಾರಿಯಾಗಿದೆ ಎಂಬುದನ್ನು ಗ್ರಹಿಸಬಹುದು. **'ನಮ್ಮ ಬಾವುಟ'** ಎಂಬ ಕವನವು ನಮ್ಮ ಸ್ವತಂತ್ರ ಭಾರತಮಾತೆಯ ಬಾವುಟದ ವಿಶಿಷ್ಟ ವೈಖರಿಯನ್ನು, ಅದರ ವೈಭವವನ್ನು ತಿಳಿಸುವ ಕವನವಾಗಿದೆ. ಭಾರತ ದೇಶದ ರಾಷ್ಟ್ರಧ್ವಜದ ವಿಶಿಷ್ಟ ಚಿತ್ರಣ ಹೀಗಿದೆ :

ಬಾನ ಬಯಲನೇರಿತಲ್ಲಿ, ನೋಡು ನಮ್ಮ ಬಾವುಟ.
ವೇದ ಋಷಿಯ ಮಂತ್ರ ಪವನ, ತೀಡುತ್ತಿತ್ತು ಮೇಲ್ಗಡೆ,
ದಿವ್ಯಯಜ್ಞ ದೀಪ್ತಿಯಂತೆ, ಜಗದಿಚ್ಛಾ ಚಕ್ರದಂತೆ.
ಮರೆವ ಶೋಕ ಚಕ್ರವಾಯ್ತು, ದೇವತೆಗಳ ನಿಲುಗಡೆ – (ನಮ್ಮ ಬಾವುಟ– ದೇವಶಿಲ್ಪ)

ಭಾರತಮಾತೆಯ ರಾಷ್ಟ್ರಧ್ವಜವು, ಋಷಿಮಂತ್ರ, ಯಜ್ಞಕುಂಡಃ ಹಾಗೂ ದಿವ್ಯಮುನಿಗಳಿಂದ ವಂದಿತವಾಗಿ ರಾಷ್ಟ್ರಧ್ವಜ ಹಾರಾಡುತ್ತಿದೆ. ಈ ಪೃಥ್ವಿ ಇರುವವರೆಗೆ ಈ ಬಾವುಟ ಇರುತ್ತದೆಯೆಂಬ ಕವಿಯ ಆಶಯವನ್ನು ಗಮನಿಸಬಹುದು.

'ಪುರುಷಸೂಕ್ತ' ಕವನವು ನವೋದಯ ಕಾವ್ಯಪರಂಪರೆಯ ಆದರ್ಶ ಕನಸುಗಳನ್ನು, ಉತ್ಸಾಹ ಅಭಿಮಾನಗಳನ್ನು ನೆನಪಿಸುವುದು. ಈ ಕವನ **'ನವಭಾರತ'**ದ ಪರಿಕಲ್ಪನೆಯನ್ನು ಎಲ್ಲರ ಹೃದಯದಲ್ಲಿ ಬಿಂಬಿಸಲು ಹಂಬಲಿಸುತ್ತದೆ. 'ಪುರುಷಸೂಕ್ತ' ವೇದಗಳಲ್ಲಿ ಬಳಕೆಯಾದ ಪದ. 'ವಿಶ್ವಾತ್ಮ' ಎಂಬುದು ಇದರ ಶಬ್ದಾರ್ಥ. ಈ ಪರಿಕಲ್ಪನೆಯನ್ನು ಕವನದಲ್ಲಿ ನವಭಾರತದ ಆತ್ಮ ಅಥವಾ ಚೈತನ್ಯದ ಸ್ವರೂಪವನ್ನು ವರ್ಣಿಸಲು ಬಳಸಿಕೊಳ್ಳಲಾಗಿದೆ.

ಇವನು ಕಣ್ ತೆರೆದು ಸಾವಿರ ದೀಪ
ಮನೆ ಮನೆಗೆ ಸ್ನೇಹ-ವಿಶ್ವಾಸ-ಕರುಣೆ ಪ್ರೀತಿ
ಚಿಕ್ಕೆಯಕ್ಷರಗಳಲ್ಲಿ ಇವನ ಮಂತ್ರದ ವಾಣಿ,
ಕೆಳಗೆ ಎಡವಿದರೂನು ಇಲ್ಲ ಭೀತಿ- (ಪುರುಷಸೂಕ್ತ-ಕಾಡಿನ ಕತ್ತಲಲ್ಲಿ)

ಭಾರತದ ಭೌಗೋಳಿಕ ವರ್ಣನೆಯನ್ನು ಪ್ರಾಕೃತಿಕ ಸೌಂದರ್ಯದ ಹಿನ್ನೆಲೆಯಲ್ಲಿ ನಿರೂಪಿಸುವ ಈ ಕವನ, ಆಧುನಿಕ ಭಾರತೀಯರ ಕಣ್ ತೆರೆದರೆ ಸಾಕು; ಪ್ರೀತಿ, ಸ್ನೇಹ, ಕರುಣೆ, ವಿಶ್ವಾಸಗಳಿಂದ ಎಲ್ಲರನ್ನೂ ಸ್ವೀಕರಿಸುತ್ತದೆ. ಎಂಥ ಸಂದಿಗ್ಧತೆಯನ್ನೂ ಮೀರುವ ಸಾಮರ್ಥ್ಯ ಹೊಂದಿದೆ. ಹೃದಯವಂತಿಕೆ ಇದೆ. ಇದರ ದನಿ ಬಹುಮುಖಿ ಸಂಸ್ಕೃತಿಯ ವೈಶಿಷ್ಟ್ಯಗಳನ್ನು ಮಾಧ್ಯಮಗಳಲ್ಲಿ ಸಾರುತ್ತಿದೆ. ಸಂಶೋಧನೆಗಳಲ್ಲಿ, ವೈಜ್ಞಾನಿಕ ಸಾಧನೆಗಳಲ್ಲಿ ನವಭಾರತ ನಿರ್ಮಾಣವಾಗಿದೆ.

ಕವನ ಕುರಿತು. ಬಿ.ಪಿ. ವೀರೇಂದ್ರ ಕುಮಾರ್ 'ಜಿ.ಎಸ್.ಎಸ್. ಕಾವ್ಯಾಂತರಂಗ', ಕೃತಿಯಲ್ಲಿ ಈ ರೀತಿ ಅಭಿಪ್ರಾಯಪಡುತ್ತಾರೆ. "ಅನೇಕ ಸಂಸ್ಕೃತಿಯ ವಿಭಿನ್ನ ಜೀವನಶೈಲಿಗಳ ಬಹುರೂಪಿ ಭಾರತ ವಾಸ್ತವವಾದುದು. ಈ ಬಹುರೂಪಿಯಾದ ದರ್ಶನವೇ ಭಾರತದ ವಿಶಿಷ್ಟತೆ. ಈ ಅರಿವು ಎಲ್ಲಾ ಭಾರತೀಯನ ಹೃದಯದಲ್ಲೂ ಜಾಗೃತವಾಗಿದೆ ಎನ್ನುವ ಅಚಲ ವಿಶ್ವಾಸ ಈ ಕವನದ ಪ್ರತಿಸಾಲಿನಲ್ಲೂ ವ್ಯಕ್ತಗೊಂಡಿದೆ" ಎನ್ನುತ್ತಾರೆ.

ಭಾರತಮಾತೆಯ ಸಂಸ್ಕೃತಿ, ಇತಿಹಾಸವನ್ನು ಬಿಂಬಿಸುವ ಕವನಗಳೆಂದರೆ **'ಬ್ರಹ್ಮಗಿರಿಯ ದಾರಿಯಲ್ಲಿ', 'ಬ್ರಹ್ಮಗಿರಿಯ ಅಶೋಕನ ಶಾಸನದ ಹತ್ತಿರ'**. ಇವೆರಡು ಕವನಗಳು ಅಶೋಕನ ಕಾಲದ ಇತಿಹಾಸವನ್ನು ಬಿಂಬಿಸುತ್ತವೆ. ಹಿಂದೆ ಅಶೋಕ ಮಹಾರಾಜ ಕಳಿಂಗ ಯುದ್ಧದಲ್ಲಿ ನಿಟ್ಟುರಿಸಿಟ್ಟು ಅಹಿಂಸಾ ಧರ್ಮ ಸ್ವೀಕರಿಸಿ, ಸಿದ್ಧಾರ್ಥ ಅಥವಾ ಬುದ್ಧನ ಬೌದ್ಧಧರ್ಮ ಪ್ರಸಾರ ಮಾಡಲು ದೇಶಾದ್ಯಂತ ಶಾಸನಗಳನ್ನು ಕೆತ್ತಿಸಿದನು. ಕೆಲವು ಸ್ತೂಪಗಳು, ಬಂಡೆಗಲ್ಲಿನ ಶಾಸನಗಳು, ಅಂದಿನಿಂದ ಇಂದಿನವರೆಗೂ ನಮ್ಮ ಭಾರತದ ಇತಿಹಾಸ ಹೇಳುವ 'ಸಂರಕ್ಷಿತ ಶಾಸನ'ಗಳಾಗಿವೆ.

ರಾಮಕೃಷ್ಣ ಪರಮಹಂಸರು, ವಿವೇಕಾನಂದರು, ಶಾರದಾದೇವಿ, ಶ್ರೀ ಅರವಿಂದರು, ರವೀಂದ್ರರು, ಮಹಾತ್ಮಗಾಂಧಿ, ನೆಹರು, ಇನ್ನೂ ಹಲವಾರು ವ್ಯಕ್ತಿಗಳು ಭಾರತದ ರಾಷ್ಟ್ರೀಯ ಚಳುವಳಿಯ ಮತ್ತು ಭಾರತೀಯ ಸಂಸ್ಕೃತಿಯನ್ನು ಬೆಳೆಸಿ, ಉಳಿಸಿ, ರಾಷ್ಟ್ರಕ್ಕೆ ತಮ್ಮ ಸೇವೆಯನ್ನು ಸಮರ್ಪಿಸಿದವರು. ಈ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ ವಿಚಾರಗಳಿಗೆ ಸಂಬಂಧಿಸಿದ ಕವನಗಳನ್ನು ಜಿ.ಎಸ್.ಎಸ್‌ರವರು ರಚಿಸಿರುವುದನ್ನು ಗಮನಿಸಬಹುದು.

'ಕವಿ ರವೀಂದ್ರರನ್ನು ಕುರಿತು' ಎಂಬ ಕವನವು ರಾಷ್ಟ್ರೀಯ ಚಳುವಳಿಯ ನಾಯಕನ ಚಿತ್ರಣವನ್ನು ಬಿಂಬಿಸುತ್ತದೆ. ಚಿಕ್ಕ ಕವನದಲ್ಲಿ ಬೆಳ್ಳಿಮೋಡದ ಗಡ್ಡ, ನಿಲುವಂಗಿ, ಬೈಗು ಬೆಳಗಿನ ಮುಖ, ಸಹೃದಯ ಭಾವನೆಯ ಬಣ್ಣದ ಅಂಗಿತೊಟ್ಟು ನಿಂತ ವ್ಯಕ್ತಿ ಆ ರವೀಂದ್ರರು. **'ಓ ಕವಿವರ್ಯ, ನೀನು ಪ್ರತಿಭೆಯ ಸೂರ್ಯ'** ಎಂದು ಒಂದೇ

ವಾಕ್ಯದಲ್ಲಿ ಅವರ ವ್ಯಕ್ತಿತ್ವದ ಚಿತ್ರಣವನ್ನು ವಿವರಿಸಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ವಿಶ್ವದ ಭೂಪಟದಲ್ಲಿ ಉಳಿಸಿ, ಬೆಳೆಸಿ ಯುವಕರನ್ನು ರಾಷ್ಟ್ರೀಯ ಚಳುವಳಿಯಲ್ಲಿ ಅಂದಿನಿಂದ ಇಂದಿನವರೆಗೂ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತೆ ಮಾಡಿದ ವ್ಯಕ್ತಿ ವಿವೇಕಾನಂದರನ್ನು ಕುರಿತು **'ಶ್ರೀ ವಿವೇಕಾನಂದರಿಗೆ'** ಎಂಬ ಕವನದಲ್ಲಿ ಅವರ ಇಡೀ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ರಾಮಕೃಷ್ಣರ ದಿವ್ಯಸಾನ್ನಿಧ್ಯದಲ್ಲಿ ಬೆಳೆದ ವಿವೇಕಾನಂದರ ಕುರಿತು ಹೀಗೆ ವ್ಯಕ್ತಪಡಿಸಿದ್ದಾರೆ :

ಪರಮಹಂಸಾಚಲದ ಶಿವಗಂಗೆಯನ್ನು ತಂದು
ಜಗಕೆಲ್ಲ ಹರಿಸಿರುವ ಯೋಗಪುರುಷ
ಮುಟ್ಟಿದ್ದು ಹೊನ್ನಾಯ್ತು ದಿವ್ಯ ಪುರುಷ! – *(ಶ್ರೀ ವಿವೇಕಾನಂದರಿಗೆ – ಚೆಲುವು–ಒಲವು)*

ವಿವೇಕಾನಂದರ ವಾಣಿಯನ್ನು ಕೇಳಿ ಚಿಪ್ಪಿನೊಳಗಿದ್ದ ಮಗುವು ಕೂಡ ಎಚ್ಚೆತ್ತು ನಿಷ್ಕ್ರಿಯವಾಗಿದ್ದ ಮಕ್ಕಳೆಲ್ಲವು ಎದ್ದು ರಾಷ್ಟ್ರೀಯ ಚಳುವಳಿಯಲ್ಲಿ ಕ್ರಿಯಾಶೀಲವಾಗುತ್ತಿದ್ದವು. ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿ ಒಂದಾಗುವಂತೆ ಮಾಡಿದ ಚೇತನ ಎಂದು ಅಭಿಪ್ರಾಯಪಡಬಹುದು. **'ವಿವೇಕಾನಂದ'** ಎಂಬ ಕವನದಲ್ಲಿ ಹಿಂದಿನ ಕವನವನ್ನು ಮುಂದುವರಿಸುತ್ತಾರೆ. ಸಮುದ್ರವನ್ನು ದಾಟಿ ಬೇರೆ ಧ್ರುವ ತಲುಪಿ ಪೂರ್ವ ಪಶ್ಚಿಮ ಸಂಸ್ಕೃತಿಯನ್ನು ಒಂದಾಗಿಸಿದ ವಜ್ರದ ಮತ್ತು ಉಕ್ಕಿನ ಮಿಂಚಿನ ಯೋಗಿ.

ಕವಿಋಷಿಯೋಗೀ ಸಂತ
ಲೋಕಾದ್ಯಂತ ನಡೆವ ವಸಂತ– *(ವಿವೇಕಾನಂದ–ತೆರೆದದಾರಿ)*

ವಿವೇಕಾನಂದರಿಗೆ ಮೊಟ್ಟ ಮೊದಲು ಸ್ಫೂರ್ತಿ ನೀಡಿದ್ದು, ಸಂತನನ್ನಾಗಿ ಮಾಡಿದ್ದು ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಶ್ರೀ ಶಾರದಾದೇವಿಯವರು. **'ಶ್ರೀಶಾರದಾದೇವಿಗೆ'** ಎಂಬ ಕವನದಲ್ಲಿ ಮಾತೆಯ ಮಮತೆ ವಾತ್ಸಲ್ಯದಿಂದ ವಿವೇಕಾನಂದರನ್ನು ಬೆಳೆಸಿದರು. ಭಾರತಮಾತೆಯ ಪುತ್ರನನ್ನು ರಾಮಕೃಷ್ಣ ಪರಮಹಂಸರು ತಪಸ್ಸೂರ್ಯ ಕಿರಣ ಬಿಂಬದಿಂದ ಬೆಳೆಸಿದರು. ಎಂದಿದ್ದಾರೆ.

ರಾಮಕೃಷ್ಣ ತಪೋವನದ, ಪರ್ಣಕುಟಿಯ ದೀಪವೆ
ಬಳಿಗೆ ಬಂದ ಹಣತೆಗಳಿಗೆ, ಬೆಳಕನಿತ್ತ ಕಿರಣವೆ
ಮೌನ ಪ್ರಭಾವಲಯವೆ – *(ಶ್ರೀ ಶಾರದಾದೇವಿಗೆ–ಚಕ್ರಗತಿ)*

ವಿವೇಕಾನಂದರು ಈ ಇಬ್ಬರೂ ವ್ಯಕ್ತಿಗಳ ಕೃಪಾಕಟಾಕ್ಷದಿಂದ ಬೆಳೆದ ಹೆಮ್ಮೆಯ ಪುತ್ರ ಎಂದು ಜಿ.ಎಸ್.ಎಸ್. ರವರು ಅಭಿಪ್ರಾಯಪಡುತ್ತಾರೆ. **'ದಕ್ಷಿಣೇಶ್ವರದಲ್ಲಿ'** ಎಂಬ ಕವನದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ಕಾಳಿಕಾಮಾತೆಯ ಶ್ರೀ ಕ್ಷೇತ್ರದ ದಿವ್ಯ ಸನ್ನಿದಿಯಲ್ಲಿ, ಭಕ್ತಿಗೀತೆಗಳ ಗಾಯನ, ತೀರ್ಥಪ್ರಸಾದ, ಮಂಗಳಾರತಿಯಂತಹ ವಾತಾವರಣದಲ್ಲಿ ವಿವೇಕಾನಂದರು ಬೆಳೆದರು ಎಂದು ಹೇಳುತ್ತಾರೆ.

6

ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯನ್ನು ಮಾಡಿ ಸ್ವಾತಂತ್ರ್ಯಗಳಿಸಿದ ಮೇಲೆ ಆ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮದಾಗಿದೆ. ಇಂತಹ ಸಮಯದಲ್ಲಿ ನೂರಾರು ಯೋಜನೆಗಳು ಮತ್ತು ಚಿಂತನೆಗಳು ನಮ್ಮ ಮುಂದಿವೆ. ಇಂತಹ ಸಮಯವನ್ನು **'ಬಿಡುಗಡೆಯ ನೆನಪು'** ಎಂಬ ಕವನದಲ್ಲಿ ಹೀಗೆ ಹೇಳುತ್ತಾರೆ :

ವರುಷಕ್ಕೊಮ್ಮೆ ನಿನಗೆ ನೀರೆರೆದು ಹೊಸ ಬಟ್ಟೆ ತೊಡಿಸಿ
ಸಾಲು ಸೈನ್ಯಗಳ ಗೌರವ ರಕ್ಷೆಯನ್ನಿತ್ತು ನಭಕೆ ಬಾವುಟವೆತ್ತಿ ....
ಹನ್ನೊಂದು ವರುಷ ಹಿಂದೆ ನಟ್ಟ ನಡುರಾತ್ರ
ಹನ್ನೆರಡು ಗಂಟೆಯಲಿ ನಿನಗಾದ ಸೊಗವ *(ಬಿಡುಗಡೆಯ ನೆನಪು– ದೀಪದ ಹೆಜ್ಜೆ)*

ಗೌರವ ರಕ್ಷೆ ನೀಡಿದರೆ ಸಾಲದು, ಇಲ್ಲಿ ಹನ್ನೊಂದು ವರ್ಷದ ಹಿಂದೆ ಸ್ವಾತಂತ್ರ್ಯ ಪಡೆದು 'ನಾವೀಗ ಹೊಸನಾಡನ್ನು ಕಟ್ಟುತ್ತಿದ್ದೇವೆ, ಶುಭಮಸ್ತು ಎನ್ನು'. ನಾವೀಗ ಅನೇಕ ಅಭಿವೃದ್ಧಿ ಸಾಧಿಸಿದ್ದೇವೆ, ಹೊಸನಾಡನ್ನು ಕಟ್ಟಿದ್ದೇವೆ ಎಂದು ಹೇಳಿರುವುದನ್ನು ಗ್ರಹಿಸಬಹುದು.

ಗಾಂಧೀಜಿಯವರು ಭಾರತಕ್ಕೆ ಅಹಿಂಸಾಮಾರ್ಗದಿಂದ ಸ್ವಾತಂತ್ರ್ಯ ಗಳಿಸಿಕೊಟ್ಟವರು. ಇವರನ್ನು ನೆನಪು ಮಾಡಿಕೊಳ್ಳಲು ಗಾಂಧಿ ಜಯಂತಿಯನ್ನು ಆಚರಿಸುತ್ತೇವೆ. ಅದರ ನೆನಪಿಗೋಸ್ಕರ **'ಗಾಂಧಿ ಕಂಡದ್ದು ಮೂರು ಸಲ'** ಎಂಬ ಕವನದ ಮೂಲಕ ಕವಿ ಈ ರೀತಿ ವ್ಯಕ್ತಪಡಿಸುತ್ತಾರೆ. ಒಂಬತ್ತು ವರ್ಷದಿಂದ ನೀನು ಮೇರು ಪರ್ವತದಂತೆ ಬ್ರಿಟಿಷರೆದುರು ನಿಂತು ಸ್ವಾತಂತ್ರ್ಯಗಳಿಸಿಕೊಟ್ಟು ಇಂದು ಬಾವುಟದಲ್ಲಿ ನೆಲೆಸಿರುವೆ.

ಹಿಮಶೈಲ ಶಾಂತಿಯಲಿ ಜ್ವಲಿಸುತಿದೆ ಇದೋ
ಎದೆಯ ದೇಗುಲದಲಿ ನಿತ್ಯಾನಂದಾದೀಪ
ನಿನ್ನರೂಪ – *(ಕಂಡದ್ದು–ಮೂರು ಸಲ–ದೀಪದ ಹೆಜ್ಜೆ)*

ಕರ್ಮಯೋಗಿಯಾಗಿ ಮೊದಲ ಸಲ ಕಂಡೆ, ಎರಡನೆಯ ಸಲ ಆಫ್ರಿಕಾದ ಕಗ್ಗತ್ತಲೆಯಲ್ಲಿ 'ಭಾರತೀಯರ ಬಿಡುಗಡೆಯ ಬೋಧಿ'ಯಾಗಿ ಕಂಡೆ, ಮೂರನೆಯ ಸಲ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾರತದ ಸ್ವಾತಂತ್ರ್ಯದ ವೇಳೆಯಲ್ಲಿ. ಕೊನೆಗೆ,

ನಾ ಕಂಡೆ ಸ್ವತಂತ್ರ ಭಾರತದ
ಜನಸಮುದ್ರದ ತಡಿಯ ಪ್ರಾರ್ಥನಾ ಶೈಲದಲ್ಲಿ,
ಮೂರು ಸಿಡಿಗುಂಡುಗಳ ಪೂಜೆ ಸಂದಿತು ಎದೆಗೆ
ಪಂಜರ ಬಿರಿದು ಹಾರಿತು ಹೊರಗೆ ತನ್ನ ಮನೆಗೆ – (ಕಂಡದ್ದು ಮೂರು ಸಲ–ದೀಪದ ಹೆಜ್ಜೆ)

ಗಾಂಧೀಜಿಯವರ ಅಂದಿನ ನೆನಪುಗಳನ್ನು ಜಿ.ಎಸ್.ಎಸ್ ರವರು ಈ ರೀತಿ ವ್ಯಕ್ತಪಡಿಸುತ್ತಾರೆ.

ಭಾರತದ ರಾಷ್ಟ್ರೀಯತೆ, ಸ್ವಾತಂತ್ರ್ಯ, ಸಂಸ್ಕೃತಿ, ಜಾತಿ, ಮತ, ಪಂಥ ಮುಂತಾದವುಗಳ ವಿವಿಧ ವೈವಿಧ್ಯ ಹಾಗೂ ಐಕ್ಯವನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಜಿ.ಎಸ್.ಎಸ್‌ರವರು **'ಐಕ್ಯಗಾನ'** ಎಂಬ ಕವನದಲ್ಲಿ ಹೀಗೆ ಹೇಳುತ್ತಾರೆ :

ಒಂದೇ ಒಂದೇ ನಾವೆಲ್ಲರೂ ಒಂದೇ, ಈ ದೇಶದೊಳೆಲ್ಲಿದ್ದರು
ಭಾರತ ನಮಗೊಂದೇ, ಮರಕ್ಕೆ ಹಲವು ಕೊಂಬೆಗಳಿದ್ದರೂ ಮರವು ಒಂದೇ
ನಡೆ ನುಡಿ ಬೇರೆ ಇದ್ದರೂ ಬದುಕುವ ಜನ ಒಂದೇ ಧ್ವಜ ಒಂದೇ,

– (ಐಕ್ಯಗಾನ-ಪ್ರೀತಿ ಇಲ್ಲದ ಮೇಲೆ)

ನಮ್ಮೆಲ್ಲರಲ್ಲಿರುವ ಸಂಸ್ಕೃತಿ, ಆಚಾರ, ವಿಚಾರ ಒಂದೇ ಎಂದು ಭಾವಿಸಬೇಕು. ಎಲ್ಲರೂ ಎಲ್ಲರಿಗಾಗಿ, ಎಲ್ಲರೂ ನಮಗಾಗಿ ದುಡಿದು ಐಕ್ಯಗಾನದಿಂದ ರಾಷ್ಟ್ರ ಕಟ್ಟೋಣ ಎಂಬ ಕವಿಯ ಆಶಯವನ್ನು ಗ್ರಹಿಸಬಹುದು.

'ಗೋಡೆ' ಎಂಬ ಕವನದಲ್ಲಿ ಇದುವರೆಗೆ ನಿರೂಪಿಸಿದ ಅನುಸಂಧಾನ ಅಥವಾ ಹೃದಯ ಸಂವಾದಕ್ಕೆ ಅಡೆ-ತಡೆಗಳು ಬಹಳ! 'ನಲ್ಮೆಗೆ ತಡೆಗಳು ಹೇರಳವಾಗಿಹವು' ಎಂಬ ಸೂಕ್ತಿಯನ್ನಿಲ್ಲಿ ಜ್ಞಾಪಿಸಿಕೊಳ್ಳಬಹುದು. ತಾಯಗರ್ಭದ ಹೊಕ್ಕುಳ ಸರಪಳಿಯನ್ನು ಕತ್ತರಿಸಿಕೊಂಡು ಹುಟ್ಟುವ ಮಾನವ ಶಿಶು, ಬೆಳೆಯುತ್ತಾ ಕಾಲ, ದೇಶ, ಭಾಷೆ, ಮತ-ಧರ್ಮ, ಬಣ್ಣ, ಜಾತಿ, ಲಿಂಗ ಮುಂತಾದ ಭೇದಭಾವದ ಸರಪಳಿಗಳಿಂದ ಬಂಧನಕ್ಕೆ ಒಳಗಾಗುತ್ತದೆ. ಅಲ್ಲದೆ ಅಹಂಕಾರ ಮತ್ತು ಮಮಕಾರಗಳಿಂದ ಬಗೆ ಬಗೆಯ ಮನೋವಿಕಾರದ ಗೋಡೆಗಳೆದ್ದು ಅನುಸಂಧಾನ ಅಥವಾ ಹೃದಯ ಸಂವಾದಗಳಿಂದ ದೂರವಾಗುತ್ತದೆ. ಸಂಪರ್ಕದ ಸೇತುವೆಗಳೆಲ್ಲ ಮುರಿದುಬಿದ್ದು, ಬಂಧನದ ಗೋಡೆಗಳೆದ್ದು ವ್ಯಕ್ತಿತ್ವವನ್ನು ಸಮಾಧಿ ಮಾಡುವ ಮೋಸವನ್ನು ಅರಿಯದಿದ್ದರೆ ಹೇಗೆ? ಎಂಬ ವಿಚಾರ ತಿಳಿಸಿದ್ದಾರೆ.

'ಈ ದೇಶದಲ್ಲಿ' ಎಂಬ ಕವನವು ಭಾರತಮಾತೆಯ ಇಂದಿನ ಸಾಮಾಜಿಕ ಪರಿಸ್ಥಿತಿಯನ್ನು ಬಿಂಬಿಸುತ್ತದೆ. ಈ ದೇಶದಲ್ಲಿ ಎಲ್ಲವೂ ಆಮೂಲಾಗ್ರವಾಗಿ ಬದಲಾಗಬೇಕು. ಜಾತಿ, ಮತ, ಪಂಥ ಎಲ್ಲವೂ ಹೋಗಿ ಸಮಾನತೆಯ ಧರ್ಮ ಸ್ಥಾಪನೆಯಾಗಬೇಕು. ವ್ಯಕ್ತಿಪೂಜೆ, ವಂಶಪೂಜೆ ಎಲ್ಲವೂ ನಿಂತು ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ಭಾವನೆ ಉಂಟಾಗಬೇಕೆಂಬ ಆಶಯವನ್ನು ಕವಿ ಇಲ್ಲಿ ವ್ಯಕ್ತಪಡಿಸುವುದನ್ನು ಗಮನಿಸಬಹುದು.

ಚೆನ್ನವೀರ ಕಣವಿ

ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದವರು ಮಹಾತ್ಮಾ ಗಾಂಧೀಜಿಯವರು ಇವರು. ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ತನ್ನ ಸಂಪತ್ತು ಆಸ್ತಿಯನ್ನೆಲ್ಲಾ ಸಾಬರಮತಿ ಆಶ್ರಮಕ್ಕೆ ನೀಡಿ ತುಂಡು ಉಡುಪು ಧರಿಸಿ ದಿನಕ್ಕೆ ಒಂದು ಬಾರಿ ಊಟಮಾಡಿ ಜಾತ್ಯತೀತತೆ ಮತ್ತು ಸಮಾನತೆ ಬೋಧಿಸಿದ ಮಹಾನ್ ವ್ಯಕ್ತಿ ಗಾಂಧಿ ಅವರ ಬಗ್ಗೆ ಚನ್ನವೀರ ಕಣವಿಯವರು ಹಲವಾರು ಕವನಗಳನ್ನು ಬರೆದಿದ್ದಾರೆ. **'ಅಮರ ತೇಜಃಪುಂಜಿ ಮತ್ತು ನಮ್ಮ ಬಾಪು'** ಎಂಬ ಕವನಗಳು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯನ್ನು ಬಿಂಬಿಸುವ ಕವನಗಳು. ಅಮರ ತೇಜಃಪುಂಜಿ ಎಂಬ ಕವನವು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ 'ಓ ತಂದೆ! ನಿನಗಿದೋ

ಈ ನೆಲದ ಕಣಕಣವು' ಕಣ್ಣೀರನ್ನು ಸುರಿಸಿ ಹಲಬಿ ಹಂಬಲಿಸುತ್ತಿದೆ. ಈ ನಾಡು ಅಷ್ಟೇ ಅಲ್ಲದೆ ನಿನ್ನೊಡನೆ ಸಾಗುತ್ತಿದೆ, ವಿಶ್ವವೇ ನಿನ್ನ 'ಸತ್ಯಾಗ್ರ' ಕರುಣೆಯಿಂದ ಪ್ರಭಾವಿತಗೊಂಡಿದೆ.

ಯಾವ ನುಡಿಗಡಣಕೂ ನಿಲುಕದಿಹೆ ಸಿಲುಕದಿಹೆ
ಸಧರ್ಮ ಬೋಧನೆಯ ಶಾಂತಿಯಲಿ ಕರುಣಿಸಿಹೆ
ತತ್ವನಿಕಷಕ್ಕಿಟ್ಟ ತಾಪಸಿಯ ಅಪರಂಜಿ
ನಿನ್ನದಿದೆ ಬಾಪೂಜಿ ಅಮರ ತೇಜಪುಂಜ *(ಅಮರ ತೇಜಃಪುಂಜ – ಕಾವ್ಯಾಕ್ಷಿ)*

'ನಮ್ಮ ಬಾಪು' ಎಂಬ ಕವನವು ಹಿಂದಿನ ಕವನದಲ್ಲಿನ ಮುಂದುವರಿದ ಭಾಗವನ್ನು ಹೇಳುತ್ತದೆ. 'ಮೈಗೆ ಚಿಂದಿಯ ಉಡುಪು ಜಗದ ಉದ್ಧಾರಕನೇ ಬಾಪು' ಎಂದು ಕವಿ ಉದ್ಗಾರ ತೆಗೆಯುತ್ತಾರೆ.

'ನಮ್ಮ ಬಾಪು' ಮತ್ತು **'ಹುತಾತ್ಮ'** ಎಂಬ ಕವನಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಗಾಂಧೀಜಿಯ ವ್ಯಕ್ತಿಚಿತ್ರಣವನ್ನು ಬಿಂಬಿಸುವ ಕವನಗಳಾಗಿವೆ. ನೂರಾರು ವರ್ಷದ ದಾಸ್ಯದ, ಹಾಸ್ಯದ ಬದುಕು ಸಾಕು ಸಾಕೀ ಗೋಳು, ಹೊಸ ಜೀವನ ಸಾಗಿಸೋಣ ಎಂದು ಭಾರತ ಮಾತೆಯ ಜನತೆ ಸಿಡಿದೇಳಬೇಕು ಎಂದು ಮನವಿ ಮಾಡಿಕೊಳ್ಳುತ್ತಾರೆ. ಸರ್ವ ಸುಖಭೋಗಗಳಿಗೆ ತಿಲಾಂಜಲಿಯಿತ್ತು ಭಾರತಮಾತೆಯ ರಾಷ್ಟ್ರನಿರ್ಮಾಣದಲ್ಲಿ ಕ್ರಾಂತಿಗೀತೆಯನ್ನು ಮೊಳಗಿಸಬೇಕು ಮತ್ತು ಕನ್ನಡಾಂಬೆಯ ಸ್ಫೂರ್ತಿಗೊಂಡು ಸಹಕರಿಸಬೇಕೆಂದು ಮನವಿ ಮಾಡಿಕೊಳ್ಳುತ್ತಾರೆ.

೧೯೩೮ ರಿಂದ ೧೯೪೦ ರ ವೇಳೆಗೆ ಕಣವಿಯವರು ವಿದ್ಯಾಭ್ಯಾಸಕ್ಕೆಂದು ಧಾರವಾಡದ ಹತ್ತಿರದ ಗರಗ ಗ್ರಾಮಕ್ಕೆ ಬರಲೇಬೇಕಾಯಿತು. ಆ ವೇಳೆಗೆ ಸ್ವಾತಂತ್ರ್ಯ ಚಳುವಳಿ ಕಾವೇರುತ್ತಿದ್ದ ಕಾಲ. ಶಾಲೆಯ ಹುಡುಗರ ಮುಗ್ಧ ಮನಸ್ಸಿನಲ್ಲಿ ದೇಶಭಕ್ತಿಯ ಕಾವು ಹುಟ್ಟಿಸಿತು. ಕರ್ನಾಟಕ ಏಕೀಕರಣ ಚಳುವಳಿಗೂ ಧಾರವಾಡವೇ ಕೇಂದ್ರವಾಗಿದ್ದರಿಂದ ನಾಡು–ನುಡಿಯ ಬಗೆಗಿನ ಪ್ರೀತಿ ಅಭಿಮಾನ ಸಹಜವಾಗಿಯೇ ಅವರ ಕಾವ್ಯದ ಮೂಲ ಸೆಲೆಗಳಲ್ಲಿ ಒಂದಾಯಿತು. ಮುಖ್ಯವಾಗಿ ಕಣವಿಯವರು ಬೇಂದ್ರೆ, ಪುಟ್ಟಪ್ಪನವರ ರಾಷ್ಟ್ರಗೀತೆಗಳಿಂದ ಪ್ರಭಾವಿತರಾದರೂ 'ಸಂವೇದನೆ ಮತ್ತು ಭಾಷೆ' ಇವೆರಡೂ ಕಣವಿಯ ತನ್ನತನದ ಛಾಪು ಇರುವುದರಿಂದ ಕಾವ್ಯರಚಿಸಲು ಸಾಧ್ಯವಾಯಿತು. ಪರಿಶೀಲನಾರ್ಹವಾದ ತೀಕ್ಷ್ಣತೆ, ಒಳನೋಟಗಳ ಒಲವುಗಳಿಂದ ಬೇರೊಂದು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಅವರನ್ನು ಪ್ರೇರೇಪಿಸಿತು :

ಹಿಮಶೈಲದುತ್ತುಂಗ ಶಿಖರದಿಂದೀ ಸೇತು
ವರೆಗೆ ಹಬ್ಬಿದ ನಾಡು ಭಾರತವಲಾ; ಗಂಗೆ
ಗೋದಾವರಿಯು, ಸಿಂಧು ಕಾವೇರಿಯರು
ತುಂಗೆನರ್ಮದೆಯು, ಕೃಷ್ಣೆ ಓ,
ಬಿಡುಗಡೆಯ ಹಾಡಾಂತುಹರಿಯುವತಿವೆ' *(ನಾವು ನಾಲ್ವತ್ತು ಕೋಟಿ – ಕಾವ್ಯಾಕ್ಷಿ)*

ಭವ್ಯ ಭಾರತದೊಳಗೆ ಸಾಂಸ್ಕೃತಿಕ ಪ್ರತ್ಯೇಕವಾದ ಘನತೆ, ಗೌರವವನ್ನು ಪಡೆದುಕೊಂಡು ಕನ್ನಡ ನಾಡು, ತನ್ನದೇ ಆದ ಶ್ರೀಮಂತ ಸೊಬಗನ್ನು ಪಡೆದುಕೊಂಡಿರುವಲ್ಲಿ ಹಿಂದೆ ಇಲ್ಲ. ಹಾಗೆಯೇ ಸಾಂಸ್ಕೃತಿಕವಾಗಿ ಪ್ರತಿಯೊಬ್ಬ ವ್ಯಕ್ತಿಯ ಆಶಯಗಳು ಒತ್ತು ನೀಡುವುದನ್ನು ಇನ್ನೊಂದು ಅರ್ಥದಲ್ಲಿ ಗಮನಿಸಬೇಕು.

ಅರರೆ ನರಜೀವ ನರನ ನಿರಿಯುವದಿದಿಳ್ಳಿತೆ?,
ಜಾತಿ ಮತ ಪಂಥಗಳ ಕೊಳಚೆಯಲ್ಲಿ ಕಚ್ಚಾಡಿ
ಸೋದರತೆ ಮಾನವತೆ ದಾನವತೆಯಂ ಕೂಡಿ
ಧುಮುಕಲಿದೆ ಬಿಸಿರಕುತ ಜಯ ಜಯವೆನ್ನಿ ಪಾಡಿ'

(ಹೋರು ಬೀಳ್ವನ್ನೆಗಂ-ಕಾವ್ಯಾಕ್ಷಿ)

ಮನುಷ್ಯ ಕುಲಕ್ಕೆ ಸೇರಿದ ನಾವುಗಳೆಲ್ಲ ಜಾತಿ, ಮತ, ಪಂಥಗಳನೆಣಿಸದೆ, ಭಾರತೀಯ ಸಂಸ್ಕೃತಿಯ ಘನತೆಯನ್ನು ಮೆರೆಸುವುದಕ್ಕಾಗಿ, ಬಂದಿವಾಸವನ್ನು ಬಿಡಿಸಿಕೊಂಡು ಸ್ವಾತಂತ್ರ್ಯದಿಂದ ಬದುಕುವುದಕ್ಕಾಗಿ ಒಗ್ಗೂಡಿ ಹೋರಾಡಲು ಸಿದ್ಧರಾಗಬೇಕಾಗಿದೆ ಎನ್ನುವ ಉದ್ದೇಶವನ್ನು ಕವಿಗೆ ಜನರೆದೆಯಲ್ಲಿ ತುಂಬುವ ವೀರ ಸಂಕಲ್ಪವಿದೆ. ಈ ಸಂಕಲ್ಪದ ಸಾರ್ಥಕ ಸ್ವರೂಪವೆನ್ನುವಂತೆ ನಮ್ಮ ದಾಸ್ಯತನದಿಂದ ಬಿಡುಗಡೆಗೊಂಡು ಸ್ವತಂತ್ರ ಭಾರತೀಯ ಹಬ್ಬದ ಬಾವುಟವನ್ನು ಬಾನೆತ್ತರಕ್ಕೆ ಹಾರಿಬಿಟ್ಟಿದ್ದು ಇದೇ ಸಂದರ್ಭದಲ್ಲಿಯೇ. ಹೀಗಾಗಿ ಇದರ ಜ್ವಲಂತ ವ್ಯಾಖ್ಯಾನ ಕವಿಯ ಕಾವ್ಯಧಾರೆಯಲ್ಲಿ ನೇರವಾಗಿ ಹರಿದುಬಂದಿದೆ.

ಕವಿ ತಾನು ಸ್ವಾತಂತ್ರ್ಯದ ದಿನವನ್ನು ಚಾತಕ ಪಕ್ಷಿಯಂತೆ ಕಾದು ಕುಳಿತಾಗ, ಬಹು ದಿನದ ಹಿರಿಯ ಬಯಕೆ ನಿಷೆಯಿಂದ ಉಷೆಯೆಡೆಗೆ, ಬಂಧದಿಂ ಬಿಡುಗಡೆಗೆ ಜನಕೋಟಿ ಸ್ವಾತಂತ್ರ್ಯ ತೀರದೆಡೆಗೆ' ಎನ್ನುತ್ತಾರೆ. ಈ ಉತ್ಸಾಹದ ಹಿಂದಿರುವ ತ್ಯಾಗ, ಶ್ರಮ, ಬಲಿದಾನಗಳನ್ನು ಕವಿ ವರ್ಣಿಸುವ ರೀತಿ ಇದು :

ದೇಶಭಕ್ತರನು ಸರ್ವಶಕ್ತರನು ಸೆರೆಯ ಕಾಳಕಿಳಿಸಿ
ಲಾಠಿ ಗುಂಡು ದುರ್ದಮ್ಯ ಶಿಕ್ಷೆ ಮರ್ದನೆಗೆ ರೂಪುಗೊಳಿಸಿ,
ಜನತೆಯುಸಿರ ಹತ್ತಿಕ್ಕಲೆಂದು ಸುತ್ತಾಡಿತಲ್ಲಿ ದಂಡು
ಅರಸುತನಕೆ ಓಗೊಟ್ಟುದಿಲ್ಲ ಎದೆಗೆಟ್ಟುದಿಲ್ಲ ಬಂಡು'

(ಬಂಧದಿಂ ಬಿಡುಗಡೆ– ಕಾವ್ಯಾಕ್ಷಿ)

ಆಂಗ್ಲರ ಆಳ್ವಿಕೆಯಲ್ಲಿ ಸಿಕ್ಕ ಭಾರತ ಛಿದ್ರಗೊಂಡ ತನ್ನೆಲ್ಲ ಸಂಪತ್ತನ್ನು, ವೈಭವವನ್ನು ಹಾಳುಮಾಡಿಕೊಂಡಿದೆ. ಸ್ವಾತಂತ್ರ್ಯದ ಒಂದೇ ಒಂದು ಬಲದಿಂದ ತನ್ನ ಹಿಂದಿನ ಸಿರಿಯನ್ನು ಮತ್ತು ಹೋಳಾದ ಭಾರತವನ್ನು ಮತ್ತೆ ಬೆಸೆಯುವ ಶಕ್ತಿ ಜನಕೋಟಿಗೆ ಇದ್ದೇ ಇದೆ ಎನ್ನುವ ಹಿರಿದಾದ ಆಶಾವಾದ ಕವಿಯಲ್ಲಿ ಉತ್ಕಟವಾದ ರೀತಿಯಲ್ಲಿ ಮೂಡುತ್ತದೆ.

ಚೆನ್ನವೀರ ಕಣವಿಯವರಂತೆ ಇನ್ನೊಬ್ಬ ಸಂವೇದನಾಶೀಲ ಮಹತ್ವದ ಕವಿಯಾದ ಗಂಗಾಧರ ಚಿತ್ತಾಲರ ಕಾವ್ಯದಲ್ಲಿ ಸ್ವಾತಂತ್ರ್ಯೋತ್ತರದ ಅತಿಯಾದ ಖಾರವಾದ ವಿಡಂಬನೆಯನ್ನು ನಾವು ಗಮನಿಸಬಹುದು. ಬೇಂದ್ರೆಯವರು ಸಾಮಾಜಿಕ ಪ್ರಜ್ಞೆಯುಳ್ಳ

ಹಲವು ಕವಿತೆಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಅವರ 'ಕುರುಡು ಕಾಂಚಾಣ', 'ಭೂಮಿತಾಯಿಯ ಚೊಚ್ಚಿಲ ಮಗ', 'ಪುಟ್ಟ ವಿಧವೆ', 'ತುತ್ತಿನ ಚೀಲ', 'ಹೆಣದ ಹಿಂದೆ', 'ಬಾಳ ಕರವಾಳ', 'ಯಜ್ಞ' ಇತ್ಯಾದಿ ಕವಿತೆಗಳು ಈ ಧೋರಣೆಯುಳ್ಳವು. ಕುವೆಂಪು ಅವರ 'ಕಲ್ಕಿ', 'ಇಂದಿನ ದೇವರು', 'ಅವತಾರ'-ಹೀಗೆ ಇವರಲ್ಲಿಯೂ ಈ ನೆಲೆಯ ಕವಿತೆಗಳನ್ನು ಸಾಕಷ್ಟು ನೋಡುತ್ತೇವೆ. ಪು.ತಿ.ನ., ಬೇಂದ್ರೆ, ಮಾಸ್ತಿಯವರು ತಮ್ಮ ಕವನಗಳಲ್ಲಿ ಉಗ್ರ ಹೋರಾಟವನ್ನು ಸಾರದೆ, ಸುಧಾರಕನ ರೊಚ್ಚನ್ನು ಪ್ರಕಟಿಸದೆ, ಮಾನವೀಯ ಇತ್ಯಾತ್ಮಕತೆಯನ್ನು ಸಾರಿದರು. ಇವರು ಖಂಡಿಸುವ ರೀತಿಯ ಬದಲು ಮಾನವೀಯತೆ ಸಮಾನತೆಯನ್ನು, ಆರಾಧಿಸುವ ಕ್ರಮವನ್ನು ಅವರು ಆರಿಸಿಕೊಂಡರು. ಡಿ.ಆರ್. ನಾಗರಾಜ್‌ರವರು **'ಶಕ್ತಿ ಶಾರದೆಯ ಮೇಳ'** ಕೃತಿಯಲ್ಲಿ ಈ ರೀತಿ ಹೇಳುವಂತೆ "ಮನುಷ್ಯ ಮತ್ತು ಸಮಾಜದ ಏಕೀಕೃತ ಸ್ಥಿತಿಗೆ ಭಂಗ ತರುವ ಈ ರೋಗಗಳ ವಿರುದ್ಧ ಕನ್ನಡ ನವೋದಯ ಕವಿತೆಗಳಲ್ಲಿ ಅತ್ಯಂತ ಉಗ್ರವಾಗಿ ಬಂಡೆದ್ದವರೆಂದರೆ ಕುವೆಂಪು" ಎಂದು ಅಭಿಪ್ರಾಯ ಪಡುತ್ತಾರೆ. ಇವರಲ್ಲಿಯೂ ಒಂದು ಸಂಸ್ಕೃತಿಯ ಜಾಯಮಾನದಲ್ಲಿ ಜಾರಿಯಲ್ಲಿರುವ ಮೌಲ್ಯಗಳ ತಿಳುವಳಿಕೆಗಳ ವಿವೇಚನಾಭಿವ್ಯಕ್ತಿಯಿದೆ; ಆಶಯಗಳಲ್ಲಿ, ಆಸಕ್ತಿಗಳಲ್ಲಿ ಒಂದೇ ಧೋರಣೆಯ ಒಲವು ಕಂಡುಬಂದರೂ ಅಭಿವ್ಯಕ್ತಿ ಕ್ರಮ, ವ್ಯವಸ್ಥೆಯ ಆಳದಿಂದ ಹೊರಡುವ ಅರ್ಥ ಧ್ವನಿ ಭಿನ್ನವಾಗಿರುತ್ತದೆ. ಕಣವಿಯವರ ವಿಶಾಲ ಮನಸ್ಸು ಸಾಂಸ್ಕೃತಿಕ ಲೋಕಕ್ಕೆ ಮುಖಾಮುಖಿಯಾಗಿಸುವಂತೆ ವೈಯಕ್ತಿಕ ನೆಲೆಯಲ್ಲಿಯೂ ಅವರು ಮೌಲ್ಯ ಸ್ವೀಕಾರ ಗುಣವನ್ನು ಹೊಂದಿರುವುದು ನವೋದಯ ಪರಂಪರೆಯ ವಿಕಾಸಗುಣವನ್ನೇ ತೋರಿಸುತ್ತದೆ. ಉದಾಹರಣೆಗಾಗಿ ಕಣವಿಯ ಸಮಗ್ರಕಾವ್ಯದ ಕೆಲವು ಸಾಲುಗಳನ್ನು ಗುರುತಿಸಬಹುದು :

ಬರೆದೆನಯ್ಯ ಗುರಿಯು ಚಿತ್ರ ಎದೆಯ ಕುದಿಯಲಿ'-(ಒಳ್ಗುರಿಗೆ-ಕಾವ್ಯಾಕ್ಷಿ)
ಹಿರಿದು ಕಿರಿದೆಂಬುವುದು ಅಲ್ಪಬುದ್ಧಿ - (ಭಾವಜೀವ)
ನಮ್ಮ ಅನುಭವಗಳೇ ನಮ್ಮ ಗಳಿಕೆ
ಕಾಲ ದೊರೆಗಲ್ಲಿನಲಿ ನಿಂತ ಬಾಳ್ಕೆ - (ಹೊಸ ಬಾಳು ನಮ್ಮದಿದೆ- ಆಕಾಶಬುಟ್ಟಿ)
ಬಗಿದು ನೋಡುವ ಬಯಕೆ ಬಗೆಯೊಳಿದೆ; ಮನ್ನಣೆಯ
ಅಳಿಯಾಸೆ ಮಣ್ಣುಗೂಡಲಿ' (ಕವಿತೆಗೆ-ಮಧುಚಂದ್ರ)
ಬರುವುದೆಲ್ಲ ಬರಲಿ ಬಿಡು ಏಕೆ ಅದರ ಚಿಂತೆ? (ಬರುವುದೆಲ್ಲ ಬರಲಿ ಬಿಡು-ಆಕಾಶಬುಟ್ಟಿ)
ಮನವು ಬಾನಗಲ, ಎದೆ ತಿಳಿಗೊಳದೊಲು
ಭಾವಶುದ್ಧ ಸ್ಫಟಿಕ- ಬೆಳದಿಂಗಳು? (ಗೆಳೆತನ- ಆಕಾಶಬುಟ್ಟಿ)

ಇವುಗಳನ್ನು ಗಮನಿಸಿ 'ಕಣವಿಯವರ ಸಂಸ್ಕೃತಿ ಅವರ ಮೂಲಗುಣ; ಶಿಕ್ಷಣದಿಂದ ಪಡೆದ ಮುಖವಾಡವಲ್ಲ' ಎಂದು ಸಂಕ್ರಮಣ ಹೊಸ ಕಾವ್ಯದಲ್ಲಿ ಚಂಪ ರವರು ಅಭಿಪ್ರಾಯಪಡುತ್ತಾರೆ.

ಹೀಗೆ ಈ ತಲಸ್ಪರ್ಶಿಯಾದ ಗುಣದಿಂದಲೇ ಎಲ್ಲಿಯೂ ಅವರ ಭಾವನೆಗಳು ಕೃತಕವೆನ್ನಿಸುವುದಿಲ್ಲ. 'ಸದ್ಯಃ ಪರನಿರ್ವೃತಿ'ಯಂತೆ ಹೃದಯವನ್ನು ಪ್ರೀತಿಯಿಂದ

ಮಾತನಾಡಿಸುತ್ತವೆ. ಕಣವಿಯವರ ನೂರು ಕನಸುಗಳ ಸ್ವರೂಪ ವೈಯಕ್ತಿಕವಿದ್ದಂತೆ ಸಾಮಾಜಿಕವೂ ಆಗಿರುವುದು; ಇವರ ಕೆಲವು ಕವನಗಳನ್ನು ನೋಡಬಹುದು :

ಮನುಕುಲವು ಹೂವಾಗಿ,
ಜಗವು ಜೇಂಗೊಡವಾಗಿ
ಮನವು ತನಿವಣ್ಣಾಗಲೆಂಬ ಹುಚ್ಚು (ಭಾವಜೀವ)
ದೈತ್ಯ ದರ್ಪದ ದುರುಳ ದಾರುಣದ (ಹೋರಟೆಗೆ)
ಎಂದೆಂದು ನನ್ನ ತಲೆ ಬಾಗದಿರಲಿ (ಬಿನ್ನಹ- ಕಾವ್ಯಾಕ್ಷಿ)
ನಿನ್ನ ನೋವಿನ ನಿನ್ನ ಕಂಬನಿಯೆ ಸಾಕು? (ಕಂಬನಿಯೆ ಸಾಕು-ಆಕಾಶಬುಟ್ಟಿ)
ಯಾವ ಮಂದಿರದ ಆಧಾರಸ್ತಂಭಕೋ
ಕಾಣೆ ಇಂತು ಜೀವಸ್ತಂಭ ಸಿದ್ಧವಾಗಿ, ನಿಂತಿಹುದು ಕರ್ತವ್ಯಬದ್ಧವಾಗಿ!.
(ಬಾಳಕೊರಡು--ಆಕಾಶಬುಟ್ಟಿ)

"ಕಣವಿಯವರು ಕಾವ್ಯ ಆಂತರ್ಯದ ವಿಕಾಸಕ್ಕೆ ಕೊಟ್ಟಷ್ಟು ಅಥವಾ ಇನ್ನೂ ಒಂದು ತೂಕ ಹೆಚ್ಚು ಲಕ್ಷ್ಯವನ್ನು ಸಾಮಾಜಿಕ ಸ್ವಾಸ್ಥ್ಯಕ್ಕೆ ಕೊಟ್ಟಿದ್ದಾರೆ" ಎಂದು ಜಿ.ಎಸ್. ಆಮೂರ 'ಹೊಂಬೆಳಕು' ಪ್ರಸ್ತಾವನೆಯಲ್ಲಿ ಅವರು ಸಮರ್ಥವಾಗಿಯೇ ಗುರುತಿಸುತ್ತಾರೆ. ಕಣವಿಯವರ ಹೆಚ್ಚು ಪದ್ಯಗಳಲ್ಲಿ ಈ ಅಂಶ ಪ್ರಕಟವಾದದ್ದು ನಿಚ್ಚಳವಾಗಿಯೇ ಇದೆ. ಸತ್ಯವಾದ, ಚೆಲುವಾದ, ಅರ್ಥವತ್ತಾದ ಬಾಳನ್ನು ನೆಚ್ಚಿಕೊಂಡು ಹೋಗುವ ಈ ಕವಿ ತಮ್ಮ ಅಂತರಂಗದ ಕುರಿತೇ ಪ್ರಶ್ನೆಯೊಡ್ಡುತ್ತಾರೆ:

'ಕೀಳು ಬಾಳಿನಿಂದ ನೀನು
ಮೇಲಕೆತ್ತಲಾರೆಯೇನು? (ಒಳ್ಗರಿ-ಕಾವ್ಯಾಕ್ಷಿ)
ಕವಿಯಲ್ಲಿ ಎಂಥ ಕಟುವಾದ ಧೈರ್ಯ, ಸಮಾಜದ ಗಂಭೀರ ಸ್ವರೂಪ ಬಾಯಿಬಿಚ್ಚಿದೆ:
ವಿಧಿ ಮಾಟದೇರಾಟ ಹೋರಾಟಗಳಿಗೆಲ್ಲ
ಎದೆಗೊಟ್ಟು ನಿಲ್ಲು ಜೀವ;
ಕಲ್ಲು ಕಲ್ಲಾಗಲೆದೆ ಸಂಕಷ್ಟ ಸಂತತೆಗೆ---- (ನಂಜುಂಡನಾಗಿ ಬಾಳು- ಕಾವ್ಯಾಕ್ಷಿ)
ಬಾಳಿನುಯ್ಯಾಲೆಯನು ತಾಳ್ಮೆಯಲಿ ತೂಗು (ತಾಳ್ಮೆ - ಕಾವ್ಯಾಕ್ಷಿ)

'ಮಧುರ ಚೆನ್ನರ ನೆನಪಿಗೆ' ಮಧುರ ಚೆನ್ನ ನಮ್ಮ ನಾಡಿನ ಜಾನಪದ ಸೊಗಡನ್ನು ಜನತೆಗೆ ನಾಡು ನುಡಿಗೆ ಸೇವೆ ಸಲ್ಲಿಸಿದ ವ್ಯಕ್ತಿ ಮತ್ತು ಬೇಂದ್ರೆಯವರ ಮೇಲೆ ಪ್ರಭಾವ ಬೀರಿದ ವ್ಯಕ್ತಿ. ಅಂಥವರನ್ನು ಕುರಿತು ಕಣವಿಯವರು ಈ ಕವನ ಬರೆದಿದ್ದಾರೆ. ಅವರಾಡುವ ನುಡಿಯಿಂದ ಜನಪದ ಸಾಹಿತ್ಯ ಸೃಷ್ಟಿಯಾದ ನಂತರ ಅದಕ್ಕೆ ಸಂಗೀತದೊಡನೆ ಮೇಳೈಸಿ ಜನಸಾಮಾನ್ಯರಿಗೆ ಜನಪದ ಸಾಹಿತ್ಯ ಸವಿಯನ್ನು ನೀಡಿದವರು. ಅದನ್ನು ಕವಿಯು ಈ ರೀತಿ ಹೇಳುತ್ತಾರೆ :

ಹೂವು ಹೂವಿನ ಜೇನು ತೊಳೆಬಿಡಿಸಿ
ಸುಗ್ಗಿಯಮಾಡಿದರಂದು ನಾಡನಲಿಸಿ (ಮಧುರ ಚೆನ್ನರ ನೆನಪಿಗೆ - ದಾರಿದೀಪ)

ವಿಮರ್ಶಾತ್ಮಕವಾಗಿ ಹೇಳುವುದಾದರೂ ಹಳೆಯ ಕಸದ ರಸವನ್ನು ಗಂಧದೊಡನೆ ತೇದು ಗಮಗಮಿಸುವ ರೀತಿ ಎಂದು ಹೇಳಬಹುದು. ಜನಪದ ಸಾಹಿತ್ಯದ ಎಲ್ಲಾ ರೀತಿ ಎಳೆ ಎಳೆ ಬಿಡಿಸಿ ಸಂಗೀತದೊಡನೆ ಮೇಳೈಸಿ ನಾಡನ್ನು ಕಟ್ಟಿದರು. ನಾಡಿಗೆ ನಮ್ಮ ಜನಪದ ಸಂಸ್ಕೃತಿಯನ್ನು ಪರಿಚಯಿಸಿದರು. ಪ್ರೀತಿಯ ಜಲಧಾರೆಯನ್ನು ಜನಮನಕ್ಕೆ ಪರಿಚಯಿಸಿ ತನುಮನ ಧನ ಅರ್ಪಿಸಿದ ಮಧುರ ಚೆನ್ನರವರನ್ನು ಕಣವಿಯವರು ಸ್ಮರಿಸುವ ರೀತಿ ಹೀಗೆ:

ತನುವು ನಿಸದಿಗೆಗೆಲ್ಲು, ಮನವು ಮಾಸತಿಕಲ್ಲು
ನಿಮ್ಮ ಸಾಧನೆಗೊಂದು ವೀರಗಲ್ಲು!
ಭಾವ ದೇವಾಲಯದಿ ನಿತ್ಯ ನಂದಾದೀಪ
ಶರಣ ಶರಣೆಂಬುದೇ ಕೊನೆಯ ಸೊಲ್ಲು

(ಮಧುರ ಚೆನ್ನರ ನೆನಪಿಗೆ– ದಾರಿದೀಪ)

ತಮ್ಮ ಜೀವಮಾನವೆಲ್ಲವನ್ನೂ ನಾಡಿಗೆ ಸಮರ್ಪಿಸಿ, ಜನಪದ ಕಾವ್ಯ ಜನಸಾಮಾನ್ಯರಿಗೆ ವಿಡಂಬಸಿದ ರೀತಿಯನ್ನು ದೇಹ ನಿಶದೀಕಲ್ಲ ಮನಸ್ಸು ಮಾಸತಿಕಲ್ಲು ಎನ್ನುವ ರೀತಿಯಲ್ಲಿ ನಮ್ಮ ನಾಡಿಗೆ ಮರೆಯಲಾರದಂತಹ ಕೆಲಸಮಾಡಿದ್ದಾರೆ.

ಜಿ.ಎಸ್.ಎಸ್. ಮತ್ತು ಕಣವಿಯವರು ಸ್ವಾತಂತ್ರ್ಯ ಪೂರ್ವದ ಘಟನೆ ಮತ್ತು ತುರ್ತು ಪರಿಸ್ಥಿತಿಯಂಥ ಘಟನೆಗಳನ್ನು ಸಮಾಜಮುಖಿಯಾಗಿ ಚಿತ್ರಿಸಿದ್ದಾರೆ. ರಾಜಕೀಯ ಪರಿಸ್ಥಿತಿ ಹಾಗೂ ಈಸ್ಟ್ ಇಂಡಿಯಾ ಆಡಳಿತವನ್ನು ಕಟಕಿಸುವಂತಹ ಕವನಗಳನ್ನು ಬರೆದಿದ್ದಾರೆ.

□□□

ಕೆ.ಸಂ. ೧೯೬೪ – ೫೦೦ ಪ್ರತಿಗಳು – ಮೈವಿಮು – ೨೨-೦೨-೨೦೧೪

ಶ್ರೀಮದ್ ವಾಲ್ಮೀಕಿ ರಾಮಾಯಣದ ಸೀತಾ ಪರಿತ್ಯಾಗ ವೃತ್ತಾಂತ : ಮೂಲಕ್ಕೆ ಕೊಂಚ ತಿದ್ದುಪಡಿ

– ಪ್ರೊ. ಟಿ.ಎಸ್. ಕೃಷ್ಣಮೂರ್ತಿ

ರಾಮನು ಸೀತೆಯನ್ನು ಪರಿತ್ಯಾಗ ಮಾಡಿದ ರಾಮಾಯಣದ ವೃತ್ತಾಂತವು ರಾಮನ ಒಂದು ಅಮಾನವೀಯ ನಡವಳಿಕೆ ಎಂದು ಅನೇಕ ವಿಚಾರವಾದಿಗಳು ಭಾವಿಸಿದ್ದಾರೆ. ಈ ವೃತ್ತಾಂತವು ರಾಮಾಯಣದ ಉತ್ತರಕಾಂಡದಲ್ಲಿದೆ. ಸಂಶೋಧಕರ ಪ್ರಕಾರ ವಾಲ್ಮೀಕಿಯ ಮೂಲ ಕೃತಿಯು ಸುಗ್ರೀವ, ವಿಭೀಷಣ ಮತ್ತು ಆಂಜನೇಯ ಮುಂತಾದವರ ಉಪಸ್ಥಿತಿಯಲ್ಲಿ ಅಯೋಧ್ಯೆಯ ರಾಜನಾಗಿ ರಾಮನು ಪಟ್ಟಾಭಿಷಿಕ್ತನಾಗುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ (ಯುದ್ಧಕಾಂಡ, ಸರ್ಗ ೧೩೧). ರಾಮನ ಆಳ್ವಿಕೆಯ ಒಂದು ಸುಂದರ ವಿವರಣೆಯೂ ಅಲ್ಲಿದೆ. ಎಲ್ಲ ವರ್ಗದ ಪ್ರಜೆಗಳೂ ಸುಖಿ, ಸಮೃದ್ಧಿ ಮತ್ತು ಶಾಂತಿಯನ್ನು ಅನುಭವಿಸುತ್ತಿದ್ದರೆಂದೂ ರಾಮನು ಅಭಿಷಿಕ್ತನಾದ ಮೇಲೆ ಅನೇಕ ಯಜ್ಞ–ಯಾಗಾದಿಗಳನ್ನು ನೆರವೇರಿಸುವ ಮೂಲಕ ದೇವತೆಗಳನ್ನೂ ಪ್ರಜೆಗಳನ್ನೂ ಸಂತುಷ್ಟರನ್ನಾಗಿಸಿದನೆಂದೂ ವರ್ಣಿಸಲಾಗಿದೆ. ಸಾಹಿತ್ಯ ಸಂಪ್ರದಾಯದಂತೆ ರಾಮಾಯಣ ಇಲ್ಲಿಗೆ ಮುಕ್ತಾಯವಾಗಬೇಕು.

ಉತ್ತರಕಾಂಡದ ಹೆಸರೇ ಸೂಚಿಸುವಂತೆ ರಾಮನ ಜೀವನದ ಮುಂದಿನ ಭಾಗವನ್ನು ವರ್ಣಿಸುತ್ತದೆ. ಆದರೆ ಈಗಿರುವಂತೆ ಉತ್ತರಕಾಂಡವು ಲಂಕೆಯ ಪೂರ್ವ ಇತಿಹಾಸದಿಂದ ಪ್ರಾರಂಭವಾಗುತ್ತದೆ. ಲಂಕೆಯನ್ನು ಆಳಿದವರೆಂದರೆ ಕ್ರಮವಾಗಿ ಮಾಲ್ಯವಂತ, ಸುಮಾಲಿ, ಮಾಲಿ, ವೈಶ್ರವಣ, ಕೊನೆಗೆ ರಾವಣ. ಇವರೆಲ್ಲರ ಪರಾಕ್ರಮಾದಿ ವಿಷಯಗಳನ್ನು ಮೂವತ್ತು ಮೂರು ದೀರ್ಘ ಸರ್ಗಗಳಲ್ಲಿ ವರ್ಣಿಸಲಾಗಿದೆ. ಸಾಲದ್ದಕ್ಕೆ ಇಂದ್ರಜಿತುವಿನ ಜನನ, ಅವನ ಪರಾಕ್ರಮ ಮತ್ತು ಅವನು ಇಂದ್ರನನ್ನು ಗೆದ್ದ ವಿವರಗಳೂ, ಕೆಲವು ಸರ್ಗಗಳಲ್ಲಿ ಬಂದಿವೆ. ಇವೆಲ್ಲವನ್ನೂ ರಾಮನಿಗೆ ಅಗಸ್ತ್ಯ ಮಹರ್ಷಿಗಳು ವರ್ಣಿಸುತ್ತಾರೆ. ಇಷ್ಟೇ ಸಾಲದೆಂದು ಇನ್ನೂ ಕೆಲವು ಸರ್ಗಗಳಲ್ಲಿ ವಾಲಿ, ಸುಗ್ರೀವ ಇವರ ಜನ್ಮ, ಪರಸ್ಪರ ವಿರೋಧ, ವಾಲಿಯ ಹತ್ಯೆ – ಈ ಕಥೆಗಳೂ, ಆಂಜನೇಯನ ಜನ್ಮ, ಪ್ರವರ್ಧಮಾನ ಮತ್ತು ಅವನ ಇತಿಹಾಸ, ಮುಂತಾದವೂ ಸುದೀರ್ಘವಾಗಿಯೇ

ವರ್ಣಿತವಾಗಿವೆ. ಈ ಎಲ್ಲ ಕಥೆಗಳ ಪ್ರಸ್ತುತತೆಯನ್ನು ತಿಳಿಯುವುದು ಕಷ್ಟವೇ. ಸಾಲದ್ದಕ್ಕೆ ಅಹಲ್ಯೆಯ ಕಥೆಯು ಹಿಂದೆ ಬಾಲಕಾಂಡದಲ್ಲಿ ಹೇಳಿರುವ ಕಥೆಗಿಂತ ಭಿನ್ನವಾಗಿದೆ. ಕವಿಯೇ ತನ್ನ ಕೃತಿಯನ್ನು ಹೀಗೆ ವ್ಯತ್ಯಸ್ತವಾಗಿ ಬರೆದಿರಲು ಸಾಧ್ಯವೇ ? ಎಂಬ ಸಂಶಯ ಮೂಡುತ್ತದೆ. ಪ್ರಸ್ತುತ ಉತ್ತರಕಾಂಡದಲ್ಲಿ ಬಂದಿರುವ ಶತ್ರುಘ್ನನು ಲವಣಾಸುರನನ್ನು ಕೊಂದ ಕಥೆ ಆಶ್ಚರ್ಯವನ್ನು ಹುಟ್ಟಿಸುತ್ತದೆ. ಇಲ್ಲಿಯವರೆಗೆ ಶತ್ರುಘ್ನನಿಗೆ ಯಾವ ಪಾತ್ರವೂ ಇರಲಿಲ್ಲ. ಆದ್ದರಿಂದ ಅವನು ಹೆಸರಿನಿಂದ ಮಾತ್ರವಷ್ಟೇ ಅಲ್ಲ, ಪರಾಕ್ರಮದಿಂದಲೂ ಶತ್ರುಘ್ನ, ಅಂದರೆ, ಶತ್ರುಗಳನ್ನು ವಿನಾಶಗೊಳಿಸಬಲ್ಲವನು–ಎಂದು ತೋರಿಸಲು ಯಾರಿಗೋ ಅನಿಸಿ ಅವರು ಈ ವೃತ್ತಾಂತವನ್ನು ಬರೆದು ಸೇರಿಸಿರಬೇಕು. ಈ ಆಧಾರಗಳ ಮೇಲೆ ಉತ್ತರಕಾಂಡವು ಅನಂತರ ಕಾಲದಲ್ಲಿ ಅನೇಕ ಜನರಿಂದ ಪ್ರಕ್ಷಿಪ್ತವಾಗಿದೆ – ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಮುಂದೆ ಬಂದ ಲೇಖಕರು ಅಯೋಧ್ಯೆಯ ರಾಜನಾದ ರಾಮನ ಕೆಲವು ವೃತ್ತಾಂತಗಳನ್ನು ಸೇರಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು ಎರಡು : ಶಂಬೂಕ ವಧೆ ಮತ್ತು ಸೀತಾಪರಿತ್ಯಾಗ. ಶಂಬೂಕ ವೃತ್ತಾಂತದ ಬಗ್ಗೆ ನಾನು ಡಾ. ಕೆ. ಕೃಷ್ಣಮೂರ್ತಿಗಳಿಗೆ ಸಲ್ಲಿಸಿದ ಗೌರವ ಗ್ರಂಥದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದೇನೆ. ಇನ್ನು ಸೀತಾಪರಿತ್ಯಾಗ ವೃತ್ತಾಂತ ಉತ್ತರಕಾಂಡದಲ್ಲಿ ಕಂಡುಬಂದಿರುವಂತೆ ಸಂಕ್ಷಿಪ್ತವಾಗಿ ಹೀಗಿದೆ :

ರಾಮನು ಅಯೋಧ್ಯೆಯ ರಾಜನಾಗಿ ಸೀತಾದೇವಿಯೊಂದಿಗೆ ಸುಖವಾಗಿ ಕಾಲಕಳೆಯುತ್ತಿದ್ದನು. ಗರ್ಭಿಣಿಯಾದ ಸೀತಾದೇವಿಯು ಕಾಡಿನ ಋಷ್ಯಾಶ್ರಮಗಳಲ್ಲಿ ಕೊಂಚಕಾಲ ಇದ್ದು ಬರಬೇಕೆಂಬ ತನ್ನ ಬಯಕೆಯನ್ನು ರಾಮನ ಮುಂದೆ ವ್ಯಕ್ತಗೊಳಿಸಿದ್ದಳು. ಏತನ್ಮಧ್ಯೆ ಸ್ತ್ರೀಲಂಪಟನಾಗಿದ್ದ ರಾವಣನ ಬಂಧನದಲ್ಲಿದ್ದ ಸೀತೆಯ ಚಾರಿತ್ರ್ಯದ ಬಗ್ಗೆ ಜನರಲ್ಲಿ ಸಂಶಯ ಉಂಟಾಯಿತು. ಈ ಬಗ್ಗೆ ಗೂಢಚಾರನಿಂದ – ರಾವಣನ ಅರಮನೆಯಲ್ಲಿ ಒಂದು ವರ್ಷ ಕಳೆದ ಹೆಂಗಸಿನೊಡನೆ ಪುನಃ ರಾಮ ಜೀವನ ನಡೆಸುವದು ಸಮಂಜಸವೆ? – ಎಂದು ಜನರು ಮಾತನಾಡಿಕೊಳ್ಳುತ್ತಿದ್ದ ವಿಷಯ ರಾಮನ ಕಿವಿಗೆ ಬಿದ್ದಿತು. ಈ ಅಪವಾದವು ರಾಮನಲ್ಲಿ ದಿಗ್ಭ್ರಮೆಯನ್ನೂ ತೀವ್ರ ಮನೋವೇದನೆಯನ್ನೂ ಉಂಟುಮಾಡಿತು. ಇದರ ಬಗ್ಗೆ ಚಿಂತಿಸುತ್ತಾ ಅವನು ತನ್ನ ಸೋದರರನ್ನು ಕರೆದು ಈ ಅಪವಾದವನ್ನು ಅವರಿಗೆ ತಿಳಿಸಿ, ತನ್ನ ತೀರ್ಮಾನವನ್ನು ಪ್ರಕಟಪಡಿಸಿದನು. ಅದು ಹೀಗಿತ್ತು :

"ಸೀತೆಯನ್ನು ಕುರಿತಾದ ಈ ಅಪವಾದವು ತನ್ನ ಹೃದಯವನ್ನು ಕೊರೆಯುತ್ತಿದೆ. ಇಂತಹ ಕುಖ್ಯಾತಿಯ ಫಲವಾಗಿ ನನ್ನ ಮತ್ತು ನನ್ನ ವಂಶದ ಗೌರವವು ಕಲುಷಿತಗೊಂಡು ನನಗೆ ಸ್ವರ್ಗದ ಬಾಗಿಲು ಮುಚ್ಚಲಿದೆ. ಆದರಿಂದ ನಾನು ಎಷ್ಟೊಂದು ಕುಗ್ಗಿ ಹೋಗಿದ್ದೇನೆಂದರೆ ನಾನು ಬದುಕುವುದೇ ಬೇಡವೆನಿಸಿದೆ. ನಿಮ್ಮಿಂದ ದೂರವಾಗಲೂ ನಾನು ಸಿದ್ಧ. ಇನ್ನು ಸೀತೆಯ ಬಗ್ಗೆ ಹೇಳುವುದೇನಿದೆ ? ನಾನು ಸೀತೆಯನ್ನು ಪರಿತ್ಯಜಿಸಲು ತೀರ್ಮಾನಿಸಿದ್ದೇನೆ. ಈ ತೀರ್ಮಾನವನ್ನು ನೀವು ಯಾರೂ ವಿರೋಧಿಸಬಾರದು".

ಅನಂತರ ರಾಮನು 'ಗರ್ಭಿಣಿಯ ಬಯಕೆಯನ್ನು ತೀರಿಸುವ ನೆಪದಲ್ಲಿ' ಸೀತೆಯನ್ನು ವಾಲ್ಮೀಕಿ ಮಹರ್ಷಿಗಳ ಆಶ್ರಮದ ಸಮೀಪದ ಕಾಡಿಗೆ ಕರೆದುಕೊಂಡು ಹೋಗಿ ಅಲ್ಲಿ ಬಿಟ್ಟು ಬರಲು ಲಕ್ಷ್ಮಣನಿಗೆ ಆಜ್ಞೆ ಮಾಡಿದನು. ಲಕ್ಷ್ಮಣನು ಸೀತೆಯನ್ನು ವಾಲ್ಮೀಕಿ ಮಹರ್ಷಿಗಳ ಆಶ್ರಮದ ಸಮೀಪದಲ್ಲಿ ಬಿಟ್ಟು ರಾಮನು ಅಪವಾದ ಭಯದಿಂದ ಅವಳನ್ನು ಪರಿತ್ಯಜಿಸಿರುವ ಘೋರವಾದ ಸಂಗತಿಯನ್ನು ಅವಳಿಗೆ ತಿಳಿಸಿದನು (ಉತ್ತರಕಾಂಡ, ಸರ್ಗ ೪೩–೪೪). ಮಹರ್ಷಿಗಳು ಸೀತೆಯನ್ನು ತಮ್ಮ ಆಶ್ರಮಕ್ಕೆ ಕರೆದುಕೊಂಡು ಹೋಗಿ ಎಲ್ಲ ರಕ್ಷಣೆಯನ್ನೂ ನೀಡಿದರು.

ಈ ವೃತ್ತಾಂತವನ್ನು ಗಮನಿಸಿದಾಗ ವಾಲ್ಮೀಕಿ ಮಹರ್ಷಿಗಳ ಅನಂತರ ಬಂದ ಲೇಖಕನೊಬ್ಬನು ರಾಮನನ್ನು ನಿಃಸ್ವಾರ್ಥ ರಾಜನನ್ನಾಗಿಯೂ, ಪ್ರಜೆಗಳನ್ನು ತೃಪ್ತಿಗೊಳಿಸುವುದಕ್ಕಾಗಿ ತನ್ನ ಸುಖವನ್ನು ತ್ಯಾಗ ಮಾಡಿದವನನ್ನಾಗಿಯೂ ಮಾಡುವುದಕ್ಕೋಸ್ಕರವೇ ಈ ಕಥೆಯನ್ನು ಕಲ್ಪಿಸಿರಬೇಕೆಂದು ತೋರುತ್ತದೆ. ಇದಕ್ಕೆ ಪೋಷಕವಾಗಿ ಉತ್ತರಕಾಂಡದ ಸರ್ಗ ೯೯ ಶ್ಲೋಕ ೨ ರಲ್ಲಿ 'ಉತ್ತರಂ ಕಾವ್ಯಂ' ಎಂಬ ಮಾತು ಬಂದಿದೆ. ಪ್ರಾಯಶಃ ಉತ್ತರಕಾವ್ಯ ಎಂಬ ಬೇರೆ ಕಾವ್ಯವೇ ಇದ್ದು ಅದನ್ನು ರಾಮಾಯಣದ ಕೊನೆಯ ಭಾಗಕ್ಕೆ ಸೇರಿಸಿರಬಹುದೆಂಬ ಊಹೆ ಮಾಡಲು ಸಾಧ್ಯವಿದೆ. ಇದನ್ನು ಸೇರಿಸಿದ ಮೇಲೆ ಉತ್ತರಕಾಂಡದ ಅಂತಿಮ ಸರ್ಗದಲ್ಲಿ ಆಯುಷ್ಕರವೂ ಭವಿಷ್ಯೋತ್ತರಕಾಂಡಸಹಿತವೂ ಆದ ಈ ಇತಿಹಾಸವನ್ನು ಪ್ರಾಚೇತಸರಾದ ವಾಲ್ಮೀಕಿ ಮುನಿಗಳು ರಚಿಸಿದರು (ಸರ್ಗ ೧೧೧, ಶ್ಲೋಕ ೧೧), ಎಂದು ಪುನಃ ಹೇಳಿರುವುದೂ ಈ ಸಂಶಯಕ್ಕೆ ಎಡೆಮಾಡಿಕೊಡುತ್ತದೆ. ವಾಲ್ಮೀಕಿ ರಾಮಾಯಣದ ಬಾಲಕಾಂಡದ ಪ್ರಥಮ ಸರ್ಗವು ಸಮಗ್ರ ರಾಮಾಯಣದ ಕಥೆಯನ್ನು ಸಂಕ್ಷೇಪವಾಗಿ ತಿಳಿಸುತ್ತದೆ. ಇದರಲ್ಲಿ ೯೭ ಶ್ಲೋಕಗಳಿವೆ. ಆದರೆ ಇದರಲ್ಲಿ ಎಲ್ಲಿಯೂ ಸೀತಾಪರಿತ್ಯಾಗದ ವೃತ್ತಾಂತವಿಲ್ಲ. ಆದರೆ ಮುಂದೆ ೩ನೇ ಸರ್ಗದ ಕೊನೆಯ ಶ್ಲೋಕದಲ್ಲಿ 'ವೈದೇಹ್ಯಾಶ್ಚವಿಸರ್ಜನಂ" – ಮುಂತಾದುವನ್ನು 'ಉತ್ತರಕಾವ್ಯ'ದಲ್ಲಿ ರಚಿಸಿದರು ಎಂದಿದೆ. 'ಉತ್ತರಕಾಂಡ' ಎಂಬ ಮಾತು ಇಲ್ಲಿ ಬಂದಿಲ್ಲ. ರಾಮಾಯಣದ ವಿಭಾಗ ಕಾಂಡಗಳಲ್ಲಿದ್ದುದು ಈ ಲೇಖಕನಿಗೆ ತಿಳಿದಿರಲಿಲ್ಲವೆ? ಉತ್ತರಕಾವ್ಯವನ್ನು ಮೂಲರಾಮಾಯಣಕ್ಕೆ ಪ್ರಕ್ಷೇಪಗೊಳಿಸಿದ ಅನಂತರ ಮೂರನೇ ಸರ್ಗದಲ್ಲಿ ಇದನ್ನು ಸೇರಿಸಿರಬಹುದೆಂದು ಊಹಿಸಬಹುದಾಗಿದೆ. ಏಕೆಂದರೆ ರಾಮರಾಜ್ಯದ ವರ್ಣನೆಯು ಉದಾತ್ತವಾಗಿದ್ದು ಇಂತಹ ದುಃಖಗಳಿಗೆ ಎಡೆಯಿರಲಿಲ್ಲವೆಂದು ಹೇಳಿದೆ. "ರಾಮಚಂದ್ರನು ರಾಜ್ಯವಾಳುತ್ತಿರುವಾಗ ಪ್ರಜೆಗಳು ಪರಮಾನಂದಭರಿತರಾಗಿದ್ದರು. ಅವರು ಸಂತುಷ್ಟರಾಗಿದ್ದರು. ಅವರ ಜೀವನವು ಧರ್ಮಮೂಲವಾಗಿದ್ದಿತು. ಅವರಿಗೆ ಯಾವ ದುಷ್ಟ ಹವ್ಯಾಸವಿರಲಿಲ್ಲ" ಇತ್ಯಾದಿಯಾಗಿ ವರ್ಣಿಸಲಾಗಿದೆ. ಅಂದಮೇಲೆ ಪ್ರಜೆಗಳು ಇಂತಹ ಅಪವಾದವನ್ನು ಹೊರೆಸಿದರು ಎಂಬುದು ನಿಜವೆ? ಪೂಜ್ಯರಾದ ವಾಲ್ಮೀಕಿ ಮಹರ್ಷಿಗಳು ೨೪೦೦೦ ಶ್ಲೋಕಗಳು, ೫೦೦ ಸರ್ಗಗಳು, ೬ ಕಾಂಡಗಳು

ಮತ್ತು ಉತ್ತರಕಾಂಡ ಇರುವ ಶ್ರೀಮದ್‌ರಾಮಾಯಣವನ್ನು ರಚಿಸಿದರು – ಎಂದು ಬಾಲಕಾಂಡದ ಸರ್ಗ–೪ ಶ್ಲೋಕ–೨ ಹೇಳುತ್ತದೆ. ಉತ್ತರಕಾಂಡವನ್ನು ಪ್ರತ್ಯೇಕಗೊಳಿಸಿರುವುದನ್ನು ಗಮನಿಸಬೇಕು. ಸಾಲದ್ದಕ್ಕೆ ಈಗ ರಾಮಾಯಣದಲ್ಲಿರುವ ಸರ್ಗಗಳಿಗೂ ಶ್ಲೋಕಗಳಿಗೂ ಈ ಸಂಖ್ಯೆಯು ಅನ್ವಯವಾಗುತ್ತಿಲ್ಲ. 'ಭವಿಷ್ಯ' ಎಂಬ ಪದಕ್ಕೂ ಹಲವು ವ್ಯಾಖ್ಯಾನಗಳಿವೆ. ಈ ಎಲ್ಲ ಆಧಾರಗಳ ಮೇಲೆ ಉತ್ತರಕಾಂಡವು ಪ್ರಕ್ಷಿಪ್ತವೆಂದು ಊಹಿಸಲಾಗಿದೆ.

ಪ್ರಕ್ಷೇಪ ಮಾಡಿದವರ ಮನಸ್ಸಿನಲ್ಲಿ ಇನ್ನೊಂದು ಉದ್ದೇಶವೂ ಇದ್ದಿರಬಹುದು. ಯುದ್ಧಕಾಂಡದ ಕೊನೆಯಲ್ಲಿ ಸೀತೆಯನ್ನು ರಾಮನ ಎದುರಿಗೆ ಕರೆತಂದಾಗ ಅವನು ಅವಳ ಬಗ್ಗೆ ಭಯಂಕರವಾದ ಕೋಪವನ್ನು ಪ್ರದರ್ಶಿಸುತ್ತಾನೆ. ಅತಿಯಾದ ಅಹಂಭಾವದಿಂದ ಕೂಡಿದವನಂತೆ ಸೀತೆಯ ಬಗ್ಗೆ ಆಡಬಾರದಂತಹ ಬಿರುನುಡಿಗಳನ್ನು ಆಡುತ್ತಾನೆ. ಆ ಮಾತುಗಳು ಅವನ ಘನತೆಯನ್ನು ಕೊಂಚಮಟ್ಟಿಗೆ ಕ್ಷೀಣಿಸುವಂತೆ ಮಾಡುತ್ತವೆ. ಈಗ ಪ್ರಕ್ಷೇಪಕಾರನು ರಾಮನು ಸೀತೆಯನ್ನು ಭಾವಿಸಿದ ಬಗ್ಗೆ ಒಂದು ಹೊಸ ಬೆಳಕನ್ನು ಬೀರಲು ಯತ್ನಿಸಿದ್ದಾನೆ. ಸೀತೆಯ ಪರಿಶುದ್ಧತೆ, ಪಾವಿತ್ರ್ಯಗಳ ಬಗ್ಗೆ ತನಗೆ ಯಾವ ಸಂಶಯವೂ ಇಲ್ಲವೆಂದು ತಿಳಿಸಿ, ಇದು ಕ್ರೂರವಿಧಿಯ ಆಟವೆಂದು ಹೇಳುತ್ತಾನೆ. ತನ್ನ ವಂಶದ ಗೌರವವನ್ನು ದೃಷ್ಟಿಯಲ್ಲಿಟ್ಟುಕೊಂಡು ಸೀತೆಯನ್ನು ಪರಿತ್ಯಜಿಸುವ ತೀರ್ಮಾನ ಕೈಗೊಂಡಿದ್ದಾನೆ. ದರ್ಪದಿಂದಲ್ಲ; ಕೋಪದಿಂದಲ್ಲ; ಅಹಂಭಾವದಿಂದಲ್ಲ. ಆದ್ದರಿಂದಲೇ 'ಗೃಹಸ್ಥಃ ನ ಮನಸ್ಥಃ' ಎಂದು ಹೇಳಿರುವುದು. ಮುಂದೆ ಈ ಬಗ್ಗೆ ವಾಲ್ಮೀಕಿ ಮಹರ್ಷಿಗಳ ಕ್ಷಮೆಯನ್ನೂ ಯಾಚಿಸುತ್ತಾನೆ:

'ಪರಿತ್ಯಕ್ತಾ ಮಯಾ ಸೀತಾ ತತ್ ಭವಾನ್ ಕ್ಷಂತುಮರ್ಹಸಿ' । ಈ ಮಾತು ಒಂದು ಮಹತ್ತ್ವದ್ದೆಂಬುದು ರಾಮನ ಪಾತ್ರಚಿತ್ರಣಕಾರರ ಮತ.

ಸೀತಾಪರಿತ್ಯಾಗವನ್ನೊಳಗೊಂಡ 'ಉತ್ತರಕಾಂಡ' ಪ್ರಕ್ಷಿಪ್ತವೆಂದು ನಿರ್ಧರಿಸಿದರೂ ಸೀತಾಪರಿತ್ಯಾಗದ ವೃತ್ತಾಂತ ಒಂದು ಹೃದಯವಿದ್ರಾವಕ ವೃತ್ತಾಂತವಾಗಿ ವರ್ಣಿತವಾಗಿದೆ. ರಾಮಾಯಣವನ್ನು ಆಧರಿಸಿ ಬರೆದ ಮುಂದಿನ ಕವಿಗಳು ಈ ವೃತ್ತಾಂತವನ್ನು ಒಪ್ಪಿಕೊಂಡಿದ್ದಾರೆ. ಕೆಲವರು ರಾಮ–ಸೀತೆಯರ ಪಾತ್ರವನ್ನು ಉದಾತ್ತವಾಗಿಡಲು ಯತ್ನಿಸಿದ್ದಾರೆ. ಅದರಲ್ಲಿ ಬಹುಮಟ್ಟಿಗೆ ಸಫಲರೂ ಆಗಿದ್ದಾರೆ. ಇಂತಹ ನಾಟಕಗಳಲ್ಲಿ ದಿಙ್ನಾಗನ ಕುಂದಮಾಲ (ಕ್ರಿ.ಶ. ೪ ಅಥವಾ ೫ನೇ ಶತಮಾನ) ಒಂದು. ಮೂಲಕಥೆ ರಾಮಾಯಣದ್ದೇ ಆದರೂ, ಅದರಲ್ಲಿಲ್ಲದ ಅನೇಕ ಸಂಗತಿಗಳನ್ನು ಕವಿ ಇದರಲ್ಲಿ ಕಲ್ಪಿಸಿದ್ದಾನೆ. ರಾಮನಿಂದ ಪರಿತ್ಯಕ್ತಳಾದ ಸೀತೆಯು ತನಗೆ ಸುಖಪ್ರಸವವಾದರೆ ಪ್ರತಿದಿನವೂ ಗಂಗೆಗೆ ಕುಂದಪುಷ್ಪದ ಮಾಲೆಯೊಂದನ್ನು ಅರ್ಪಿಸುವುದಾಗಿ ಹರಕೆ ಹೊತ್ತಿರುತ್ತಾಳೆ. ಒಂದು ದಿನ ರಾಮನು ತನ್ನ ಯಜ್ಞಪ್ರದೇಶಕ್ಕೆ ಬಂದಾಗ, ಗಂಗೆಯಲ್ಲಿ ತೇಲಿಬರುತ್ತಿರುವ ಕುಂದಪುಷ್ಪಮಾಲೆಯನ್ನು ಕಂಡು, ಈ

ರೀತಿ ಹೂಮಾಲೆಯನ್ನು ಕಟ್ಟಬಲ್ಲವಳು ಸೀತೆ ಮಾತ್ರ, ಆದ್ದರಿಂದ ಅವಳು ಇಲ್ಲಿಯೇ ಎಲ್ಲೋ ಇರಬಹುದೆಂದು ತಿಳಿಯುತ್ತಾನೆ. ಕುಂದಮಾಲೆಯ ನಿಮಿತ್ತದಿಂದಾಗಿ ರಾಮ ಮತ್ತು ಸೀತೆಯರ ಪುನಃ ಸಮಾಗಮವಾಗುತ್ತದೆ.

ಇನ್ನೊಂದು ಪ್ರಮುಖ ನಾಟಕ (ಕ್ರಿ.ಶ. ೭ ಅಥವಾ ೮ನೇ ಶತಮಾನ) 'ಉತ್ತರರಾಮಚರಿತಮ್'. ಹೆಸರೇ ಹೇಳುವಂತೆ ಇದು ಸೀತಾಪರಿತ್ಯಾಗದ ಕಥೆ. ಸೀತಾಪರಿತ್ಯಾಗದಿಂದ ಪ್ರಾರಂಭವಾಗಿ ರಾಮನು ಪುನಃ ಸೀತೆಯನ್ನು ಪರಿಗ್ರಹಿಸುವಲ್ಲಿಗೆ ಈ ಏಳು ಅಂಕದ ನಾಟಕ ಮುಗಿಯುತ್ತದೆ. ಮೂಲ ಉತ್ತರಕಾಂಡದ ಕಥೆಯಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡು ಕವಿಯು ಈ ನಾಟಕವನ್ನು ಸುಖಾಂತವಾಗಿ ಮಾಡಿದ್ದಾನೆ. ರಾಮಾಯಣದ ಉತ್ತರಕಾಂಡದ ಕಥೆಯ ಬಗ್ಗೆ ಅವನಿಗೆ ಅಭಿಮತವಿಲ್ಲದೆ, ಅಲ್ಲಿ ನಾವು ಕಾಣುವ ದುರಂತವನ್ನು ಇಲ್ಲಿ ಸಂಪೂರ್ಣ ಸುಖವನ್ನಾಗಿ ಮಾರ್ಪಡಿಸಿರುವ ಬಗ್ಗೆ ಭವಭೂತಿಯು ನಿಜಕ್ಕೂ ಶ್ಲಾಘ್ಯನಾಗಿದ್ದಾನೆ.

ಅಂದರೆ ಮುಂದಿನ ಕವಿಗಳಿಗೆ ರಾಮನು ಮಾಡಿದ ಸೀತಾಪರಿತ್ಯಾಗ ಒಪ್ಪಿಗೆಯಾಗಲಿಲ್ಲ. ಆದರೂ ಆ ವೃತ್ತಾಂತವನ್ನು ಇಲ್ಲವೆನ್ನಲೂ ಆಗಲಿಲ್ಲ. ಆದರೆ ಅವರಿಗೆ ರಾಮ ಸೀತೆಯರ ಪಾತ್ರಗಳ ಔನ್ನತ್ಯವನ್ನು ಎತ್ತಿಹಿಡಿಯಬೇಕೆಂಬ ದೃಢಚಿತ್ತತೆ. ಅದಕ್ಕಾಗಿ ಕಥೆಗೆ ಹೊಸ ಕಲ್ಪನೆಗಳನ್ನು ಕೊಟ್ಟರು. ರಾಮ–ಸೀತೆಯರ ಹಿರಿಮೆಯನ್ನು ಎತ್ತಿ ಹಿಡಿದರು.

ಕಾಳಿದಾಸನ ಮಹಾಕಾವ್ಯವಾದ ರಘುವಂಶದಲ್ಲಿ, ಹೆಚ್ಚುಪಾಲು ಸಂದಿರುವುದು ರಾಮನ ಚರಿತ್ರೆಗೆ, ಈ ಮಹಾಕಾವ್ಯದ ಹದಿನಾಲ್ಕನೇ ಸರ್ಗ ಸೀತಾಪರಿತ್ಯಾಗದ ವೃತ್ತಾಂತವನ್ನೊಳಗೊಂಡಿದೆ.

ಲೋಕಾಪವಾದದಿಂದ ಜರ್ಝರಿತ ಮನಸ್ಕನಾದ ರಾಮನು ಲಕ್ಷ್ಮಣನಿಗೆ, "ಸೀತೆಯು ತನ್ನ ಬಯಕೆಯಾಗಿ ತಪೋವನಕ್ಕೆ ಹೋಗಿ ಕೆಲಕಾಲ ಇರಲು ಆಶಿಸಿದ್ದಳು. ಅದೇ ನೆಪಮಾಡಿಕೊಂಡು ಅವಳನ್ನು ವಾಲ್ಮೀಕ್ಯಾಶ್ರಮ ಪ್ರದೇಶದಲ್ಲಿ ಬಿಟ್ಟು ಬಾ" ಎಂದು ಆಜ್ಞೆ ಮಾಡುತ್ತಾನೆ. 'ಅದನ್ನೇ ನೆಪಮಾಡಿ' ಎಂದು ಹೇಳುವುದು ರಾಮನ ಪಾತ್ರಕ್ಕೆ ಅಷ್ಟೇನೂ ಉಚಿತವೆನ್ನಿಸುವುದಿಲ್ಲ. ಅವನು ಅಪಕೀರ್ತಿಗೆ ಹೆದರದವನು, ನಿಜ. ಕುಲದ ಗೌರವವನ್ನು ಕಾಪಾಡುವುದು ಅವನ ಧರ್ಮವೂ ಕರ್ತವ್ಯವೂ ಆಗಿದ್ದುದು ನಿಜ. ರಾಜನ ಸಂಸಾರ ಪ್ರಜೆಗಳ ಸಂಸಾರಕ್ಕೆ ಮಾರ್ಗದರ್ಶಿಯಾಗಿರತಕ್ಕದ್ದೆಂಬುದೂ ನಿಜ. ಆದರೆ ಕಾಳಿದಾಸ ಇದನ್ನು ಹೇಳುವಲ್ಲಿ ಎಲ್ಲೋ ಕೊಂಚ ತೂಕಡಿಸಿದ್ದಾನೆ. ರಾಮಾಯಣದ ಉತ್ತರಕಾಂಡದಲ್ಲಿ ಸೀತೆಯ ಬಗ್ಗೆ ರಾಮನಿಗೆ ಅಪಾರ ಗೌರವ, ಉದಾತ್ತತೆ ಕಾಣುತ್ತದೆ. ಆದರೆ ರಘುವಂಶದಲ್ಲಿ ಕಾಳಿದಾಸನು ಸೀತೆಯ ಬಗ್ಗೆ ಹೀಗೆ ಹೇಳಿದ್ದಾನೆ :

> **"ಅಪಿ ಸ್ವದೇಹಾತ್ ಕಿಮುತ ಇಂದ್ರಿಯಾರ್ಥಾತ್ ಯಶೋಧನಾನಾಂ**
> **ಹಿ ಯಶೋ ಗರೀಯಃ" ।**

ಸೀತೆಯನ್ನು ಕೇವಲ 'ಇಂದ್ರಿಯಾರ್ಥ' ಎಂದಿದ್ದಾನೆ. ಅಂದರೆ ಸೀತೆಯು ರಾಮನಿಗೆ ಲೈಂಗಿಕ ಸುಖವನ್ನು ನೀಡುವವಳು ಮಾತ್ರ ಎಂಬ ಅರ್ಥವಾಗುತ್ತದೆ. ಸೀತೆಯ ವಿವಾಹದ ದಿನ ಜನಕ ಮಹಾರಾಜನು ಹೀಗೆ ಹೇಳುತ್ತಾನೆ : 'ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ'. ಎಷ್ಟು ವ್ಯತ್ಯಾಸ ! ರಾಮನ ಪಾತ್ರಕ್ಕೆ ಉದಾತ್ತತೆಯೇ ಇಲ್ಲದಂತೆ ಮಾಡಿದ್ದಾನೆ – ಮಹಾಕವಿ ಕಾಳಿದಾಸ ಈ ಮೇಲಿನ ಶ್ಲೋಕದಲ್ಲಿ. ಅವನು ಸಂಸ್ಕೃತದ ಅಗ್ರಮಾನ್ಯ ಕವಿ.

ಸೀತಾಪರಿತ್ಯಾಗ ವೃತ್ತಾಂತ ಸಹೃದಯರಲ್ಲಿ ದುಃಖ, ಸಹಾನುಭೂತಿಗಳನ್ನಷ್ಟೇ ಅಲ್ಲದೆ ಕೋಪವನ್ನೂ ಉಂಟುಮಾಡುತ್ತದೆ. ಇಂತಹ ಸಹೃದಯದ ಪ್ರತಿನಿಧಿಯಾಗಿಯೋ ಎನ್ನುವಂತೆ ವಾಲ್ಮೀಕಿ, ಪರಿತ್ಯಕ್ತಳಾದ ಸೀತೆಗೆ ಹೇಳುವ ಗಂಭೀರವಾದ ಉಕ್ತಿ ಇದು :

ಉತ್ಖಾತ ಲೋಕತ್ರಯ ಕಂಟಕೇಪಿ ಸತ್ಯಪ್ರತಿಜ್ಞೇಪ್ಯವಿಕತ್ಥನೇऽಪಿ ।
ತ್ವಾಂ ಪ್ರತ್ಯಕಸ್ಮಾತ್ ಕಲುಷಪ್ರವೃತ್ತೌ ಅಸ್ತ್ಯೇವ ಮನ್ಯುಃ ಭರತಾಗ್ರಜೇ ಮೇ ॥

"ನಿನ್ನ ಪತಿಯು ಮೂರು ಲೋಕಗಳಿಗೂ ಮುಳ್ಳಾಗಿದ್ದ ರಾವಣನನ್ನು ಸಂಹಾರ ಮಾಡಿದ್ದಾನೆ, ನಿಜ; ಅವನು ಸತ್ಯಸಂಧನೂ ನಿಜ; ಇಷ್ಟು ಮಹತ್ತ್ವದ ಕಾರ್ಯ ಸಾಧಿಸಿದರೂ ಸ್ವಲ್ಪವೂ ಆತ್ಮಪ್ರಶಂಸೆಯಿಲ್ಲದ ವ್ಯಕ್ತಿಯೂ ನಿಜ; ಆದರೆ ನಿನ್ನಲ್ಲಿ ಇದ್ದಕ್ಕಿದ್ದಂತೆ ದೋಷವೆತ್ತಿ ಈ ರೀತಿ ಪರಿತ್ಯಜಿಸಿದ್ದಾನಲ್ಲ – ಅಂತಹ ನಿನ್ನ ಪತಿ, ಭರತನಂತಹ ಧರ್ಮಿಷ್ಠನಿಗೆ ಅಣ್ಣನಾದ ರಾಮನ ಬಗ್ಗೆ ನನಗೆ ಕೋಪ ತುಂಬಿ ಬರುತ್ತಿದೆ."

ಹೀಗೆ ಸೀತಾಪರಿತ್ಯಾಗ ವೃತ್ತಾಂತವನ್ನು ವಾಲ್ಮೀಕಿ ರಾಮಾಯಣದ ಉತ್ತರಕಾಂಡದಲ್ಲಿ ನಾವು ಪದೇ ಪದೇ ಓದಿದಾಗ ರಾಮನ ನಡವಳಿಕೆಯನ್ನು ನಾವು ಸುಲಭವಾಗಿ ಅನುಮೋದಿಸಲಾರೆವು. ಸೀತೆಯ ಬಗ್ಗೆ ಆಳವಾದ ಅನುಕಂಪವನ್ನು ತಳೆಯುತ್ತೇವೆ. ರಾಮಾಯಣದ ಮೊದಲ ಆರು ಕಾಂಡಗಳಲ್ಲಿ ಇರುವಂತೆಯೇ ಉತ್ತರಕಾಂಡದಲ್ಲಿಯೂ ಸೀತಾಪರಿತ್ಯಾಗ ವೃತ್ತಾಂತ ಪ್ರಕ್ಷೇಪವಲ್ಲದಿದ್ದರೆ ರಾಮ ಮತ್ತು ಸೀತೆಯ ಪಾತ್ರ ಉದಾತ್ತವಾಗಿರುವಂತೆ ಪುನಃ ರಚಿಸಬೇಕೆಂದು ನಾವು ಆಶಿಸುತ್ತೇವೆ. ಇದಕ್ಕಾಗಿ ಕೊಂಚ ಮಾರ್ಪಾಡು ಮಾಡಲು ಸಹೃದಯರ ಒಪ್ಪಿಗೆ ಬೇಡುತ್ತೇವೆ. ಇದು ಈ ರೀತಿ ಇದೆ:

ರಾಜನಾದ ರಾಮನು ಸೀತೆಯೊಡನೆ ರಾಜನ ಸಭೆಯಲ್ಲಿ ಒಡ್ಡೋಲಗ ನಡೆಸುತ್ತಿದ್ದಾನೆ. ರಾಜಧಾನಿಯ ಅನೇಕ ಗಣ್ಯ ಪೌರರು ಅದರಲ್ಲಿ ಭಾಗವಹಿಸಿದ್ದಾರೆ. ಮಂತ್ರಿಗಳು ಆಡಳಿತದ ವಿವರಗಳನ್ನು ಕೊಡುತ್ತಿದ್ದಾರೆ. ಪೌರಪ್ರತಿನಿಧಿಗಳು ಆಡಳಿತದ ಬಗ್ಗೆ ತಮ್ಮ ಸಂತೋಷವನ್ನು ಬಿನ್ನವಿಸುತ್ತಿದ್ದಾರೆ. ಮಾಹಿತಿ ಹೊತ್ತು ಬಂದಿರುವ ಗೂಢಚಾರರು ಒಬ್ಬೊಬ್ಬರಾಗಿ ಸಭೆಗೆ ಬಂದು ರಾಜ್ಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು

ಮಳೆ–ಬೆಳೆ, ವಾಣಿಜ್ಯ–ವ್ಯವಹಾರ, ಗಡಿರಕ್ಷಣೆ ಮುಂತಾದವುಗಳ ಬಗ್ಗೆ ವರದಿ ಒಪ್ಪಿಸುತ್ತಿದ್ದಾರೆ. ಅವರಲ್ಲಿ ಒಬ್ಬನು ಮಾತ್ರ ವರದಿಯನ್ನು ನೀಡಿದ ಬಳಿಕವೂ ಹಿಂತಿರುಗುತ್ತಿಲ್ಲ. ಬಹುಶಃ ತಾನು ಏನನ್ನೋ ಹೇಳುವುದಿದ್ದು ಅದನ್ನು ಮಹಾರಾಣಿ, ಮಂತ್ರಿಗಳು ಮತ್ತು ಸಭಾಸದರ ಮುಂದೆ ಹೇಳಲು ಇಷ್ಟಪಡುತ್ತಿಲ್ಲ. ಅವನು ತೋರುತ್ತಿದ್ದ ಮುಜುಗರಭಾವವನ್ನು ಗಮನಿಸಿದ ಇಂಗಿತಜ್ಞಳಾದ ರಾಣಿ ಸೀತೆಯು ಗೂಢಚಾರನು ಮಹಾರಾಜರಿಗೆ ಮಾತ್ರ ತಿಳಿಸಬೇಕಾದ ಏನೋ ವಿಷಯವನ್ನು ತಂದಿರಬೇಕೆಂದು ಊಹಿಸಿ, ಸಭೆಯಿಂದ ನಿರ್ಗಮಿಸುತ್ತಾಳೆ. ಅನಂತರ ಆ ಗೂಢಚಾರನು ಸಭಾಸದರ ಕಡೆ ನೋಡುತ್ತಾನೆ. ಅವರೂ ಸಹ ಅವನು ರಾಜನಿಗೆ ಏನೋ ರಹಸ್ಯವನ್ನು ವರದಿಮಾಡಬಯಸುತ್ತಿದ್ದಾನೆಂದು ಭಾವಿಸಿ ಸಭೆಯಿಂದ ನಿರ್ಗಮಿಸುತ್ತಾರೆ. ಮಹಾರಾಜ ರಾಮನೂ ಗೂಢಚಾರನೂ ಇಬ್ಬರೇ ಅಲ್ಲಿ ಆಗ ಇರುತ್ತಾರೆ. ರಾಮನು ಅವನನ್ನು ಕುರಿತು – "ಗಾಬರಿಯನ್ನೋ ಭಯವನ್ನೋ ಹುಟ್ಟಿಸುವಂತಹ ರಹಸ್ಯಸಂಗತಿ ಏನಾದರೂ ಇದೆಯೆ ?" ಎಂದು ಕೇಳುತ್ತಾನೆ. ಅದಕ್ಕೆ ಉತ್ತರವಾಗಿ ಗೂಢಚಾರನು "ನಾನೇ ಸ್ವತಃ ನಂಬದಿರುವ, ಆದರೆ ನಿವೇದಿಸುವುದು ಕರ್ತವ್ಯವಾಗಿರುವುದರಿಂದ ವಿಷಯವನ್ನು ಹೇಳಿದರೆ ನನ್ನನ್ನು ಕ್ಷಮಿಸಬೇಕು" ಎಂದು ನಡುಗುತ್ತಾ ಹೇಳುತ್ತಾನೆ. ಮೊದಮೊದಲು ಬಹಳ ಹಿಂಜರಿದರೂ, ಕೊನೆಗೆ ಅವನು ಹೀಗೆ ತಿಳಿಸುತ್ತಾನೆ :

"ಘೋರ ಸ್ತ್ರೀಲಂಪಟನಾದ ರಾವಣನ ಅಧಿಕಾರ ಹಾಗೂ ವಶದಲ್ಲಿದ್ದ ಸೀತಾಮಾತೆಯ ಪಾತಿವ್ರತ್ಯದ ಬಗ್ಗೆ ಪೌರಸ್ತ್ರೀಯರು ಹಗುರವಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಅಲ್ಲದೆ ಅಂತಹವಳನ್ನು ರಾಣಿಯನ್ನಾಗಿ ಮಾಡಿಕೊಂಡು ರಾಜನಾಗಿ ರಾಮನು ಕೆಟ್ಟ ಸಂಪ್ರದಾಯವನ್ನು ಹಾಕಿಕೊಟ್ಟಿದ್ದಾನೆ" – ಎಂದು ಹೇಳುತ್ತಿದ್ದಾರೆ.

ಇದನ್ನು ಕೇಳಿದ ರಾಮನು ದಿಙ್ಮೂಢನಾಗುತ್ತಾನೆ. ಅಷ್ಟುಹೊತ್ತಿಗೆ ಸೀತೆಯು ರಾಜಸಭೆಗೆ ಮತ್ತೆ ಬರುತ್ತಾಳೆ. ರಾಮನು ಮೌನವಾಗಿರುತ್ತಾನೆ. ಏನೋ ಸಂಕಟಕ್ಕೆ ಒಳಗಾಗಿರುವಂತೆ ಕಾಣುತ್ತಾನೆ. ಗೂಢಚಾರನು ಏನೋ ಘೋರವಾದ ವಾರ್ತೆಯನ್ನು ತಿಳಿಸಿರಬೇಕೆಂದು ಊಹಿಸುತ್ತಾಳೆ. ಆ ಕೂಡಲೇ ಅವಳು ಆ ಗೂಢಚಾರರನ್ನು ಪ್ರತ್ಯೇಕವಾಗಿ ಕರೆದು ಪ್ರಶ್ನಿಸುತ್ತಾಳೆ. ಆದರೆ ಅವನು ಹೇಳಲಾರದೆ ಸುಮ್ಮನಿರುತ್ತಾನೆ. ಆಗ ಸೀತೆಯು ತನ್ನ ರಾಣಿಯ ಅಧಿಕಾರವನ್ನು ಚಲಾಯಿಸಿ ಅವನು ರಾಜನಿಗೆ ಹೇಳಿದ್ದನ್ನು ತನಗೆ ಹೇಳಬೇಕೆಂದು ಆಜ್ಞೆಮಾಡುತ್ತಾಳೆ. ಬೇರೆ ದಾರಿ ಕಾಣದೆ ಅವನು ಅತ್ಯಂತ ವಿನಮ್ರನಾಗಿ ವಿಷಯವನ್ನು ಪುನಃ ಹೇಳುತ್ತಾನೆ. ತಾನು ಅದನ್ನು ಎಳ್ಳಷ್ಟೂ ನಂಬುತ್ತಿಲ್ಲವೆಂದೂ ಜನರ ಮಾತನ್ನು ಪುನರುಚ್ಚರಿಸಿ ವರದಿ ಮಾಡುತ್ತಿರುವುದು ತನ್ನ ಕರ್ತವ್ಯವೆಂದೂ ಬಿನ್ನಹ ಮಾಡಿಕೊಳ್ಳುತ್ತಾನೆ.

ಇದನ್ನು ಕೇಳಿದ ಸೀತೆಯು ಬಹಳವಾಗಿ ನೊಂದುಕೊಳ್ಳುತ್ತಾಳೆ. ಆದರೆ ಕ್ಷತ್ರಿಯ ರಾಣಿಯ ಧೈರ್ಯಕ್ಕನುಗುಣವಾಗಿ ಸಮಾಧಾನಮಾಡಿಕೊಳ್ಳುತ್ತಾಳೆ. ರಾಮನು ತನಗೆ

ಪತಿಯಷ್ಟೇ ಆಗಿರದೆ, ತನಗೂ ಪ್ರಜೆಗಳಿಗೂ ರಾಜನೆಂಬುದನ್ನು ನೆನೆಯುತ್ತಾಳೆ. ರಾಜನಾಗಿ ಅವನು ಪ್ರಜೆಗಳ ಮಾರ್ಗದರ್ಶಕನಾಗಿದ್ದರೆ ಮಾತ್ರ ಪ್ರಜೆಗಳು ಅವನಲ್ಲಿ ನಿಷ್ಠೆ, ಗೌರವವನ್ನು ಹೊಂದಿರಲು ಸಾಧ್ಯವೆಂದು ತಿಳಿಯುತ್ತಾಳೆ. ಇಲ್ಲಿಯವರೆಗೆ ಆತನ ಉನ್ನತಮಟ್ಟದ ಶೀಲ ಮತ್ತು ಕಳಂಕರಹಿತ ನಡವಳಿಕೆ ಅವನಿಗೆ ಪ್ರಜೆಗಳ ಗೌರವವನ್ನು ಸಂಪಾದಿಸಿದೆ. ಅವುಗಳು ಕ್ಷುಲ್ಲಕ ಆಕ್ಷೇಪ ಮತ್ತು ಸಂದೇಹಗಳನ್ನು ಮೆಟ್ಟಿನಿಂತಿರುವಂತಹವು. ತನ್ನ ತಂದೆಯು ರಾಣಿಯಾದ ಕೈಕೇಯಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ರಾಜ್ಯವನ್ನು ತ್ಯಜಿಸಿ ಕಾಡಿಗೆ ಹೋಗಿ ಆದರ್ಶಪುತ್ರನೆನಿಸಿದನು ಎಂಬುದನ್ನು ನೆನೆಯುತ್ತಾಳೆ. ಜೊತೆಗೆ ರಾಜನ ಸಂಸಾರದ ಆಚಾರವಿಚಾರಗಳು ಪ್ರಜೆಗಳ ಸಂಸಾರಕ್ಕೆ ಆದರ್ಶವಾಗಿರಬೇಕೆಂದು ನಿರ್ಧರಿಸುತ್ತಾಳೆ. ಆದ್ದರಿಂದ ತಾನೂ ಸಹ ರಾಜನ ಗೌರವವನ್ನು ಎತ್ತಿಹಿಡಿಯುವುದಕ್ಕಾಗಿ ಅರಮನೆಯನ್ನು ತ್ಯಜಿಸಿ ಸ್ವಯಂಪ್ರೇರಿತಳಾಗಿ ತಾನೇ ರಾಜ್ಯದಿಂದ ಹೊರಗೆ ಹೋಗಲು ನಿರ್ಧರಿಸುತ್ತಾಳೆ. ತಾನು ಹಿಂದೆ ಬಯಸಿದ್ದ ವಾಲ್ಮೀಕಿ ಮಹರ್ಷಿಗಳ ಆಶ್ರಮಕ್ಕೆ ತೆರಳಿ ಅವರಿಗೆ ಭಕ್ತಿ ಗೌರವವನ್ನು ಸಲ್ಲಿಸಲು ಇದು ಸಕಾಲವೆಂದು ತೀರ್ಮಾನಿಸುತ್ತಾಳೆ.

ಕೂಡಲೇ ಲಕ್ಷ್ಮಣನಿಗೆ ಹೇಳಿಕಳುಹಿಸಿ, ಅವನು ಬಂದನಂತರ ಅವನಿಗೆ ತನ್ನನ್ನು ವಾಲ್ಮೀಕಿ ಆಶ್ರಮದಲ್ಲಿ ಬಿಟ್ಟುಬರಬೇಕೆಂದು ತಿಳಿಸುತ್ತಾಳೆ. ದಿಗ್ಭ್ರಮೆಗೊಂಡು ಮೂಕನಾಗಿ ನಿಂತಿದ್ದ ರಾಮನನ್ನು ನೋಡಿ ಲಕ್ಷ್ಮಣನು ಇಂತಹ ಪರಿಸ್ಥಿತಿಗೆ ಏನು ಕಾರಣವೆಂದು ತಿಳಿಯಬಯಸುತ್ತಾನೆ. ಆಗ ಸೀತಾದೇವಿಯೇ ಗೂಢಚಾರನು ತನಗೂ ರಾಮನಿಗೂ ಹೇಳಿದ್ದನ್ನು ಲಕ್ಷ್ಮಣನಿಗೆ ಹೇಳುತ್ತಾಳೆ. ಇಂತಹ ಅಪವಾದವನ್ನು ಸೃಷ್ಟಿಸಿದ ಪ್ರಜೆಗಳ ಬಗ್ಗೆ ಲಕ್ಷ್ಮಣ ಕೋಪಗೊಳ್ಳುತ್ತಾನೆ. ಅವರಿಗೆ ತಕ್ಕ ಶಾಸ್ತಿಮಾಡುವ ಮಾತನ್ನು ಆಡುತ್ತಾನೆ. ಸೀತೆಯು ಅವನನ್ನು ಸಮಾಧಾನಪಡಿಸಿ, ರಾಣಿಯಾಗಿ ರಾಜನ ಗೌರವವನ್ನು ಎತ್ತಿಹಿಡಿಯುವ ತನ್ನ ಕರ್ತವ್ಯವನ್ನು ಬಗೆಬಗೆಯಾಗಿ ಹೇಳುತ್ತಾಳೆ. ಲಕ್ಷ್ಮಣನು ತಾನು ಸೀತೆಯನ್ನು ಕಾಡಿಗೆ ಒಯ್ಯಲು ಒಪ್ಪದಿರಲು, ಸೀತೆಯು ರಾಣಿಯ ಅಧಿಕಾರದಿಂದ ಅವನಿಗೆ ತಾನು ಹೇಳಿದಂತೆ ಮಾಡಲು ಆಜ್ಞೆ ಮಾಡುತ್ತಾಳೆ. ಲಕ್ಷ್ಮಣನು ಪ್ರತಿಭಟನೆ ತೋರುತ್ತಲೇ ಅವಳ ಆಜ್ಞೆಯನ್ನು ಸ್ವೀಕರಿಸುತ್ತಾನೆ. ಅವಳನ್ನು ವಾಲ್ಮೀಕಿ ಮಹರ್ಷಿಗಳ ಆಶ್ರಮಕ್ಕೆ ಕರೆದುಕೊಂಡುಹೋಗಿ ಅತ್ಯಂತ ಭಾವಪೂರಿತ ಮಾತುಗಳಿಂದ ವಾಲ್ಮೀಕಿಮಹರ್ಷಿಗಳಿಗೆ ವಾತ್ಸಲ್ಯದಿಂದ ಅವಳ ರಕ್ಷಣೆಯನ್ನು ಮಾಡುವಂತೆ ಪ್ರಾರ್ಥಿಸಿಕೊಳ್ಳುತ್ತಾನೆ. ಮಹರ್ಷಿಗಳು ತಮ್ಮ ಅಂತರ್ದೃಷ್ಟಿಯಿಂದ ಎಲ್ಲವನ್ನೂ ಅರಿಯುತ್ತಾರೆ. ಸೀತೆಯು ಗರ್ಭಿಣಿ ಎಂಬುದನ್ನೂ ತಿಳಿಯುತ್ತಾರೆ. ಲಕ್ಷ್ಮಣ ತನ್ನ ಪರಿಸ್ಥಿತಿಯನ್ನು ನಿಂದಿಸಿಕೊಳ್ಳುತ್ತಾನೆ.

ಲಕ್ಷ್ಮಣನನ್ನು ಹಿಂದಕ್ಕೆ ಕಳಿಸುವಾಗ ಸೀತೆಯು, ಅವನೂ, ಉಳಿದ ಸಹೋದರರೂ ರಾಜನಾದ ರಾಮನನ್ನು ಮೊದಲಿಗಿಂತಲೂ ಹೆಚ್ಚಿನ ಸೌಹಾರ್ದ ಹಾಗೂ ಶ್ರದ್ಧೆಯಿಂದ ನೋಡಿಕೊಳ್ಳಬೇಕೆಂದೂ, ಸಾಧ್ಯವಾದರೆ ತನ್ನನ್ನು ಮರೆತು ಪ್ರಜಾಕ್ಷೇಮವೊಂದನ್ನೇ

ಗುರಿಯಾಗಿಸಿಕೊಳ್ಳಬೇಕೆಂದೂ – ಒಟ್ಟಿನಲ್ಲಿ ರಾಮನ ಆಳ್ವಿಕೆಯಲ್ಲಿ ಪ್ರಜೆಗಳ ಕಲ್ಯಾಣಕ್ಕೆ ಯಾವ ಕೊರತೆಗೂ ಆಸ್ಪದ ಕೊಡಬಾರದೆಂದೂ, ತಾನೂ ಸಹ ಸರ್ವದಾ ರಾಮನ ಹಿತಕ್ಕಾಗಿ ದೇವರಲ್ಲಿ ಪ್ರಾರ್ಥಿಸುವುದಾಗಿಯೂ ಹೇಳಿಕಳುಹಿಸುತ್ತಾಳೆ.

ಈ ಬದಲಾವಣೆಯಿಂದ ರಾಮನ ವ್ಯಕ್ತಿತ್ವಕ್ಕೂ ಸೀತೆಯ ವ್ಯಕ್ತಿತ್ವಕ್ಕೂ ಹೊಸ ಮೆರಗು ದೊರೆತು ಅವರ ಬಗ್ಗೆ ಗೌರವ ಮತ್ತು ಸಹಾನುಭೂತಿ ಉಂಟಾಗುತ್ತದೆ – ಎಂದು ಭಾವಿಸಬಹುದಾಗಿದೆ.

□□□

ಪ್ರೊಫೆಸರ್ ಎ.ಎನ್. ಮೂರ್ತಿರಾವ್

(೧೬-೦೬-೧೯೯೦ - ೨೬-೦೮-೨೦೦೩)

– ನಾ. ನಾಗಪ್ಪ

ಸರಳ ಜೀವನ ಮತ್ತು ಉಚ್ಚವಿಚಾರ – ಇದರಂತೆ ಜೀವನ ನಡೆಸಿದ ಚಿಂತಕರು, ಲೇಖಕರು ಪ್ರೊ. ಎ.ಎನ್. ಮೂರ್ತಿರಾಯರು. ಅವರು ಜೀವನದಲ್ಲಿ ಅನೇಕ ಏಳುಬೀಳುಗಳನ್ನು ಕಂಡವರು, ಉತ್ತಮ ಸಾಹಿತಿಗಳು. ಅವರ ಸಾಹಿತ್ಯಾಭಿರುಚಿ ಉತ್ತಮ ಶ್ರೇಣಿಯದು. ಬರದಿದ್ದೆಲ್ಲ ಚಿನ್ನ. ಅವರು ಇಂಗ್ಲಿಷ್ ಭಾಷೆಯಲ್ಲಿ ಪರಿಣತರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದರು. ಅವರು ಕನ್ನಡದಲ್ಲಿ ಹಾಸ್ಯವ್ಯಂಗ್ಯ ಪ್ರಬಂಧದ ಪ್ರತಿಷ್ಠಾಪಕರು ಎಂದು ಪ್ರಸಿದ್ಧಿ. ರಾಯರ ಕನ್ನಡಭಾಷಾ ಶೈಲಿ ಸರಳ-ಶುದ್ಧ. ಹೇಳಬೇಕಾದ್ದನ್ನು ಹೃದಯಕ್ಕೆ ನಾಟುವಂತೆ ಹೇಳತಕ್ಕವರು – ಬರೆವಣಿಗೆಯಲ್ಲಿಯೂ ಹಾಗೆಯೇ. ಅವರ ಪ್ರಬಂಧ ತಿಳಿಹಾಸ್ಯಕ್ಕೆ ಎತ್ತಿದ ಕೈ. ಎಳನೀರು ಕುಡಿದ ಮೇಲೆ ಜೀವ ಹಗುರವಾಗುವಂತೆ ಅವರ ಪ್ರಬಂಧಗಳು ಹಾಸ್ಯದ ಬುಗ್ಗೆಯಂತೆ ಸ್ಫುರಿತವಾದುದು. ಎಂದಿಗೂ ಯಾರ ಮನಸ್ಸನ್ನೂ ನೋಯಿಸದೆ ತಿಳಿಹಾಸ್ಯದಲ್ಲಿ ಓದುಗರನ್ನು ತೇಲಿಸುವ ಕಲೆಯಲ್ಲೇ ಅವರು ನಿಪುಣರು.

'ಹಗಲುಗನಸುಗಳು', 'ಅಲೆಯುವ ಮನ' ಮತ್ತು 'ಮಿನುಗು ಮಿಂಚು' – ಇವು ಮೂರು ಕೃತಿಗಳಲ್ಲಿ ಅವರ ತಿಳಿಹಾಸ್ಯದ ಪ್ರಬಂಧಗಳು.

'ಹಗಲುಗನಸುಗಳು' ಎಂಬ ಪುಸ್ತಕದಲ್ಲಿ 'ಲಲಿತೆಯ ವಿದ್ಯಾಭ್ಯಾಸ' ಎಂಬ ಪ್ರಬಂಧದಲ್ಲಿ 'ಲಲಿತೆ' ಎಂಬ ಕೃತ್ರಿಮ ಹೆಸರು ಅವರ ಕುಟುಂಬ ಶ್ರೀಮತಿ ಜಯಲಕ್ಷ್ಮಿಯವರದ್ದು. ಈ ವಾಕ್ಯವನ್ನು ಪರಿಶೀಲಿಸಿ –

"ಒಂದು ವಿಧದಲ್ಲಿ ನೋಡಿದರೆ ಲಲಿತೆ ವಿದ್ಯಾವತಿಯಾಗದೆ ನಮ್ಮ ಮನೆಗೆ ಬಂದದ್ದೇ ಒಳ್ಳೆಯದಾಯಿತು. ಈಗ ಅವಳ ಮನಸ್ಸು ಸರಳವಾಗಿದೆ, ತಿಳಿಯಾಗಿದೆ. ಇನ್ನೂ ಶಿಲ್ಪಿಯ ಕೈಗೆ ಸಿಕ್ಕದ ಅಮೃತಶಿಲೆಯಂತೆ ಇದೆ. ಅದಕ್ಕೆ ನಾನು ಯಾವ ರೂಪವನ್ನು ಕೊಟ್ಟರೂ ಕೊಡಬಹುದು. ಅವಳ ಆತ್ಮಕ್ಕೆ ಪೂರ್ಣರೂಪವನ್ನು ಕೊಡುವ ಶಿಲ್ಪಿ ನಾನಾಗುವೆನು. ಮತ್ತೊಬ್ಬರು ನಿರ್ಮಿಸಿದ ಪ್ರತಿಮೆಯನ್ನು ಪಡೆಯುವುದಕ್ಕಿಂತ

ನಾನೇ ಶಿಲ್ಪಿಯಾಗುವುದಲ್ಲವೆ ಮಹತ್ವ? ಲಲಿತೆಯ ವಿದ್ಯಾಭ್ಯಾಸವು ಲಲಿತಕಲೆ. ಅವಳು ವಿದ್ಯಾವತಿಯಾಗುತ್ತಿರುವಾಗ ನಾನು ಕಲೆಗಾರನಾಗುತ್ತಿರುವೆನು – ಹೀಗೆಲ್ಲಾ ಯೋಚನೆ ಮಾಡಿ ನಾನೇ ಉಪಾಧ್ಯಾಯ ವೃತ್ತಿಯನ್ನು ಅವಲಂಬಿಸಬೇಕೆಂದು ನಿಶ್ಚಯಿಸಿದೆನು.

ಯಾರಿಗೆ ಪಾಠ ಹೇಳಿದರೂ ಹೆಂಡತಿಗೆ ಹೇಳುವುದು ಕಷ್ಟ. ಈ ಕಷ್ಟವಾದ ಪರೀಕ್ಷೆಯಲ್ಲಿ ಮೂರ್ತಿರಾಯರು ತೇರ್ಗಡೆಯಾಗಿದ್ದರು – ಏಕೆಂದರೆ ಅವರು ಶಿಷ್ಯೆಯ ಮುಂದೆ – ಲಲಿತಕಲೆಯ ಮುಂದಿರುವಂತೆ – ಸುಖಪಡುತ್ತಾ ಉಪಾಧ್ಯಾಯ ವೃತ್ತಿಯನ್ನು ಸಫಲಗೊಳಿಸಿದರು... ಕೊನೆಗೆ ಹೇಳಿರುವ ಮಾತನ್ನು ಗಮನಿಸತಕ್ಕದ್ದು –

"ಈಗ ಲಲಿತೆಯೂ ನಾನೂ ಒಟ್ಟಿಗೆ 'ರೋಮಿಯೋ ಜೂಲಿಯೆಟ್' ನಾಟಕವನ್ನೂ, ಷೆಲ್ಲಿಯ ಗೀತೆಗಳನ್ನೂ ಓದುತ್ತೇವೆ."

ಮೂರ್ತಿರಾಯರು ಸಫಲ ಉಪಾಧ್ಯಾಯರಲ್ಲವೇ ?

'ಗೌರಜ್ಜಿ' ಒಂದು ಉತ್ಕೃಷ್ಟವಾದ ಕತೆ – ರಾಯರು ಹೆಚ್ಚು ಕತೆಗಳನ್ನು ಬರೆಯಲಿಲ್ಲ.

"ಗೌರಜ್ಜಿ ನಮ್ಮ ತಂದೆಯ ದೊಡ್ಡಮ್ಮ. ಆಗಾಗ ತಮ್ಮ ತೌರೂರಿನ ವಿಷಯವನ್ನು ಹೇಳುವುದುಂಟು. ಅವರ ಮನೆಯವರು ಎರಡು ಎಕರೆ ತೋಟ ಮಾಡಿಕೊಂಡಿದ್ದರು. ತೋಟವೆಂದರೂ ನಂದನವನ – ಮಧ್ಯಾಹ್ನ ಹನ್ನೆರಡು ಘಂಟೆಯಲ್ಲೂ ನೆಲದಮೇಲೆ ಬಿಸಿಲು ಬೀಳುತ್ತಿರಲಿಲ್ಲ.

"ಎಲ್ಲಾ ಹಾಳು ಮಾಡಿಕೊಂಡೆವು .... ಈಗಲೂ ಇದಾರೆ, ಹುಡುಗರು; ಇದ್ದರೇನು, ಲೆಕ್ಕಕ್ಕಿಲ್ಲ, ಜಮೆಗಿಲ್ಲ."

ಗೌರಜ್ಜಿಯ ತೌರಿನ ಒಲವು ಎಷ್ಟು ಚೆನ್ನಾಗಿ ವಾತ್ಸಲ್ಯಪೂರ್ಣವಾಗಿ ವ್ಯಕ್ತವಾಗಿದೆ, ನೋಡಿ. ಈಗಿನ ಹುಡುಗರನ್ನು ಕಂಡರೆ ಪ್ರೀತಿಯೂ ಇಲ್ಲದೇ ಇಲ್ಲ.

ಮಲ್ಲಿಗೆಯ ಗಿಡಗಳಲ್ಲಿ ಬುಟ್ಟಿ ಬುಟ್ಟಿ ಮೊಗ್ಗು ಸಿಕ್ಕುತ್ತಿತ್ತಂತೆ. ಇದನ್ನು ಕೇಳಿದಾಗಲೆಲ್ಲ ನಮ್ಮ ಸರಸುಗೆ ಹೊಟ್ಟೆಕಿಚ್ಚು.

'ಸರಸು' ರಾಯರ ತಂಗಿ – ಹೆಸರು ಬೇರೆ – ಹೂವಿನ ಅಂದ –

ಚೆಂದದೊಂದಿಗೆ ಮಕ್ಕಳ ಹೂ – ಪ್ರೇಮವು ವ್ಯಕ್ತವಾಗಿದೆ.

"ಒಂದು ದಿನ ಮನೆಯವರು ಬೇಡ ಎಂದು ಹೇಳಿದ್ದರೂ ಕೆರೆಯಲ್ಲಿ ಈಜಾಡಿ, ಅಲ್ಲಿಂದ ಜೊತೆಯವರೊಡನೆ ತೋಟಕ್ಕೆ ಹೋಗಿ ಅಲ್ಲಿ ಕೋಡಬಳೆ ಮಾಡಬೇಕೆಂದು ಹವಣಿಸುತ್ತಿದ್ದಾಗ ಸಿಕ್ಕಿಕೊಂಡು ಚೆನ್ನಾಗಿ ಏಟನ್ನು ತಿಂದರಂತೆ, ತಾವು ತಿಂಡಿ ಕೇಳಿದರೆ "ಸದಾ ತಿಂಡಿಯ ಮೇಲೇ ಯೋಚನೆ. ಓದಿಲ್ಲ ಬರಾವಿಲ್ಲ" ಎನ್ನುವರು ನಮ್ಮ ತಂದೆ."

ನಮ್ಮ ತಂದೆಯ ತುಂಟತನದ ವಿಚಾರವನ್ನು ಗೌರಜ್ಜಿ ಬಾಯಲ್ಲಿ ಕೇಳುವುದು ಎಷ್ಟು ಪ್ರಿಯ. ಅದನ್ನು ಕೇಳುವುದು ನಮಗೆ ತಿಂಡಿ ತಿಂದಷ್ಟೇ ಸಂತೋಷಕರ.

"ಹಬ್ಬ ಬಂದರೆ ಮಕ್ಕಳ ಪಾಡು ಬೇಡ. ಬೋನಿನಲ್ಲಿಟ್ಟ ಹುಲಿಯ ಹಾಗೆ ಇಲ್ಲಿಂದ ಅಲ್ಲಿಗೆ ಪರದಾಡುವೆವು. ಇಂಥ ಕಾಲದಲ್ಲಿ ಗೌರಜ್ಜಿಯೇ ನಮಗೆ ಶರಣು. ಅವರು ಹಿಂದಿನ ಕಾಲದವರಾಗಿ ವ್ರತ ನಿಯಮಗಳು ಬಹಳ ಹೆಚ್ಚಾದರೂ ಮಕ್ಕಳ ಮೇಲಿನ ಪ್ರೇಮ ಅದಕ್ಕಿಂತಲೂ ಹೆಚ್ಚು. ಹುಡುಗರ ಪಾಡನ್ನು ನೋಡಿ ತಮ್ಮ ಮೋಕ್ಷವನ್ನು ಮರೆತು ದೇವರ ಪಕ್ಷವನ್ನು ಬಿಟ್ಟು ನಮ್ಮ ಪಕ್ಷವನ್ನು ವಹಿಸುವರು."

"ಪಾಪ, ಮಕ್ಕಳು ದೇವರ ಹಾಗೆ. ಹಬ್ಬ ಬಂದರೆ ಅವಕ್ಕೆ ತಹತಹ. ಅದೇನು ಹಾಗೆ ಅಟ್ಟಕೊಳ್ಳುತ್ತೀರಿರೆ? ಅವಕ್ಕೇನು ಉಪವಾಸದ ಕಟ್ಟು? ಏನಾದರೂ ಕೊಟ್ಟುಬಿಡಬಾರದೆ? ಎಂದು ನಮ್ಮನ್ನು ಕರೆದುಕೊಂಡು ಹೋಗಿ ಅವಲಕ್ಕಿ ಬೆಲ್ಲವೋ ಅರಳೋ ಏನಾದರೂ ಕೊಟ್ಟು ಕಳುಹಿಸುವರು. ಅವರ ಶಾಸ್ತ್ರದ ಪ್ರಕಾರ "ಐದು ವರ್ಷದ ಒಳಗಿನ ಮಕ್ಕಳೆಲ್ಲಾ ದೇವರ ಹಾಗೆ." ನಮ್ಮ ತಾಯಿ ಇದನ್ನೆಲ್ಲಾ ನೋಡಿ ಸ್ವಲ್ಪ ಅಸಮಾಧಾನಪಟ್ಟುಕೊಂಡು "ಹಬ್ಬ ಅನ್ನುವುದಿಲ್ಲ, ಹರಿದಿನ ಅನ್ನುವುದಿಲ್ಲ. ಹೊಟ್ಟೆಯ ಆತುರ ಬಂದಿದೆ ಇವಕ್ಕೆ" ಎನ್ನುವರು. "ನಮ್ಮ ಜೇಬಿನಲ್ಲಿ ಅವಲಕ್ಕಿ ಇರುವವರೆಗೂ ಅವರು ಎಷ್ಟು ರೇಗಿದರೇನು." ಇಲ್ಲಿನ ತಿಳಿಹಾಸ್ಯ ನೋಡಿ. ಜೇಬಿನಲ್ಲಿ ಅವಲಕ್ಕಿ ಇರುವವರೆಗೂ ಅವರು ಎಷ್ಟು ರೇಗಿದರೇನು ಆ ರೇಗಾಟಕ್ಕೆ ಲಕ್ಷ್ಯವಿಲ್ಲ. ಮಕ್ಕಳ ಮನಸ್ಸು ದೇವರ ಮನಸ್ಸು. ಅಜ್ಜಿಗೆ ಮಕ್ಕಳ ಪ್ರೀತಿಯೇ ದೇವರಿಗೆ ಪ್ರೀತಿ. ಇದಲ್ಲವೆ ನಿಜವಾದ ಮೋಕ್ಷ ! ಮಕ್ಕಳು ನಲಿದರೆ ಅಜ್ಜಿಗೆ ಆತ್ಮತೃಪ್ತಿ.

"ಗಾಡಿಯ ಪ್ರಯಾಣ" ಎಂಬ ಪ್ರಬಂಧದಲ್ಲಿ ಗಾಡಿಯು ಹೊಳೆ ದಾಟುವ ಸಂಭ್ರಮ ನೋಡಿ :

"ರಾತ್ರಿಯ ಕಾಲದಲ್ಲಿ ಹೊಳೆ ದಾಟುವಾಗ ನಿಜವಾಗಿಯೂ ಸ್ವಲ್ಪ ಮೈ ನಡಗುತ್ತಿತ್ತು. ಎಲ್ಲಿ ಯಾವ ಮಡುವಿನಲ್ಲಿ ಗಾಡಿ ಮೊಗಚಿಕೊಳ್ಳುವುದೋ ಎಂದು ನಮಗೆ ಹೆದರಿಕೆ. ಇಳಿದು ಚಕ್ರವನ್ನು ಹಿಡಿದುಕೊಂಡು ಬರುತ್ತಿರುವುದನ್ನು ಮೊಸಳೆ ಎಳೆದುಕೊಂಡು ಹೋಗಬಹುದೆಂಬ ಭಯ ಬೇರೆ. ಮಧ್ಯೆ ಮಧ್ಯೆ ಚಕ್ರವನ್ನು ನೂಕುತ್ತಿರುವವರು – "ಎಡಗೋಲು ಹೊಡೆದುಕೊ" ಎಂದು ಎಚ್ಚರಿಕೆ ಕೊಡುವರು. ಒಂದೊಂದು ವೇಳೆ ಗಾಡಿಯ ಮೂಕಿಯವರೆಗೂ ನೀರು ಬಂದುಬಿಡುವುದು. ಆ ವೇಳೆಯಲ್ಲಿ ನಮ್ಮ ಸಂಭ್ರಮವೆಷ್ಟೋ ದಿಗಿಲೆಷ್ಟೋ."

ಗಾಡಿಯ ಪ್ರಯಾಣದ ಯಥಾರ್ಥ ವರ್ಣನೆ ನನಗೆ ತಿಳಿದಂತೆ ಮತ್ತೆಲ್ಲೂ ಇಲ್ಲ. ಗಾಡಿ ಚೌಕದ ವರ್ಣನೆ ಕಣ್ಣಿಗೆ ಕಟ್ಟಿದಂತೆ ಇದೆ:

"ಚೌಕದ ಮಾಲೀಕಳಾದ ಮುದುಕಿಯೊಬ್ಬಳ ನೆನಪು ನನ್ನ ಮನಸ್ಸಿನಲ್ಲಿ ಚೆನ್ನಾಗಿ ನಿಂತಿದೆ. ಆಕೆಗೆ ಮುಪ್ಪಿನಿಂದ ಬೆನ್ನು ಬಿಲ್ಲಿನಂತೆ ಬಾಗಿ ಹಲ್ಲು ಬಿದ್ದುಹೋಗಿ ಮೈಯೆಲ್ಲಾ ವಿಕಾರವಾದ ರೂಪ ಬಂದಿತ್ತು. ಆದರೂ ಅವಳ ನಡೆನುಡಿಯಲ್ಲಿ ಏನೋ ಒಂದು ಅದ್ಭುತವಾದ ಚಟುವಟಿಕೆಯಿದ್ದಿದ್ದರಿಂದ ಅವಳ ಮುಖವನ್ನು ನೋಡಿದವರಿಗೆ ಮರುಕಕ್ಕೆ ಬದಲಾಗಿ ಭಯವುಂಟಾಗುತ್ತಿತ್ತು...." ಅವಳನ್ನು ಎದುರಿಸಿ ಜಗಳವಾಡಿ ಗೆದ್ದವರನ್ನು ನಾನು ಕಾಣೆ.... ಅವಳು ಬಂದೊಡನೆಯೇ 'ದುಡ್ಡು ಮಡಗೋ ತನಕ ಗಾಡಿ ಬಿಡಾಕಿಲ್ಲ ಕಣಯ್ಯ" ಎಂದು ಸಂಶಯಕ್ಕೆ ಆಸ್ಪದವೇ ಇಲ್ಲದಂತೆ ಹೇಳಿ ಅವರ ಸೊಲ್ಲು ಅಡಗಿಸಿಬಿಡುತ್ತಿದ್ದಳು. ಅವಳ ಕೈಯಿಂದ ಪಾರಾದ ಮೇಲೆ ಗಾಡಿ ಚೌಕದಿಂದ ಹೊರಡುವ ಸಂಭ್ರಮ. "ಜೊತೆಯವರನ್ನು ಅವಸರಿಸುವುದು. ಎತ್ತುಗಳಿಗೆ ಕೋಪದ ಮತ್ತು ಪ್ರೀತಿಯ ಬೈಗುಳ, ಜೊತೆಗೆ ಅಲ್ಲಲ್ಲೇ ಚಾವಟಿಯ ಪ್ರದರ್ಶನ – ಇವೆಲ್ಲಾ ಆದ ಮೇಲೆ ಒಂದೊಂದಾಗಿ ಗಾಡಿಗಳು ಹೊರಡುವುವು."

ಗಾಡಿಚೌಕದ ವರ್ಣನೆ ಬಹಳ ಸ್ವಾರಸ್ಯವಾಗಿದೆ. ಈಗಿನ ತರುಣರಿಗೆ ಗಾಡಿಚೌಕದ ಇಂಥ ಅನುಭವ ಅಪರೂಪ.

"ಬೆಳದಿಂಗಳಲ್ಲಿ ನೆನೆದು ಹರಿಯುತ್ತಿರುವ ಹುಣ್ಣಿಮೆ ರಾತ್ರಿ, ಸಾಲುಮರಗಳ ನಡುವೆ ಸುತ್ತಿಸುತ್ತಿಕೊಂಡು ಹೋಗುವ ರಸ್ತೆ. ಒಳ್ಳೆಯ ಜಾತಿಯ ಎತ್ತುಗಳು ತುಯ್ಯುತ್ತಿರುವ ಗಾಡಿ, ಜೊತೆಯಲ್ಲಿ ನನ್ನ ನಲ್ಲೆ – ಪ್ರಯಾಣವು ನಿಧಾನವಾದರೇನು ನಿಶ್ಚಿತ ಸ್ಥಳವನ್ನು ಎಂದು ತಲುಪಿದರೇನು – ತಲಪದಿದ್ದರೆ ತಾನೇ ಏನು" ಎಂದು ಹೇಳಿ 'ಗಾಡಿಯ ಪ್ರಯಾಣ' ಎಂಬ ಪ್ರಬಂಧವನ್ನು ಮುಗಿಸಲಾಗಿದೆ – ಬರಹಗಾರರ ನಿಸೂರು, ರಸಿಕತೆ ಮತ್ತು ಸುಖ–ಕಲ್ಪನೆ ಎಷ್ಟು ಎಂಬುದು ವೇದ್ಯವಾಗುತ್ತದೆ.

ರಾಯರು ಕನ್ನಡದಲ್ಲಿ ತಿಳಿಹಾಸ್ಯಕ್ಕೆ ಎತ್ತಿದ ಕೈ. ತಿಳಿಹಾಸ್ಯದ ಪ್ರತಿಮೆಗಳ (Imageries) ಮೂಲಕ ಓದುಗರ ಮನಸ್ಸನ್ನು ಆಕರ್ಷಿಸುವುದರಲ್ಲಿ ಅವರು ನಿಪುಣರು. 'ಅಲೆಯುವ ಮನ' ಎಂಬ ಗ್ರಂಥದಲ್ಲಿ 'ಸಾಹಿತಿಯ ಚಹರೆ' ಎಂಬ ಒಂದು ಪ್ರಬಂಧವಿದೆ. ಅದರಲ್ಲಿ ರಾಯರು ಹಿಂದಿನ ಸಾಹಿತ್ಯ ಮತ್ತು ಈಗಿನ ಸಾಹಿತ್ಯವನ್ನು ಕುರಿತು ಹೀಗೆ ಹೇಳಿದ್ದಾರೆ–

"ಸುಮಾರು ೬೦–೭೦ ವರ್ಷಗಳ ಕೆಳಗೆ ಸಾಹಿತ್ಯ ಸಾಮ್ರಾಜ್ಯದಲ್ಲಿ ಏಕಾದಿನಸ್ಯ ಮಾಡುತ್ತಿದ್ದ ಗುಂಪಿನವರನ್ನು ಶಾಲು ಸಾಹಿತಿಗಳೆಂದು ಕರೆಯಬಹುದು. ಅವರ ವೇಷಭೂಷಣಗಳಲ್ಲಿ ಶಾಲೇ ಮುಖ್ಯವಾದ ಅಂಶ. ಅವರಿಗೆ ಆಗದವರು 'ಶಾಲು ಹೊದ್ದವನು ಸಾಹಿತಿ. ತಲೆಗೊಂದು ಶಾಲು ಸುತ್ತಿದವ ಉದ್ದಾಮ ಸಾಹಿತಿ. ಎಲ್ಲ ಸಾಹಿತಿಗಳಂತೆ ಅವರೂ ಬಡವರೇ. ಆದರೆ ಬಡತನದಲ್ಲೇ ಇರಲಿ, ಹೊದ್ದ ಶಾಲು ಎಷ್ಟೇ ಹಳೆಯದಾಗಿರಲಿ, ನಸ್ಯದ ಡಬ್ಬಿ ಬೆಲ್ಲದ ಬಿರುಡೆಯೇ ಆಗಿರಲಿ, ಅವರು ವಸಿಷ್ಠ ವಿಶ್ವಾಮಿತ್ರರ ಕಾಳಿದಾಸ ಭವಭೂತಿಗಳ ಕೀರ್ತಿಗೂ ಪ್ರತಿಷ್ಠೆಗೂ ಉತ್ತರಾಧಿಕಾರಿಗಳು. ಅಂದ ಮೇಲೆ ಅವರು ವಿಶ್ವಕ್ಕೆ ಆಶೀರ್ವಾದ ಮಾಡುವ ಹಕ್ಕುಳ್ಳವರು.

ಶಾಲು ಸಾಹಿತಿಗಳು ಒಂದು ದೊಡ್ಡ ಅಪರಾಧವನ್ನು ಮಾಡಿದರು ಎಂಬ ಪ್ರತೀತಿ ಇದೆ. ಅವರು ಸ್ವಂತ ತಾಯಿಯ ವಿಷಯದಲ್ಲಿ ಅನಾದರದಿಂದ ವರ್ತಿಸಿ ಆಕೆಯನ್ನು ಸಂಸ್ಕೃತದ ಮನೆಯಲ್ಲಿ ಊಳಿಗಕ್ಕಿಟ್ಟರಂತೆ. ಅವರ ಕೋಟಲೆಯಿಂದಾಗಿ "ಪುನಃ ಪುನರ್ಜಾಯಮಾನಾ ಪುರಾಣೀ" ಆಗಬೇಕಾದ ಕನ್ನಡ ರಾಣಿ ಕೇವಲ ಪುರಾಣಿಯಾಗಿಯೇ ಉಳಿದಳು. ಆಕೆ ಶ್ಲೇಷ, ಪ್ರಾಸಾದಿಗಳಿಂದ ನೇಯ್ದ ಜೀರ್ಣಾಂಬರವನ್ನು ಉಟ್ಟು ಬಾಡಿದ ಹೂವು ಮುಡಿದು ಕಂದವೃತ್ತಗಳ ಕಾರಾಗಾರದಲ್ಲಿ ಕೊಳೆಯಬೇಕಾಗಿ ಬಂದಿತಂತೆ. ಕನ್ನಡಮ್ಮನ ಉದ್ಧಾರಕರಿಗೂ ಶಾಲು ಸಾಹಿತಿಗಳಿಗೂ ಘೋರವಾದ ಯುದ್ಧವೇ ನಡೆಯಿತು. ಯಾರಿಗೂ ಸ್ಪಷ್ಟವಾದ ಜಯ ದೊರೆಯದೆ ಉಭಯವರ್ಗದವರೂ ಸೇರಿ ಒಂದು ಬಗೆಯ ಅನಧಿಕೃತ ಒಪ್ಪಂದಕ್ಕೆ ಬಂದರು."

ಅವರ ಷರತ್ತುಗಳ ಪ್ರಕಾರ ಯುದ್ಧಪೂರ್ವದಲ್ಲಿ ಇದ್ದಂತೆ ಅವರವರ ರಾಜ್ಯ ಅವರವರ ವಶದಲ್ಲಿಯೇ ಇರಬಹುದೆಂದು ತೀರ್ಮಾನವಾಯಿತು. ಶಾಲುಸಾಹಿತಿಗಳು ತಮ್ಮ ಕಮಲ ಕಲ್ಹಾರಗಳನ್ನು ಚಕೋರ ಚಕ್ರವಾಕಗಳನ್ನು, ನೀರಕ್ಷೀರಗಳನ್ನು ಬೇರ್ಪಡಿಸುವ ಹಂಸಗಳನ್ನು ಉಳಿಸಿಕೊಂಡರು. ಪಟಾಕಿ, ಬುರುಬುರು ನೊರೆಯ ಸಾಬೂನು, ಮುದ್ದಿನ ಕುರಿಮರಿ, ತೀರೆಯ ಹೂವು ಮುಂತಾದ ವಿಷಯದಲ್ಲಿ ಹೊಸಬರಿಗೆ ಸರ್ವಸ್ವಾತಂತ್ರ್ಯ ದೊರೆಯಿತು. ಕೋಗಿಲೆಯ ಮೇಲೆ ಎರಡು ಪಕ್ಷದವರಿಗೂ ಸಮಾನಾಧಿಕಾರವಿರತಕ್ಕದ್ದೆಂದು ಗೊತ್ತಾಯಿತು. ಶಾಲುಸಾಹಿತಿಗಳು ಉದಾರಬುದ್ಧಿಯಿಂದ "ಕಂದವೃತ್ತಗಳನ್ನು ಮಾತ್ರ ನಮಗೆ ಬಿಟ್ಟುಕೊಡಿ, ರಗಳೆಯೇನಿದ್ದರೂ ನಿಮಗೇ ಇರಲಿ" ಎಂದರು. ಶಾಲು ಸಾಹಿತಿಗಳು ತಮಗೆ ಪ್ರಿಯವಾದ ಶಲ್ಯವನ್ನು ಉಳಿಸಿಕೊಂಡರು. ಆದರೆ ಇತ್ತೀಚೆಗೆ ಅವರ ಸರಕುಗಳ ಬೆಲೆ ಇಳಿದು ಅವರು ಮುಗ್ಗಟ್ಟಿಗೆ ಸಿಕ್ಕಿದ್ದಾರೆ. ಹಿಂದೆ ವರದಹಸ್ತವನ್ನು ತಲೆಯ ಮೇಲಿಟ್ಟು ಅನುಗ್ರಹಿಸುತ್ತಿದ್ದವರು, ಕಾಲದ ಮಹಿಮೆಯಿಂದ ದೈನ್ಯಸ್ಥಿತಿಗೆ ಬಂದಿದ್ದಾರೆ.

ಶಾಲು ಸಾಹಿತಿಗಳ ಮೇಲೆ ದಂಗೆಯೆದ್ದು ಕನ್ನಡಮ್ಮನನ್ನು ಸೆರೆಯಿಂದ ಬಿಡಿಸಿದವರೇ ಎರಡನೆಯ ಗುಂಪಿನ ಸಾಹಿತಿಗಳು. "ಇವರಲ್ಲಿ ಹಲವರು ವಿಶ್ವವಿದ್ಯಾನಿಲಯಗಳ ಪದವೀಧರರು. ಇವರು ಜರಿ ರುಮಾಲಿನ ಸಾಹಿತಿಗಳೆಂದು, ಮಡಿಸಾಹಿತಿಗಳೆಂದು ಹಾಸ್ಯಮಾಡುವುದುಂಟು."

"ಈ ಶತಮಾನದ (ಅಂದರೆ ಇಪ್ಪತ್ತನೆಯ ಶತಮಾನದ) ಎರಡನೇ ದಶಕದಲ್ಲಿ ಯಾವುದೋ ಒಂದು ರಾತ್ರಿ ಅವರು ಇಂಗ್ಲಿಷ್ ರೊಮ್ಯಾಂಟಿಕ್ ಕವಿತೆಗಳನ್ನು ಓದಿ ಮಲಗಿದರು. ಬೆಳಗ್ಗೆ ಕಣ್ಣು ತೆರೆದು ನೋಡಿದರೆ – ಕನ್ನಡ ನಾಡೆಲ್ಲ ಹೊಸದೊಂದು ಹೊಂಬೆಳಕಿನಲ್ಲಿ ತೊಯ್ದಿದೆ. ಎಲ್ಲೆಲ್ಲೂ ವಸಂತದ ಸೊಬಗು. ಗಿಡಮರಗಳ ಕಾಂಡ ಕಾಂಡಗಳಲ್ಲೂ ಜೀವರಸ ಏರುತ್ತಿದೆ. ಬಳ್ಳಿಗಳು ದಾಂಗುಡಿಯಿಟ್ಟು ಹೊರಟಿವೆ. ಪಕ್ಷಿಗಳ ಗಾನವೂ ದುಂಬಿಗಳ ಝೇಂಕಾರವೂ ಭೂಮ್ಯಂತರಿಕ್ಷಗಳನ್ನು ತುಂಬಿವೆ. ಪ್ರಕೃತಿಯ ಈ ಸರಸರ ವರ್ಷವರ್ಷವೂ ನಡೆದುಬಂದದ್ದೆ. ಅಂದೇನೋ ಸಾಹಿತಿಗಳ ಕಣ್ಣ ಪೊರೆ ಕಳೆದು ಈ ದಿವ್ಯದರ್ಶನವಾಯಿತು."

ಈ ಸಾಹಿತಿಗಳು ಮಾನವನ ಹೃದಯದ ಅಂತರ್ಯುದ್ಧದ ತುಮುಲವನ್ನು ವಿಶ್ಲೇಷಣೆ ಮಾಡಲು ಹೊರಟವರು. ಜನರ ಹೃದಯಾಂತರಾಳದ ರಹಸ್ಯವೇನು – ಎಂಬುದನ್ನು ವಿಚಾರಿಸಲು ಹೊರಟವರು.

ಈ ಬಗೆಯ ಸಾಹಿತಿಗಳಲ್ಲದೆ ಇನ್ನೊಂದು ಬಗೆಯ ಸಾಹಿತಿಗಳುಂಟು. ಇವರು ಸಾಹಿತ್ಯ ಸೃಷ್ಟಿಯನ್ನೇ ಮಾಡಬಲ್ಲರು ಎಂಬ ಭ್ರಮೆಗೆ ತುತ್ತಾಗಿದ್ದಾರೆ. ಇವರಲ್ಲಿ ಪ್ರತಿಗಾಮಿ ಮನೋವೃತ್ತಿ ಬೆಳೆದಿರುತ್ತದೆ. ಇವರು ವಾಸ್ತವಿಕ ಜೀವನದಿಂದ ದೂರ ಇರುವವರು. ಇವರು "ಕಲೆಗಾಗಿ ಕಲೆ" (Art for art's sake) ಎಂಬ ಗುಂಪಿಗೆ ಸೇರಿದವರು. ಇವರೆಲ್ಲರೂ ಸ್ವಾತಂತ್ರ್ಯಪ್ರಿಯರುಗಳು." ಇವರು "ಬಿಳಿಯ ಜುಬ್ಬ ಧರಿಸುತ್ತಾರೆ. ಕೃಷ್ಣನಿಗೆ ಪೀತಾಂಬರವೂ ಶಿವನಿಗೆ ಚರ್ಮಾಂಬರವೂ ಇರುವಂತೆ ಈ ವರ್ಗದ ಸಾಹಿತಿಗಳಿಗೆ ಜುಬ್ಬವೇ ಅಧಿಕೃತಾಂಬರವಾಗುವಂತೆ ತೋರುತ್ತದೆ". ಇವರು ಪ್ರಕೃತಿಯಿಂದ ಸ್ಫೂರ್ತಿ ಪಡೆಯಬಹುದು ಎಂದು ವರ್ಣಿಸುತ್ತಾರೆ. ವ್ಯಕ್ತಿಸಾಹಿತ್ಯಕ್ಕಿಂತ ಸಾಮಾಜಿಕ ಸಾಹಿತ್ಯಕ್ಕೆ ಇವರಿಗೆ ಹೆಚ್ಚು ಒಲವು. ಇವರು ಕಲಿತವರ ಪರವಹಿಸಿ ಅವರ ದುಃಖದ ಜ್ವಾಲೆ ಒಂದು ದಿನ ವಿಶ್ವವನ್ನೇ ಸುಟ್ಟೀತು ಎಂದು ನಂಬಿದವರು."

ಇವರು 'ಮಾರ್ಕ್ಸ್ ಮನೋಜನ್ಯವಾದ ಕಾಮಧೇನು. ಕಾರ್ಮಿಕರ ತಣಿವಿಗಾಗಿಯೇ ಹಾಲುಜೇನಿನ ಹೊಳೆ ಹರಿಸುತ್ತದೆ' ಎಂದು ನಂಬಿರುವರು.

ಈ ರೀತಿ ಮನೋಜ್ಞವಾಗಿ ಸಾಹಿತಿಗಳ ಬಗ್ಗೆ ಬರೆದವರು ರಾಯರು. ಅವರು ಒಂದು ಮಾತಿನಲ್ಲಿ ವಿಚಾರ ಸಾಹಿತ್ಯ ಯಾರಿಗೂ ಬೇಕಿಲ್ಲ ಎಂದು ವಿಷಾದ ವ್ಯಕ್ತಪಡಿಸುತ್ತಾರೆ. ಇತರ ದೇಶಗಳಲ್ಲಿ ಎರಡು ಬಗೆಯ ಸಾಹಿತಿಗಳಿದ್ದಾರೆ. ಮೊದಲ ಬಗೆಯವರು ಜನರಿಗೆ ಜ್ಞಾನದಾನ ಮಾಡಲು ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಮುಂತಾದುವನ್ನು ಬರೆಯುವವರು. ಇವರಿಗೆ ನಮ್ಮಲ್ಲಿ ಅಷ್ಟೇನೂ ಪುರಸ್ಕಾರ ದೊರೆತಿಲ್ಲ. ಇನ್ನೊಂದು ಬಗೆಯವರು ಶುದ್ಧ ಸಾಹಿತ್ಯವನ್ನು – ಅಂದರೆ ಕಥೆ ಕಾದಂಬರಿ ಕವನ ಮುಂತಾದವನ್ನು ಬರೆಯುವವರು. ನಮ್ಮ ಜನರಿಗೆ ವಿಚಾರ ಸಾಹಿತ್ಯದಲ್ಲಿ ಆಸಕ್ತಿ ಇಲ್ಲ.

ರಾಯರು ವೈಚಾರಿಕ ಸಾಹಿತ್ಯವನ್ನು ಮನೋಜ್ಞವಾಗಿ ನಿರೂಪಿಸುವುದರಲ್ಲಿ ನಿಷ್ಣಾತರು. "ಸಾಹಿತ್ಯ ಮತ್ತು ಸಂಸ್ಕೃತಿ" ಎಂಬ ಪ್ರಬಂಧದ ಭೂಮಿಕೆಯನ್ನು ಗಮನಿಸತಕ್ಕದ್ದು.

ಶಾಸ್ತ್ರ ವ್ಯಾಸಂಗವು ಒದಗಿಸುವ ಜ್ಞಾನ ಸಂಸ್ಕೃತ ಜೀವನಕ್ಕೆ ಅವಶ್ಯವಾದ ತಳಹದಿ. ಸಂಸ್ಕೃತಿಯೇ ಬೇರೆ, ಸಾಹಿತ್ಯವೇ ಬೇರೆ ಎನ್ನುವುದೇನೋ ನಿಜ. ವ್ಯಾಕರಣಶಾಸ್ತ್ರದ ಮೇಲಿನ ಪ್ರಭುತ್ವ ಪಡೆದವರು, ಪ್ರಪಂಚದ ಇತಿಹಾಸವನ್ನು ಕ್ರಮವಾಗಿ ಅಧ್ಯಯನ ಮಾಡಿದವರು, ಅಣುವನ್ನು ಸೀಳಿ ಅದರಲ್ಲಿ ಅಡಗಿರುವ ಶಕ್ತಿಯನ್ನು ಉಪಯೋಗಿಸಬಲ್ಲವರು. ಇಂದಿನ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿ, ಅಧಿಕಾರವಾಣಿಯಿಂದ ಗ್ರಂಥ ಬರೆಯಬಲ್ಲವರು – ಇವರು ಯಾರೂ ಸುಸಂಸ್ಕೃತರಲ್ಲದಿರುವುದು ಸಾಧ್ಯ. ಆದರೆ ದೇಶದಲ್ಲಿ ಇಂಥ ಶಾಸ್ತ್ರಗಳ ಜ್ಞಾನ

ತೆಳುವಾಗಿಯಾದರೂ ಹರಡದಿದ್ದರೆ ನಮ್ಮ ಸಂಸ್ಕೃತಿ ಉನ್ನತಮಟ್ಟಕ್ಕೆ ಏರುವುದು ಕಷ್ಟ. ಜ್ಞಾನಸಮುದ್ರವನ್ನು ಜನತೆಯೆಲ್ಲಾ ಸೇರಿ ಕಡೆಯುತ್ತಲೇ ಇರಬೇಕು. ಈ ಸಮುದ್ರಮಥನವನ್ನು ನಾವು ಯಾವ ಮಟ್ಟದಲ್ಲಿ ನಿಲ್ಲಿಸಿದರೂ ಆ ಮಟ್ಟಕ್ಕೆ ತಕ್ಕ ಫಲ ದೊರೆಯುತ್ತದೆ. ಅದರಿಂದ ಹಾಲಾಹಲದಂತಹ ವಿಷ ಹುಟ್ಟಿದೆಯೆಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯ. ಇಂದಿನ ಪ್ರಪಂಚದಲ್ಲಿ ಆ ವಿಷಯವನ್ನು ನುಂಗಬಲ್ಲ ಶಿವನಿಲ್ಲದೆ ಜಗತ್ತು ತಲ್ಲಣಿಸುತ್ತಿದೆ. ಆದರೆ ಹುಟ್ಟಿರುವುದು ವಿಷವೊಂದೇ ಅಲ್ಲ. ಉಚ್ಚೈಶ್ರವಸ್ಸು, ಐರಾವತ, ಅಪ್ಸರೆಯವರು ಮೊದಲಾದವುಗಳನ್ನೂ – ಆಧುನಿಕ ರೂಪದಲ್ಲಿ – ವಿಚಾರಸಮುದ್ರದ ಮಥನ ಒದಗಿಸಿಕೊಟ್ಟಿದೆ. ಭೋಗಜೀವನದ ಈ ಅಂಗಗಳೆಲ್ಲಾ ಇಂದಿನ ಇಂದ್ರಾದಿಗಳ – ಶ್ರೀಮಂತರ – ಪಾಲು. ಆದರೆ ಭೋಗದ ಮಟ್ಟದಲ್ಲಿ ನಿಂತ ಈ ಜನರಿಗೆ ಕಷ್ಟ ತಪ್ಪಿದ್ದಲ್ಲ. ಅವರ ಪದವಿಯನ್ನು ಆಕ್ರಮಿಸಲು ಹಾತೊರೆಯುತ್ತಿರುವ ಜನರ ಭಯವಿದೆ. ಅಲ್ಲದೆ ಅವರ ಆತ್ಮದ ಹಸಿವು ಈ ಭೋಗ ಸಾಮಗ್ರಿಗಳಿಂದ ಇಂಗುವುದಿಲ್ಲ. ಮೇಲೆ ಹೇಳಿದ ಯಾವ ಮಟ್ಟದಲ್ಲೂ ತೃಪ್ತರಾಗಿ ನಿಲ್ಲದೆ ಮಥನವನ್ನು ಮುಂದುವರಿಸಿದರೆ ಕೊನೆಗೆ ಅಮೃತ ಹುಟ್ಟುತ್ತದೆ. ಆ ಅಮೃತವೇ ಸಂಸ್ಕೃತಿ. ಅದನ್ನು ನಮಗೆ ಹಂಚಿಕೊಡುವ ವಿಶ್ವಮೋಹಿನಿಯೆಂದರೆ ಸಾಹಿತ್ಯ.

ಮೇಲ್ಕಂಡ ಪ್ರಬಂಧಗಳಲ್ಲಿ – ಒಂದು ಕೃತಿಯ ತಂತ್ರ (technique) ಇನ್ನೊಂದರಲ್ಲಿಲ್ಲ. ಹೊಳೆಯಂತೆ ಸಲೀಸಾಗಿ ಹರಿಯುವ ಭಾಷೆ– ಓದಲು ಪ್ರಾರಂಭಿಸಿದರೆ ಅದನ್ನು ಪೂರ್ಣಮಾಡಿಯೇ ಮುಗಿಸುವ ಭಾಷಾ ಶೈಲಿ.

ಅವರ ನಾಟಕಗಳು : ಆಷಾಢಭೂತಿ – ಫ್ರೆಂಚ್ ಭಾಷೆಯ ಮೋಲಿಯೇರನ 'ತಾರ್ತುಫ್' ನಾಟಕದ ಕನ್ನಡ ರೂಪಾಂತರ, ಷೇಕ್ಸ್‌ಪಿಯರ್‌ನ Tempest ನಾಟಕವನ್ನು ಕನ್ನಡದ Blank verse ಶೈಲಿಯಲ್ಲಿ ಕಾವ್ಯಾನುವಾದ ಮಾಡಿದ್ದಾರೆ.

'ಚಿತ್ರಗಳು ಪತ್ರಗಳು' ರಾಯರ ಮತ್ತೊಂದು ಗದ್ಯ ರಚನೆ. ಅದರಲ್ಲಿ ಎರಡು ಭಾಗ – ಮೊದಲನೆಯದರಲ್ಲಿ ವ್ಯಕ್ತಿ ಚಿತ್ರಗಳು –ಬಿ.ಎಂ.ಶ್ರೀ – ಶ್ರೀ ಟಿ.ಎಸ್. ವೆಂಕಣ್ಣಯ್ಯನವರು, ಶ್ರೀ ಜಿ. ಹನುಮಂತರಾಯರು, ಪ್ರಿನ್ಸಿಪಲ್ ರಾಲೋ, ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿ, ಪ್ರೊ. ಆರ್.ಎಲ್. ನರಸಿಂಹಯ್ಯ, ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ (ತೆಲುಗು ಪಂಡಿತರು ಮತ್ತು ಸಂಗೀತಗಾರರು) ಮತ್ತು ಇತರರ ವ್ಯಕ್ತಿಚಿತ್ರಗಳನ್ನು ಒಳಗೊಂಡಿರುವ ಭಾಗ. ಎರಡನೆಯ ಭಾಗದಲ್ಲಿ ರಾಯರು ಪ್ರೊ. ತೀ.ನಂ. ಶ್ರೀಕಂಠಯ್ಯನವರಿಗೆ ಬರೆದ ಕನ್ನಡ ಪತ್ರಗಳಿವೆ. ಇವು ತಮ್ಮದೇ ಆದ ವೈಶಿಷ್ಟ್ಯವನ್ನು ಒಳಗೊಂಡಿವೆ. ಈ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ೧೯೭೭ ರಲ್ಲಿ ಬಹುಮಾನ ದೊರಕಿತು.

ಸಂಸ್ಕೃತ ಸಾಹಿತ್ಯದ ಸಾರವನ್ನು ಹೀರಿ ಅದರ ಸ್ವಾರಸ್ಯವನ್ನು ರಕ್ತಗತ ಮಾಡಿಕೊಂಡಿರುವ ರಾಯರು 'ಪೂರ್ವಸೂರಿಗಳೊಡನೆ' ಎಂಬ ಗ್ರಂಥದಲ್ಲಿ ಕಾಳಿದಾಸ, ಭವಭೂತಿ, ವಾಲ್ಮೀಕಿ ರಾಮಾಯಣ – ಇವನ್ನು ಕುರಿತು ವಿಮರ್ಶಾತ್ಮಕ ಪ್ರಬಂಧಗಳನ್ನು ಬರೆದಿದ್ದಾರೆ.

'ಸಂಜೆಗಣ್ಣಿನ ಹಿನ್ನೋಟ' ರಾಯರ ಜೀವನ ಚರಿತ್ರೆ. ಅದು ಹಿಂದೀ ಭಾಷೆಗೆ ರೂಪಾಂತರವಾಗಿದೆ – ರೂಪಾಂತರಕಾರರು ಮಹಾರಾಜಾ ಕಾಲೇಜಿನ ಗಣಿತ ವಿಭಾಗದ ಪ್ರಾಧ್ಯಾಪಕರಾಗಿದ್ದ ಶ್ರೀ ಟಿ. ಕೃಷ್ಣಮೂರ್ತಿ ಅವರ ಶ್ರೀಮತಿ ಸ್ವರ್ಗೀಯ ಇಂದಿರಾಬಾಯಿ. ಈ ಅನುವಾದಕ್ಕೆ ಕೇಂದ್ರೀಯ ಹಿಂದೀ ನಿರ್ದೇಶನಾಲಯದಿಂದ ಬಹುಮಾನ ದೊರಕಿದೆ.

'ದೇವರು' ರಾಯರ ಮೇರು ಕೃತಿ. ಅದಕ್ಕೆ ೧೯೭೪ರಲ್ಲಿ ಕರ್ನಾಟಕ ರಾಜ್ಯದ ಪಂಪ ಪ್ರಶಸ್ತಿ ದೊರಕಿದೆ. ಈ ಉದ್ಗ್ರಂಥದಲ್ಲಿ ನಾವು ದೇವರ ಮೇಲೆ ಎಲ್ಲಾ ಭಾರವನ್ನೂ ಹಾಕಿ ಮನಸ್ಸನ್ನು ಹಗುರ ಮಾಡಿಕೊಳ್ಳುವ ಪ್ರವೃತ್ತಿಯನ್ನೂ ದೇವರಿಗೆ ಹರಕೆ ಹೊರುವ ಅಭ್ಯಾಸವನ್ನೂ ಖಂಡಿಸಿ ನಮ್ಮ ಏಳಿಗೆಗೆ ನಾವೇ ಹೊಣೆ – ಮತ್ತೊಬ್ಬರಾರೂ, ದೇವರೂ ಅಲ್ಲ – ಎಂಬ ತೀರ್ಮಾನವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದು ಎಲ್ಲರೂ ಓದಬೇಕಾದ ಗ್ರಂಥ. ಇದೂ ಹಿಂದೀ ಭಾಷೆಗೆ ಅನುವಾದವಾಗಿದೆ. ಕನ್ನಡದ ಮೂಲ ಗ್ರಂಥದ ಹತ್ತು ಸಂಸ್ಕರಣಗಳು ಇದುವರೆಗೆ ಬಂದಿವೆ.

'ಷೇಕ್ಸ್‌ಪಿಯರ್' ಕುರಿತು ರಾಯರ ಉದ್ಗ್ರಂಥವೊಂದನ್ನು ಮೈಸೂರು ವಿಶ್ವವಿದ್ಯಾನಿಲಯದವರು ಪ್ರಕಟಿಸಿದ್ದರು. ಈಚೆಗೆ ಈ ಗ್ರಂಥವನ್ನು ವಿಸ್ತರಿಸಿ ಡಿ.ವಿ.ಕೆ. ಮೂರ್ತಿ – ಮೈಸೂರು ಇವರಿಂದ ಪ್ರಕಟಿಸಲಾಗಿದೆ.

'ಅಪರವಯಸ್ಕನ ಅಮೆರಿಕಾ ಯಾತ್ರೆ' ಎಂಬುದು ಮತ್ತೊಂದು ಉದ್ಗ್ರಂಥ, ಪ್ರವಾಸಕಥನ. ಇದರಲ್ಲಿ ರಾಯರ ವಿಶ್ವಪರ್ಯಟನದ ಸ್ವಾರಸ್ಯಮಯ ವರ್ಣನೆಯೊಂದಿಗೆ ನಮ್ಮ ಕನ್ನಡಿಗರು ಪರದೇಶದಲ್ಲಿ ಹೇಗಿದ್ದಾರೆ ಎಂಬುದನ್ನು ವಿವರಿಸಿದ್ದಾರೆ.

ಮೂರ್ತಿರಾಯರು ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗಲೇ ಮೂರು ವರ್ಷ ಮೈಸೂರು ಆಕಾಶವಾಣಿಯ ನಿರ್ದೇಶನದ ಉತ್ತರದಾಯಿತ್ವವನ್ನು ಬಹು ತೃಪ್ತಿಕರವಾಗಿ ನಿರ್ವಹಿಸಿದ್ದರು. ೧೯೫೫ರಲ್ಲಿ ನಿವೃತ್ತರಾದ ನಂತರ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ವಿಭಾಗದ ನಿರ್ದೇಶಕರಾಗಿ ಮೂರು ವರ್ಷ ಕೆಲಸ ಮಾಡಿ ಒಳ್ಳೆಯ ಹೆಸರನ್ನು ಗಳಿಸಿದರು. ಅವರು ಈ ವಿಭಾಗದಲ್ಲಿದ್ದಾಗ ಗದುಗಿನ ಭಾರತದ ಒಂದು ಲಕ್ಷ ಪ್ರತಿಗಳನ್ನು ಅಚ್ಚು ಮಾಡಿಸಿ – ಒಂದು ಪ್ರತಿಗೆ ಕೇವಲ ಎರಡು ರೂ. ಬೆಲೆಗೆ ಮಾರಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಮತ್ತು ಗೌರವ ಅಧ್ಯಕ್ಷರಾಗಿ ಕೆಲಸ ಮಾಡಿದ್ದಲ್ಲದೆ ೧೯೮೪ರಲ್ಲಿ ಕೋಲಾರ ಜಿಲ್ಲೆಯ ಕೈವಾರದಲ್ಲಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅದೇ ವರ್ಷ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದರು. ಈ ಪ್ರಶಸ್ತಿಗಳ ಜೊತೆಗೆ ರಾಯರಿಗೆ ನಮ್ಮ ರಾಜ್ಯದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಭಾರತೀಯ ವಿದ್ಯಾಭವನದ ಫೆಲೋಷಿಪ್‌ಗಳು ದೊರೆತಿವೆ. ಇವರಿಗೆ ೧೯೭೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು.

❒❒❒

'ಹಂಪೆ'ಯ ಐತಿಹಾಸಿಕ ನೆಲೆಗಳು – ಸಾಹಿತ್ಯ ಕೃತಿಗಳ ಹಿನ್ನೆಲೆಯಲ್ಲಿ

– ಡಾ. ಬಿ.ಎಸ್. ಗೀತಾ

ಸಾಹಿತ್ಯ ಕೃತಿಗಳು ಐತಿಹಾಸಿಕ ದೃಷ್ಟಿಯಿಂದಲೂ ಬಹು ಮಹತ್ವದವು. ಪಂಪಾಕ್ಷೇತ್ರದ ಬಗ್ಗೆ ಹರಿಹರ ಮತ್ತು ಸೋಮರಾಜ ಕವಿಗಳು ವರ್ಣಿಸುತ್ತಾರೆ.

ಈ ಕವಿಗಳಿಗೆ ಹಂಪೆಯ ದೈವನಾದ ವಿರೂಪಾಕ್ಷನೇ ಅರಸ, ಒಡೆಯನಾಗಿದ್ದಾನೆ. ಅವರು ಭಕ್ತಿಯನ್ನು ತೋರಗೊಡುವ ಆವೇಶದಲ್ಲಿ ಪಂಪಾಪುರದ ಸಮಗ್ರ ವರ್ಣನೆಯನ್ನು ಕೊಡುತ್ತ, ಇತಿಹಾಸದ ದರ್ಶನವನ್ನು ಮಾಡಿಸುತ್ತಾರೆ. 'ಹಂಪೆ' (<ಪಂಪ) ಮೂಲತಃ ಏನನ್ನು ಹೇಳುತ್ತದೆ ? ದೈವವನ್ನೇ, ಊರನ್ನೇ, ನದಿಯನ್ನೇ ? ಈ ಪದ ಸಂಸ್ಕೃತವೇ, ದ್ರಾವಿಡವೇ ? ಅದು ಬಹುಶಃ ಸಂಸ್ಕೃತ ಅಲ್ಲ. ಮಹಾಭಾರತ, ರಾಮಾಯಣಗಳಲ್ಲಿ "ಪಂಪಾ" ದಕ್ಷಿಣ ಭಾರತದ ಒಂದು ನದಿಯ ಹೆಸರಾಗಿದ್ದರೆ, ರಘುವಂಶದಲ್ಲಿ ಒಂದು ಸರೋವರದ ಹೆಸರಾಗಿ ಕಾಣಿಸಿಕೊಳ್ಳುತ್ತದೆ. ಅಲ್ಲದೆ, "ಪಂಪಾ" ಹೆಸರು ಹಂಪೆಯ ಹೆಸರಾಗಿರುವುದನ್ನು ಬಿಟ್ಟರೆ ಸಂಸ್ಕೃತ ಸಾಹಿತ್ಯದಲ್ಲಿ ಇನ್ನೆಲ್ಲೂ ಕಾಣಿಸದಿರುವುದರಿಂದ ಅದು ಖಚಿತವಾಗಿಯೂ ಸಂಸ್ಕೃತೀಕೃತ ಪದ; ಬಹುಶಃ ದ್ರಾವಿಡ ಪದ. "ಪಂಪಾ" ಎಂಬುದು ಕರ್ನಾಟಕದ ತುಂಗಭದ್ರಾ ನದಿಗೆ ಅಥವಾ ಅದರ ಪಕ್ಕದ ಊರಿಗೆ, ಅಲ್ಲಿನ ದೈವಕ್ಕೆ ಹೆಸರಾಗಿದೆ. ಮಾತ್ರವಲ್ಲದೆ ಅದು ಒಂದು ನದಿಯ ಹೆಸರಾಗಿ ಕೇರಳದಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತದೆ. ಕರ್ನಾಟಕದಲ್ಲಿ "ಹಂಪಿಹೋಳಿ" ಎಂಬ ವಂಶನಾಮದ ಹಲವು ವ್ಯಕ್ತಿಗಳು ಉತ್ತರ ಕರ್ನಾಟಕದಲ್ಲಿರುವರಲ್ಲದೆ, ತುಂಗಭದ್ರಾ ನದಿಯನ್ನು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ಪ್ರದೇಶದಲ್ಲಿ "ಹಂಪಿಹೋಳಿ" ಎಂದೇ ಈಗಲೂ ಕರೆಯುತ್ತಾರೆ. 'ಪಂಪೆ' ಮೂಲತಃ ನದಿಯ ಹೆಸರಾಗಿದ್ದು ಆಮೇಲೆ ಅದರ ಪಕ್ಕದಲ್ಲಿ ಜನ ಆರಾಧಿಸಲು ಆರಂಭಿಸಿದ ದೈವಕ್ಕೆ, ಆಮೇಲೆ ಆ ದೈವದಿಂದಾಗಿ ಬೆಳೆದ ಊರಿಗೆ ಹೆಸರಾಗಿ ಪರಿಣಮಿಸಿರುವ ಸಾಧ್ಯತೆಗಳಿವೆ (ಚಿದಾನಂದಮೂರ್ತಿ ಎಂ. ೧೯೯೮; ೪೪೫). ಆದರೆ ಉದ್ಭಟ ಕಾವ್ಯದಲ್ಲಿ ಸೋಮರಾಜಕವಿ ಪಂಪಾಪುರವೆಂಬ ಹೆಸರು ಬಂದ ಬಗ್ಗೆ ಉಲ್ಲೇಖಿಸುತ್ತಾನೆ.

ಕಡುನಲವಿಂ ಪಂಪಾಂಬಿಕೆ
ಬಿಡದೋವುವ ಕಥನದಿಂದೆ ಪಂಪಾಪುರಮೆಂ ।
ದೆಡೆವಿಡದೀಕ್ಷೇತ್ರಂ ಪೆಸೆ
ರ್ವಡೆದೊಪ್ಪುವುದಾಲಿಸುದ್ಭಟಕ್ಷಿತಿಪಾಲಾ ॥ (ಉ.ಕಾ. ೩–೫೬)

ಅಂದರೆ ಪಂಪಾಂಬಿಕೆಯಿಂದಾಗಿಯೇ ಪಂಪಾಪುರವೆಂಬ ಹೆಸರು ಬಂದಿರುವುದಾಗಿ ತಿಳಿದುಬರುತ್ತದೆ. ಅತ್ಯಾನಂದದಿಂದ ಪಂಪಾಂಬಿಕೆಯು ತಪ್ಪದೆ ಕಾಪಾಡುವ ಕಾರಣದಿಂದ ಪಂಪಾಪುರವೆಂದು ಯಾವಾಗಲೂ ಈ ಕ್ಷೇತ್ರವು ಹೆಸರು ಪಡೆದು ಶೋಭಿಸಿರುವುದಾಗಿದೆ. ಅಲ್ಲದೆ ಪಂಪಾಪುರವು ಶಕ್ತಿಯ ಸ್ಥಾನವಾಗಿದ್ದಿತೆಂದು ಕಾಣುತ್ತದೆ. ಈ ಬಗ್ಗೆ ಮುಂದೆ ಚರ್ಚಿಸಲಾಗುವುದು. ಸಾಮಾನ್ಯವಾಗಿ ಭಾರತೀಯ ಪರಂಪರೆಯಲ್ಲಿ ಹೆಣ್ಣಿನ ಹೆಸರನ್ನು ನದಿಗೆ ಇಡಲಾಗುತ್ತದೆ. ಭಾರತದ ಹೆಸರುಗಳನ್ನು ನೋಡಿ–ಗಂಗೆ, ಸರಸ್ವತಿ, ಕೃಷ್ಣೆ, ನರ್ಮದಾ. ಅಷ್ಟಲ್ಲದೆ ಕರ್ನಾಟಕದ ನದಿಗಳ ಹೆಸರನ್ನೇ ನೋಡಿ–ಕಾವೇರಿ, ಭದ್ರೆ, ತುಂಗೆ, ನೇತ್ರಾವತಿ, ಕಾಳಿ ಹೀಗೆ. ಆದುದರಿಂದ ಹಂಪೆಗೆ ಮೊದಲು ಪಂಪಾಪುರವೆಂಬ ಹೆಸರು ಪಂಪಾಂಬಿಕೆಯಿಂದ ಬಂದುದಾಗಿದೆ (ಗೀತಾ ಬಿ.ಎಸ್. ೨೦೦೫; ೨೦೫). ಪಂಪಾಂಬಿಕೆಯ ಬಗ್ಗೆ ವಿದ್ವಾಂಸರಲ್ಲಿ ಜಿಜ್ಞಾಸೆಯಿದೆ.

"ಹಿರಿಯ ಹಂಪಾದೇವಿ–ಚಿಕ್ಕ ಪಂಪಾದೇವಿ. ಒಬ್ಬ "ಹಂಪಾದೇವಿ" ಯು ಈಗಿನ ವಿರೂಪಾಕ್ಷ ದೇವಾಲಯದ ಪಂಪಾಂಬಿಕೆಯೇ. ಇನ್ನೊಬ್ಬಳು ನಿಶ್ಚಿತವಾಗಿಯೂ ಪಂಪಾ ಸರೋವರ ದಡದಲ್ಲಿ "ಜಯಲಕ್ಷ್ಮಿ" ಎಂದು ಈಚೆಗೆ ನಾಮಕರಣವಾಗಿರುವವಳು. ನಾನು ಆ ಪ್ರದೇಶದ ಹಲವರಿಂದ ಖಚಿತಪಡಿಸಿಕೊಂಡಿದ್ದೇನೆ – ಆ ಹಿರಿಯರು ತಮ್ಮ ಬಾಲ್ಯದಲ್ಲಿ ಆ ದೇವತೆಯನ್ನು "ಅ(ಹ)ಂಪಮ್ಮ" ಎಂದೇ ಕರೆಯುತ್ತಿದ್ದರಂತೆ. ಪಂಪಾ ಸರೋವರದ ದಡದ ಗುಡಿಯು ನಿಶ್ಚಿತವಾಗಿಯೂ ಮೂಲತಃ ಶಿವದೇವಾಲಯ–ಈಗಲೂ ಅಲ್ಲಿ ಶಿವಲಿಂಗವೊಂದಿದೆ. ಆ ಶಿವನ ಪತ್ನಿ ಪಂಪಾಂಬಿಕೆಯೇ. ಈಗ ಜನ "ಜಯಲಕ್ಷ್ಮಿ" ಎಂದು ತಪ್ಪಾಗಿ ಕರೆಯುವ ದೇವತೆ. ಬ್ರಹ್ಮನ ಮಾನಸಪುತ್ರಿಯಾದ ಪಂಪಾದೇವಿಯು ಮೊದಲು ತಪಸ್ಸು ಮಾಡಿದ್ದು ಪಂಪಾ ಸರೋವರದ ದಡದಲ್ಲಾದ್ದರಿಂದ ಅದೇ ಕೆಲವರ ಪ್ರಕಾರ 'ಆದಿ' ಪಂಪಾಕ್ಷೇತ್ರ, ಪಂಪಾದೇವಿಯು ವಿರೂಪಾಕ್ಷನ ಕೈಹಿಡಿದ ಮೇಲೆ ಈಗಿನ ವಿರೂಪಾಕ್ಷನ ಸಮೀಪ ನೆಲಸಿದಳು. ಆ ಕಾರಣ, 'ಹಿರಿಯ ಪಂಪಾದೇವಿ' ಯು ನಿಶ್ಚಿತವಾಗಿ ಪಂಪಾ ಸರೋವರದ ದಡದ ಹಂಪಮ್ಮ (ಈಗಿನ ಜಯಲಕ್ಷ್ಮಿ); ಕಿರಿಯ ಹಂಪಾದೇವಿಯು ವಿರೂಪಾಕ್ಷ ದೇವಾಲಯದ ಆವರಣದ ಪಂಪಾಂಬಿಕೆ (ಚಿದಾನಂದಮೂರ್ತಿ ಎಂ. ೧೯೯೮; ೪೪೮–೪೯, ೬೭). ಉದ್ಭಟ ಕಾವ್ಯದಲ್ಲಿ ಬಾಲಪಂಪಾದೇವಿಯ ಬಗ್ಗೆ ಸ್ಪಷ್ಟ ಉಲ್ಲೇಖಗಳಿವೆ.

ಉದ್ಭಟ ಮಹಾರಾಜನು ಬಾಲಪಂಪಾದೇವಿಯ ಆಲಯವನ್ನು ನೋಡಿದ್ದು ಆಲಯದ ಸುತ್ತ ಇದ್ದ ಪ್ರದೇಶದ ನಕ್ಷೆಯನ್ನು ಕೂಡ ಸೋಮರಾಜಕವಿ ಕೊಡುತ್ತಾನೆ–"

ಸಕಳತೀರ್ಥಂಗಳಿಂ ಪವಿತ್ರಗೋತ್ರಂಗಳಿಂದೆ ನಾನಾದೇವಸ್ಥಾನಂಗಳಿಂ ನವೀನೋದ್ಯಾನಂಗಳಿಂ ಮನೋಹರಪುಷ್ಕರಣಿಗಳಿಂ ಪುಣ್ಯತಟಾಕಂಗಳಿಂ ವರ್ಣಿಗಳ ಪರ್ಣಶಾಲೆಗಳಿಂ ವಿಮಳತಪಸ್ವಿಗಳಿಂ ಕಣ್ಗೆಮಂಗಳವಾಗಿ ಮನಂಗೊಳಿಪ ತತ್ಪಂಪಾಕ್ಷೇತ್ರದಲಂಪಂ ನಡೆನೋಡುತ್ತುರತರ ಭಕ್ತಿರಸಭರಿತಾಂತಃಕರಣನಾಗಿ ಬರೆವರೆ ಮೂಱುಲೋಕಮಾತೆಯಪ್ಪ ಬಾಲಪಂಪಾದೇವಿಯಾಲಯಮಂ ಕಾಣಿಸಲಾನೆಯಿಂದೆಟ್ಟಿಂದು ಮಾದೇಗುಲದುಪಕಂಠಸ್ಥಿತಮುದಿತ ವಿಮಳ ಕಮಳಕಹ್ಲಾರಕೈರವಸಂಚಯದ ಸಮಂಚಿತಸುಗಂಧಮಿಳಿತಾಂಚನ್ಮಕರಂದಧೂಳೀಪಟಲ ಕ್ರೀಡೋಲ್ಲೀಢಭ್ರಮದ್ಭ್ರಮರೀಪುಂಜ ಸಂಜನಿತಮಂಜುಳಝೇಂಕಾರ ಪರಿಪೂರ್ಣರಂಜಿತ ಕಂಜಾತಾಕರಾಚ್ಛೋದಕದೊಳ್ ಕರಚರಣಪ್ರಕ್ಷಾಳನಮಂ ಮಾಡಿಕೊಂಡಾನಂದದಿಂದುದ್ಭಟ ಕ್ಷಿತೀಂದ್ರಚಂದ್ರಮಂ ಪದ್ಮಕುಟೀರಮಂ ಪುಗುವ ರಾಜಹಂಸನಂತೆ ದೇವಾಗಾರಮಂ ಪೊಕ್ಕು ಪಂಪಾಂಬಿಕೆಯಂ ಕಾಣ್ಬ ತಟಕದಿಂದಂ ಬರೆವರೆ" (ಉ.ಕಾ. ೩–೩೫).

ಇಲ್ಲಿ ಉದ್ಭಟ ಮಹಾರಾಜ ಬಾಲಪಂಪಾಂಬಿಕೆ ಎಂದರೆ ಕಿರಿಯ ಪಂಪಾಂಬಿಕೆಯ ದರ್ಶನವನ್ನು ಪಡೆಯುತ್ತಾನೆ. ಇಲ್ಲಿ ಶಿವನ ಶಿವದೇವಾಲಯದ ಪ್ರಸ್ತಾಪವಿಲ್ಲ. ಹಾಗೆಯೇ ಮೂರು ಲೋಕದ ಮಾತೆಯಾದ ಶಕ್ತಿಸ್ವರೂಪಿಯನ್ನು ಸ್ತುತಿಸುವುದರಿಂದ ಆ ಸ್ಥಳಕ್ಕೆ ಈಕೆ ಶಕ್ತಿದೇವತೆಯಾಗಿದ್ದಿರಬಹುದು. ನಂತರ ಉದ್ಭಟ ಮಹಾರಾಜನು ತುಂಗಭದ್ರೆಯ ಆ ಕಡೆ ದಡದಲ್ಲಿ ನೆಲೆಸಿರುವ ಹಿರಿಯ ಪಂಪಾಂಬಿಕೆಯ ದರ್ಶನಕ್ಕೆ ಹೋಗಲು ನದಿಯನ್ನು ದಾಟುತ್ತಾನೆ. ಸೋಮರಾಜ ಕವಿ ನದಿಯ ಇಕ್ಕೆಲಗಳಲ್ಲೂ ಇರಬಹುದಾದ ತೋಟಗಳ ವರ್ಣನೆಯನ್ನು ಮಾಡುತ್ತಾನೆ.

ಕಣ್ಣಿಗೆ ಅಂದವಾದ ತೆಂಗುಗಳ ಸಾಲಿನಿಂದ, ನವಿರಾದ ಕಂಪನ್ನೀಯುವ ಹೂವಿನ ಬಳ್ಳಿಗಳ ಚಪ್ಪರಗಳಿಂದ, ಹಣ್ಣುಗಳ ಭಾರದಿಂದ ಜಗ್ಗಿರುವ ಗಿಡಮರಗಳಿಂದ, ನೀಳವಾದ ಅಡಕೆಯ ಮರಗಳಲ್ಲಿ ತುಂಬಿರುವ ಹೂವುಗಳಿಂದ, ಎಲ್ಲೆಡೆ ಹೂವುಗಳನ್ನು ಹೊಂದಿರುವ ಸಂಪಗೆಯ ಮರಗಳಿಂದ, ಚೆಲುವನ್ನು ತಾಳಿರುವ ಮಾವಿನ ಮರಗಳಿಂದ, ಸುಂದರವಾದ ಹಲಸಿನ ಮರಗಳಿಂದ, ಕೋಮಲವಾಗಿ ಬೆಳೆದು ಕಣ್ಣಿಗೆ ಆನಂದವನ್ನೀಯುವ ರಸಬಾಳೆಯ ಗಿಡದ ಸಾಲುಗಳಿಂದ, ಮನೋಹರವಾದ ಫಲಗಳಿಂದ ತುಂಬಿದ ಕಿತ್ತಳೆ ಗಿಡಗಳಿಂದ, ಕೆಂಪಿರುವೆಗಳಿಂದ ತುಂಬಿದ ನಿಂಬೆಯ ಗಿಡಗಳಿಂದ ಚಿಗುರಿ ಕಂಗೊಳಿಸುವ ಅಶೋಕ ವೃಕ್ಷಗಳಿಂದ, ಪಾದರಿಯ ಮರ ಹಾಗೂ ಅದರ ಹೂವುಗಳ ಚೆಲುವಿನಿಂದ, ಚೆನ್ನಾಗಿ ಬೆಳೆದು ಅಂದಗೊಂಡಿರುವ ಸುರಹೊನ್ನೆಯ ಮರಗಳಿಂದ, ಮಧುರವಾದ ಸುವಾಸನೆಯನ್ನು ತಳೆದ ಶ್ರೀಗಂಧದ ಮರಗಳಿಂದ, ಹೂವಿನ ತೋಟಗಳಿಂದ ತುಂಗಭದ್ರೆಯು ರಂಜಿಸಿದಳು (ಉ.ಕಾ. ೩–೮೮–೧೦೦). ಹಂಪೆಯಲ್ಲಿದ್ದ ಹೂವಿನ ತೋಟಗಳ ಬಗ್ಗೆ ಎಂ. ಚಿದಾನಂದಮೂರ್ತಿಯವರು ಪ್ರಸ್ತಾಪಿಸುತ್ತಾರೆ (೨೯೩–೨೯೪). ಪಂಪಾಪುರದ ಗಡಿಗಳನ್ನು ಹಾಗೂ ಅಲ್ಲಿ ನೆಲೆಸಿದ್ದ ದೇವರುಗಳನ್ನು ಹರಿಹರನು ತನ್ನ ಪಂಪಾಕ್ಷೇತ್ರದ ರಗಳೆಯಲ್ಲಿ ಕೊಡುತ್ತಾನೆ.

ಆ ಪುರದೊಳುಂ ನಾಲ್ಕು ಬಾಗಿಲುಗಳುಂ ನೋಡೆ
ಪಾಪಹರ ಸುತ್ತ ಯೋಜನ ಪ್ರಮಾಣಂ ಕೊಡೆ
ಅಲ್ಲಿ ಮೂಡಣ ಬಾಗಿಲೊಳಗಿರ್ಪನಚಳಿತಂ
ಬಲ್ಲ ಶರಣರ ಜಂಬುಕೇಶ್ವರಂ ಶಾಶ್ವತಂ
ಪಶ್ಚಿಮ ದ್ವಾರದೊಳು ನೆಲಸಿರ್ಪನೊಪ್ಪದಿಂ
ನಿಶ್ಚಯ ದಿಟಂ ಸೋಮನಾಥನತಿಪ್ರೇಮದಿಂ
ಉತ್ತರದ್ವಾರದೊಳು ನೆಲಸಿರ್ಪನೀಶ್ವರಂ
ಉತ್ತಮ ಗುಣಸ್ಥಾಣು ವಾಣಿಭದ್ರೇಶ್ವರಂ
ಇಂತೆನಿಸಿ ಮೆರೆವ ನಾಲ್ಕು ಬಾಗಿಲುಗಳೊಳಗೆ
ತಿಂಥಿಣಿಪ ಶಿವಲಿಂಗವಿಪ್ಪುವಾ ಪುರದೊಳಗೆ (ಹ.ರ. ಪುಟ ೫೬)

ಸೋಮರಾಜ ಕವಿಯು ಈ ಬಗ್ಗೆ ಉಲ್ಲೇಖಿಸುತ್ತಾನೆ. ಪೂರ್ವದಲ್ಲಿ ಅಸಂಖ್ಯ ಕಿನ್ನರರು, ಪಶ್ಚಿಮದಲ್ಲಿ ಜಂಬುಕೇಶ್ವರ, ದಕ್ಷಿಣದಲ್ಲಿ ನೀಲಕಂಠ ಸೋಮೇಶ, ಉತ್ತರದಲ್ಲಿ ವಾಣಿಭದ್ರರು ವಿಜೃಂಭಣೆಯಿಂದ ನೆಲೆಸಿರುವರು. ಹೀಗೆ ನಾಲ್ಕು ಅಂಗಗಳಲ್ಲಿ ನಾಲ್ಕು ಬಾಗಿಲುಗಳಿದ್ದು, ಸಕಲ ಭಕ್ತರಿಗೆ ಅವರವರ ಇಷ್ಟಾರ್ಥಗಳನ್ನು ಅನುಗ್ರಹಿಸುತ್ತ ಶೋಭಿಸಿರಲು ಅದರ ಮಧ್ಯಭಾಗದಲ್ಲಿ ನಾಲ್ಕು ಮೈಲಿ ವಿಶಾಲ ಭೂಮಿಯಲ್ಲಿದ್ದ ಮಹಾಲಿಂಗಗಳನ್ನು ಒಂದೊಂದಾಗಿ ಹೆಸರು ಹಿಡಿದು ಹೇಳುವುದು ಬ್ರಹ್ಮನಿಗೂ ಅಸಾಧ್ಯವಾದದ್ದು. ಖ್ಯಾತಿಪಡೆದು ಯಥೇಚ್ಛ ಶಿವಲಿಂಗಗಳಿಂದ, ಅಪಾರ ಮಹಿಮೆಯನ್ನು ಹೊಂದಿ ಪಂಪಾಕ್ಷೇತ್ರವು ಶೋಭಿಸುತ್ತಿದ್ದುದಾಗಿ ತಿಳಿದುಬರುತ್ತದೆ (ಉ.ಕಾ. ೩–೫೭, ವ).

"ವಿರೂಪಾಕ್ಷ ದೇವಾಲಯದ ಪೂರ್ವಕ್ಕೆ, ಕಮಲಾಪುರದಿಂದ ಕಂಪ್ಲಿ ಗಂಗಾವತಿಗೆ ಹೋಗುವ ರಸ್ತೆಯಲ್ಲಿ ಎಡಕ್ಕೆ, ಹೊಸಪೇಟೆ ತಾಲೂಕಿನ ಬುಕ್ಕಸಾಗರ ಸಮೀಪ ನೆಲದ ಮೇಲೆ "ಕಿನ್ನರೇಶ್ವರ" ದೇವಾಲಯವಿದೆ. ವಿರೂಪಾಕ್ಷ ದೇವಾಲಯದ ದಕ್ಷಿಣಕ್ಕೆ, ಹೊಸಪೇಟೆ ಸಮೀಪ ಬೆಟ್ಟದ ಮೇಲೆ ಜಂಬುಕೇಶ್ವರ ದೇವಾಲಯವಿದೆ. ವಿರೂಪಾಕ್ಷ ದೇವಾಲಯದ ಪಶ್ಚಿಮಕ್ಕೆ, ಕೊಪ್ಪಳ ತಾಲೂಕಿನ ಶಿವಪುರದ ಸಮೀಪದ ಬೆಟ್ಟಗಳ ಮೇಲೆ ಸೋಮನಾಥ ದೇವಾಲಯವೂ, ಉತ್ತರಕ್ಕೆ ಗಂಗಾವತಿ ತಾಲೂಕಿನ ಮಲ್ಲಾಪುರ ಸಮೀಪ ಬೆಟ್ಟದ ಮೇಲೆ ವಾಣಿಭದ್ರೇಶ್ವರ ದೇವಾಲಯವೂ ಇವೆ. ಇವುಗಳಲ್ಲಿ ಕಿನ್ನರೇಶ್ವರ ದೇವಾಲಯವು ಸಾಮಾನ್ಯ ಕಟ್ಟಡವಾಗಿದ್ದು ಅಲ್ಲಿ ಪೂಜೆ ಈಗಲೂ ನಡೆಯುತ್ತದೆ. ಜಂಬುಕೇಶ್ವರ ದೇವಾಲಯವು ವಿಜಯನಗರ ಕಾಲದ ಸುಂದರ ಕಟ್ಟಡವಾಗಿದ್ದು ಉಳಿದೆಲ್ಲ ದೇವಾಲಯಗಳಿಗಿಂತ ಹೆಚ್ಚು ಭಕ್ತಾದಿಗಳು ಬಂದು ಹೋಗುವ ಜಾಗವಾಗಿದೆ. ಸೋಮೇಶ್ವರ ದೇವಾಲಯವು ಬೆಟ್ಟದ ಮೇಲಿನ ಒಂದು ಗುಹೆಯೇ ಆಗಿದೆ. ಅಲ್ಲಿ ಪೂಜಾದಿಗಳು ನಿಂತು ಹೋಗಿವೆ" (ಚಿದಾನಂದಮೂರ್ತಿ ಎಂ. ೧೯೯೮; ೪೪೨). ಪಂಪಾಪುರದ ಸುತ್ತಲೂ ಇದ್ದ ತೀರ್ಥಗಳ ಬಗ್ಗೆ ಉಲ್ಲೇಖವಿದೆ :

ಮತ್ತಂ ಮಹಾನದೀಶ್ವರೀ ತುಂಗಭದ್ರೆಯೊಳು
ಉತ್ತಮ ವಶಿಷ್ಠನಾಶ್ರಮವಿಪ್ಪುದೊಲುಮೆಯೊಳು

ಅಲ್ಲಿ ಪಾಪವಿನಾಶಿ ಎಂಬ ನಾಮದ ತೀರ್ಥ
ಅಲ್ಲಿಂ ದಶಾಶ್ವಮೇಧಾ ವಿಧಾನದ ತೀರ್ಥ
ಅದರೊಳಗೆ ಬದರಿಕಾಶ್ರಮವುಂ ಕೋಟಿತೀರ್ಥ
ಎದರೊಳಗೆ ಶಬರಿಕಾಶ್ರಮವುಂ ಕೋಟಿತೀರ್ಥ
ಮಿಗೆ ದೇವಪೂತ ಪಂಪಾಸರೋವರ ಮುಂದೆ
ಸೊಗಮಿಸುವ ಕಾಮದಹನದ ಭಸಿತವದು ಮುಂದೆ
ಅಲ್ಲಿಂದ ಮಾಲುವಂತಾಚಳಮದೊಪ್ಪುವುದು
ಸಲ್ಲಲಿತ ಋಣವಿಮೋಚನ ತೀರ್ಥ ಒಪ್ಪುವುದು
ಉರಿಯಕ್ಷತೀರ್ಥಂ ಗದಾತೀರ್ಥಂ ಧನುತೀರ್ಥಂ
ವರಶಂಖಚಕ್ರತೀರ್ಥಂ ಪದ್ಮದಳತೀರ್ಥ
ಹೇಮಕೂಟದ ಮೇಲೆ ವತ್ಸನಾಭಿಯ ತೀರ್ಥ
ಆ ಮಹಾಕ್ಷೇತ್ರದೊಳಗಗ್ನಿತೀರ್ಥಂ ಸ್ವಾರ್ಥ
ರಾಮತೀರ್ಥಂ ಸಂದ ಪಿತೃತೀರ್ಥವಂತಲ್ಲಿ
ಎಮಾತು ಮಾಂಗಲ್ಯತೀರ್ಥ ಒಪ್ಪುವುದಲ್ಲಿ
ಶ್ರೀರುದ್ರಪಾದವಿಪ್ಪುದು ಧರಾರಾಜನದು
ನಾರಾಯಣಾದಿ ದೇವರ್ಕಳಿಗಭೇದ್ಯವದು
ಇನ್ನುಳ್ಳ ತೀರ್ಥಮಂ ಪೆಸರ್ಗೊಳಲೆನ್ನಳವೆ (ಹ.ರ. ಪುಟ. ೫೮).

ತುಂಗಭದ್ರಾನದಿಯ ಪ್ರದೇಶದಲ್ಲಿಯೇ ವಶಿಷ್ಠರ ಆಶ್ರಮವಿದ್ದುದು. ಹಾಗೆಯೇ ಪಾಪವಿನಾಶಿ ಎಂಬ ಹೆಸರಿನ ತೀರ್ಥವಿದ್ದುದಾಗಿಯೂ, ಅಲ್ಲದೆ ದಶಾಶ್ವಮೇಧಾ ತೀರ್ಥ, ಅದರೊಳಗೆ ಬದರಿಕಾಶ್ರಮ, ಅಲ್ಲದೆ ಕೋಟಿತೀರ್ಥವಿದ್ದುದಾಗಿಯೂ, ಕೋಟಿತೀರ್ಥದ ಹತ್ತಿರವೇ ಶಬರಿಕಾಶ್ರಮ, ಹಾಗೆಯೇ ಪಂಪಾಸರೋವರ ಅದರ ಮುಂದೆ ಕಾಮದಹನವನ್ನು ಮಾಡಿದ ಭಸ್ಮವಿರುವಂತಹ ಸ್ಥಳ, ಋಣವಿಮೋಚನತೀರ್ಥ. ಇದಲ್ಲದೆ, ಉರಿಯಕ್ಷ ತೀರ್ಥ, ಗದಾತೀರ್ಥ, ಧನುತೀರ್ಥ, ವರಶಂಖಚಕ್ರತೀರ್ಥ ಪದ್ಮದಳತೀರ್ಥವಿದ್ದುದಾಗಿಯೂ, ಹೇಮಕೂಟದ ಮೇಲೆ ವತ್ಸನಾಭಿತೀರ್ಥ, ಆ ಮಹಾಕ್ಷೇತ್ರದೊಳಗೆ ರಾಮತೀರ್ಥ, ಪಿತೃತೀರ್ಥ, ಮಾಂಗಲ್ಯತೀರ್ಥವಿದ್ದುದಾಗಿಯೂ ಹರಿಹರಕವಿ ವರ್ಣಿಸುತ್ತಾನೆ. ಆದರೆ ಮನ್ಮುಖತೀರ್ಥದ ಬಗ್ಗೆ ಪ್ರಸ್ತಾಪವಿಲ್ಲ.

"ಕಾವ್ಯಗಳಲ್ಲಿ ಮನ್ಮಥತೀರ್ಥ ಎಂದು ಹೆಸರಿಸಿರುವ ತೀರ್ಥ ಈಗಲೂ ಅದೇ ಹೆಸರಲ್ಲಿ ಜನರಲ್ಲಿ ಬಳಕೆಯಲ್ಲಿದೆ. ಮನ್ಮಥತೀರ್ಥವೆಂದರೆ ಅರ್ಥವಾಗುತ್ತದೆ; ಹರಿಹರನ ಗಿರಿಜಾಕಲ್ಯಾಣದ ಕತೆಯ ಪ್ರಕಾರ, ಮನ್ಮಥದಹನವು ನಡೆದುದು ಹಂಪೆಯಲ್ಲೇ. ಆದರೆ, ಶಾಸನೋಕ್ತಿ ಮತ್ತು ಮೌಖಿಕ ಪರಂಪರೆಗಳು ಆ ತೀರ್ಥದ ನಿಜವಾದ ಹೆಸರು ಮನ್ಮುಖತೀರ್ಥವೆಂಬುದನ್ನು ನಿಸ್ಸಂಶಯವಾಗಿ ಹೇಳುತ್ತವೆ. ಮನ್ಮುಖತೀರ್ಥವೆಂಬ ಮಾತು ಅರ್ಥವಾಗುವುದಿಲ್ಲ. ಅದರ ಮೂಲರೂಪ ಬಹುಶಃ ಶ್ರೀಮನ್ಮುಖತೀರ್ಥ. ಮುಖತೀರ್ಥವೆಂದರೆ ಮುಖ್ಯವಾದುದು, ಮೊದಲಿನದು ಎಂದರ್ಥ. ಹಂಪೆಯ ತೀರ್ಥಗಳಲ್ಲೆಲ್ಲ ಅದೇ ಮುಖ್ಯವಾದುದು. ಶ್ರೀಮನ್ಮುಖತೀರ್ಥ

ಎಂಬ ರೂಪವನ್ನು ಶ್ರೀಮತ್+ಮುಖತೀರ್ಥ ಎಂದು ಬಿಡಿಸದೆ 'ಶ್ರೀ+ಮನ್ಮುಖತೀರ್ಥ' ಎಂದು ತಪ್ಪಾಗಿ ಬಿಡಿಸಿದುದರ ಫಲವಾಗಿ ಮನ್ಮುಖತೀರ್ಥವೆಂಬ ಸಾಧುವಲ್ಲದ ರೂಪ ಬಳಕೆಗೆ ಬಂದಿರುವಂತಿದೆ (ಚಿದಾನಂದಮೂರ್ತಿ ಎಂ. ೧೯೯೮; ೨೯೦). ಆದರೆ ಉದ್ಭಟ ಕಾವ್ಯದಲ್ಲಿ ಮನ್ಮುಖತೀರ್ಥವೆಂದು ಸ್ಪಷ್ಟವಾಗಿಯೇ ಹೇಳಲಾಗಿದೆ.

ಅಲ್ಲದೆ ಈ ತೀರ್ಥದ ಬಗ್ಗೆಯೂ ವಿವರವಿದೆ.

ಜನ್ಮಾದಿದುಃಖಮಂ ಕಳೆ
ದುನ್ಮನದಾನಂದಮೀವ ಪಂಪಾಪುರದೊಳ್ ।
ಮನ್ಮುಖತೀರ್ಥಪ್ರಮುಖೋ
ದ್ಯನ್ಮಂಗಳ ತೀರ್ಥ ಮೆಸೆವುದುರ್ವೀಪಾಲ ॥ (ಉ.ಕಾ. ೩–೫೯)

ಅಂದರೆ ಮನ್ಮುಖತೀರ್ಥವು ಪಂಪಾಪುರದೊಳಗೆ ಎಲ್ಲ ತೀರ್ಥಗಳಿಗಿಂತ ಪ್ರಧಾನ, ಮುಖ್ಯ ಎಂಬರ್ಥವು ಸ್ಪಷ್ಟವಾಗುತ್ತದೆ. ತುಂಗಭದ್ರೆಯ ದಡದಲ್ಲಿ ಒಳ್ಳೆಯ ತೀರ್ಥಗಳಷ್ಟೇ ಅಲ್ಲ, ವಸಿಷ್ಠನೇ ಮೊದಲಾದ ಮುಖ್ಯ ಋಷಿಗಳ ಆಶ್ರಮಗಳಿಂದ ಅಂದಗೊಂಡಿರುವುದಾಗಿಯೂ, ಹಾಗೆಯೇ ಬೆಟ್ಟಗಳ ಸಮೂಹಕ್ಕೆ ಕಿರೀಟಪ್ರಾಯವೂ ಕಾಂತಿಪೂರ್ಣವೂ ಆದ ಹೇಮಕೂಟವು ಮನಸ್ಸನ್ನು ಆಕರ್ಷಿಸುವುದಾಗಿ ಸೋಮರಾಜಕವಿ ವರ್ಣಿಸುತ್ತಾನೆ (ಉ.ಕಾ. ೩–೬೦–೬೩). ವಿರೂಪಾಕ್ಷ ದೇವಾಲಯದ ಬಗ್ಗೆ ಒಂದಿಷ್ಟು ಗಮನಹರಿಸೋಣ.

"ಮೂಲ ವಿರೂಪಾಕ್ಷ ಹೆಸರು ವಿರೂಪಾಕ್ಷನ ಗುಡಿ ಮೊದಲು ಬೆಟ್ಟದ ಮೇಲೆ ಇತ್ತೆಂದೂ, ಈಗಿನ ನೆಲದ ಮೇಲಿನ ವಿರೂಪಾಕ್ಷವು ಆಮೇಲಿನದು ಎಂಬುದನ್ನೂ ಧ್ವನಿಸುತ್ತದೆ. ಕ್ರಿ.ಶ. ೧೧೯೯ರ ಹಂಪೆಯ ಶಾಸನವು ಹೇಮಕೂಟದ ತುದಿಯಲ್ಲಿ ಮನೆ ಮಾಡಿಕೊಂಡು ವಿರೂಪಾಕ್ಷನು ಗೌರೀ ಸಮೇತ ನೆಲೆಸಿದ್ದಾನೆ ಎನ್ನುತ್ತದೆ. ಆ ಶಾಸನದ ಪ್ರಕಾರ, ಚೌಡಯ್ಯ ಸುಣ್ಣ ಬಳಸಿದ್ದು ಹೇಮಕೂಟದ ಮೇಲಿನ ವಿರೂಪಾಕ್ಷ ದೇವಾಲಯಕ್ಕೆ. ಗಿರಿಜಾಕಲ್ಯಾಣದಲ್ಲಿ ಹರಿಹರನು ತನ್ನ ಕೃತಿಯ ಆರಂಭದಲ್ಲಿ ಸ್ತೋತ್ರ ಮಾಡಿರುವುದು ಹೇಮಕೂಟದ ಮೇಲಿನ ವಿರೂಪಾಕ್ಷನನ್ನೇ. ಅವನು ಪಂಪಾಕ್ಷೇತ್ರದ ರಗಳೆಯಲ್ಲಿ ಪಂಪಾಪುರದಲ್ಲಿದ್ದ ಇಬ್ಬರು ಪಂಪಾಂಬಿಕೆಯರನ್ನು ಹೇಳಿದವನು ಇಬ್ಬರು ವಿರೂಪಾಕ್ಷರನ್ನು ಹೇಳುವುದಿಲ್ಲ. ಅಲ್ಲಿ ಹೇಳಿರುವುದು ಒಬ್ಬ ವಿರೂಪಾಕ್ಷನನ್ನೇ – ಆ ವಿರೂಪಾಕ್ಷ ಬಹುಶಃ ಬೆಟ್ಟದ ಮೇಲಿನ ವಿರೂಪಾಕ್ಷ; ಮೂಲ ವಿರೂಪಾಕ್ಷ. ಹರಿಹರನ ಕಾಲದಲ್ಲಿ ಈಗ ನೆಲದ ಮೇಲೆ ಇರುವ ವಿರೂಪಾಕ್ಷಲಿಂಗ ಇತ್ತೇ ಅಥವಾ ಇದ್ದುದು ಬೆಟ್ಟದ ಮೇಲಿನ ಮೂಲ ವಿರೂಪಾಕ್ಷ ಮಾತ್ರವೇ ? ಹರಿಹರ ಆರಾಧಿಸಿದ ವಿರೂಪಾಕ್ಷಲಿಂಗ ಯಾವುದು ? ಕಟ್ಟಡಗಳು ಈ ವಿಚಾರ ನಿರ್ಣಯದಲ್ಲಿ ಸಹಾಯಕ್ಕೆ ಬರುವುದಿಲ್ಲ–ಏಕೆಂದರೆ ಹಳೆಯ ಕಟ್ಟಡಗಳು ನಾಶವಾದಾಗ ಹೊಸ ಕಟ್ಟಡಗಳು ಅಸ್ತಿತ್ವಕ್ಕೆ ಬರುವುದು ಸರ್ವೇಸಾಮಾನ್ಯ. ಮೂಲ ವಿಗ್ರಹವು ಮಾತ್ರ ಹೊಸ ಕಟ್ಟಡದಲ್ಲಿಯೂ ಮುಂದುವರಿಯುತ್ತದೆ" (ಚಿದಾನಂದಮೂರ್ತಿ ಎಂ. ೧೯೯೮; ೪೪೪).

ಹರಿಹರನ ನಂತರದ ಕವಿ ಸೋಮರಾಜನೂ ಹೇಮಕೂಟದಲ್ಲಿ ನೆಲೆಸಿರುವ ವಿರೂಪಾಕ್ಷನನ್ನೇ ಹೆಸರಿಸುತ್ತಾನೆ. "ಹೇಮಕೂಟಾಗ್ರದೊಳ್ ಮಧುಮಥನ ವಿಧಿವಿಬುಧಪತಿ ಮುಖ್ಯ ವಿವಿಧ ಬುಧಕೋಟೀರಕೋಟಿ ನವಶಾಣಾಕ್ಷೀಣ ಕಷಣೋಲ್ಬಣನಿಖಿಳಮಣಿ ಗಣವಿರಾಜಿತ ಚರಣಾರುಣತರುಣ ಪಲ್ಲವಂ ಪಂಪಾಂಬಿಕಾವಲ್ಲಭಂ ನಿಗಮದುರ್ಲಭಂ ಜಗದುದಯಸಿತಿ ಲಯಕಾರಣಸ್ವರೂಪಂ ಶ್ರೀ ವಿರೂಪಾಕ್ಷಂ ಸಂತಸಮನೆಸೆದಾಂತುಮಿರ್ಪಂ ॥" (ಉ.ಕಾ. ೩-೬೩ ವ.) ಗುರುವಾದ ವಿರೂಪಾಕ್ಷನೂ, ಪಾರ್ವತೀಪ್ರಿಯನಾದ ಶಂಕರನೂ ಸಂತಸಗೊಂಡಿರಲು ಅವನನ್ನು ಹೊಂದಿ ಪಂಪಾಕ್ಷೇತ್ರವು ಶೋಭಿಸಿರುವುದು (೩-೬೫). ಅಂದರೆ ಹೇಮಕೂಟದ ವಿರೂಪಾಕ್ಷನೇ ಮೂಲ ವಿರೂಪಾಕ್ಷ, ಹರಿಹರ ಆರಾಧಿಸಿರುವ ವಿರೂಪಾಕ್ಷಲಿಂಗವೂ ಇದೇ ಆಗಿದೆ.

ಹರಿಹರಕವಿ ಪಂಪಾಕ್ಷೇತ್ರರಗಳೆಯಲ್ಲಿ ಹೆಸರಿಸುವ ಇಬ್ಬರು ಪಂಪಾಂಬಿಕೆಯರು- ಪುರದೊಳೊಲವಿಂದೆ ಹಿರಿಯ ಹಂಪಾದೇವಿ ಚಿಕ್ಕ ಹಂಪಾದೇವಿ ನಲವಿಂದೆಯೊಪ್ಪುತಿರೆ (ಹ.ರ. ಪುಟ ೫೩). ಹಾಗೆಯೇ ಚಿದಾನಂದಮೂರ್ತಿಯವರ ಮಾತುಗಳನ್ನು ಹಿಂದೆ ಈಗಾಗಲೇ ಪ್ರಸ್ತಾಪಿಸಿದ್ದೇವೆ. ಬಾಲಪಂಪಾಂಬಿಕೆ ಅಂದರೆ ಕಿರಿಯ ಪಂಪಾಂಬಿಕೆಯು ಪಂಪಾಪುರದ ದಡದಲ್ಲಿರುವವಳು. ಉದ್ಭಟ ಕಾವ್ಯದಲ್ಲಿನ ಉಲ್ಲೇಖ ನೋಡಿ-ಬಾಲಪಂಪಾಂಬಿಕೆಯನ್ನು ದರ್ಶನ ಮಾಡಿದ ನಂತರ ಉದ್ಭಟ ರಾಜನು ಭೋರ್ಗರೆದು ಹರಿಯುವ ತುಂಗಭದ್ರಾ ನದಿಯನ್ನು ಕಂಡು ಅತ್ಯಾನಂದದಿಂದ ಆ ನದಿಯನ್ನು ಸಂಭ್ರಮದಿಂದ ದಾಟಿ, ಮೆಲ್ಲನೆ ನಡೆದುಬಂದು ವಶಿಷ್ಠಾಶ್ರಮದ ಭಾಗದಲ್ಲಿ "ವಿರೂಪಾಕ್ಷನರ್ಧಾಂಗಿಯಪ್ಪ ಹಿರಿಯಹಂಪಾದೇವಿಯ ಮಣಿಮಂದಿರಮಂ ಪೊಕ್ಕು ಪರಮೇಶ್ವರಮೂರ್ತಿಯಂ ಕಂಡು ಪೊಂಗಿ ಪೊರೆಯೇಜಿ ಪೊಂಪುಟಿವೋಗಿ ಭಯಭಕ್ತಿಯಿಂ ಸಾಷ್ಟಾಂಗಪ್ರಣತನಾಗಿ" (ಉ.ಕಾ. ೩-೧೦೨ ವ). ಹೀಗೆ ಹಿರಿಯ ಹಂಪಾದೇವಿಯನ್ನು ಸ್ತೋತ್ರ ಮಾಡಿ ತೃಪ್ತಿಗೊಳ್ಳದೆ ಅಲ್ಲಿಂದ ಎದ್ದು ಬಂದು ಗರ್ಭಗೃಹವನ್ನು ಪ್ರವೇಶಿಸಿ ಅತ್ಯಾನಂದದಿಂದ ಪಾರ್ವತೀಮಾತೆಯ ಇದಿರಲ್ಲಿ ಪದ್ಮಾಸನ ಹಾಕಿ ಕುಳಿತು ಪೂಜಿಸಲು ತೊಡಗುತ್ತಾನೆ. ಮೇಲಿನ ಈ ಎಲ್ಲಾ ಉಲ್ಲೇಖಗಳಿಂದ ಹಿರಿಯ ಹಂಪಾದೇವಿಯು ವಿರೂಪಾಕ್ಷನ ಬಳಿಯಿರುವವಳು ಎಂದು. ಹೀಗೆ ಹರಿಹರ ಮತ್ತು ಸೋಮರಾಜಕವಿಗಳಿಂದ ಪಂಪಾಪುರ, ತೋಟಗಳು, ಅಲ್ಲಿರುವ ತೀರ್ಥಗಳು, ಗಡಿಗಳು, ಬೆಟ್ಟ ಹಾಗೂ ವಿರೂಪಾಕ್ಷ, ಪಂಪಾಂಬಿಕೆಯರ ಬಗ್ಗೆ ಪ್ರಾಗೈತಿಹಾಸಿಕ ನೆಲೆಗಳನ್ನು ಗುರುತಿಸಿಕೊಳ್ಳಬಹುದಾಗಿದೆ. ಈಗಿನ ಹಂಪೆಗೂ ಅಂದು ಇದ್ದ ಪಂಪಾಪುರದ ನಕ್ಷೆಗಳಿಗೂ ಇರುವ ಸಾಮ್ಯವನ್ನು ಹರಿಹರ ಹಾಗೂ ಸೋಮರಾಜ ಕವಿಗಳ ಕೃತಿಗಳಿಂದ ಹೀಗೆ ಆಯ್ದುಕೊಳ್ಳಬಹುದಾಗಿದೆ.

ಪರಾಮರ್ಶನ ಗ್ರಂಥಗಳು

೧. ಗೀತಾ ಬಿ.ಎಸ್. ೨೦೦೫. ಕರ್ನಾಟಕ ಸಂಸ್ಕೃತಿ; ಸಂಘರ್ಷ ಮತ್ತು ಸಂಧಾನ- ಒಂದು ಅಧ್ಯಯನ (ಅಪ್ರಕಟಿತ), ಐಸಿಎಚ್‌ಆರ್, ನವದೆಹಲಿ.

೨. ಚಿದಾನಂದಮೂರ್ತಿ ಎಂ., ೧೯೯೮, ಹೊಸತು ಹೊಸತು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨ನೇ ಮುದ್ರಣ.

೩. ಶಾಮಶಾಸ್ತ್ರಿ ಆರ್. (ಸಂ.), ೧೯೨೧, ಉದ್ಭಟ ಕಾವ್ಯಂ, ಪ್ರಾಚ್ಯವಿದ್ಯಾ ಸಂಶೋಧನಾಲಯದ ಗ್ರಂಥಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪. ಹಳಕಟ್ಟಿ ಪಿ.ಜಿ. (ಸಂ.), ೧೯೬೮, ಹರಿಹರನ ರಗಳೆಗಳು, ಸಮಾಜ ಪುಸ್ತಕಾಲಯ, ಧಾರವಾಡ.

□□□

ಸೌಂದರನಂದ ಮಹಾಕಾವ್ಯದಲ್ಲಿ ಪ್ರತಿಪಾದಿತವಾಗಿರುವ ಜೀವನಮೌಲ್ಯಗಳು

– ಡಾ. ವಿ. ಭಾಗ್ಯಲಕ್ಷ್ಮಿ

ದಾರ್ಶನಿಕನಾದ ಮಹಾಕವಿ ಅಶ್ವಘೋಷನು ತನ್ನ ಮೇರುಕೃತಿಯಾದ 'ಸೌಂದರನಂದ' ಮಹಾಕಾವ್ಯದ ಮೂಲಕ ಮನುಕುಲಕ್ಕೆ ಅತ್ಯಮೂಲ್ಯವಾದ ಸಂದೇಶವನ್ನು ರವಾನಿಸಿದ್ದಾನೆ.

ಇದಕ್ಕಾಗಿ ಅವನು ಆಯ್ದುಕೊಂಡಿರುವ ಮಾರ್ಗ ಕಾವ್ಯ. ಸಮಸ್ತ ವಾಙ್ಮಯವನ್ನು ಶಾಸ್ತ್ರ ಮತ್ತು ಕಾವ್ಯವೆಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಶಾಸ್ತ್ರ ವಿದ್ವದ್ಗ್ರಾಹ್ಯ. ಅವಿವೇಕವೆಂಬ ರೋಗವನ್ನು ನಿವಾರಿಸಲು ಬಳಸುವ ಕಹಿ ಔಷಧದ ಗುಳಿಗೆಯಂತೆ ಶಾಸ್ತ್ರವು ಕುಶಾಗ್ರಬುದ್ಧಿಯವರಿಂದ ಮಾತ್ರ ಗ್ರಹಿಸಲು ಯೋಗ್ಯ. ಕಾವ್ಯ ಹಾಗಲ್ಲ. ಸುಕುಮಾರಮತಿಗಳೂ ಅಮೃತವನ್ನು ಸೇವಿಸಿ ಆನಂದಪಡುವಂತೆ ಕಾವ್ಯಾಮೃತವನ್ನು ಸವಿದು, ಅಜ್ಞಾನವರ್ಜಿತರಾಗಬಹುದು. ಎರಡೂ ಪ್ರಕಾರಗಳ ಫಲ ಒಂದೇ. ಅದೇ ಮೋಕ್ಷ ಸಂಪಾದನೆ. ಮೊದಲನೆಯದು ದುರ್ಗಮವಾದರೆ, ಎರಡನೆಯದು ಸುಗಮ. ಆದ್ದರಿಂದ ಎರಡನೇ ಮಾರ್ಗವನ್ನೇ ಆಯ್ಕೆ ಮಾಡಿಕೊಂಡು ಈ ಲೌಕಿಕ ಜಂಜಾಟದಿಂದ ಮುಕ್ತರಾಗಿ ಅಲೌಕಿಕವಾದ ಆನಂದದಲ್ಲಿ ಏಕೆ ಲೀನರಾಗಬಾರದು ? ಎಂಬ ಚಿಂತನೆ ಮಾಡುವುದು ಸಹಜ. ಇಂತಹ ಚಿಂತನೆಗೆ ಪೂರಕ ಮಾರ್ಗದರ್ಶನವನ್ನು ಈ 'ಸೌಂದರನಂದ' ಮಹಾಕಾವ್ಯ ಒದಗಿಸಿರುವುದು ಸುಸ್ಪಷ್ಟವಾಗಿದೆ.

ಮಹಾಕವಿ ಅಶ್ವಘೋಷನು ತನ್ನ ಈ ಮಹಾಕಾವ್ಯದಲ್ಲಿ ಸಾಮಾನ್ಯರಿಗೂ ಅರ್ಥವಾಗುವಂತೆ ಧಾರ್ಮಿಕ ತತ್ತ್ವಗಳನ್ನು ಸರಳವಾಗಿ ಹೇಳಿದ್ದಾನೆ. ಕಾವ್ಯಮಾಧ್ಯಮವನ್ನು ಬಳಸಿ, ತನ್ನ ಅಪೂರ್ವವಾದ ಉಪದೇಶಾಮೃತವನ್ನು ಸಹೃದಯರ ಮನಸ್ಸಿನಲ್ಲಿ ಸಿಂಚನಗೊಳಿಸಿದ್ದಾನೆ. ರೋಗವನ್ನು ಉಪಶಮನಗೊಳಿಸಲು ವೈದ್ಯರು ಕಹಿಯಾದ ಔಷಧದ ಗುಳಿಗೆಯ ಮೇಲೆ ಸಕ್ಕರೆಯ ಲೇಪವನ್ನು ಮಾಡಿ ಸೇವಿಸಲು ಕೊಡುವಂತೆ ಅಶ್ವಘೋಷನೂ ಸಹ 'ಅಜ್ಞಾನ' ರೂಪವಾದ ರೋಗವನ್ನು ಕಳೆಯಲು 'ಪ್ರೇಮ'ವೆಂಬ ಸಿಹಿಯನ್ನು ಲೇಪನಗೊಳಿಸಿ 'ಕಟುತತ್ತ್ವ'ಗಳನ್ನು ಉಪದೇಶಿಸಿದ್ದಾನೆ. ಲೌಕಿಕ ರೋಗವನ್ನು ನಾಶಪಡಿಸಿ, ಅಲೌಕಿಕವಾದ ಶಾಶ್ವತ

ಸುಖವನ್ನು ಸಂಪಾದಿಸಿಕೊಡುವಲ್ಲಿ ಈತನ ಉಪದೇಶಗಳು ಸಮರ್ಥವಾಗಿವೆ. ಜೀವನಮೌಲ್ಯಗಳು ಮಹಾಕಾವ್ಯದ ಆದ್ಯಂತವಾಗಿ ಅರಳಿ, ಆದರದಿಂದ ಮುಮುಕ್ಷುಗಳನ್ನು ಸ್ವಾಗತಿಸುತ್ತವೆ.

ಅಶ್ವಘೋಷನು ತನ್ನ ಈ ಕೃತಿಯಲ್ಲಿ ಆಯ್ದುಕೊಂಡಿರುವ ಕಥಾವಸ್ತು ಭೋಗಕ್ಕೆ ಸಂಬಂಧಪಟ್ಟಿದೆ. ಸುಂದರಿ ಮತ್ತು ನಂದರು ಕಥೆಯ ನಾಯಕಿ-ನಾಯಕರು. ಅವರಿಬ್ಬರೂ ಅತಿ ಸುಂದರರು. ಪ್ರೇಮಲೋಕದಲ್ಲಿ ತಮ್ಮದೇ ಆದ ಸ್ವಾತಂತ್ರ್ಯದಿಂದ ವಿಹರಿಸುವವರು. ಅವರ ಪ್ರೇಮಸಿಂಚನಕ್ಕೆ ಯಾವ ಅಡ್ಡಿ-ಆತಂಕಗಳೂ ಇಲ್ಲ. ಕಾಮ ಸ್ವಚ್ಛಂದವಾಗಿ ಪ್ರವಾಹದಂತೆ ಪ್ರವಹಿಸಿದೆ. ಆಮೋದ-ಪ್ರಮೋದಗಳಲ್ಲಿ ಮೈಮರೆತಿದ್ದ ಅವರಿಗೆ ಸಂವತ್ಸರಗಳು ಕ್ಷಣಗಳಂತೆ ಕಳೆದುಹೋಗುತ್ತಿದ್ದವು. ಅವರು ಕಾಮವನ್ನು ಎಷ್ಟೇ ಸವಿದರೂ ಇನ್ನೂ ಅಧಿಕ ಪ್ರಮಾಣದಲ್ಲಿ ಕಾಮವು ಉದ್ಭವಿಸುತ್ತಿತ್ತು. ಕಾಮದ ಸ್ವಭಾವವೇ ಹಾಗೆ. ಉರಿವ ಬೆಂಕಿಯಲ್ಲಿ ತುಪ್ಪವನ್ನು ಸುರಿದಂತೆ. 'ನ ಜಾತುಕಾಮಃ ಕಾಮಾನಾಮುಪಭೋಗೇನ ಶಾಮ್ಯತೇ'[೧] "ಕಾಮವನ್ನು ಉಪಶಮನಗೊಳಿಸಲು ಯಾವುದೇ ಕಾಮದಿಂದಲೂ ಸಾಧ್ಯವಿಲ್ಲ" ಎಂದು ಸ್ಮೃತಿಕಾರನು ಉಪದೇಶಿಸಿರುವಂತೆ ಪ್ರಪಂಚದಲ್ಲಿ ಕಾಮವನ್ನು ಮೆಟ್ಟಿನಿಲ್ಲುವ ಶಕ್ತಿ ಯಾವುದಕ್ಕೂ ಇಲ್ಲ. 'ಕಾಮಾತುರಾಣಾಂ ನ ಭಯಂ ನ ಲಜ್ಜಾ' ಎಂಬ ನೀತಿವಾಕ್ಯ ಈ ದಂಪತಿಗಳ ಜೀವನದಲ್ಲಿ ಹಾಸುಹೊಕ್ಕಾದಂತಿತ್ತು. ಚಾತಕ ಪಕ್ಷಿಗಳಂತೆ ಅವರು ಯಾವಾಗಲೂ ಒಬ್ಬರನ್ನೊಬ್ಬರು ಬಿಟ್ಟು ಅಗಲುತ್ತಿರಲಿಲ್ಲ. ಇಂದ್ರಿಯಸುಖವೇ ಅವರಿಗೆ ಸಾರಸರ್ವಸ್ವವಾಗಿತ್ತು. ಅನುರಾಗದ ಬಲೆಯಲ್ಲಿ ತೆಕ್ಕೆಗೊಂಡಿದ್ದ ಈ ದಂಪತಿಗಳಿಗೆ ಜೀವನವೆಂದರೆ ಇಷ್ಟೇ ಎಂಬಂತೆ ಅನುಭವವಾಗಿತ್ತು. ಪರಸ್ಪರ ಪ್ರೇಮ-ಕಾಮಗಳು ಹಾಲು-ಜೇನಿನಂತೆ ಬೆರೆತಿದ್ದವು. ಅವರು ಸಾಧಕರಾಗುವುದು ಕನಸೇ ಸರಿ ಎಂದು ಸಹೃದಯರಿಗೆ ಭಾಸವಾಗುವಷ್ಟರ ಸಾಂದ್ರತೆಯಲ್ಲಿ ಕವಿಯು ಕಥಾಹಂದರವನ್ನು ಹೆಣೆದಿದ್ದರೂ, ಕೊನೆಗೆ ಬರಡು ಭೂಮಿಯನ್ನು ಸಸ್ಯಶ್ಯಾಮಲೆಯನ್ನಾಗಿ ಮಾಡಿದ ಆತನ ಅಸಾಧಾರಣ ಕಲೆಗೆ ತಲೆಬಾಗಲೇಬೇಕಾಗುತ್ತದೆ.

'ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು' ಎಂಬ ನೀತಿಸಿದ್ಧಾಂತದಂತೆ ನಂದನ ಕಾಮವನ್ನು ಹೊರಹಾಕಲು ಕಾಮವನ್ನು ಮತ್ತಷ್ಟು ಉಲ್ಬಣಗೊಳಿಸುವ ಪರಿ ಈ ಕೃತಿಯಲ್ಲಿ ಬಿತ್ತರಗೊಂಡಿದೆ. ಬುದ್ಧನ ಮೂಲಕ ಕವಿ ಈ ಸಿದ್ಧಾಂತವನ್ನು ಸಾಧಿಸಿದ್ದಾನೆ. ಕಾಮಲೋಕದಿಂದ ಎಂದೂ ಹೊರಬರಲಾಗದ ಸ್ಥಿತಿಯಲ್ಲಿದ್ದ ನಂದನನ್ನು ಕಾಮಾಸ್ತ್ರವನ್ನು ಪ್ರಯೋಗಿಸಿಯೇ ಬುದ್ಧನು ಹೊರತರುತ್ತಾನೆ. ಕೇವಲ ಆತನ ಮಡದಿಯಾದ ಸುಂದರಿಯೇ ಅತಿ ಸುಂದರಳಲ್ಲ. ಅವಳು ನೀಡುತ್ತಿರುವ ಸುಖ ಅತ್ಯಲ್ಪವಾದುದು. ಅವಳಿಗಿಂತ ಮಿಗಿಲಾದ ಸುಂದರಿಯರು ಅಪಾರವಾಗಿದ್ದಾರೆ. ಅವರು

---

೧. ಮನುಸ್ಮೃತಿ, ಅಧ್ಯಾಯ-೨, ಶ್ಲೋಕ-೯೪

ನೀಡುವ ಸುಖ ಎಲ್ಲೆ ಮೀರಿದ್ದು ಎಂಬ ಆಮಿಷವನ್ನು ತನ್ನ ಶಿಷ್ಯನ ಮೂಲಕ ಒಡ್ಡಿಸಿದ ಬುದ್ಧನು ಪುಷ್ಪಕವಿಮಾನದಲ್ಲಿ ನಂದನನ್ನು ಇಂದ್ರನ ನಂದನವನಕ್ಕೆ ಕರೆದೊಯ್ಯುವಂತೆ ಮಾಡಿ ಸ್ವರ್ಗದರ್ಶನ ಮಾಡಿಸುತ್ತಾನೆ. ಅಲ್ಲಿನ ಅಪ್ಸರೆಯರ ಸೌಂದರ್ಯವನ್ನು ಪರಿಚಯಿಸುತ್ತಾನೆ. ಅವರ ಸೌಂದರ್ಯಕ್ಕೆ ಮಾರುಹೋಗುವಂತೆ ನಂದನ ಮನಸ್ಸನ್ನು ಪ್ರಚೋದಿಸುತ್ತಾನೆ. ಅಂತಹ ಸುಖವನ್ನು ಪಡೆಯಬೇಕಾದರೆ ತಾನು ಉಪದೇಶಿಸುವ ಮಾರ್ಗವನ್ನು ಅನುಸರಿಸುವಂತೆ ಪ್ರೇರೇಪಿಸುತ್ತಾನೆ. ನಂದನು ಇದುವರೆಗೆ ತನ್ನ ಧರ್ಮಪತ್ನಿಯಾದ ಸುಂದರಿಯಲ್ಲಿ ಪಡೆದಿದ್ದ ಸುಖಕ್ಕಿಂತಲೂ ಅಧಿಕ ಸುಖ ಈ ಅಪ್ಸರೆಯರ ಲೋಕದಲ್ಲಿ ಸಿಗುವುದು ನಿಶ್ಚಿತವೆಂದು ದೃಢಪಡಿಸುತ್ತಾನೆ. ನಂದನಿಗೆ ಅಪ್ಸರೆಯರ ಲೋಕವೇ ಪರಮಪ್ರಿಯವೆನಿಸುತ್ತದೆ. ಅವನ ಮೈ ಕಾಮದಿಂದ ಕಂಪಿಸುತ್ತದೆ. ಬಲಿಪೀಠದಲ್ಲಿ ಇಟ್ಟ ಆಹಾರಕ್ಕೆ ಆಮಿಷಗೊಂಡು ಆತುರದಿಂದ ಅರಸಿ ಬರುವ ಪ್ರಾಣಿಯಂತೆ ನಂದನು ಅಪ್ಸರೆಯರ ಸೌಂದರ್ಯದಿಂದ ಆಕರ್ಷಿತನಾಗುತ್ತಾನೆ. ಕ್ಷಣಕಾಲದಲ್ಲಿ ನಂದನ ಮನಸ್ಸು ಸುಂದರಿಯಿಂದ ವಿಚಲಿತವಾಗುತ್ತದೆ. ಇದೇ ಸಂದರ್ಭವನ್ನು ಬುದ್ಧನ ಶಿಷ್ಯನು ಸದುಪಯೋಗಪಡಿಸಿಕೊಳ್ಳುತ್ತಾನೆ. ಈ ಅಪ್ಸರಲೋಕದ ಸುಖವನ್ನು ಶಾಶ್ವತವಾಗಿ ಸವಿಯಬೇಕಾದರೆ ಕ್ಷಣಕಾಲದ ಸುಖ ನೀಡುವ ಈ ಮರ್ತ್ಯಲೋಕದಿಂದ ಹೊರಬರಬೇಕೆಂದು ಬುದ್ಧನು ನಂದನಿಗೆ ತಾಕೀತು ಮಾಡಿಸುತ್ತಾನೆ. ಅದಕ್ಕಾಗಿ ಇಂದ್ರಿಯಗಳನ್ನು ನಿಗ್ರಹಿಸಿ, ಮನಸ್ಸನ್ನು ಏಕಾಗ್ರತೆಗೊಳಿಸಿ, ಕಠಿಣವಾದ ತಪಸ್ಸನ್ನು ಮಾಡಬೇಕೆಂದು ಉಪದೇಶಕೊಡಿಸುತ್ತಾನೆ. ಈಗ ಸಿಗುತ್ತಿರುವ ಅಲ್ಪಸುಖಕ್ಕಿಂತ ಅಧಿಕ ಸುಖ ಸಿಗಬೇಕಾದರೆ 'ಸಾಧನೆ' ಬಹುಮುಖ್ಯವೆಂದು ಸಾರಿಸುತ್ತಾನೆ. ಕೊನೆಗೂ ನಂದನನ್ನು ಭಿಕ್ಷುವಾಗಿ ಪರಿವರ್ತಿಸುತ್ತಾನೆ. ಕಾವಿವಸ್ತ್ರಗಳನ್ನುಡಿಸುತ್ತಾನೆ. ತಪಸ್ಸಿನ ಕ್ರಮಗಳನ್ನು ಹೇಳಿಸಿಕೊಡುತ್ತಾನೆ. ಹೀಗೆ ಬುದ್ಧನು, ಅನೇಕ ಏಳು-ಬೀಳುಗಳ ಸಾಗಾಟದಲ್ಲಿ ನಂದನನ್ನು ಕೊಂಡೊಯ್ಯುವಂತೆ ಮಾಡಿಸಿ ಕಾಮಮುಕ್ತನನ್ನಾಗಿ ಮಾಡಿಸಿ, ಮೋಕ್ಷಸಾಧನೆಗೆ ಅಣಿಗೊಳಿಸುತ್ತಾನೆ. ಜೊತೆಗೆ ಅವನ ಪ್ರಿಯ ಮಡದಿಯಾಗಿದ್ದ ಸುಂದರಿಯನ್ನೂ, ಆಕೆಯ ಪರಿಚಾರಕ ವರ್ಗದವರೆಲ್ಲರನ್ನೂ ಮೋಕ್ಷದ ಅನುಗಾಮಿಗಳನ್ನಾಗಿ ಮಾಡಿಸುತ್ತಾನೆ.

ಅಶ್ವಘೋಷನು ಸುಂದರವಾದ ಕಾವ್ಯದ ಮೂಲಕ ಅಧ್ಯಾತ್ಮ ತತ್ತ್ವವನ್ನು ಸರಳವಾಗಿ ಬೋಧಿಸುತ್ತಾನೆ. ಜೊತೆಜೊತೆಗೆ ಜೀವನದ ಪರಮಮೌಲ್ಯಗಳನ್ನು ಹೃದಯಂಗಮವಾಗಿ ಬಿತ್ತರಿಸಿದ್ದಾನೆ. ಈ ಎಲ್ಲ ಮೌಲ್ಯಗಳಿಗೆ ನೀತಿಬೋಧನೆಯ ಲೇಪನವನ್ನು ಮಾಡಿದ್ದಾನೆ. ಸಾರತಮವಾದ ಅರಿವನ್ನು ಮೂಡಿಸಿದ್ದಾನೆ. ಜೀವನದಲ್ಲಿ ಅವಶ್ಯವಾಗಿ ಗಳಿಸಬೇಕಾದ ಧ್ಯೇಯ-ಆದರ್ಶಗಳನ್ನು ಸೂಚ್ಯವಾಗಿ, ವಾಚ್ಯವಾಗಿ ತಿಳಿಸಿದ್ದಾನೆ. ಇವನ ಮೌಲ್ಯಯುತ ಸಂದೇಶಗಳಲ್ಲಿ ಅರ್ಥವಿದೆ, ಧರ್ಮವಿದೆ, ನೀತಿಯಿದೆ, ಆದೇಶವಿದೆ, ಉಪದೇಶವಿದೆ, ವೈರಾಗ್ಯವಿದೆ. ಉದಾತ್ತವಾದ ತತ್ತ್ವಪ್ರತಿಪಾದನೆಯಿದೆ. ಈಗಿನ ಜೀವನಮೌಲ್ಯಗಳು ಮುಂದಿನ ಪೀಳಿಗೆಗೆ ದಾರಿದೀಪಗಳಾಗಿವೆ.

ಸೂಕ್ತಿರೂಪದಲ್ಲಿ ಪ್ರಸ್ತುತಗೊಂಡಿರುವ ಜೀವನವಹೌಲ್ಯಗಳು ಪಾಂಡಿತ್ಯಪೂರ್ಣವಾಗಿವೆ. ಕವಿಯ ಸರಳವಾದ ವಿದ್ವತ್ತು, ಅಪೂರ್ವ ಕಲಾಪ್ರಜ್ಞೆ ವಿಪುಲ ಶಬ್ದಭಂಡಾರ, ಚಿತ್ತಾಕರ್ಷಕವಾದ ರಸನಿರೂಪಣೆ ಸಹೃದಯಾಸ್ವಾದಕ್ಕೆ ಪುಷ್ಟಿ ನೀಡಿವೆ. ಅವನ ಮಾತುಗಳು ಸಾರ್ವಕಾಲಿಕ ಉಪದೇಶಗಳಾಗಿವೆ. ಸೂಕ್ತಿಸಹಿತವಾಗಿ ಕವಿಯು ಜಗತ್ತಿಗೆ ನೀಡಿರುವ ಮೌಲ್ಯಗಳನ್ನು ಹೀಗೆ ಅರಿಯಬಹುದಾಗಿದೆ:

ನಿಯತಂ ಭವಿಷ್ಯತಿ ಪರತ್ರ ಭವದಪಿ ನ ಭೂತಮಪ್ಯಥೋ ।
ಕರ್ಮಫಲಮಪಿ ಚ ಲೋಕಗತಿರ್ನಿಯತೇತಿ ದರ್ಶನಮವಾಪ ಸಾಧು ಚ ॥[೧]

'ಭೂತ, ಭವಿಷ್ಯತ್ತು ಮತ್ತು ವರ್ತಮಾನಗಳಲ್ಲಿ ಕರ್ಮಫಲವು ನಿಶ್ಚಿತವಾಗಿರುತ್ತದೆ. ಅದಕ್ಕನುಸಾರವಾಗಿಯೇ ಜೀವಿಗಳ ಬದುಕು ನಿಶ್ಚಯವಾಗುತ್ತದೆ' ಎಂಬ ಯೋಗ್ಯವಾದ ದಾರ್ಶನಿಕ ಜ್ಞಾನ ಗೌತಮನಿಗೆ ಇತ್ತು.

ಸಾಧಾರಣಾತ್ ಸ್ವಪ್ನನಿಭಾದಸಾರಾಲ್ಲೋಲಂ ಮನಃ ಕಾಮಸುಖಾನ್ನಿಯಚ್ಛ ।
ಹವ್ಯೈರಿವಾಗ್ನೇಃ ಪವನೇರಿತಸ್ಯ ಲೋಕಸ್ಯ ಕಾಮೈರ್ನ ಹಿ ತೃಪ್ತಿರಸ್ತಿ ॥[೨]

"ಸ್ವಪ್ನದಂತೆ ಸಾರಹೀನವೂ, ಸರ್ವಸಾಧಾರಣವೂ ಆದ ವಿಷಯೋಪಭೋಗದ ಕಡೆ ಸೆಳೆಯುತ್ತಿರುವ ನಿನ್ನ ಚಂಚಲ ಮನಸ್ಸನ್ನು ನಿಯಂತ್ರಿಸಿಕೋ. ಏಕೆಂದರೆ ಗಾಳಿಯಿಂದ ಪ್ರೇರೇಪಿತವಾದ ಬೆಂಕಿಗೆ ತುಪ್ಪ ಸುರಿದಂತೆಲ್ಲ ಮತ್ತೆ ಮತ್ತೆ ಧಗಧಗಿಸುವುದೇ ಹೊರತು ತಣ್ಣಗಾಗುವುದಿಲ್ಲ. ಹಾಗೆ ಭೋಗಿಸಿದಷ್ಟೂ ಕಾಮ ಮತ್ತೇರುವುದೇ ಹೊರತು ಶಮನವಾಗುವುದಿಲ್ಲ" ಎಂಬ ಸೂಕ್ತಿಯಲ್ಲಿ ಕಾಮದ ಪರಾಕಾಷ್ಠೆಯ ತೀವ್ರತೆ ವ್ಯಕ್ತವಾಗಿದೆ.

ಶ್ರದ್ಧಾಧನಂ ಶ್ರೇಷ್ಠತಮಂ ಧನೇಭ್ಯಃ ಪ್ರಜ್ಞಾರಸಸ್ತೃಪ್ತಿಕರೋ ರಸೇಭ್ಯಃ ।
ಪ್ರಧಾನಮಧ್ಯಾತ್ಮಸುಖಂ ಸುಖೇಭ್ಯೋಽವಿದ್ಯಾರತಿರ್ದುಃಖತಮಾರತಿಭ್ಯಃ ॥[೩]

"ಎಲ್ಲ ವಿಧವಾದ ಐಶ್ವರ್ಯಕ್ಕಿಂತ ಶ್ರದ್ಧೆ ಎಂಬ ಐಶ್ವರ್ಯವೇ ಶ್ರೇಷ್ಠವಾದುದು. ಎಲ್ಲ ವಿಧವಾದ ರಸಕ್ಕಿಂತ ಪ್ರಜ್ಞಾರಸವೇ ತೃಪ್ತಿಕರವಾದುದು. ಎಲ್ಲ ವಿಧವಾದ ಸುಖಕ್ಕಿಂತ ಆಧ್ಯಾತ್ಮಸುಖವೇ ಪ್ರಧಾನವಾದುದು. ಎಲ್ಲ ವಿಧವಾದ ದುಃಖಕ್ಕಿಂತಲೂ ಅವಿದ್ಯಾರೂಪವಾದ ದುಃಖವೇ ಅತ್ಯಂತ ದುಃಖಕರವಾದುದು" ಎಂಬ ಉಕ್ತಿಯಲ್ಲಿ ಸರ್ವೋತ್ಕೃಷ್ಟ ಮೌಲ್ಯವನ್ನು ಪರಿಚಯ ಮಾಡಿಕೊಟ್ಟಿದ್ದಾನೆ.

ಹಿತಸ್ಯ ವಕ್ತಾ ಪ್ರವರಃ ಸುಹೃದ್ಭ್ಯೋ ಧರ್ಮಾಯ ಖೇದೋ ಗುಣವಾನ್ ಶ್ರಮೇಭ್ಯಃ ।
ಜ್ಞಾನಾಯ ಕೃತ್ಯಂ ಪರಮಂ ಕ್ರಿಯಾಭ್ಯಃ ಕಿಮಿಂದ್ರಿಯಾಣಾಮುಪಗಮ್ಯ ದಾಸ್ಯಮ್ ॥[೪]

"ಹಿತವನ್ನು ಹೇಳುವವರು ಗೆಳೆಯರಲ್ಲಿ ಶ್ರೇಷ್ಠರು. ಧರ್ಮಸಾಧನೆಗಾಗಿ ಪಡುವ ಶ್ರಮವೇ ಸಾರ್ಥಕವಾದುದು. ಜ್ಞಾನಾರ್ಜನೆಗಾಗಿ ಮಾಡುವ ಕಾರ್ಯವೇ ಎಲ್ಲಾ

---

೧. ಸೌಂದರನಂದ, ಸರ್ಗ-೨, ಶ್ಲೋಕ-೨೬
೨. ಸೌಂದರನಂದ, ಸರ್ಗ-೫, ಶ್ಲೋಕ-೧೨
೩. ಸೌಂದರನಂದ, ಸರ್ಗ-೫, ಶ್ಲೋಕ-೧೩
೪. ಸೌಂದರನಂದ, ಸರ್ಗ-೫, ಶ್ಲೋಕ-೧೫

ಕಾರ್ಯಗಳಿಗಿಂತ ಉತ್ತಮ. ಈ ಶ್ರೇಷ್ಠ ಸಾಧನೆಗಳನ್ನು ಬಿಟ್ಟು ಇಂದ್ರಿಯಗಳಿಗೆ ದಾಸನಾಗುವುದರಿಂದ ಏನು ಪ್ರಯೋಜನ?" ಎಂಬ ಸಂದೇಶದಲ್ಲಿ ಮಾನವ ಅವಶ್ಯವಾಗಿ ಮಾಡಬೇಕಾದ ಉತ್ತಮ ಕಾರ್ಯಗಳನ್ನು ನಿರೂಪಿಸಲಾಗಿದೆ.

ಜರಾಸಮಾ ನಾಸ್ತ್ಯಮೃಜಾ ಪ್ರಜಾನಾಂ ವ್ಯಾಧೇಃ ಸಮೋ ನಾಸ್ತಿ ಜಗತ್ಯನರ್ಥಃ ।
ಮೃತ್ಯೋಃ ಸಮಂ ನಾಸ್ತಿ ಭಯಂ ಪೃಥಿವ್ಯಾಮೇತತ್ತ್ರಯಂ ಖಲ್ವವಶೇಷೇನ ಸೇವ್ಯಮ್ ॥[೬]

"ಈ ಜೀವಕ್ಕೆ ಮುಪ್ಪಿಗಿಂತ ಮಲಿನವಾದದ್ದು ಮತ್ತೊಂದಿಲ್ಲ. ರೋಗಕ್ಕಿಂತ ಅನರ್ಥಕಾರಿಯಾದದ್ದು ಇನ್ನೊಂದಿಲ್ಲ. ಮರಣಕ್ಕೆ ಸಮನಾದ ಭಯಂಕರವಾದದ್ದು ಯಾವುದೂ ಇಲ್ಲ. ಈ ಮೇಲಿನಂತೆ ತಿಳಿಸಿರುವ ಮೂರನ್ನೂ ಅನಿವಾರ್ಯವಾಗಿ ಎಲ್ಲರೂ ಅನುಭವಿಸಲೇಬೇಕಾಗಿದೆ" ಎಂಬ ಸಂದೇಶದಲ್ಲಿ ಹುಟ್ಟಿನಿಂದ ಹಿಡಿದು ಸಾಯುವವರೆಗೆ ನಿಶ್ಚಯವಾಗಿ ಅನುಭವಿಸಬೇಕಾದವುಗಳನ್ನು ವಿವರಿಸಲಾಗಿದೆ.

ಸ್ನೇಹೇನ ಕಶ್ಚಿನ್ನ ಸಮೋಽಸ್ತಿ ಪಾಶಃ ಸ್ರೋತೋ ನ ತೃಷ್ಣಾಸಮಮಸ್ತಿ ಹಾರಿ ।
ರಾಗಾಗ್ನಿನಾ ನಾಸ್ತಿ ಸಮಸ್ತಥಾಗ್ನಿಸ್ತಚ್ಚೇತ್ತ್ರಯಂ ನಾಸ್ತಿ ಸುಖಂ ಚ ತೇಽಸ್ತಿ ॥[೭]

"ಸ್ನೇಹಕ್ಕೆ ಸಮನಾದ ಬಂಧನ ಇನ್ನೊಂದಿಲ್ಲ. ಆಸೆಗಿಂತ ಕೊಚ್ಚಿ ಒಯ್ಯುವ ಪ್ರವಾಹ ಮತ್ತೊಂದಿಲ್ಲ. ಅನುರಾಗಕ್ಕೆ ಸಮನಾದ ಸುಡುವ ಬೆಂಕಿ ಯಾವುದೂ ಇಲ್ಲ. ಸ್ನೇಹ-ಆಸೆ-ರಾಗ ಈ ಮೂರೂ ಇಲ್ಲದಿದ್ದರೇನೇ ನಿನ್ನ ಜೀವನ ಸುಖಮಯವಾಗಿರುತ್ತದೆ" ಎಂಬಲ್ಲಿ ಸುಖಜೀವನಕ್ಕೆ ಅಡ್ಡಿಯಾಗುವ ಅಂಶಗಳನ್ನು ವಿವರಿಸಲಾಗಿದೆ.

ಯಥೋಲ್ಕಾ ಹಸ್ತಸ್ಥಾ ದಹತಿ ಪವನಪ್ರೇರಿತಶಿಖಾ
ಯಥಾ ಪಾದಾಕ್ರಾಂತೋ ದಶತಿ ಭುಜಗಃ ಕ್ರೋಧರಭಸಃ ।
ಯಥಾ ಹಂತಿ ವ್ಯಾಘ್ರಃ ಶಿಶುರಪಿ ಗೃಹೀತೋ ಗೃಹಗತಃ
ಯಥಾ ಸ್ತ್ರೀಸಂಸರ್ಗೋ ಬಹುವಿಧಮನರ್ಥಾಯ ಭವತಿ ॥[೮]

"ಹೇಗೆ ಕೈಯ್ಯಲ್ಲಿನ ದೀವಟಿಗೆಯ ಜ್ವಾಲೆಯು ಗಾಳಿಯಿಂದ ಪ್ರೇರೇಪಣೆಗೊಂಡು ಕೈಯನ್ನೇ ಸುಡುವುದೋ, ಹೇಗೆ ಕಾಲಿನಿಂದ ತುಳಿಯಲ್ಪಟ್ಟ ಸರ್ಪವು ಕೋಪದಿಂದ ಉಗ್ರವಾಗಿ ತುಳಿದವನನ್ನೇ ಕಚ್ಚುವುದೋ, ಮನೆಯಲ್ಲೇ ಸಾಕಿದ ಮರಿಯಾದರೂ ಹುಲಿಯು ಹೇಗೆ ಕೊಲ್ಲಲು ಸಮರ್ಥವಾಗುವುದೋ, ಅದೇ ರೀತಿ ಸ್ತ್ರೀಸಹವಾಸವು ಅನೇಕ ಅಮಂಗಳಗಳಿಗೆ ಕಾರಣವಾಗುತ್ತದೆ" – ಎಂಬಲ್ಲಿ ಅಂಗನೆಯ ಸಂಗದ ಅನಾಹುತವನ್ನು ಪ್ರತಿಪಾದಿಸಲಾಗಿದೆ.

ತದೇವಮಾಜ್ಞಾಯ ಶರೀರಮಾತುರಂ ಬಲಾನ್ವಿತೋಽಸ್ಮೀತಿ ನ ಮಂತುಮರ್ಹಸಿ ।
ಅಸಾರಮಸ್ವಂತಮನಿಶ್ಚಿತಂ ಜಗಜ್ಜಗತ್ಯನಿತ್ಯೇ ಬಲಮವ್ಯವಸ್ಥಿತಮ್ ॥[೯]

---

೬. ಸೌಂದರನಂದ, ಸರ್ಗ–೫, ಶ್ಲೋಕ–೨೭

೭. ಸೌಂದರನಂದ, ಸರ್ಗ–೫, ಶ್ಲೋಕ–೨೮

೮. ಸೌಂದರನಂದ, ಸರ್ಗ–೮, ಶ್ಲೋಕ–೬೧

೯. ಸೌಂದರನಂದ, ಸರ್ಗ–೯, ಶ್ಲೋಕ–೧೬

"ದೇಹವನ್ನು ದುಃಖಮಯವೆಂದು ತಿಳಿದೂ 'ನಾನು ಪರಾಕ್ರಮಿಯಾಗಿದ್ದೇನೆ' ಎಂದು ಭಾವಿಸಿಕೊಳ್ಳುವುದು ಯೋಗ್ಯವಲ್ಲ. ಈ ಜೀವನ ಅಸಾರ, ಅನಿತ್ಯ, ಅನಿಶ್ಚಿತ ಹಾಗೂ ದುಃಖಾಂತವಾದುದು. ಶಾಶ್ವತವಲ್ಲದ ಈ ಜೀವನದಲ್ಲಿ ಬಲ-ಪರಾಕ್ರಮಗಳೂ ಸಹ ಅಶಾಶ್ವತ" - ಎಂಬಲ್ಲಿ ಜೀವನದ ಅಮೂಲ್ಯ ಶಾಶ್ವತ ತತ್ತ್ವವನ್ನು ಮನವರಿಕೆ ಮಾಡಿಕೊಡಲಾಗಿದೆ.

ಋತುರ್ವ್ಯತೀತಃ ಪರಿವರ್ತತೇ ಪುನಃ ಕ್ಷಯಂ ಪ್ರಯಾತಃ ಪುನರೇತಿ ಚಂದ್ರಮಾಃ ।
ಗತಂ ಗತಂ ನೈವ ಸಂನಿವರ್ತತೇ ಜಲಂ ನದೀನಾಂ ಚ ನೃಣಾಂ ಚ ಯೌವನಮ್ ॥[೧೦]

"ಗತಿಸಿದ ಋತು ಮತ್ತೆ ಮರಳಿ ಬರುತ್ತದೆ. ಕ್ಷೀಣಿಸಿದ ಚಂದ್ರ ಮತ್ತೆ ಮೈದುಂಬುತ್ತಾನೆ. ಆದರೆ ಹರಿದು ಹೋದ ನದಿಯ ನೀರು ಹಾಗೂ ಮಾನವರ ತಾರುಣ್ಯ ಮತ್ತೆ ಮರಳಿ ಬರುವುದಿಲ್ಲ" - ಎಂಬ ಸುಭಾಷಿತದಿಂದ ಬದುಕಿನ ಕಟುಸತ್ಯವನ್ನು ಅನಾವರಣಗೊಳಿಸಲಾಗಿದೆ.

ನ ಕಾಮಭೋಗಾ ಹಿ ಭವಂತಿ ತೃಪ್ತಯೇ ಹವೀಂಷಿ ದೀಪ್ತಸ್ಯ ವಿಭಾವಸೋರಿವ ।
ಯಥಾ ಯಥಾ ಕಾಮಸುಖೇಷು ವರ್ತತೇ ತಥಾ ತಥೇಚ್ಛಾ ವಿಷಯೇಷು ವರ್ಧತಿ ॥[೧೧]

"ಪ್ರಜ್ವಲವಾಗಿ ಉರಿಯುವ ಬೆಂಕಿಯು ಅಧಿಕ ಆಹುತಿಗಳಿಂದಲೂ (ಹವಿಸ್ಸುಗಳಿಂದ) ಹೇಗೆ ತೃಪ್ತಿಯನ್ನು ಹೊಂದುವುದಿಲ್ಲವೋ, ಹಾಗೆಯೇ ವಿಷಯೋಪಭೋಗಗಳಿಂದ ಕಾಮದ ತೃಪ್ತಿಯು ಎಂದೂ ತಣಿಯುವುದಿಲ್ಲ. ಹೇಗೆ ಕಾಮಾದಿ ಸುಖಗಳಲ್ಲಿ ಆಸಕ್ತಿ ಹೆಚ್ಚುತ್ತಾ ಹೋಗುತ್ತದೋ ಹಾಗೆ ಇಂದ್ರಿಯಗೋಚರ ಉಪಭೋಗಗಳಲ್ಲಿ ಬಯಕೆಯು ಹೆಚ್ಚುತ್ತಲೇ ಇರುತ್ತದೆ" ಎನ್ನುವುದರಿಂದ "ಆಶಾ ಹಿ ಬಧ್ಯತೇ ಲೋಕಃ, ನ ಲೋಕಃ ಪಾರಮಾರ್ಥಿಕಃ" - "ಇಡೀ ಜಗತ್ತು ಆಸೆಯಿಂದಲೇ ಬಂಧಿತವಾಗಿದೆ. ಪಾರಮಾರ್ಥಿಕ ಚಿಂತನೆ ಕಿಂಚಿತ್ತೂ ಇಲ್ಲ" - ಎಂಬ ಸತ್ಯಸಂಗತಿಯನ್ನು ಸಾರಿದೆ.

ಇಹೈವ ಭೂತ್ವಾ ರಿಪವೋ ವಧಾತ್ಮಕಾಃ ಪ್ರಯಾಂತಿ ಕಾಲೇ ಪುರುಷಸ್ಯ ಮಿತ್ರತಾಮ್ ॥
ಪರತ್ರ ಚೈವೇಹ ಚ ದುಃಖಹೇತವೋ ಭವಂತಿ ಕಾಮಾ ನ ತು ಕಸ್ಯಚಿಚ್ಛಿವಾಃ ॥[೧೨]

"ಈ ಜಗತ್ತಿನಲ್ಲಿ ಕೆಲವು ಸಾರಿ ಹಿಂಸಾಕಾರಕರಾದ ಶತ್ರುಗಳೂ ಸಹ ಮಿತ್ರರಾಗುತ್ತಾರೆ. ಆದರೆ ಕಾಮವೆಂಬುದು ಹಾಗಲ್ಲ. ಅದು ಕೇವಲ ಈ ಲೋಕದಲ್ಲಿ ಮಾತ್ರವಲ್ಲದೆ ಪರಕಾಲದಲ್ಲಿಯೂ ದುಃಖವನ್ನುಂಟುಮಾಡುತ್ತದೆ. ವಿಷಯೋಪಭೋಗಗಳು ಎಂದೂ ಮಂಗಳದಾಯಕವಲ್ಲ" ಎಂಬ ಸೂಕ್ತಿಯಿಂದ "ಇಂದ್ರಿಯಸುಖಗಳನ್ನು ಗೆದ್ದರೆ ಮಾತ್ರ ಸಮಸ್ತವನ್ನೂ ಗೆದ್ದಂತೆ" ಎಂದು ಉಪದೇಶಿಸಲಾಗಿದೆ.

---

೧೦. ಸೌಂದರನಂದ, ಸರ್ಗ-೯, ಶ್ಲೋಕ-೨೮
೧೧. ಸೌಂದರನಂದ, ಸರ್ಗ-೯, ಶ್ಲೋಕ-೪೩
೧೨. ಸೌಂದರನಂದ, ಸರ್ಗ-೯, ಶ್ಲೋಕ-೪೭

ಮಹಚ್ಚ ರೂಪಂ ಸ್ವಣು ಹಂತಿ ರೂಪಂ ಶಬ್ದೋ ಮಹಾನ್ ಹಂತಿ ಚ ಶಬ್ದಮೂಲ್ಯಮ್ ।
ಗುರ್ವೀ ರುಜಾ ಹಂತಿ ರುಜಾಂ ಚ ಮೃದ್ವೀಂ ಸರ್ವೋ ಮಹಾನ್ ಹೇತುರಣೋರ್ವಧಾಯ ॥[೧೩]

"ಅಧಿಕರೂಪವು ಅಲ್ಪರೂಪವನ್ನು ಮರೆಮಾಚುತ್ತದೆ. ದೊಡ್ಡ ಶಬ್ದವು ಸಣ್ಣ ಶಬ್ದವನ್ನು ಅಡಗಿಸುತ್ತದೆ. ಗಂಭೀರವಾದ ರೋಗವು ಅಲ್ಪರೋಗವನ್ನು ಮುಚ್ಚುತ್ತದೆ. ಮಹತ್ತಾದವುಗಳೆಲ್ಲವೂ ಅಲ್ಪವಾದವುಗಳನ್ನು ನಾಶಪಡಿಸುತ್ತವೆ" ಎಂಬಲ್ಲಿ ಮಹತ್ತುಗಳಲ್ಲಿ ಅಣುವಸ್ತುಗಳು ಲೀನವಾಗುವುದನ್ನು ವಿವರಿಸಲಾಗಿದೆ.

ಆರ್ಜವಾಭಿಹಿತಂ ವಾಕ್ಯಂ ನ ಚ ಮಂತವ್ಯಮನ್ಯಥಾ ।
ರುಕ್ಷಮಪ್ಯಾಶಯೇ ಶುದ್ಧೇ ರುಕ್ಷತೋ ನೈತಿ ಸಜ್ಜನಃ ॥[೧೪]
ಅಪ್ರಿಯಂ ಹಿ ಹಿತಂ ಸ್ನಿಗ್ಧಮಸ್ನಿಗ್ಧಮಹಿತಂ ಪ್ರಿಯಮ್ ।
ದುರ್ಲಭಂ ತು ಪ್ರಿಯಹಿತಂ ಸ್ವಾದು ಪಥ್ಯಮಿವೌಷಧಮ್ ॥[೧೫]

"ಹಿತಕರವಾದ ಅಪ್ರಿಯ ಮಾತುಗಳಲ್ಲಿ ಮೈತ್ರೀಭಾವವಿರುತ್ತದೆ. ಅಹಿತಕರವಾದ ಪ್ರಿಯ ಮಾತು ಒರಟಾಗಿರುತ್ತದೆ. ಹಿತಕರವೂ ಮತ್ತು ಪ್ರಿಯವೂ ಆದ ಮಾತು ಸ್ವಾದಿಷ್ಟವೂ, ಗುಣಕಾರಿಯೂ ಆದ ಔಷಧದಂತೆ ದೊರೆಯುವುದು ದುರ್ಲಭ" ಎಂಬ ಉಕ್ತಿಯು ಸನಾತನ ಧರ್ಮದ ಉಪದೇಶವನ್ನು ನೆನಪಿಸುತ್ತದೆ.

ತೃಪ್ತಿರ್ನಾಸ್ತೀಂಧನೈರಗ್ನೇರ್ನಾಂಭಸಾ ಲವಣಾಂಭಸಃ ।
ನಾಪಿ ಕಾಮೈಃ ಸತೃಷ್ಣಸ್ಯ ತಸ್ಮಾತ್ ಕಾಮಾ ನ ತೃಪ್ತಯೇ ॥[೧೬]

"ಬೆಂಕಿಗೆ ಅದೆಷ್ಟು ಉರುವಲು ಸುರಿದರೂ ತೃಪ್ತಿಯಾಗುವುದಿಲ್ಲ. ಸಮುದ್ರಕ್ಕೆ ಎಷ್ಟು ನೀರು ಸುರಿದರೂ ತುಂಬುವುದಿಲ್ಲ. ಕಾಮಿಯಾದವನು ಎಷ್ಟು ಭೋಗಿಸಿದರೂ ತೃಪ್ತಿ ಸಿಗುವುದಿಲ್ಲ. ಕಾಮೋಪಭೋಗವು ಎಂದಿಗೂ ತೃಪ್ತಿದಾಯಕವಲ್ಲ" ಎಂದು ಅತಿರೇಕದ ಅನುಭವಗಳನ್ನು ದೃಷ್ಟಾಂತಗಳ ಸಹಿತ ನಿರೂಪಿಸಲಾಗಿದೆ.

ರಿರಂಸಾ ಯದಿ ತೇ ತಸ್ಮಾದಧ್ಯಾತ್ಮೇ ಧೀಯತಾಂ ಮನಃ ।
ಪ್ರಶಾಂತಾ ಚಾನವದ್ಯಾ ಚ ನಾಸ್ತ್ಯಧ್ಯಾತ್ಮಸಮಾ ರತಿಃ ॥[೧೭]

"ನೀನು ಸದಾ ಆನಂದಿಸಲು ಬಯಸುವುದಾದರೆ ಆತ್ಮ ವಿಷಯದ ಜ್ಞಾನದಲ್ಲಿ ಮನಸ್ಸನ್ನು ನೆಡು. ಏಕೆಂದರೆ ಪ್ರಶಾಂತವೂ ನಿರ್ಮಲವೂ ಆದ ಅಧ್ಯಾತ್ಮ ಜ್ಞಾನದಷ್ಟು ಪ್ರಶಸ್ತವಾದದ್ದು ಇನ್ನೊಂದಿಲ್ಲ" ಎಂದು ಅಧ್ಯಾತ್ಮದ ಗರಿಷ್ಠತೆಯನ್ನು ಸಾರಲಾಗಿದೆ.

---

೧೩. ಸೌಂದರನಂದ, ಸರ್ಗ–೧೦, ಶ್ಲೋಕ–೪೫
೧೪. ಸೌಂದರನಂದ, ಸರ್ಗ–೧೧, ಶ್ಲೋಕ–೧೫
೧೫. ಸೌಂದರನಂದ, ಸರ್ಗ–೧೧, ಶ್ಲೋಕ–೧೬
೧೬. ಸೌಂದರನಂದ, ಸರ್ಗ–೧೧, ಶ್ಲೋಕ–೩೨
೧೭. ಸೌಂದರನಂದ, ಸರ್ಗ–೧೧, ಶ್ಲೋಕ–೩೪

ನ ತತ್ರ ಕಾರ್ಯಂ ತೂರ್ಯೈಸ್ತೇ ನ ಸ್ತ್ರೀಭಿರ್ನ ವಿಭೂಷಣೈಃ ।
ಏಕಸ್ತ್ವಂ ಯತ್ರತತ್ರಸ್ಥಸ್ತಯಾ ರತ್ಯಾಭಿರಂಸ್ಯಸೇ ॥[೧೮]

"ಅಧ್ಯಾತ್ಮದಲ್ಲಿ ಆಸಕ್ತನಾದರೆ ನಿನಗೆ ನೃತ್ಯ-ಗೀತ-ವಾದ್ಯ ಬೇಡ. ಬೆಡಗಿಯರೂ ಬೇಡ. ಒಡವೆಗಳು ಬೇಡ. ನೀನು ಎಲ್ಲೇ ಇದ್ದರೂ ಸಹ ಏಕಾಂಗಿಯಾಗಿಯೇ ಅಧ್ಯಾತ್ಮರತಿಯಲ್ಲಿ ಆನಂದವನ್ನು ಅನುಭವಿಸುವೆ" ಎಂದು ನಂದನಿಗೆ ಆಧ್ಯಾತ್ಮಿಕ ವಿಷಯಕವಾದ ಪರಮಸುಖದ ಪರಿಚಯ ಮಾಡಿಕೊಡಲಾಗಿದೆ.

ಮಾನಸಂ ಬಲವತ್ ದುಃಖಂ ತರ್ಷೇ ತಿಷ್ಠತಿ ತಿಷ್ಠತಿ ।
ತಂ ತರ್ಷಂ ಛಿಂಧಿ ದುಃಖಂ ಹಿ ತೃಷ್ಣಾ ಚಾಸ್ತಿ ಚ ನಾಸ್ತಿ ಚ ॥[೧೯]

"ಎಲ್ಲಿಯವರೆಗೆ ಮನಸ್ಸಿನಲ್ಲಿ ಬಯಕೆ ತುಂಬಿರುತ್ತದೆಯೋ ಅಲ್ಲಿಯವರೆಗೆ ಮಾನಸಿಕ ದುಃಖವು ಇದ್ದೇ ಇರುತ್ತದೆ. ಆದ್ದರಿಂದ ಆ ಬಯಕೆಯನ್ನು ಬಿಡು. ಏಕೆಂದರೆ ದುಃಖ ಮತ್ತು ಬಯಕೆ ಒಂದರೊಡನೆ ಒಂದು ಸೇರಿಕೊಂಡೇ ಬರುತ್ತವೆ. ಅಥವಾ ಬರದೆಯೂ ಇರುತ್ತವೆ" ಎಂಬ ಈ ಸಂದೇಶದ ಮೂಲಕ "ಆಸೆಯೇ ದುಃಖಕ್ಕೆ ಮೂಲವಾಗುತ್ತದೆ. ಆಸೆಯೇ ದುಃಖವೂ ಆಗುತ್ತದೆ. ಆಸೆಯಿಲ್ಲದಿದ್ದರೆ ದುಃಖವೇ ಇರುವುದಿಲ್ಲ. ಆದ್ದರಿಂದ ಆಸೆಯನ್ನು ಬಿಡು. ನಿತ್ಯಸುಖಿಯಾಗು" ಎಂದು ಉಪದೇಶಿಸಲಾಗಿದೆ.

ಅಥ ಸ್ಮೃತಿಕವಾಟೇನ ಪಿಧಾಯೇಂದ್ರಿಯಸಂವರಮ್ ।
ಭೋಜನೇ ಭವ ಮಾತ್ರಾಜ್ಞೋ ಧ್ಯಾನಾಯಾನಾಮಯಾಯ ಚ ॥[೨೦]

"ಸ್ಮೃತಿ ಎಂಬ ಬಾಗಿಲಿನ ಮೂಲಕ ಇಂದ್ರಿಯರೂಪವಾದ ಕರ್ಮಗಳು ಒಳ ನುಸುಳದಂತೆ ತಡೆಗಟ್ಟಿ, ಧ್ಯಾನ ಮತ್ತು ಆರೋಗ್ಯಕ್ಕಾಗಿ ಮಾತ್ರ ಭೋಜನವನ್ನು ಸೀಮಿತಗೊಳಿಸು" ಎಂಬ ಉಪದೇಶದಲ್ಲಿ ಊಟ ಮಾಡುವುದು ಇಂದ್ರಿಯಗಳ ಚಟಕ್ಕಲ್ಲ; ಅದು ಧ್ಯಾನ ಮಾಡಲು ಹಾಗೂ ಆರೋಗ್ಯವನ್ನು ಕಾಪಾಡಿಕೊಳ್ಳಲು ಮಾತ್ರ ಎಂಬ ಸಂದೇಶ ಅಡಗಿದೆ.

ಬಾಹ್ಯ ವಿಷಯೇಂದ್ರಿಯಗಳನ್ನು ಜಯಿಸಲು ಯೋಗ್ಯವಾದ ಪ್ರಸ್ಥಾನವನ್ನು ಅನುಸರಿಸುವ ಸಾಧಕನು ದೇವಲೋಕಪ್ರಾಪ್ತಿಗಿಂತಲೂ ಅಧಿಕವಾದ ಮನಶ್ಶಾಂತಿಯನ್ನು ಪಡೆಯುತ್ತಾನೆ.

ಪ್ರಾಣಾಪಾನೌ ನಿಗೃಹ್ಣಾತಿ ಗ್ಲಾನಿನಿದ್ರೇ ಪ್ರಯಚ್ಛತಿ ।
ಕೃತೋ ಹ್ಯತ್ಯರ್ಥಮಾಹಾರೋ ವಿಹಂತಿ ಚ ಪರಾಕ್ರಮಮ್ ॥[೨೧]

---

೧೮. ಸೌಂದರನಂದ, ಸರ್ಗ-೧೧, ಶ್ಲೋಕ-೩೫

೧೯. ಸೌಂದರನಂದ, ಸರ್ಗ-೧೧, ಶ್ಲೋಕ-೩೬

೨೦. ಸೌಂದರನಂದ, ಸರ್ಗ-೧೪, ಶ್ಲೋಕ-೧

೨೧. ಸೌಂದರನಂದ, ಸರ್ಗ-೧೪, ಶ್ಲೋಕ-೨

"ಆಹಾರವನ್ನು ಅತಿಯಾಗಿ ಸೇವಿಸಿದರೆ ಅದರಿಂದ ಪ್ರಾಣ ಮತ್ತು ಅಪಾನವೆಂಬ ಪ್ರಾಣವಾಯುಗಳಲ್ಲಿ ಪ್ರತಿರೋಧ ಉಂಟಾಗುತ್ತದೆ. ಆಯಾಸ ತಲೆದೋರುತ್ತದೆ. ನಿದ್ರೆ ಬರುತ್ತದೆ ಹಾಗೂ ಪರಾಕ್ರಮವು ನಾಶವಾಗುತ್ತದೆ" ಎಂಬಲ್ಲಿ ಅತಿ ಸರ್ವತ್ರ ವರ್ಜಯೇತ್, ಅಜೀರ್ಣಂ ಭೋಜನಂ ವಿಷಂ ಭವತಿ ಎಂಬ ನಿಶ್ಚಿತ ಸಿದ್ಧಾಂತವನ್ನು ಪ್ರತಿಪಾದಿಸಲಾಗಿದೆ.

ಯಥಾ ಚಾತ್ಯರ್ಥಮಾಹಾರಃ ಕೃತೋಽನರ್ಥಾಯ ಕಲ್ಪತೇ ।
ಉಪಯುಕ್ತಸ್ತಥಾತ್ಯಲ್ಪೋ ನ ಸಾಮರ್ಥ್ಯಾಯ ಕಲ್ಪತೇ ॥[೨೨]

"ಅತಿಯಾದ ಆಹಾರ ಸೇವನೆಯು ಅನರ್ಥವನ್ನುಂಟುಮಾಡುವಂತೆ ಅತಿ ಮಿತವಾದ ಆಹಾರಸೇವನೆಯೂ ಶಕ್ತಿಯನ್ನು ಕುಂದಿಸುತ್ತದೆ." ಅತಿ–ಮಿತಿಗಳನ್ನು ಹಿಡಿತದಲ್ಲಿಟ್ಟುಕೊಂಡು ಹಿತ–ಮಿತಗಳನ್ನು ಜೀವನದಲ್ಲಿ ಪಾಲಿಸುವುದರಿಂದ ಯೋಜಿತ ಗುರಿ ತಲುಪಲು ಸಾಧ್ಯ" ಎಂಬ ಸರಳ ಉಪದೇಶ ಇಲ್ಲಿದೆ.

ಯಥಾ ಭಾರೇಣ ನಮತೇ ಲಘುನೋನ್ನಮತೇ ತುಲಾ ।
ಸಮಾ ತಿಷ್ಠತಿ ಯುಕ್ತೇನ ಭೋಜ್ಯೇನೇಯಂ ತಥಾ ತನುಃ ॥[೨೩]

"ತಕ್ಕಡಿಯು ಭಾರವಾದರೆ ಬಗ್ಗುತ್ತದೆ. ಹಗುರವಾದರೆ ಮೇಲೇರುತ್ತದೆ. ಸರಿಯಾಗಿದ್ದರೆ ಸಮವಾಗಿ ನಿಲ್ಲುತ್ತದೆ. ಹಾಗೆಯೇ ಅಧಿಕ, ಕಡಮೆ ಹಾಗೂ ಸಂತುಲಿತವಾದ ಆಹಾರಸೇವನೆಯು ಶರೀರವನ್ನು ಭಾರ, ಕ್ಷೀಣ ಹಾಗೂ ಸಂತುಲಿತ ಸ್ಥಿತಿಯಲ್ಲಿಡುತ್ತದೆ." ಆಹಾರದಲ್ಲಿ ಏರು–ಪೇರಾಗುವುದನ್ನು ತಡೆಗಟ್ಟಿದರೆ ಹೇಗೆ ಆರೋಗ್ಯದಲ್ಲಿ ಸ್ಥಿರತೆ ಕಂಡುಬರುವುದೋ ಹಾಗೂ ಜೀವನದಲ್ಲಿ ಕಷ್ಟ–ಸುಖಗಳನ್ನು ಸಮಸ್ಥಿತಿಯಲ್ಲಿ ಅನುಭವಿಸಿದರೆ ಮೋಕ್ಷಸುಖ ಸಿದ್ಧಿಸುತ್ತದೆ.

ತೃಪ್ತಿಂ ವಿತ್ತಪ್ರಕರ್ಷೇಣ ಸ್ವರ್ಗಾವಾಪ್ತ್ಯಾ ಕೃತಾರ್ಥತಾಮ್ ।
ಕಾಮೇಭ್ಯಶ್ಚ ಸುಖೋತ್ಪತ್ತಿಂ ಯಃ ಪಶ್ಯತಿ ಸ ನಶ್ಯತಿ ॥[೨೪]

"ಹಣವನ್ನು ಗಳಿಸುವುದರಿಂದ ಸಂತೋಷ ಲಭಿಸುತ್ತದೆ; ಸ್ವರ್ಗಲೋಕಕ್ಕೆ ಹೋಗುವುದರಿಂದ ಧನ್ಯತೆ ಲಭಿಸುತ್ತದೆ; ಹಾಗೂ ಕಾಮೋಪಭೋಗದಿಂದ ಸುಖ ಸಿಗುತ್ತದೆ ಎಂದು ಯಾರು ಭಾವಿಸುತ್ತಾರೋ ಅವರು ಖಂಡಿತ ನಾಶವಾಗುತ್ತಾರೆ." ಅಂದರೆ ಕೇವಲ ಹಣಸಂಪಾದನೆ ಸುಖ ಕೊಡುವುದಿಲ್ಲ. ಕೇವಲ ಸ್ವರ್ಗ ಕೃತಾರ್ಥತೆಯ ದ್ಯೋತಕವಲ್ಲ. ಕೇವಲ ವಿಷಯೇಂದ್ರಿಯಗಳ ಭೋಗ ಸುಖಕಾರಕವಲ್ಲ ಎಂಬ ಸಂದೇಶ ಗ್ರಾಹ್ಯವಾಗಿದೆ.

ತಸ್ಮಾದಕುಶಲಂ ತ್ಯಕ್ತ್ವಾ ಕುಶಲಂ ಧ್ಯಾತುಮರ್ಹಸಿ ।
ಯತ್ತೇ ಸ್ಯಾದಿಹ ಚಾರ್ಥಾಯ ಪರಮಾರ್ಥಸ್ಯ ಚಾಪ್ತಯೇ ॥[೨೫]

---

೨೨. ಸೌಂದರನಂದ, ಸರ್ಗ–೧೪, ಶ್ಲೋಕ–೩

೨೩. ಸೌಂದರನಂದ, ಸರ್ಗ–೧೪, ಶ್ಲೋಕ–೫

೨೪. ಸೌಂದರನಂದ, ಸರ್ಗ–೧೫, ಶ್ಲೋಕ–೧೦

೨೫. ಸೌಂದರನಂದ, ಸರ್ಗ–೧೫, ಶ್ಲೋಕ–೧೯

"ಆದ್ದರಿಂದ ಕೆಟ್ಟ ವಿಚಾರಗಳನ್ನು ಬಿಟ್ಟು ಒಳ್ಳೆಯ ವಿಚಾರಗಳನ್ನು ಕುರಿತು ಧ್ಯಾನ ಮಾಡು. ಅದು ನಿನಗೆ ಇಹದಲ್ಲಿ ಲಾಭವನ್ನೂ, ಪರದಲ್ಲಿ ಪರಮಾರ್ಥವನ್ನೂ ಪಡೆಯಲು ಅನುಕೂಲವಾಗುತ್ತದೆ" ಎಂಬ ಸಂದೇಶದಲ್ಲಿ ಕೃತ್ಯಾಕೃತ್ಯ ವಿಚಾರಗಳಿಂದ ಲಾಭಾಲಾಭ ಪ್ರಯೋಜನಗಳ ಸಿದ್ಧಿಯನ್ನು ವಿವರಿಸಲಾಗಿದೆ.

ಹೀಗೆ ಅಶ್ವಘೋಷನು ಈ ಗ್ರಂಥದ ಆರಂಭದಿಂದ ಅಂತ್ಯದವರೆಗೂ ಜೀವನದ ಅತ್ಯಮೂಲ್ಯವಾದ ಸಂದೇಶಗಳನ್ನು ದಾಖಲಿಸಿದ್ದಾನೆ. ಮಾನವಜೀವನ ಮರ್ತ್ಯವಾದುದು. ಅದನ್ನು ಅಮರ್ತ್ಯಗೊಳಿಸಬೇಕಾದರೆ ಈ ಮೌಲ್ಯಯುತ ಸಂದೇಶಗಳನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಬದುಕು ಏಕೆ ದುಃಖಮಯವಾಗುತ್ತದೆ ಹಾಗೂ ಅದನ್ನು ಹೇಗೆ ಸುಖಮಯವನ್ನಾಗಿ ಪರಿವರ್ತಿಸಬಹುದು, ಹುಟ್ಟು ಸಾವುಗಳನ್ನು ದಾಟಿ ಮುನ್ನಡೆದರೆ ಹೇಗೆ ಶಾಶ್ವತ ಸುಖದಲ್ಲಿ ತೇಲಾಡಬಹುದು–ಎಂಬ ಸಂಗತಿಗಳನ್ನು ಅತ್ಯಂತ ವಿದಗ್ಧತೆಯಿಂದ ನಿರೂಪಿಸಿದ್ದಾನೆ. ಆದ್ದರಿಂದ ಅಶ್ವಘೋಷನ ಈ ಮೇರುಕೃತಿಯು ಸಾರ್ವತ್ರಿಕವಾಗಿ ಸದಾಕಾಲವೂ ಮಾರ್ಗದರ್ಶಿಯಾಗಿ ಸ್ಥಿರವಾಗಿ ನಿಂತಿದೆ. ಸಹೃದಯರ ಮನಸ್ಸನ್ನು ಸದಾಕಾಲವೂ ರಂಜಿಸುತ್ತಿದೆ. ಸಂಸ್ಕೃತ ಸಾಹಿತ್ಯ ಇತಿಹಾಸದಲ್ಲಿ ಇಂತಹ ಅಮೂಲ್ಯ ಕೃತಿಯು ಮತ್ತೊಂದಿಲ್ಲ ಎಂದರೆ ಅತಿಶಯೋಕ್ತಿ ಆಗದು. ಇಂತಹ ಪರಮಶ್ರೇಷ್ಠ ಕೃತಿಯನ್ನು ನಮಗೆ ನೀಡಿದ ಮಹಾಕವಿ ಅಶ್ವಘೋಷನಿಗೆ ನಾವು ಕೃತಜ್ಞರಾಗಿರಬೇಕು.

❑❑❑

ಮಹಾಕಾವ್ಯಗಳಲ್ಲಿ ಸ್ತ್ರೀ

– ಎಚ್.ಎಸ್. ರುಕ್ಮಿಣಿ

ಕನ್ನಡ ಸಾಹಿತ್ಯ ಚರಿತ್ರೆಯು ತನ್ನದೇ ಆದ ವೈಶಿಷ್ಟ್ಯಪೂರ್ಣ ಸಾಹಿತ್ಯಿಕ ಹಿನ್ನೆಲೆಯನ್ನು ಒಳಗೊಂಡಿದೆ. ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಹಲವಾರು ಶ್ರೇಷ್ಠ ಕೃತಿಗಳು ಹುಟ್ಟಿರುವುದನ್ನು ಕಾಣಬಹುದು. ಭಾರತೀಯ ಸಂಸ್ಕೃತಿಯ ಪ್ರತೀಕವೆಂಬಂತೆ ಹಲವಾರು ಕೃತಿಗಳು ತಮ್ಮದೇ ಆದ ವಸ್ತುವಿಶಿಷ್ಟತೆಯ ಮೂಲಕ ಸಮಾಜಕ್ಕೆ ಅತ್ಯದ್ಭುತ ಕೊಡುಗೆಗಳೆಂಬಂತೆ ನಿರೂಪಿತವಾಗಿರುವುದನ್ನೂ ಕಾಣುತ್ತೇವೆ. ಇಂತಹ ಅತ್ಯದ್ಭುತ ಸಾಹಿತ್ಯಸೃಷ್ಟಿಯೊಳಗೆ ಸ್ತ್ರೀ ಕೆಲವೊಮ್ಮೆ ವೈಭವದ ತುತ್ತ ತುದಿಗೇರಿ ವಿಜೃಂಭಿಸಿದ್ದರೆ, ಇನ್ನೊಮ್ಮೆ ಸ್ತ್ರೀಯರನ್ನು ಕೆಳಗಿಳಿಸಿರುವುದು ಗೋಚರಿಸುತ್ತದೆ. ಸೃಷ್ಟಿಯ ಎಲ್ಲಾ ಕೊಡುಗೆಗಳಲ್ಲೂ ಸ್ತ್ರೀಯರ ಪಾತ್ರವಿದೆಯೆಂದು ಗೌರವಿಸಿದ ಸಮಾಜವೇ ಸ್ತ್ರೀ ಶೋಷಣೆಗೆ ಮುಂದಾದ ಎಷ್ಟೋ ಸಂದರ್ಭ ಸನ್ನಿವೇಶಗಳನ್ನು ನೋಡಬಹುದಾಗಿದೆ.

ಭಾರತೀಯರ ಮನದಾಳದಲ್ಲಿ ಪೂಜನೀಯ ಸ್ಥಾನವನ್ನಲಂಕರಿಸಿ ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವ ಧಾರ್ಮಿಕ ಗ್ರಂಥಗಳೆಂದರೆ 'ರಾಮಾಯಣ' ಹಾಗೂ 'ಮಹಾಭಾರತ' ಎಂಬ ಮಹಾಕಾವ್ಯಗಳು. ಇಂದಿನ ನಾಗರಿಕ ಸಮಾಜದ ಪ್ರತಿಯೊಂದು ಹೆಜ್ಜೆ ಗುರುತಿನ ಹಿನ್ನೆಲೆಯನ್ನು ನಾವು ಈ ರಾಮಾಯಣ ಮತ್ತು ಮಹಾಭಾರತವೆಂಬ ಮಹಾಕಾವ್ಯಗಳಲ್ಲಿ ಕಾಣಬಹುದು. ರಾಮಾಯಣವನ್ನು ವಾಲ್ಮೀಕಿ ಮಹರ್ಷಿಯೂ ಮಹಾಭಾರತವನ್ನು ವ್ಯಾಸ ಮಹರ್ಷಿಯೂ ರಚಿಸಿದರೆಂಬ ಪ್ರತೀತಿ ಇದೆ. ಇಂತಹ ಶ್ರೇಷ್ಠ ಮುನಿವರ್ಯರ ಮಹಾನ್ ಕೃತಿಗಳಿಂದ ಪ್ರಭಾವಿತರಾದ ಕನ್ನಡದ ಕುಮಾರ ವಾಲ್ಮೀಕಿ, ಲಕ್ಷ್ಮೀಶ, ಕುಮಾರವ್ಯಾಸ, ರನ್ನ, ಪಂಪ ಮುಂತಾದವರು ತಮ್ಮದೇ ಆದ ಕವಿತಾ ಪ್ರೌಢಿಮೆಯನ್ನು ಬಳಸಿ ರಾಮಾಯಣ ಮತ್ತು ಮಹಾಭಾರತದ ಆಶಯಗಳಿಗೆ ಧಕ್ಕೆ ಬರದಂತೆ ತಮ್ಮ ತಮ್ಮ ಕೃತಿಗಳಲ್ಲಿ ನಿರೂಪಣೆ ಮಾಡಿದ್ದಾರೆ. ಅಂತೆಯೇ ತೊರವೆ ರಾಮಾಯಣ, ಜೈಮಿನಿ ಭಾರತ, ಗದುಗಿನ ಭಾರತ, ಗದಾಯುದ್ಧ, ವಿಕ್ರಮಾರ್ಜುನ ವಿಜಯ ಮುಂತಾದ ಕೃತಿಗಳು ಇವುಗಳ ಪ್ರಭಾವದಿಂದಲೇ ರಚಿಸಲ್ಪಟ್ಟಿವೆ.

ವೇದೋಪನಿಷತ್ತುಗಳ ಕಾಲದ ತರುವಾಯ ಪಿತೃಪ್ರಧಾನ ವ್ಯವಸ್ಥೆ ಸಮಾಜದ ಭದ್ರ ಬುನಾದಿಯಾಗಿ ಮಾರ್ಪಾಟು ಹೊಂದಿತು. ಹೆಣ್ಣು ಸಂಸಾರದ ಕಣ್ಣೆಂದು ಹೇಳುತ್ತಿದ್ದ ಅಂದಿನ ಸಮಾಜವೇ ಹೆಣ್ಣು, ಗಂಡಿನ ಸುಖಕ್ಕಾಗಿ ಜೀವಿಸಬೇಕಾದ ಪಶು ಎಂಬ ವಾತಾವರಣವನ್ನು ಸೃಷ್ಟಿಸಿತು. ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀ ತಪ್ಪಿತಸ್ಥಳಲ್ಲದಿದ್ದರೂ ಅವಳನ್ನು ಶಿಕ್ಷೆಗೊಳಗಾಗಿಸುವ ಅನಿವಾರ್ಯ ಪರಿಸ್ಥಿತಿ ತಲೆದೋರಿತು. ಉದಾ: ರಾಮಾಯಣದಲ್ಲಿಯ ಸೀತೆ. ಇವಳು ಬದುಕಿನುದ್ದಕ್ಕೂ ನೋವನ್ನು ಉಂಡವಳೇ. ಮದುವೆಯಾದ ಕೆಲವೇ ತಿಂಗಳುಗಳಲ್ಲಿ ಗಂಡನನ್ನು ಅನುಸರಿಸಬೇಕೆಂಬ ಪತಿಭಕ್ತಿಯಾಧಾರದ ಮೇಲೆ ಪತಿಯೊಟ್ಟಿಗೆ ವನವಾಸಕ್ಕೆ ಹೊರಡಲು ಅಣಿಯಾಗುತ್ತಾಳೆ. ಅಂತೆಯೇ ರಾಮನೊಟ್ಟಿಗೆ ಕಷ್ಟ-ಸುಖಗಳಲ್ಲಿ ಸಮಪಾಲುದಾರಳಾಗಿ ಸುಖೀ ಸಂಸಾರದ ಕನಸನ್ನು ಕಾಣುತ್ತಾಳೆ. ದುರಾದೃಷ್ಟವೋ ಅಥವಾ ಹೆಣ್ಣಾಗಿ ಹುಟ್ಟಿದ ತಪ್ಪಿಗಾಗಿಯೋ ರಾವಣನ ಕೆಟ್ಟ ದೃಷ್ಟಿಗೆ ಬಲಿಯಾಗುತ್ತಾಳೆ. ಹಾಗೆಂದು ಸೀತೆಯ ಕಷ್ಟದ ದಿನಗಳು ಇಲ್ಲಿಗೇ ಮುಗಿಯುವುದಿಲ್ಲ. ಲೋಕಮಾತೆಯೆನಿಸಿದ ಸೀತೆಗೆ ಶೋಕಸಾಗರವೇ ಎದುರು ಕಾಯುತ್ತಿತ್ತು. ಸೀತೆಯ ಪಾತಿವ್ರತ್ಯದ ಬಗೆಗೆ ಅನುಮಾನಗೊಂಡ ರಾಮನು ಸೀತೆಯನ್ನು ಅಗ್ನಿಪ್ರವೇಶಕ್ಕೆ ಒಳಗು ಮಾಡುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪುರುಷ (ಅಗ್ನಿದೇವ)ನೇ ಸ್ತ್ರೀಪಾವಿತ್ರ್ಯವನ್ನು ಪ್ರಮಾಣೀಕರಿಸುವುದು. ಪುರುಷ ಪ್ರಾಧಾನ್ಯತೆಗೆ ಈ ಸಂದರ್ಭ ಕನ್ನಡಿ ಹಿಡಿದಂತಿದೆ. ಅಗ್ನಿದೇವನ ಪಾವಿತ್ರ್ಯತೆಯ ಪ್ರಮಾಣಪತ್ರ ದೊರೆತ ನಂತರ ರಾಮ-ಸೀತೆಯರ ಮಿಲನವಾಗುತ್ತದೆ. ಆದರೂ ಅಗಸನೋರ್ವನ ಮಾತಿನಿಂದಾಗಿ ಮತ್ತೆ ಸೀತಾಮಾತೆಯ ಶೋಷಣೆ ನಡೆಯುತ್ತದೆ. ಭಾರತೀಯರ ಮನದಾಳದಲ್ಲಿ ದೈವೀ ಸ್ಥಾನವನ್ನಲಂಕರಿಸಿರುವ ರಾಮ ಸೀತಾದೇವಿಯ ವಿಷಯದಲ್ಲಿ ನಡೆದುಕೊಂಡದ್ದಾದರೂ ಏನು ? ರಾಮ ಸೀತಾದೇವಿಯ ವಿಷಯದಲ್ಲಿ ತೆಗೆದುಕೊಂಡ ನಿರ್ಧಾರಗಳಾದರೂ ಎಷ್ಟರಮಟ್ಟಿಗೆ ಸರಿ? ಈ ಮಾತುಗಳು ವಿಚಾರಾರ್ಹವೆನಿಸುತ್ತವೆ.

ರಾಮಾಯಣದಲ್ಲಿ ಬರುವ ಪ್ರತಿಯೊಂದು ಸ್ತ್ರೀ ಪಾತ್ರವೂ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಗೊಳಗಾದಂತಹ ದುಃಖಿತ ಪಾತ್ರವೇ ಆಗಿದೆ. ಇದಕ್ಕೆ ಊರ್ಮಿಳೆಯ ಪಾತ್ರಚಿತ್ರಣವನ್ನು ಉದಾಹರಣೆಯಾಗಿ ನೀಡಬಹುದು. ಮದುವೆಯಾಗಿ ಸುಖ-ಸಂಸಾರದ ಕನಸುಗಳನ್ನು ಹೊತ್ತು ಗಂಡನ ಮನೆಗೆ ಆಗಮಿಸಿದ ಊರ್ಮಿಳೆಯ ಬಾಳಲ್ಲಿ ರಾಮನ ವನವಾಸದ ಸಂಗತಿ ಬರಸಿಡಿಲೆರಗಿದಂತಾಗುತ್ತದೆ. ಪತಿಯ (ಲಕ್ಷ್ಮಣ) ಮನದಾಳದಲ್ಲಿನ ಭ್ರಾತೃ ಪ್ರೇಮವನ್ನು ಊರ್ಮಿಳೆ ಮನಃಪೂರ್ವಕವಾಗಿ ಒಪ್ಪಿಕೊಳ್ಳುತ್ತಾಳೆ. ಗಂಡನ ಮನಸ್ಸನ್ನು ಊರ್ಮಿಳೆ ಅರ್ಥಮಾಡಿಕೊಂಡು ನಡೆದದ್ದು ಎಷ್ಟರಮಟ್ಟಿಗೆ ಸರಿ? ಆದರೆ ಲಕ್ಷ್ಮಣ? ಲಕ್ಷ್ಮಣನಂತಹವನಿಗೆ ರಾಮಧ್ಯಾನವನ್ನುಳಿದು ಬೇರೇನೂ ಗೊತ್ತಿರಲಿಲ್ಲ. ತನ್ನನ್ನು ನಂಬಿ ಬಂದ ಹೆಣ್ಣಿನ ಬಗ್ಗೆ ಕ್ವಚಿತ್ತಾದರೂ ಅವನು ಕರುಣೆ ತೋರಿ ಅವಳೊಟ್ಟಿಗೆ ಸಾಂಸಾರಿಕ ಸುಖ-ದುಃಖದಲ್ಲಿ ಪಾಲ್ಗೊಳ್ಳಬೇಕಿತ್ತು. ಆದರೆ ಲಕ್ಷ್ಮಣನಿಗೆ ಊರ್ಮಿಳೆಗಿಂತ

ರಾಮ ಮುಖ್ಯನಾಗುತ್ತಾನೆ. ಇಲ್ಲಿ ಪುರುಷಪ್ರಾಧಾನ್ಯವನ್ನು ಗುರುತಿಸಬಹುದು. ಹೆಂಡತಿಯಾದವಳು ಗಂಡನ ಅರ್ಧಭಾಗವೆಂದು ಹೇಳುವ ಸಂಸ್ಕೃತಿಯೇ ಈ ರೀತಿ ಪುರುಷ ಪ್ರಾಧಾನ್ಯದ ಕಡೆಗೆ ಒಲವನ್ನು ತೋರಿಸಿರುವುದು ದುರ್ದೈವದ ಸಂಗತಿ. ರಾಮಾಯಣದ ಸೀತೆಗೆ ಅಂದಿನ ರಾಮ ಅಗ್ನಿಪರೀಕ್ಷೆಗೆ ಒಡ್ಡಿದಂತೆ ಇಂದಿನ ಸಮಾಜದ ಪುರುಷರು ತಮ್ಮ ಪತ್ನಿಯರಿಗೆ ಅಗ್ನಿಸ್ಪರ್ಶ ಮಾಡುತ್ತಿರುವುದನ್ನು ಕಾಣಬಹುದು. ಇದು ಪರಂಪರಾನುಗತ ಬದುಕಿನ ಅನುಸರಣೆ ಎಂದರೂ ತಪ್ಪಾಗಲಾರದು. ಸೀತೆಯ ದುಃಖ ಅಂತ್ಯವಾದದ್ದು ಕೊನೆಗೂ ರಾಮನಿಂದಲ್ಲ; ತನ್ನ ಮಗಳ ಆರ್ತನಾದವನ್ನು ಕೇಳಿ ಬಾಯ್ತೆರೆದ ಭೂದೇವಿಯಿಂದ. ಸ್ತ್ರೀಮಮತಾಮಯಿ, ಲೋಕಮಾತೆ, ಕರುಣಾಮೂರ್ತಿ, ದೇವತೆ ಹಾಗೆ-ಹೀಗೆ ಎನ್ನುತ್ತಾ ಅವಳನ್ನು ವೈಭವೀಕರಿಸಿರುವ ಪುರಾಣ ಪುಣ್ಯಕತೆಗಳೇ ಅವಳ ವ್ಯಕ್ತಿತ್ವ ಹನನ ಮಾಡಿರುವುದನ್ನು ಕಾಣಬಹುದು.

ರಾಮಾಯಣವೆಂಬ ಮಹಾಕಾವ್ಯವು ಸೀತೆಯ ಪಾತ್ರದ ವಿಶಿಷ್ಟತೆಯನ್ನು ವಿವರಿಸುವುದರ ಜೊತೆಗೆ ಮತ್ತೊಂದೆಡೆ ಮಂಥರೆ, ಕೈಕೆಯಂತಹ ಪಾತ್ರದ ವಿಶ್ಲೇಷಣೆಯನ್ನು ಮಾಡುತ್ತದೆ. ಮಂಥರೆ ಇಡೀ ರಾಮಾಯಣದ ಕಥೆಗೆ ಮೂಲ ಧಾತುವಾಗುತ್ತಾಳೆ. ಇವಳಿಂದಾಗಿಯೇ ರಾಮನ ವನವಾಸ, ಸೀತಾದೇವಿಯ ಅಗ್ನಿ ಪ್ರವೇಶ ನಡೆಯುತ್ತವೆ. ಇವಳ ಕುರುಡು ಪ್ರೇಮದ ಪರಿಣಾಮವೇ ದಶರಥನ ಮುದ್ದಿನ ಕಿರಿಯ ಮಡದಿ ಕೈಕೆ ಸ್ವಾರ್ಥಿಯಾಗುವಂತೆ ಮಾಡುತ್ತದೆ. ಪುತ್ರಮೋಹಕ್ಕೆ ಕಟ್ಟುಬಿದ್ದು ರಾಮನ ವನವಾಸಕ್ಕೆ ಕೈಕೆ ಪ್ರತ್ಯಕ್ಷವಾಗಿ ಕಾರಣವಾದರೆ, ಮಂಥರೆ ಪರೋಕ್ಷವಾಗಿ ಕಾರಣವಾಗುತ್ತಾಳೆ. ದಶರಥ ಮಹಾರಾಜನ ಮತ್ತಿಬ್ಬರು ಮಡದಿಯರಾದ ಕೌಸಲ್ಯ ಮತ್ತು ಸುಮಿತ್ರೆಯರು ಆದರ್ಶ ತಾಯ್ತನದ ಪ್ರತೀಕವಾಗಿ ಸೃಷ್ಟಿಯಾಗಿದ್ದಾರೆ. ರಾಮಾಯಣದಲ್ಲಿ ನೆನೆಯಲೇಬೇಕಾದ ಮತ್ತೊಂದು ಪಾತ್ರ ಮಂಡೋದರಿ. ನಮ್ಮ ಪಂಚಪತಿವ್ರತೆಯರಲ್ಲಿ ಮಂಡೋದರಿಗೂ ಸ್ಥಾನವಿದೆ. ಪತಿ ರಾವಣ ಎಷ್ಟೇ ದುಷ್ಟನಾದರೂ ಪತಿಪ್ರೇಮವೇ ಪರಮ ಸುಖಿ ಜೀವನವೆಂದು ನಂಬಿ ರಾವಣನನ್ನು ಆರಾಧಿಸಿದ ದೈವತಾ ಸ್ವರೂಪಿಯಾಗಿ ಚಿತ್ರಿತವಾಗಿದ್ದಾಳೆ. ಇವಳು ಸೀತಾಮಾತೆಯ ಬಗೆಗೆ ಅಪಾರ ಗೌರವಾದರಗಳನ್ನು ಹೊಂದಿದ್ದಾಳೆ. ಇವಳೂ ಸಹ ಪುರುಷಾಧೀನಳಂತೆಯೇ ಗೋಚರಿಸುತ್ತಾಳೆ. ತನ್ನ ಪತಿಯ ನಡವಳಿಕೆಗಳನ್ನು ಎಲ್ಲಿಯೂ ಪ್ರಶ್ನಿಸುವುದಿಲ್ಲ. ಬದಲಿಗೆ ಮೌನಿಯಾಗಿ ದೇವರಲ್ಲಿ ತನ್ನ ಮೊರೆಯಿಡುತ್ತಾಳೆ.

ಇನ್ನು ದಾಯಾದಿ ಕಲಹವನ್ನು ವಸ್ತುವನ್ನಾಗುಳ್ಳ ಮಹಾಭಾರತದಲ್ಲಿನ ಸ್ತ್ರೀ ಚಿತ್ರಣವನ್ನು ಕುರಿತು ವಿಶ್ಲೇಷಿಸುವುದಾದರೆ, ಮಹಾಭಾರತದ ಸ್ತ್ರೀಪಾತ್ರಗಳು ರಾಮಾಯಣದ ಸ್ತ್ರೀಯರಂತೆ ಮೌನಿಗಳಲ್ಲ; ಪ್ರತಿಭಟನಾತ್ಮಕ ವ್ಯಕ್ತಿತ್ವವುಳ್ಳವುಗಳು. ಈ ಮಹಾಕಾವ್ಯದಲ್ಲಿ ಕಾಣಸಿಗುವ ಮತ್ಸ್ಯಗಂಧಿ (ಯೋಜನಾಗಂಧಿ), ಕುಂತಿ, ಮಾದ್ರಿ, ಗಾಂಧಾರಿ, ಅಂಬೆ, ಅಂಬಿಕೆ, ಅಂಬಾಲಿಕೆ, ದ್ರೌಪದಿ, ಅನಸೂಯೆ, ಊರ್ವಶಿ, ಮೇನಕೆ ಮುಂತಾದ ಸ್ತ್ರೀ ಪಾತ್ರಗಳೆಲ್ಲವೂ ಪುರುಷ ನಿಯಂತ್ರಿತ ಪಾತ್ರಗಳಾದರೂ, ತಮ್ಮ ಸ್ವಾಭಿಮಾನಕ್ಕೆ ಧಕ್ಕೆವುಂಟಾದಾಗ ಕೆಲವೊಂದು ಪಾತ್ರಗಳು ಸಿಡಿದೆದ್ದಿರುವುದನ್ನೂ ಕಾಣಬಹುದು.

ಪ್ರಾಚೀನ ಮಹಾಕಾವ್ಯಗಳ ಕಾಲಘಟ್ಟದಲ್ಲಿ ವಿಧವೆಯರ ಜೀವನ ವೇದೋತ್ತರ ಜೀವನದಷ್ಟು ನಿಕೃಷ್ಟವಾಗಿಲ್ಲ. ಇಲ್ಲಿನ ವಿಧವೆಯರು ಪತಿಯ ಮರಣಾನಂತರವೂ ಸಮಾಜ ಜೀವಿಯಾಗಿ ಬಾಳಿ ಬದುಕಿರುವುದನ್ನು ಕಾಣುತ್ತೇವೆ. ಉದಾ – ಮತ್ಸ್ಯಗಂಧಿ, ಕುಂತಿ, ಅಂಬಿಕೆ, ಅಂಬಾಲಿಕೆ ಮುಂತಾದ ವಿಧವೆಯರು ಮಕ್ಕಳ ಪಾಲನೆ ಪೋಷಣೆಯಲ್ಲಿ ತಮ್ಮ ಬದುಕಿನ ಸುಖ–ಸಂತೋಷಗಳನ್ನು ಕಾಣಬಯಸುತ್ತಾರೆ. ಸ್ತ್ರೀಯು ಸಹಗಮನ ಪದ್ಧತಿಯನ್ನು ಅನುಸರಿಸಿ ಚಿತೆ ಏರುವ ಪದ್ಧತಿ ರೂಢಿಯಲ್ಲಿರಲಿಲ್ಲ. ಇಡೀ ಮಹಾಭಾರತದ ಕಥಾಭಾಗದೊಳಗೆ ಮಾದ್ರಿಯ ಸಹಗಮನ ಬಿಟ್ಟರೆ ಉಳಿದಂತೆ ಎಲ್ಲಿಯೂ ಸಹಗಮನ ಪದ್ಧತಿಯು ಜರುಗಿದಂತೆ ಕಾಣಬರುವುದಿಲ್ಲ. "ಶಿಷ್ಟ ಪರಿಶಿಷ್ಟ ಸಂಸ್ಕೃತಿಗಳ ತಿಕ್ಕಾಟದ ಸನ್ನಿವೇಶದಲ್ಲಿ ಮಹಾಭಾರತ ರಚನೆಯಾಯಿತು. ಶಿಷ್ಟ ಸಂಸ್ಕೃತಿಯ ವಿಜಯದ ಚಿಹ್ನೆಯಾಗಿ ಮಾದ್ರಿ ಚಿತೆ ಏರಿದರೆ ಬುಡಕಟ್ಟು ಸಂಸ್ಕೃತಿಯ ಹೋರಾಟದ ಫಲವಾಗಿ ಕುಂತಿ ಮುಂತಾದವರು ಉಳಿದು ಬದುಕುತ್ತಾರೆ."[೧]

ಈ ಮಹಾಕಾವ್ಯದಲ್ಲಿ ಕಾಣಸಿಗುವ ಸ್ತ್ರೀಪಾತ್ರಗಳೆಲ್ಲವೂ ಪ್ರತಿಭಟನಾ ಸ್ವರೂಪದ ಸ್ತ್ರೀಪಾತ್ರಗಳಲ್ಲ. ಪುರುಷನ ದಬ್ಬಾಳಿಕೆಗೆ, ಸಮಾಜದ ಕಟ್ಟುಪಾಡುಗಳಿಗೆ ಬಲಿಯಾದಂತಹ ಎಷ್ಟೋ ಪಾತ್ರಸೃಷ್ಟಿ ಮಹಾಭಾರತದಲ್ಲಿದೆ. ಅನಸೂಯ, ಅಹಲ್ಯೆ, ರೇಣುಕಾ, ಊರ್ವಶಿ, ಮೇನಕೆ ಮುಂತಾದವರನ್ನು ಮೇಲಿನ ಮಾತಿಗೆ ಉದಾಹರಿಸಬಹುದು. ಅಂತೆಯೇ ಪ್ರತಿಭಟನಾತ್ಮಕ ವ್ಯಕ್ತಿತ್ವವುಳ್ಳ ಸ್ತ್ರೀಯಾಗಿ ಚಿತ್ರಿತವಾದ ಪಾತ್ರಗಳಲ್ಲಿ 'ದ್ರೌಪದಿ'ಯ ಹೆಸರನ್ನು ಮೊದಲಿಗೆ ಉಲ್ಲೇಖಿಸಬಹುದು. ಐದು ಜನ ಪಾಂಡವರ ಪತ್ನಿಯಾಗಿ ಮೆರೆದ ದ್ರೌಪದಿ ಪ್ರತೀಕಾರದ ಜ್ವಾಲಾಮುಖಿಯಂತೆ ಚಿತ್ರಿತಳಾಗಿದ್ದಾಳೆ. ಪುರುಷಸಮಾಜದ ನೀತಿ–ನಿಯಮಗಳನ್ನು ಪ್ರಶ್ನಿಸುವ ಧೀರ ವನಿತೆಯಾಗಿದ್ದಾಳೆ. ಧರ್ಮರಾಯನು ಪಣದಲ್ಲಿ ದ್ರೌಪದಿಯನ್ನು ಸೋತು ಅವಳನ್ನು ದುರ್ಯೋಧನನಿಗೆ ಒಪ್ಪಿಸುತ್ತಾನೆ. ಸಭೆಯ ನಡುಭಾಗದಲ್ಲಿ ದುಶ್ಯಾಸನನು ದ್ರೌಪದಿಯ ಸೀರೆ ಸೆಳೆವಾಗ ಕುಪಿತಳಾದ ದ್ರೌಪದಿ "ಪತಿಗಳೆನ್ನನು ಮಾರಿ ಧರ್ಮ ಸ್ಥಿತಿಯ ಕೊಂಡರು" ಹಾಗೆಯೇ ಪಾಂಡವರಿಗೆ "ಗಂಡರೋ ನೀವ್ ಭಂಡರೋ" ಎಂದು ಪ್ರಶ್ನಿಸಿದ ದಿಟ್ಟ ಮಹಿಳೆಯಾಗಿದ್ದಾಳೆ. ಅವಮಾನಿತಳಾದ ದ್ರೌಪದಿಯ ಮುಡಿಯನ್ನು ಹಿಡಿದೆಳೆಯಲು ಕಾರಣನಾದ ದುರ್ಯೋಧನನ ತೊಡೆ ಮುರಿಸಿದಲ್ಲದೆ, ಹರಡಿರುವ ತನ್ನ ಮುಡಿಯನ್ನು ಕಟ್ಟುವುದಿಲ್ಲವೆಂದು ಶಪಥ ಮಾಡುತ್ತಾಳೆ. ಆ ಶಪಥ ಈಡೇರಿಸುವ ಉದ್ದೇಶದಿಂದಾಗಿ ರಾಜಕೀಯ ಕುತಂತ್ರಗಳಲ್ಲೂ ತನ್ನ ಚಾಣಾಕ್ಷತನವನ್ನು ತೋರುತ್ತಾಳೆ. ಧರ್ಮರಾಯನಿಗೆ ಸಂಧಿಗೊಪ್ಪಕೂಡದೆಂದು ತಿಳಿಹೇಳುತ್ತಾಳೆ. ಉದಾ: ಕೃಷ್ಣಸಂಧಾನದ ಸಂದರ್ಭದಲ್ಲಿ ದ್ರೌಪದಿಯ ವಾದವೈಖರಿಯನ್ನು ಉಲ್ಲೇಖಿಸಬಹುದು. ಅಂತಿಮವಾಗಿ ಭೀಮನಲ್ಲಿ ತನ್ನಂತರಾಳದ ಭಾವನೆಯನ್ನು ಸಮರ್ಥವಾಗಿ ನಿವೇದಿಸಿ ಅವನಲ್ಲಿ ಅರ್ಥೈಸಿ

೧. ಪು. ೫೭೮, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ. – ಡಾ. ಬರಗೂರು ರಾಮಚಂದ್ರಪ್ಪ.

ದುರ್ಯೋಧನನ ತೊಡೆ ಮುರಿಸುವಲ್ಲಿ ಯಶಸ್ವಿಯಾಗುತ್ತಾಳೆ. "ದೇವಾಸುರ ಯುದ್ಧಕ್ಕೆ ಕರಗಂಬೊತ್ತೆಂಬಂತಿರುವ ಎರಡನೆಯ ಹಿಡಿಂಬೆಯಾದ ರನ್ನನ ದ್ರೌಪದಿಯೂ ಪಂಪನ ಜಾಡಿನಲ್ಲಿಯೇ ಬೆಳೆದ ಪಾತ್ರ"[೨]

ಮಹಾಭಾರತದಲ್ಲಿ ಬರುವ ಮುನಿಶ್ರೇಷ್ಠರು, ತಪಸ್ವಿಗಳು ಕರುಣಾಮಯಿಗಳೂ, ಜ್ಞಾನಿಗಳೂ, ಆಗಿರುವಂಥವರು. ಪುರುಷಪ್ರಧಾನ ಸಮಾಜದ ಪ್ರತೀಕಗಳೆಂಬಂತೆ ಇಲ್ಲಿನ ಮುನಿಶ್ರೇಷ್ಠರ ಪಾತ್ರಚಿತ್ರಣವಿರುವುದನ್ನು ಕಾಣುತ್ತೇವೆ. ಅತ್ರಿ, ಜಮದಗ್ನಿ, ಪರಾಶರಮುನಿ, ವಿಶ್ವಾಮಿತ್ರ, ಗೌತಮ ಮುಂತಾದವರೆಲ್ಲಾ ಸ್ತ್ರೀಶೋಷಕರೇ "ಹೆಣ್ಣನ್ನು ಸಾಮಾಜಿಕ ಶೃಂಖಲೆಯಲ್ಲಿಟ್ಟು ನೋಡುತ್ತದೆ ಭಾರತೀಯ ಮನಸ್ಸು ಎಂಬುದಕ್ಕೆ ಇದುವರೆಗೆ ಹೆಣ್ಣನ್ನು ನಡೆಸಿಕೊಂಡಿರುವ ಮಹರ್ಷಿಗಳ ಕಥೆಗಳೇ ನಿದರ್ಶನಗಳಾಗಿವೆ. ಹೆಣ್ಣು ಪುರುಷನ ಸೇವೆಗೇ ಇರುವವಳು. ಪುರುಷನು ಅವಳನ್ನು ರಕ್ಷಿಸುತ್ತಾನೆ. ಆಕೆಗೆ ಯಾವುದೇ ಸ್ವಾತಂತ್ರ್ಯವಿಲ್ಲ. ಪುರುಷನ ಅಲಕ್ಷ್ಯಕ್ಕೆ ಒಳಗಾದರೆ ಶಿಕ್ಷೆ ಅಥವಾ ಸಾವು. ಸದಾ ಆತನ ಅನುಕಂಪೆಯಲ್ಲಿಯೇ ಸ್ತ್ರೀ ಇರಬೇಕು ಎಂಬ ಅನಾರೋಗ್ಯಕರ ಬೆಳವಣಿಗೆಯೇ ಇದಾಗಿದೆ" ಎಂಬ ಹಾಲತಿ ಸೋಮಶೇಖರ್‌ರವರ ಮಾತುಗಳು ಅಕ್ಷರಶಃ ಸತ್ಯವೆನಿಸುತ್ತವೆ.

ಇಲ್ಲಿನ ಮಹರ್ಷಿಗಳು ಕೋಪಿಷ್ಠರು. ಪತಿವ್ರತಾಶಿರೋಮಣಿಯಾದ ರೇಣುಕಾದೇವಿಯು ಗಂಧರ್ವನೋರ್ವನ ಸೌಂದರ್ಯಕ್ಕೆ ಮೆಚ್ಚಿದಳೆಂಬ ಕಾರಣಕ್ಕಾಗಿಯೇ ತನ್ನ ಮಗನಾದ ಪರಶುರಾಮನಿಂದ ತಲೆ ತೆಗಿಸಿದಂತೆ ಮಹಾಜ್ಞಾನಿ ಜಮದಗ್ನಿಮಹರ್ಷಿ ತಲೆಕಡಿಯುವಂತಹ ಮಹದಪರಾಧ ರೇಣುಕಾದೇವಿಯದಲ್ಲವಾದರೂ; ಪುರುಷ ಪ್ರತಿಷ್ಠೆಯ ಅಹಂಕಾರದ ಪರಮಾವಧಿಗೆ ಅವಳು ಬಲಿಯಾಗುತ್ತಾಳೆ. ನಂತರ ಪುತ್ರನ ಅಪೇಕ್ಷೆಯಂತೆ ರೇಣುಕಾ ಬದುಕಿ ಬಂದರೂ ಇಲ್ಲಿ ಪುರುಷನ ಇಚ್ಛೆಗನುಗುಣವಾಗಿ ಸ್ತ್ರೀಯ ಬದುಕು ನಿರ್ಧಾರವಾಗುತ್ತದೆಂಬಂಶವನ್ನು ಗಮನಿಸಬೇಕಾಗುತ್ತದೆ.

ಮತ್ತೋರ್ವ ಮಹರ್ಷಿ ಗೌತಮನ ವ್ಯಕ್ತಿತ್ವ ಮತ್ತೂ ಅಮಾನವೀಯವೆನಿಸುತ್ತದೆ. ವೈಭೋಗದ ಸುಖದ ಸುಪ್ಪತ್ತಿಗೆಯಲ್ಲಿ ಮೆರೆವ ಇಂದ್ರನಿಗೆ ಗೌತಮನ ಮಡದಿ ಅಹಲ್ಯೆಯ ಮೇಲೆ ಮೋಹವಾಗುತ್ತದೆ. ತನ್ನ ಕಾಮದಾಹವನ್ನು ತೀರಿಸಿಕೊಳ್ಳಲು ಇಂದ್ರ ಗೌತಮನ ವೇಷಧಾರಿಯಾಗಿ ಆಶ್ರಮದಲ್ಲಿದ್ದ ಅಹಲ್ಯೆಯೊಟ್ಟಿಗೆ ಸಂಭೋಗ ಸುಖವನ್ನು ಪಡೆಯುತ್ತಾನೆ. ಇಂದ್ರನ ಕುತಂತ್ರವನ್ನು ಅರಿಯದ ಅಹಲ್ಯೆ ಪತಿಯ ಪ್ರೀತ್ಯಾದರವೆಂದು ನಂಬಿ ಇಂದ್ರನಲ್ಲಿ ತನ್ನನ್ನು ಸಂಪೂರ್ಣ ಸಮರ್ಪಿಸಿಕೊಳ್ಳುತ್ತಾಳೆ. ದಿನನಿತ್ಯದ ಸಂಧ್ಯಾವಂದನೆಯನ್ನು ಮುಗಿಸಿಕೊಂಡು ಬಂದ ಗೌತಮನು ತನ್ನ ದಿವ್ಯಜ್ಞಾನದ ಸಹಾಯದಿಂದ ಆಶ್ರಮದಲ್ಲಿ ನಡೆದ ಸಂಗತಿಯನ್ನೆಲ್ಲಾ ತಿಳಿದುಕೊಳ್ಳುತ್ತಾನೆ. ನಂತರ ಕುಪಿತನಾಗಿ ಅಹಲ್ಯೆ-ಇಂದ್ರ ಇಬ್ಬರಿಗೂ ಶಾಪ

೨. ಪು. ೬೨, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ. – ಡಾ. ಬರಗೂರು ರಾಮಚಂದ್ರಪ್ಪ.

ನೀಡುತ್ತಾನೆ. ಇಲ್ಲಿ ಇಂದ್ರನಿಗೆ ಶಾಪಕೊಟ್ಟಿದ್ದು ಸರಿ. ಆದರೆ ತಪ್ಪಿತಸ್ಥಳಲ್ಲದಿದ್ದರೂ ಅಹಲ್ಯೆ ಶಾಪಕ್ಕೆ ಗುರಿಯಾಗಿ ಕಲ್ಲಾದುದು ಶೋಚನೀಯವೇ ಸರಿ. ಇಂತಹ ಪತಿವ್ರತೆ ಅಹಲ್ಯೆಗೆ ಮುಂದೆ ಮೋಕ್ಷ ದೊರಕುವುದೂ ಸ್ತ್ರೀಶೋಷಕ ರಾಮನ ಪಾದಸ್ಪರ್ಶದಿಂದಲೇ ಎನ್ನುವುದೊಂದು ವಿಪರ್ಯಾಸ.

ಪಾಂಡವರು–ಕೌರವರ ಜನ್ಮವೃತ್ತಾಂತದ ಹಿನ್ನೆಲೆಯಲ್ಲಿಯೂ ಶೋಷಣೆಗೆ ಒಳಗಾಗುವವರು ಸ್ತ್ರೀಯರೇ. ಶಂತನು ಮಹಾರಾಜನ ಮಕ್ಕಳಾದ ವಿಚಿತ್ರವೀರ್ಯ ಮತ್ತು ಚಿತ್ರಾಂಗದರ ಮರಣಾನಂತರ ಅಂಬಿಕೆ ಮತ್ತು ಅಂಬಾಲಿಕೆ ಅತ್ತೆಯಾದ ಮತ್ಸ್ಯಗಂಧಿಯ ಮಾತಿನಂತೆ ವ್ಯಾಸ (ಮತ್ಸ್ಯಗಂಧಿಯ ಮೊದಲ ಮಗ) ಮಹರ್ಷಿಯನ್ನು ನಿಯೋಗ ಪದ್ಧತಿಯ ಮೂಲಕ ಕೂಡುತ್ತಾರೆ.

ಇದಕ್ಕೆ ಮನಸ್ಸೊಪ್ಪದೆ ಕಣ್ಣು ಮುಚ್ಚಿಕೊಂಡು ವ್ಯಾಸನನ್ನು ಸೇರಿದ ಕಾರಣದಿಂದಾಗಿ ಅಂಬಿಕೆ ಕುರುಡ ಧೃತರಾಷ್ಟ್ರನಿಗೆ ಜನ್ಮ ನೀಡಬೇಕಾಗುತ್ತದೆ. ಹಾಗೆಯೇ ಅಸಹ್ಯದಿಂದ ಬಿಳಿಚಿಕೊಂಡು ವ್ಯಾಸನನ್ನು ಸೇರಿದ ಕಾರಣದಿಂದಾಗಿ ಅಂಬಾಲಿಕೆಗೆ ಬಿಳುಪು ರೋಗಪೀಡಿತನಾದ ಪಾಂಡು ಹುಟ್ಟುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಪುರುಷನ ಇಂತಹ ಹುಟ್ಟಿಗೆ ಸ್ತ್ರೀಯರೇ ಕಾರಣವೆನ್ನುತ್ತವೆ ನಮ್ಮ ಮಹಾಕಾವ್ಯದಲ್ಲಿನ ಚಿತ್ರಣಗಳು. ಪತಿವ್ರತೆಯ ಪರಿಕಲ್ಪನೆಯನ್ನು ಹುಟ್ಟು ಹಾಕಿದ ಸಾಮಾಜಿಕ ಸಂಸ್ಕೃತಿಯ ಪುರುಷ ಸಮಾಜವೇ 'ನಿಯೋಗ ಪದ್ಧತಿ' ಎಂಬ ವ್ಯಭಿಚಾರಕ್ಕೆ ಹೆಣ್ಣನ್ನು ಪ್ರೋತ್ಸಾಹಿಸುವುದರೊಟ್ಟಿಗೆ ಆ ಕ್ರಿಯೆಗೆ ಹೆಣ್ಣನ್ನು ಬಲಿಪಶುವಾಗಿ ಮಾಡಿದೆ.

ಭಾರತೀಯರ ಮನದಾಳದಲ್ಲಿ ಪೂಜ್ಯಸ್ಥಾನದಲ್ಲಿರುವ ಮಹಾಕಾವ್ಯಗಳು ಹೆಣ್ಣನ್ನು ಮಾತ್ರ ಪುರುಷಾಧೀನಳಂತೆ ಕಂಡಿರುವುದು ಶೋಚನೀಯವೆನಿಸುತ್ತದೆ.

ಪರಾಮರ್ಶನ ಗ್ರಂಥಗಳು

೧. ಮಹಿಳಾ ಸಾಹಿತ್ಯ ಸಮೀಕ್ಷೆ – ಡಾ. ಆರ್ಯಾಂಬ ಪಟ್ಟಾಭಿ

೨ ಸ್ತ್ರೀವಾದ ಮತ್ತು ಭಾರತೀಯತೆ – ಧರಣೀ ದೇವಿ ಮಾಲಗತ್ತಿ

೩. ವಿಚಾರ ಸಾಹಿತ್ಯ – ೨೦೦೦ – ಸಂ. ಡಾ. ಜಿ.ಆರ್. ತಿಪ್ಪೇಸ್ವಾಮಿ

೪. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ – ಡಾ. ಬರಗೂರು ರಾಮಚಂದ್ರಪ್ಪ

೫. ಭಾರತೀಯ ಸಾಹಿತ್ಯ ಸಮೀಕ್ಷೆ – ಪ್ರೊ. ಎಲ್.ಎಸ್. ಶೇಷಗಿರಿರಾವ್

೬. ಕನ್ನಡ ಸಾಹಿತ್ಯದಲ್ಲಿ ದ್ರೌಪದಿ – ಡಾ. ಎಸ್.ವಿ. ಪ್ರಭಾವತಿ

೭. ಮಹಿಳಾ ಚಳುವಳಿ – ಡಾ. ಹಾಲತಿ ಸೋಮಶೇಖರ್

□□□

ಬಂಧುವರ್ಮನ ಸತಿಧರ್ಮಸಾರ

– ದೊರೆಸ್ವಾಮಿ

ಬಂಧುವರ್ಮ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ವಿಶಿಷ್ಟ ಕೃತಿಗಳನ್ನು ರಚಿಸಿ ಉತ್ಕೃಷ್ಟ ಕೊಡುಗೆಯನ್ನು ಸಲ್ಲಿಸಿದ್ದಾನೆ. ಅವನು ಜೀವಸಂಬೋಧನಂ, ಹರಿವಂಶಾಭ್ಯುದಯ, ಸತಿಧರ್ಮಸಾರ ಎಂಬ ಮೂರು ಕೃತಿಗಳನ್ನು ರಚಿಸಿದ್ದಾನೆ. ಇವನನ್ನು ಬ್ರಹ್ಮಶಿವ ಕವಿಯು ತನ್ನ ಸಮಯಪರೀಕ್ಷೆ ಎಂಬ ಗ್ರಂಥದಲ್ಲಿ ಗೌರವಾದರದಿಂದ ನೆನೆದುಕೊಂಡಿದ್ದಾನೆ –

ನಯದಿಂದಂ ತಾಯುಂ ತಂ
ದೆಯುಮೊಳ್ಪನೆ ಶಿಕ್ಷಿಪಂತೆ ಮನುಜಾವಳಿಯಂ
ನಯದಿಂ ಸಂಬೋಧಿಸಿ ಮು
ಕ್ತಿಯೊಳೊಂದಿಪಪೆರ್ಮೆ ಬಂಧುವರ್ಮಂಗೆ ನಿಜಂ

ತಾಯಿತಂದೆಯರು ಉಪಾಯದಿಂದ ಮಕ್ಕಳನ್ನು ತಿದ್ದಿತೀಡಿ ತಿಳಿಯಹೇಳುವಂತೆ ಮಾನವರನ್ನು ದೇವತ್ವಕ್ಕೆ ಏರಿಸುವಂತಹ ಸರಿಮಾರ್ಗ ತೋರಲು ಬಂಧುವರ್ಮನು ತನ್ನ ಕೃತಿಗಳ ಮೂಲಕ ಪ್ರಯತ್ನಿಸಿದ್ದಾನೆ ಎಂದು ಮೇಲಿನ ಬ್ರಹ್ಮಕವಿಯ ಉಕ್ತಿಯಿಂದ ತಿಳಿದುಬರುತ್ತದೆ.

ಬಂಧುವರ್ಮನು ಸುಮಾರು ಕ್ರಿ.ಶ. ೧೧ ರಿಂದ ೧೨ನೇ ಶತಮಾನದ ಅವಧಿಯಲ್ಲಿ ಬದುಕಿದ್ದನೆಂದು ಶ್ರೀ ಬಿ.ಎಸ್. ಸಣ್ಣಯ್ಯನವರು ತಿಳಿಸಿದ್ದಾರೆ.[೧] ಆದರೆ ಇತ್ತೀಚಿನ ಸಂಶೋಧನೆಯ ಫಲವಾಗಿ ಬಂಧುವರ್ಮನು ೧೦೫೦–೧೧೫೦ ರ ಅವಧಿಯಲ್ಲಿ ಬದುಕಿದ್ದನೆಂದು ತಿಳಿದುಬರುತ್ತದೆ. ಈ ವಿಚಾರವನ್ನು ಡಾ. ಸಿದ್ಧಾರ್ಥ ಅವರು ತಮ್ಮ ಸಂಶೋಧನಾ ಪ್ರಬಂಧ "ಬಂಧುವರ್ಮನ ಜೀವಸಂಬೋಧನಂ – ಒಂದು ಅಧ್ಯಯನ" ದಲ್ಲಿ ತಿಳಿಸಿದ್ದಾರೆ.[೨]

---

೧. ಹರಿವಂಶಾಭ್ಯುದಯ – ಸಂ. ಬಿ.ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೪.

೨. ಬಂಧುವರ್ಮನ ಜೀವಸಂಬೋಧನಂ – ಒಂದು ಅಧ್ಯಯನ : ಡಾ. ಸಿದ್ಧಾರ್ಥ, ಅಪ್ರಕಟಿತ ಸಂಶೋಧನಾ ಪ್ರಬಂಧ.

ಜೀವಸಂಬೋಧನಂ ಕೃತಿಯು ಜೈನಶ್ರಾವಕ ಮತ್ತು ಸಕಲ ಪರಿಗ್ರಹ ತ್ಯಾಗಿಯಾದ ಮುನಿಗಳನ್ನು ಕುರಿತು ಬರೆದಿರುವಂತಹ ಕೃತಿಯಾಗಿದೆ. ಅದರಲ್ಲಿ ಶ್ರಾವಕರ ಆಚಾರ ವಿಧಿಗಳು ವಿವರಿಸ್ಪಟ್ಟಿದ್ದಲ್ಲದೆ ಮುನಿಗಳಿಗೆ ಸಂಬಂಧಿಸಿದ ಧ್ಯಾನವಿಚಾರಕ್ಕೆ ಪೂರಕವಾದ ೧೨ ಅನುಪ್ರೇಕ್ಷೆಗಳನ್ನು ವಿವರಿಸಲಾಗಿದೆ.[೩] ಮತ್ತೊಂದು ಕೃತಿಯಾದ ಹರಿವಂಶಾಭ್ಯುದಯವು ಜೈನಭಾರತ ಸೇರಿದಂತೆ ಶ್ರೀಕೃಷ್ಣನ ಸೋದರನಾದ ೨೨ನೇ ತೀರ್ಥಂಕರ ಶ್ರೀ ನೇಮಿನಾಥರ ಜೀವನ ವಿವರಣೆಗಳನ್ನು ಒಳಗೊಂಡಿದೆ. ಒಟ್ಟಿನಲ್ಲಿ ಈ ಕೃತಿ ಒಂದೆಡೆ ಜೈನರಿಗೆ ಪೌರಾಣಿಕ ಕೃತಿಯಾಗಿ ಕಂಡುಬಂದರೆ ಮತ್ತೊಂದೆಡೆ ಲೌಕಿಕರಿಗೆ ಭಾರತದಂತೆ (ಮಹಾಭಾರತ) ಕಂಡುಬರುತ್ತದೆ.[೪]

ಮೂರನೆಯ ಕೃತಿಯಾದ ಸತಿಧರ್ಮಸಾರವು ನಿರ್ದಿಷ್ಟವಾಗಿ ಜೈನ ಧರ್ಮಾನುಸಾರಿಗಳಾದ ಮಹಿಳೆಯರನ್ನೇ ಉದ್ದೇಶವಾಗಿಟ್ಟುಕೊಂಡು ಬರೆದಿರುವಂತಹ ಕೃತಿಯಾಗಿದೆ.

ಪೃಥಿವಿಯೊಳು ಜೈನರೆನಿಸುವ
ಸತಿಯರಗಿದನಲ್ಪದಿಂದ ಧರ್ಮಾಧರ್ಮ
ಸ್ಥಿತಿಯಂ ಜಿನಪತಿನುಡಿಯಂ
ಹಿತವಹ ಸತಿಧರ್ಮಸಾರವಂ ವಿರಚಿಸುವೆಂ

ಮೇಲಿನ ಪದ್ಯದಲ್ಲಿ – ಲೋಕದಲ್ಲಿ ಜೈನರು ಎನಿಸುವ "ಸತಿ"ಯರಿಗೆ ಧರ್ಮ ಅಧರ್ಮ ಸ್ಥಿತಿಯನ್ನು ಮತ್ತು ಆತ್ಮಹಿತವನ್ನು ಉಂಟುಮಾಡುವಂತಹ ಜಿನೇಂದ್ರನ ನುಡಿಯಂತೆ ಸತಿಧರ್ಮಸಾರ ಎಂಬ ಕೃತಿಯನ್ನು ರಚಿಸುತ್ತೇನೆ ಎಂದು ಇದೇ ಕೃತಿಯ ಎಂಟನೇ ಪದ್ಯದಲ್ಲಿ ಹೇಳಿಕೊಂಡಿದ್ದಾನೆ.

ಸತಿಧರ್ಮಸಾರದಲ್ಲಿ ಒಟ್ಟು ೧೯೦ ಪದ್ಯಗಳಿವೆ. ಸುಲಲಿತವಾದ ಪದ್ಯಶೈಲಿಯಲ್ಲಿ ಕೃತಿಯನ್ನು ಬರೆದಿದ್ದಾನೆ. ಕೃತಿಯ ಪ್ರಾರಂಭದ ಏಳು ಪದ್ಯಗಳಲ್ಲಿ ಪೂರ್ವದ ಜೈನಕವಿಗಳ ಪರಂಪರೆಯಂತೆಯೇ ಬಂಧವರ್ಮನು ಪಂಚಗುರುಸ್ತುತಿಯನ್ನು ಮತ್ತು ಸರಸ್ವತಿಯನ್ನು ವಂದಿಸಿ ಪ್ರಾರ್ಥಿಸಿದ್ದಾನೆ. ಅನಂತರ ೮ನೆಯ ಪದ್ಯದಲ್ಲಿ ಸತಿಧರ್ಮಸಾರ ಎಂಬ ಕೃತಿಯನ್ನು ರಚಿಸುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿದ್ದಾನೆ.

ಅನಂತರ ೯ನೇ ಪದ್ಯದಲ್ಲಿ ಕೃತಿಯ ವಸ್ತು ಮತ್ತು ಉದ್ದೇಶವನ್ನು ಹೇಳುತ್ತಾನೆ.

---

೩. ಎನಿತನುಪ್ರೇಕ್ಷೆಯವಲ್ಲಮ
ನನುವಾಗಿಯೇ ಪೇಳ್ದಿ ಬಂಧುವರ್ಮಕವೀಂದ್ರಂ ।
ಮನವೊಲಿದು ಕೇಳ್ವುದೆಲ್ಲರು
ಘನಸಾರ ಸುಬೋಧೆ ಜೀವಸಂಬೋಧನೆಯಂ ॥

೪. ಹರಿವಂಶಾಭ್ಯುದಯಂ – ಸಂ. ಬಿ.ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೪.

ದೇವರು ಶಾಸ್ತ್ರಂ ಗುರುಗಳ
ಭಾವವನತಿಕಿರಿದೆ ವ್ರತಚರಿತ್ರವ ಕಿರಿದಂ
ಸಾವದ್ಯರಹಿತ ಕಿರಿದಂ
ಶ್ರಾವಕ ವಧುಗಳಿಗೆ ಅರಿದವರಿಗೆ ಪೇಳ್ವೆಂ

ಈ ಪದ್ಯದಲ್ಲಿ ಕವಿಯು ಶ್ರಾವಕ ವಧುಗಳನ್ನು ಉದ್ದೇಶಿಸಿ ಜೈನಪರಿಭಾಷೆಯಲ್ಲಿ ದೇವರು ಎಂದರೆ ಯಾರು, ಶಾಸ್ತ್ರ ಎಂಬುದು ಯಾವುದು, ಗುರುಗಳು ಎಂಬುವರು ಯಾರು, ಜೈನನಾದವನು ಯಾವ ವ್ರತಗಳನ್ನು ಪಾಲಿಸಬೇಕು, ಜೈನಶ್ರಾವಕರ ವ್ರತಗಳು ಯಾವುವು ಎಂಬಿತ್ಯಾದಿಯಾದ ವಿಷಯಗಳನ್ನು ಸ್ವಲ್ಪದರಲ್ಲಿ ತಿಳಿಸುತ್ತೇನೆ ಎಂದು ಪ್ರಾರಂಭಿಸುತ್ತಾನೆ. ಅನಂತರದ ಮೂರು ಪದ್ಯಗಳಲ್ಲಿ (೧೦, ೧೧, ೧೨) ಮೇಲೆ ಹೇಳಿರುವ ಜೈನಗೃಹಸ್ಥರಾದವರು ಎಂತಹ ದೇವರನ್ನು ಆರಾಧಿಸಬೇಕು, ಅವನ ಸ್ವರೂಪ ಏನು, ಜಿನಶಾಸ್ತ್ರ ಯಾವುದು, ಗುರುಗಳು ಯಾರು, ಅವರ ಸ್ವರೂಪ ಏನು ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಜೈನಶ್ರಾವಕಾಚಾರಗಳಲ್ಲಿ ಸಮ್ಯಕ್‌ದರ್ಶನ ಎಂಬ ಮೋಕ್ಷಮಾರ್ಗದ ಮೊದಲ ಹಂತವನ್ನು ಹೇಳಲಾಗಿದೆ. ಅದು ಜೈನಧರ್ಮದ ಮೂಲಬೀಜ ಇದ್ದಂತೆ. ಆ ಬೀಜರೂಪದ ಆಸಕ್ತಿ, ಶ್ರದ್ಧೆ ಅಥವಾ ನಂಬಿಕೆ ಎಂಬುದು ಗಾಢವಾದಾಗ ಯಾವುದೇ ವ್ಯಕ್ತಿಯು ಧರ್ಮದಲ್ಲಿ ಸ್ಥಿರನಾಗುತ್ತಾನೆ ಎಂಬ ಕಾರಣದಿಂದ ಇಲ್ಲಿ ಯಥಾರ್ಥ ದೇವಗುರು ಶಾಸ್ತ್ರಗಳ ಪ್ರಸ್ತಾವನೆಯನ್ನು ಮೊದಲಿಗೆ ಮಾಡಲಾಗಿದೆ. ೧೮ ದೋಷರಹಿತನು ಅನಂತಗುಣಗಳಿಗೆ ಆಶ್ರಯನು, ಕಾಮವನ್ನು ಕೆಡಿಸಿದವನು, ಕಳಂಕರಹಿತನು, ಸಕಲಜೀವಹಿತ ಚಿಂತಕನು, ಕರ್ಮಗಳೆಲ್ಲವನ್ನು ನಷ್ಟಗೊಳಿಸಿರುವವನು ಆದ ವ್ಯಕ್ತಿಯೇ ದೇವನು. ಅಂತಹವನ ವಚನವೇ ಶಾಸ್ತ್ರ. ಏಕೆಂದರೆ ಅದು ಪೂರ್ವಾಪರ ವಿರೋಧವಲ್ಲದ್ದು. ಇದನ್ನು ಬಿಟ್ಟು ಬೇರೆ ಯಾವುದೂ ಶಾಸ್ತ್ರವಲ್ಲ ಎಂದು ಶಾಸ್ತ್ರದ ಸ್ವರೂಪವನ್ನು ಹೇಳಿದ್ದಾನೆ. ಇಂದ್ರಿಯವಿಷಯುಗಳಿಗೆ ಸಿಲುಕದ ೨೪ ಪರಿಗ್ರಹಗಳಿಲ್ಲದವನು ಸುಜ್ಞಾನಿಯಾದವನು, ಶೀಲಗುಣವುಳ್ಳವನು, ಹಿಂಸಾಕ್ರಿಯೆಗಳಲ್ಲಿ ತೊಡಗದವನು ಯಥಾರ್ಥ ಗುರುವಾಗಿದ್ದಾನೆ.

ಮೇಲೆ ಹೇಳಿದ ಸಮ್ಯಕ್‌ದರ್ಶನಕ್ಕೆ ದೃಢತೆಯನ್ನುಂಟುಮಾಡಲು ಪೂರಕವಾದ ೮ ಅಂಗಗಳನ್ನು ಅನಂತರದಲ್ಲಿ ಹೇಳಲಾಗಿದೆ :

೧. ನಿಶ್ಶಂಕಾ ೨. ನಿಃಕ್ಷಾಂಕ್ಷಾ ೩. ನಿರ್ವಿಚಿಕಿತ್ಸಾ ೪. ಅಮೂಢ ದೃಷ್ಟಿ ೫. ಉಪಗೂಹನ ೬. ಸ್ಥಿತೀಕರಣ ೭. ವಾತ್ಸಲ್ಯ ೮. ಧರ್ಮಪ್ರಭಾವನ.

ಈ ಕುರಿತಾಗಿ ೧೩ ನೆಯ ಪದ್ಯದಿಂದ ೨೦ನೆಯ ಪದ್ಯದವರಗೆ ವಿವರಣೆಯನ್ನು ನೀಡಲಾಗಿದೆ. ನಿಶ್ಶಂಕಾ ಎಂದರೆ ಜಿನಶಾಸ್ತ್ರಗಳನ್ನು ಬೋಧಿಸುವ ವಿಶಾಲವಾದ ಧರ್ಮಾಧರ್ಮಗಳನ್ನು ನಿತ್ಯವೂ ಕೇಳಿಸಿಕೊಂಡು ಅವುಗಳ ಬಗೆಗೆ ಸಂದೇಹಪಡದೆ ಇರುವುದು.

ನಿಃಕಾಂಕ್ಷಾ ಎಂದರೆ ಸಪ್ತಧಾತುಗಳಿಂದ ಕೂಡಿದ ಕ್ಲೇಶ ಮತ್ತು ದುಃಖ ಉಂಟುಮಾಡುವ, ಕರ್ಮದಿಂದ ಕೂಡಿರುವ ಈ ಶರೀರದ ಬಗೆಗೆ ಅತಿ ಪ್ರೀತಿ ಇಟ್ಟುಕೊಳ್ಳದಿರುವುದು. ಗುರುಗಳು ಆರ್ಯಿಕೆಯರು ಇತರರ ಶರೀರದಲ್ಲಿ ಹುಟ್ಟುವ ರೋಗಾದಿಗಳ ಬಗೆಗೆ ಅಸಹ್ಯಪಡದೆ ಅದನ್ನು ಪರಿಹರಿಸಲು ಸಹಕರಿಸುವುದು ನಿರ್ವಿಚಿಕಿತ್ಸಾ ಎಂಬ ೩ನೆಯ ಅಂಗವಾಗಿದೆ. ತ್ರಿಕರಣಗಳಿಂದ ವೀತರಾಗ ಜಿನನನ್ನು ಉಳಿದು ಬೇರೆ ಯಾವ ದೈವವನ್ನೂ ನೆನೆಯಬಾರದು, ಪೂಜಿಸಬಾರದು ಎಂಬುದು ೪ನೇ ಅಂಗ. ಚಾತುರ್ವರ್ಣಗಳಲ್ಲಿ ಯಾರೊಬ್ಬರ ಮಾತಿನಲ್ಲಾಗಲಿ ಇರುವ ಕುಂದುಕೊರತೆಯನ್ನು ಯಾರೊಡನೆಯೂ ಪ್ರಚಾರ ಮಾಡದೆ ಗೌಪ್ಯವಾಗಿ ಇಡುವುದಕ್ಕೆ ಉಪಗೂಹನ ಎಂದು ಹೆಸರು. ಜಿನಧರ್ಮವನ್ನು ಬಿಡುವವರನ್ನು ಅಕ್ಕರೆಯಿಂದ ತಿಳಿಯಹೇಳಿ ಧರ್ಮದಲ್ಲಿ ಪುನಃ ನೆಲೆಗೊಳಿಸುವುದೇ ೬ನೇ ಅಂಗವಾದ ಸ್ಥಿತೀಕರಣವಾಗಿದೆ. ಪ್ರೀತಿ ಮತ್ತು ವಿನಯದಿಂದ ನಾಲ್ಕು ವರ್ಣಗಳಲ್ಲಿ ಆಯಾ ಜಾತಿಯವರಿಗೆ ಸಹಾಯವನ್ನು ಒದಗಿಸುವಿಕೆಯು ವಾತ್ಸಲ್ಯ ಎಂಬ ಅಂಗವಾಗಿದೆ (೧೯ನೇ ಪದ್ಯ). ಪೂಜ್ಯ ಜಿನದೇವಾಲಯಗಳಲ್ಲಿ ಜಿನಪೂಜೆಮಾಡುವುದು, ಆಗಮಗಳನ್ನು ನಿತ್ಯ ಪ್ರಕಟಮಾಡುವುದು ೮ನೆಯ ಅಂಗವಾದ ಧರ್ಮಪ್ರಭಾವನ ಎಂಬ ಅಂಗವಾಗಿದೆ.

ಇದರ ನಂತರದಲ್ಲಿ ಬಂಧುವರ್ಮನು ಅಹಿಂಸೆ, ಸತ್ಯ, ಅಚೌರ್ಯ, ಸ್ವಪುರುಷ ಸಂತೋಷ, ಪರಿಗ್ರಹ ಪರಿಮಾಣ ಎಂಬ ಐದು ಅಣುವ್ರತಗಳ ವಿವರಣೆಯನ್ನು ಮಾಡುತ್ತಾನೆ. ಅಹಿಂಸಾಣುವ್ರತಕ್ಕೆ ಒಂದೊಂದು ವಾಕ್ಯದಲ್ಲಿ ದೃಷ್ಟಾಂತಗಳನ್ನು ಹೇಳುತ್ತಾನೆ. ಅಲ್ಲಿ ಹಿಟ್ಟಿನ ಕೋಳಿಯನ್ನು ಕತ್ತರಿಸಿದ ಮಾತ್ರಕ್ಕೆ ಅದರ ಪಾಪದ ಫಲವಾಗಿ ರಾಜ ಯಶೋಧರ ಏಳು ಜನ್ಮಗಳಲ್ಲಿ ದುರ್ಗತಿ, ದುರ್ಮರಣಗಳನ್ನು ಪಡೆಯುವಂತಾಯಿತು. ಬೆಸ್ತನೊಬ್ಬನಿಗೆ ಸಿಗುವ ಮೊದಲನೆಯ ಮೀನೊಂದನ್ನು ಕೊಲ್ಲುವುದಿಲ್ಲ ಎಂದು ಗುರುಗಳಲ್ಲಿ ವ್ರತಕೈಗೊಂಡಿದ್ದರ ಫಲವಾಗಿ ರಾಜನಾದನು ಮತ್ತು ದೇವಲೋಕದ ದೇವನಾದನು ಎಂದು ದೃಷ್ಟಾಂತಗಳನ್ನು ಹೇಳಿದ್ದಾನೆ (೨೧ ನೇ ಪದ್ಯದಿಂದ ೨೮ನೇ ಪದ್ಯದವರೆಗೆ). ಇದಾದನಂತರ

೧. ದಿಗ್ವ್ರತ ೨. ಅನರ್ಥದಂಡ ವ್ರತ ೩. ಭೋಗೋಪಭೋಗಪರಿಮಾಣವ್ರತ
೪. ದೇಶಾವಕಾಶಿಕ ವ್ರತ ೫. ಸಾಮಯಿಕ ವ್ರತ ೬. ಪ್ರೋಷಧೋಪವಾಸವ್ರತ
೭. ಅತಿಥಿ ಸಂವಿಭಾಗವ್ರತಗಳನ್ನು ವರ್ಣಿಸಲಾಗಿದೆ.

ಈ ವ್ರತಗಳಲ್ಲಿ ಮೊದಲ ೩ ವ್ರತಗಳು ಗುಣವ್ರತಗಳು ಆಗಿವೆ. ಇವುಗಳು ಅಹಿಂಸಾದಿ ಐದು ಅಣುವ್ರತಗಳ ಆಚರಣೆಯನ್ನು ಹೆಚ್ಚು ವೃದ್ಧಿಪಡಿಸುತ್ತವೆ. ಆದುದರಿಂದ ಈ ವ್ರತಕ್ಕೆ ಗುಣವ್ರತ ಎಂದು ಹೆಸರಿಸಲಾಗಿದೆ. ಉಳಿದ ನಾಲ್ಕನ್ನು ಶಿಕ್ಷಾವ್ರತವೆಂದು ಹೇಳಲಾಗಿದೆ. ಏಕೆಂದರೆ ಅವು ಅಹಿಂಸಾವ್ರತದ ಮೂಲಕ ಸಮಾಜದಲ್ಲಿ ಧರ್ಮಯುಕ್ತ ಜೀವನ ನಡೆಸುವಂತಹ ಶಿಕ್ಷಣವನ್ನು ನೀಡಿ ಅಹಿಂಸಾ ಮಾರ್ಗದಲ್ಲಿ ಶ್ರಾವಕನು ನಡೆಯುವಂತೆ ಪ್ರೇರೇಪಿಸುತ್ತವೆ. ಇದೇ ಸಂದರ್ಭದಲ್ಲಿ ದೇವಗುರು

ಶಾಸ್ತ್ರಗಳಲ್ಲಿ ಮೂಢತ್ವವನ್ನು ಬೆಳೆಸಬಾರದು ಎಂಬುದಾಗಿಯೂ ಐದು ಪದ್ಯಗಳಲ್ಲಿ ವಿವರಿಸಿದ್ದಾನೆ. ಇದರ ತರುವಾಯ ಜೈನಶ್ರಾವಕಿ ಆದವಳು ನೀರು ಮತ್ತು ಹಾಲು ಇವುಗಳ ಬಳಕೆ ಮತ್ತು ಶುದ್ಧತೆಯನ್ನು ಕಾಪಾಡುವ ವಿಧಾನವನ್ನು ಬಂಧುವರ್ಮನು ತಿಳಿಸುತ್ತಾನೆ. ಜೈನಶ್ರಾವಕರು ಶೋಧಿಸದಿರುವ ನೀರನ್ನು ಉಪಯೋಗಿಸುವಂತಿಲ್ಲ. ಶೋಧಿಸದ ನೀರಿನಲ್ಲಿ ಮುಹೂರ್ತದೊಳಗೆ ತ್ರಸಕಾಯಜೀವಸಮೂಹ ಉತ್ಪತ್ತಿಯಾಗುತ್ತದೆ. ಆದುದರಿಂದ ಆ ಜೀವಗಳ ರಕ್ಷಣೆಗಾಗಿ ನೀರನ್ನು ಶೋಧಿಸಬೇಕು; ಜೀವದಯೆಯನ್ನು ಪಾಲಿಸಬೇಕು ಎಂದು ಹೇಳಲಾಗಿದೆ.

ಜೈನಶ್ರಾವಕಿಯನ್ನು ಕುರಿತಾಗಿ ಕವಿ ಬಂಧುವರ್ಮ ಬಹಳ ಅಕ್ಕರೆಯಿಂದ ಆಚಾರದ ನಿಯಮವನ್ನು ಹಿತೋಪದೇಶ ರೂಪದಲ್ಲಿ ಉಪದೇಶಿಸುತ್ತಾನೆ. ಅಲ್ಲಿ ಬರುವ ಪ್ರಮುಖ ಅಂಶಗಳೆಂದರೆ ನೀರು, ಹಾಲು, ಭತ್ತ, ಒರಳು, ಒನಕೆ, ಗೋಧಿ, ಬೀಸುವಕಲ್ಲು, ದ್ವಿದಳ ಧಾನ್ಯ, ಎಳ್ಳೆಣ್ಣೆ, ತಿನಿಸುಗಳು, ಚಿಬ್ಬಲು, ಅನ್ನ, ಪಾಯಸಾದಿ ಭಕ್ಷ್ಯ ಇತ್ಯಾದಿ ಪದಾರ್ಥಗಳ ಸ್ವಚ್ಛತೆ, ಶುದ್ಧತೆ. ಇದನ್ನು ಅನುಸರಿಸುವ ವಿಧಾನವನ್ನು, ಜೈನಧರ್ಮದ ಆಚಾರಪದ್ಧತಿಯ ಹಿನ್ನೆಲೆಯಲ್ಲಿ ಬಹಳ ಸೂಕ್ಷ್ಮವಾಗಿ ಹೇಳಲಾಗಿದೆ. ಮೇಲೋಗರ, ಅಡಿಗೆಗೆ ಉಪಯೋಗಿಸುವ ಪಾತ್ರೆಗಳು, ತಳಿಗೆ, ತಂಬಿಗೆ, ಮಡಿಕೆ, ಕೈಬಟ್ಟಲು, ಬೆರಣಿ, ದೀವಿಗೆ, ಹೆಂಚು, ಕಾವಲಿ, ಮುಟ್ಟು, ಪಡಗ, ಹಣ್ಣು ತರಕಾರಿ, ಉಪ್ಪಿನಕಾಯಿ, ಇಂಗು ಇತ್ಯಾದಿ ವಸ್ತುಗಳನ್ನು ಬಳಕೆ ಮಾಡುವಿಕೆಯ ವಿಧಾನ, ಅವುಗಳ ಶುದ್ಧತೆಯನ್ನು ಕಾಪಾಡಿಕೊಳ್ಳುವಲ್ಲಿ ಜೈನಶ್ರಾವಕಿಯಾದವಳು ತನ್ನಿಂದಲೂ ಹಾಗೂ ಪರರಿಂದಲೂ ಜೀವವಧೆ ಆಗದಂತೆ ನೋಡಿಕೊಳ್ಳಲು ಕವಿಯು ಜೈನಶ್ರಾವಕರಿಗೆ ನಯದ ಉಪದೇಶವನ್ನು ನೀಡಿದ್ದಾನೆ.[೫]

ಈ ಮಧ್ಯೆ ನಾಲ್ಕು ಪ್ರಕಾರದ ದಾನಗಳಾದ ಆಹಾರದಾನ, ಔಷಧದಾನ, ಅಭಯದಾನ ಮತ್ತು ಶಾಸ್ತ್ರದಾನಗಳನ್ನು ವಿವರಿಸಲಾಗಿದ್ದು ಮುನಿಗಳಿಗೆ ನೀಡುವಂತಹ ಪರಿಶುದ್ಧ ಭಕ್ತಿಯಿಂದ ಕೂಡಿದ ಆಹಾರದಾನ ಶ್ರೇಷ್ಠವಾದದ್ದೆಂದೂ, ದಾನ ಕೊಡುವಾಗ ಸಪ್ತಗುಣಸಹಿತರಾಗಿ ಸಂತೋಷಸಹಿತರಾಗಿ, ದುರ್ವಚನ ಇಲ್ಲದವರಾಗಿ, ವಿನಯವಂತರಾಗಿ, ಅವರನ್ನು ಬರಮಾಡಿಕೊಂಡು ಭಕ್ತಿ ವಿನಯ ಗೌರವಗಳಿಂದ ಆಹಾರದಾನ ಮಾಡಬೇಕೆಂದೂ ಬಂಧುವರ್ಮಕವಿ ಹೇಳುತ್ತಾನೆ. ಶ್ರಾವಕರು ಮತ್ತು ಮುನಿಗಳಿಗೆ ಎದುರಾಗುವ ಆಪತ್ತು ವಿಪತ್ತುಗಳನ್ನು ನಿವಾರಿಸಿ ಅಭಯವನ್ನು ನೀಡಬೇಕು. ರೋಗರುಜಿನಗಳು ಬಾಧಿಸಿದಾಗ ಅಂತಹ ಪೀಡೆಗೊಳಗಾದ ಶ್ರಾವಕ, ಶ್ರಾವಕಿ, ಆರ್ಯಿಕಾ ಮತ್ತು ಮುನಿವರ್ಗವೆಂಬ ಚಾತುರ್ವರ್ಣಕ್ಕೆ ಯೋಗ್ಯ ಔಷಧೋಪಚಾರಗಳನ್ನು ಮಾಡಬೇಕು. ಹಾಗೆಯೇ ಶಾಸ್ತ್ರದಾನವು ಜ್ಞಾನವನ್ನು ಹೆಚ್ಚಿಸುವ ದಾನ; ಅತಿಸುಖವೆಂಬ ಸ್ವರ್ಗ ಮೋಕ್ಷ ಪದಗಳನ್ನು ದೊರಕಿಸಿಕೊಡುವುದು.

೫. ಸತಿಧರ್ಮಸಾರ : ಸಂಪಾದಕ ಮತ್ತು ಅನುವಾದಕ ಶ್ರೀ ಬಿ.ಎಸ್. ಸಣ್ಣಯ್ಯ, ಕನಕಗಿರಿ ಪ್ರಕಾಶನ, ಪದ್ಯ ಸಂಖ್ಯೆ ೪೩ ರಿಂದ ೧೬೩, ಪುಟಸಂಖ್ಯೆ ೧೨ ರಿಂದ ೪೪.

ಆದುದರಿಂದ ಶಾಸ್ತ್ರದಾನವು ಅತ್ಯುತ್ತಮವಾದುದು. ಗುರುಗಳಿಂದ ಧರ್ಮಾಧರ್ಮಸ್ವರೂಪವನ್ನು ಕೇಳಿ ತಿಳಿದುಕೊಳ್ಳಬೇಕು ಹಬ್ಬಹರಿದಿನಗಳಲ್ಲೂ ಜಿನಮಂದಿರಕ್ಕೆ ಹೋಗಿ ವಂದಿಸದಿದ್ದರೆ ಕಾಡುಬೆಟ್ಟಗಳಲ್ಲಿನ ಮೃಗಗಳ ಪಾಡಿನಂತಾಗುತ್ತದೆ. ಕೃತಾರ್ಥವಾದ ಬದುಕು ಇಹಪರಗಳಲ್ಲಿ ಸಫಲತೆ ಉಂಟುಮಾಡುತ್ತದೆ. ಸತಿಯಾದವಳು ಯಾವಾಗಲೂ ಜಿನಪೂಜೆ, ಧರ್ಮಕಾರ್ಯಗಳಲ್ಲಿ ತೊಡಗಿರಬೇಕು. ಲೋಕದಲ್ಲಿ ಇಂದ್ರನಿಂದ ಪೂಜಿತನಾದ ಜಿನನು ಇರಲು, ಹೆಚ್ಚು ಅಜ್ಞಾನಿಯಾದ ಕೀಳುದೈವವನ್ನು ಅನುಸರಿಸುವುದು, ಪೂಜಿಸುವುದು ಸರಿಯೇ? ಕುದೈವಗಳು ಪುಣ್ಯವನ್ನು ಪಾಪವಾಗಿ ಮಾಡಲಾರವು. ಹಾಗೆಯೇ ಪಾಪವನ್ನು ಪುಣ್ಯವಾಗಿಸಲಾರವು. ಜಿನರ ಉಪದೇಶವನ್ನು ಅನುಸರಿಸಿದರೆ ಮೂರು ಲೋಕಗಳಲ್ಲಿ ಸುಖ, ರೂಪ, ಕುಲ, ಸಂಪತ್ತುಗಳಿಂದ ಕೂಡಿದವರಾಗುತ್ತಾರೆ ಮತ್ತು ಅನಂತ ಸುಖದ ಸ್ಥಾನವನ್ನು, ಮೋಕ್ಷವನ್ನು ಪಡೆಯುತ್ತಾರೆ. ನೀರಿನಲ್ಲಿ ಹಾಲನ್ನು ಬೆರೆಸಿದರೆ ಹಂಸವು ನೀರನ್ನು ಬಿಟ್ಟು ಹಾಲನ್ನು ಮಾತ್ರ ಕುಡಿಯುತ್ತದೆ. ಹಾಗೆಯೇ ಜಾಣರಾದವರು ಜಿನನನ್ನು ಪ್ರೀತಿಸುವರು.

ಹೀಗೆ ಬಂಧುವರ್ಮನು ದಾನ ಮತ್ತು ಧರ್ಮಗಳಲ್ಲಿನ ಹಿರಿಮೆಯನ್ನು ಸಾರುತ್ತ ಜೈನಶ್ರಾವಕಿಯರನ್ನು ನಯದಿಂದ ಎಚ್ಚರಿಸುತ್ತಾನೆ.[೭] ಈ ಮಾತುಗಳನ್ನೆಲ್ಲ ಹೇಳಿದ ನಂತರ ಮುಂದೆ ಬಂಧುವರ್ಮನು ಅನುಪ್ರೇಕ್ಷೆಗಳನ್ನು ಜೈನಶ್ರಾವಕಿಯರಿಗೆ ಹೇಳುತ್ತಾನೆ.

ಮೊದಲನೆಯದಾಗಿ, ಅನಿತ್ಯ ಅಥವಾ ಅಧ್ರುವ ಅನುಪ್ರೇಕ್ಷೆಯ ಸಲುವಾಗಿ ದೃಷ್ಟಾಂತ ರೂಪದಲ್ಲಿ ಸಗರ ಚಕ್ರವರ್ತಿಯ ಬಾಳನ್ನು ಉದಾಹರಿಸುತ್ತಾನೆ. ಆ ಚಕ್ರವರ್ತಿಯ ಶರೀರ, ಸಂಪತ್ತು, ಭೋಗಗಳು ಕೂಡ ಶಾಶ್ವತವಲ್ಲ, ಬೇಗ ನಾಶವಾಗುತ್ತವೆ. ಸತ್ಯವಂತ ದೇವತೆ ಕಾಪಾಡಲಾರಳು. ಭದ್ರವಾದ ಕೋಟೆ, ಆನೆ ಕುದುರೆಗಳು, ಹೆತ್ತವರು, ಬಂಧುಗಳು ಕೂಡ ಉಗ್ರ ಯಮನ ಕೋಪವನ್ನು ಎದುರಿಸಲಾರರು ಎಂದು ಅಶರಣ ಅನುಪ್ರೇಕ್ಷೆಯನ್ನು ಕವಿ ಹೇಳಿದ್ದಾನೆ. ಭೂಮಿಯಲ್ಲಿ ಶರೀರ, ಧನ, ಮನೆ, ಬಂಧುವರ್ಗ ಮಕ್ಕಳು ಯಾರೂ ನಿನಗೆ ಸಹಾಯಕರಲ್ಲ. ಯೋಚನೆ ಮಾಡಿದರೆ ಅವೆಲ್ಲವೂ ಅನ್ಯ, ಪರವಸ್ತು. ಇದು ಅನ್ಯತತ್ವ ಅನುಪ್ರೇಕ್ಷೆ. ಹುಟ್ಟುವಾಗ, ಬೆಳೆಯುವಾಗ ನೋವು ರೋಗಗಳನ್ನು ಅನುಭವಿಸುವಲ್ಲಿ ನೀನು ಒಬ್ಬಳೇ ಆಗಿರುವೆ ಎಂಬುದನ್ನು ತಿಳಿ; ಇದು ಏಕತ್ವ ಅನುಪ್ರೇಕ್ಷೆ. ಕೆಳಗೆ ನರಕ, ಮೇಲೆ ಆಕಾಶ, ನಡುವೆ ಮಾನವರು ಲೋಕದ ತುದಿಯಲ್ಲಿ ಮೋಕ್ಷ, ಕೆಳಗೆ ಸ್ವರ್ಗ. ಆದರೆ ಬಹಳ ಸುಖ ಎನಿಸುವ ಮೋಕ್ಷವನ್ನು ಪಡೆಯುವವನೇ ದೇವರು (ಲೋಕಾನುಪ್ರೇಕ್ಷೆ). ೯ ರಂಧ್ರದಿಂದ ನಿರಂತರ ಸುರಿಯುವ ದುರ್ಗಂಧದ ೭ ಧಾತುಗಳ ಶರೀರವನ್ನು ತಿಳಿದುಕೊಂಡು ನೋಡಿದ್ದೇ

೭. ಸತೀಧರ್ಮಸಾರ : ಸಂಪಾದಕ : ಶ್ರೀ ಬಿ.ಎಸ್. ಸಣ್ಣಯ್ಯ, ಕನಕಗಿರಿ ಪ್ರಕಾಶನ, ೧೯೯೮, ಪದ್ಯ ಸಂಖ್ಯೆ ೧೬೩–೧೭೭.

ಆದಲ್ಲಿ ಅದು ದುಃಖದ ಗಣಿ. ಆದ್ದರಿಂದ ಸುವ್ರತಗಳನ್ನು ಕೈಗೊಂಡರೆ ಭವನಾಶವಾಗುತ್ತದೆ (ಅಶುಚಿತ್ವ ಅನುಪ್ರೇಕ್ಷೆ). ಪರಿಗ್ರಹದ ಆಸೆಯಿಂದ ಜೀವಕರ್ಮರಜವನ್ನು ಹೆಚ್ಚಾಗಿ ಹೊಂದುತ್ತದೆ. ಅದು ಹೇಯ, ಅದನ್ನು ದೂರಮಾಡದ ಭಾವ ಕೆಟ್ಟದ್ದು ಎಂದು ಬೇಗನೆ ತಿಳಿ (ಆಸ್ರವಾನುಪ್ರೇಕ್ಷೆ). ಮಿಥ್ಯಾತ್ವ ಎಂಬ ಬಾಗಿಲನ್ನು ಮುಚ್ಚಿದಾಗ ಹಿಂಸೆ ಮೊದಲಾದ ಪಾಪದ್ವಾರವನ್ನು ಉತ್ತಮ ವ್ರತಸಮಿತಿಗಳು ನಾಶಮಾಡುತ್ತವೆ. ಹೀಗೆ ಎಚ್ಚರಿಕೆಯಿಂದ ಇದ್ದು ಒಳಿತನ್ನು ಮಾಡು (ಸಂವರಾನುಪ್ರೇಕ್ಷೆ). ರಾಗ–ದ್ವೇಷ ಪರಿಣಾಮ ವಶದಿಂದ ಕರ್ಮಗಳನ್ನು ಕಟ್ಟಿಕೊಂಡಿರುವುದರಿಂದ ಜೀವ ಬಳಲುತ್ತದೆ. ವ್ರತಗುಣಚಾರಿತ್ರ್ಯಗಳೆಂಬ ನಿರ್ಮಲಜಲದಿಂದ ಕರ್ಮಕಲಂಕವನ್ನು ನೀನು ತೊಳೆದುಬಿಡು (ನಿರ್ಜರಾನುಪ್ರೇಕ್ಷೆ). ಶ್ರಾವಕನಿಗೆ ಹನ್ನೊಂದು ನೆಲೆಗಳಿವೆ; ಮುನಿಗಳಿಗೆ ಧರ್ಮದ ದಶಲಕ್ಷಣಗಳಿವೆ. ಇವುಗಳಿಂದಲ್ಲದೆ ಉನ್ನತವಾದ ಮೋಕ್ಷಸುಖ ದೊರೆಯುವುದಿಲ್ಲ (ಧರ್ಮಾನುಪ್ರೇಕ್ಷೆ). ಮನುಷ್ಯಜನ್ಮ ಅಪೂರ್ವವಾದದ್ದು, ಉತ್ತಮಕುಲದಲ್ಲಿ ಹುಟ್ಟಿದ್ದು ಹೆಚ್ಚು ಅಪೂರ್ವವು, ಜ್ಞಾನಸಂಪಾದನೆಯು ಅಪೂರ್ವವಾದದ್ದು; ದಾನಗುಣ, ತಪಗುಣಗಳಿಂದ ಕೂಡಿರುವುದು ಅತಿ ಅಪೂರ್ವವಾದುದು (ಬೋಧಿದುರ್ಲಭ ಅನುಪ್ರೇಕ್ಷೆ).

ಈ ಮೇಲಿನ ಸಂಗ್ರಹ ವಿವರಗಳಲ್ಲಿ ಕವಿ ಬಂಧುವರ್ಮ ೧೨ ಅನುಪ್ರೇಕ್ಷೆಗಳನ್ನು ಗೃಹಿಣಿಯಾದವಳಿಗೆ ನಯೋಪಾಯದಿಂದ ಬೋಧಿಸಿದ್ದಾನೆ. ಇದನ್ನು ಬಂಧುವರ್ಮನೇ ಸ್ವತಃ ಮುಂದಿನ ಪದ್ಯದಲ್ಲಿ ಹೇಳಿದ್ದಾನೆ. 'ಎನಿತನುಪ್ರೇಕ್ಷೆಯ (ವೆಲ್ಲಮನ)ನುವಾಗಿಯೇ ಪೇಳ್ದಿ ಬಂಧುವರ್ಮಕವೀಂದ್ರಂ ಮನವೊಲಿದು ಕೇಳ್ವದೆಲ್ಲರು ಘನಸಾರ ಸುಬೋಧೆ ಜೀವಸಂಬೋಧನೆಯಂ'.

ಬಂಧುವರ್ಮನ ಸತಿಧರ್ಮಸಾರ ಎಂಬ ಕೃತಿಯಲ್ಲಿ ಒಟ್ಟು ೧೯೦ ಪದ್ಯಗಳಿವೆ. ಅವುಗಳಲ್ಲಿ ಒಬ್ಬ ನವವಿವಾಹಿತೆಯಾದ ಜೈನಶ್ರಾವಕಿ ಅಥವಾ ಜೈನಗೃಹಸ್ಥೆಯಾದವಳು ತನ್ನ ಜೀವನದಲ್ಲಿ ಹೇಗೆ ಧರ್ಮದ ಆಚರಣೆಯನ್ನು ಮಾಡಿಕೊಂಡು ಹೋಗಬೇಕು ಎಂಬುದನ್ನು ಬಹಳ ಸಂಕ್ಷಿಪ್ತವಾಗಿ, ಬಹಳ ನಾಜೂಕಾಗಿ ಹೇಳುತ್ತಾ ಹೋಗುತ್ತಾನೆ. ಅಲ್ಲಲ್ಲಿ ತಂಗಿ, ಮಗಳೇ ಇತ್ಯಾದಿ ಪದಗಳನ್ನು ಬಳಸಿ ಹಿತವಾಗಿ ಮಧುರವಾಗಿ ಶಬ್ದಪ್ರಯೋಗಮಾಡಿ ಒಬ್ಬ ತಂದೆ ತನ್ನ ಮಗಳಿಗೆ ಬುದ್ಧಿಹೇಳುವಂತೆ ಉಪದೇಶ ನೀಡುತ್ತಾ ಹೋಗುತ್ತಾನೆ. ಉದಾಹರಣೆಗೆ,

ಧಾತೇಳರಿಂದಲಾದುದು
ಆತುರದಿಂ ಮರಳಿ ಮರಳಿ ದುಃಖವನುಳ್ಳುದು ।
ಈತನುವರ್ಥಕೃತವಸ್ಥಿರ
ಪ್ರೀತಿಯ ಹಿರಿದಾಗಿ ತಂಗಿ ಮಾಡಲು ಬೇಡಂ ॥೧೪॥
ಗುರುಗಳು ಮಜ್ಜೆಯರುಗಳಂ
ವರ ಜೈನರ್ ಜೈನಿತಿಯರ ದೇಹದಿ ಪುಟ್ಟಿದ ।
ಕರಸಿಕೆ ರುಜೆಮಳ (ವುಮಂ)
ಕರುಣದಿ ಪರಿಹರಿಸು ತಂಗಿ ಪೇಸದಿರೆಂದುಂ ॥೧೫॥

ಸತಿಧರ್ಮಸಾರ

ಇದೇ ರೀತಿಯಾಗಿ ಬಂಧುವರ್ಮಕವಿಯು ಸತಿಧರ್ಮಸಾರದಲ್ಲಿ ಜೈನಶ್ರಾವಕಿಯರನ್ನು ತಂಗಿ, ನಾರಿ ಎಂಬ ವಿಶಿಷ್ಟ ಪದವನ್ನು ಬಾರಿಬಾರಿಗೂ ಬಳಸಿ ಶ್ರಾವಕಿಯರೆಲ್ಲರನ್ನೂ ಸಂಬೋಧಿಸಿ ಶ್ರಾವಕಧರ್ಮವನ್ನು ಉಪದೇಶಿಸಿ ಹೇಳುತ್ತಾನೆ. ಸಂಪೂರ್ಣ ಸತಿಧರ್ಮಸಾರದಲ್ಲಿ ೩೮ ಪದ್ಯಗಳಲ್ಲಿ ಜೈನಶ್ರಾವಕಿಯರೆಲ್ಲರನ್ನೂ ತಂಗಿ, ನಾರಿ ಎಂಬ ಪದಗಳಿಂದ ಸಂಬೋಧಿಸಿದ್ದಾನೆ.

೧೧೩ನೇ ಪದ್ಯವಾಗಿ ಒಂದು ಪ್ರಾಕೃತ ಗಾಥೆಯನ್ನು ಎತ್ತಿಕೊಂಡಿದ್ದಾನೆ. ಅದು ಮುಂದಿನಂತಿದೆ :

ಚವುಏಇಂದಿಯ ತಹಬೀಇಂದಿಯ
ಛಟ ಆಟಉತಿಣ್ಣಿ ಹಂತೀ ।
ದಸಚಉರಿಂದಿಯ ಜೀವಗಣಾ ಬಾರಹ
ಪಂಚಿಂದಿಯಾ ಹೊಂತಿ ॥೧೧೩॥

ನಾಲ್ಕು ದಿನ ಪರಿಯಂತರ ಏಕೇಂದ್ರಿಯವುಂಟು, ಆರು ದಿನಕ್ಕೆ ದ್ವೀಂದ್ರಿಯವುಂಟು; ಎಂಟು ದಿನದೊಳಗೆ ತ್ರೀಂದ್ರಿಯ, ಹತ್ತು ದಿನದೊಳಗೆ ಚತುರೀಂದ್ರಿಯ ಜೀವಗಳಹವು; ಹನ್ನೆರಡು ದಿನಕ್ಕೆ ಪಂಚೇಂದ್ರಿಯ ಜೀವಗಳು ಹುಟ್ಟಿದವು.

ಈ ಗಾಥೆಯನ್ನು ೧೧೨ನೆಯ ಪದ್ಯದ ವಿವರಣೆಗಾಗಿ ಎತ್ತಿಕೊಳ್ಳಲಾಗಿದೆ. ೧೧೨ನೇ ಪದ್ಯದಲ್ಲಿ ಉಪ್ಪಿನಕಾಯಿಯ ಶುದ್ಧತೆ ಎಷ್ಟು ದಿನದವರೆಗೆ ಇರುತ್ತದೆ ಎಂಬುದನ್ನು ಹೇಳಿ, ಅದರ ಸ್ಪಷ್ಟನೆಗಾಗಿ ಮೇಲಿನ ಪ್ರಾಕೃತ ಗಾಥೆಯನ್ನು ಎತ್ತಿಕೊಂಡು ಅದರ ವಿವರಣೆಯನ್ನು ಕನ್ನಡದಲ್ಲಿ ಹೇಳುತ್ತಾನೆ. ಉಪ್ಪಿನಕಾಯಿಯೂ ಹೆಚ್ಚು ದಿನ ಜೀವರಹಿತವಾಗಿ ಇರುವುದಿಲ್ಲ, ಎರಡು ದಿನಕ್ಕೆ ಜೀವಗಳ ಉತ್ಪತ್ತಿ ಅದರಲ್ಲಿ ಆಗುತ್ತದೆ. ಆದುದರಿಂದ ಅದು ಮಾಂಸಸಮಾನ ಮತ್ತು ಅದರ ಉಪಯೋಗದಿಂದ ಪಾಪಬಂಧವಾಗುವುದು ಎಂದಿದ್ದಾನೆ.

ಹೀಗೆಯೇ ವೀಳ್ಯದೆಲೆ, ಜೇನುತುಪ್ಪ, ಹಿಂಗು ಮುಂತಾದ ವಸ್ತುಗಳು ಕೂಡ ಜೈನಶ್ರಾವಕಿಯರಿಗೆ ವರ್ಜ್ಯ ವಸ್ತುಗಳಾಗಿವೆ ಎಂದು ಎಚ್ಚರಿಸುತ್ತಾನೆ. ಸತಿಧರ್ಮಸಾರದಲ್ಲಿ ನಿರೂಪಿತ ಗೃಹಸ್ಥೆಯರ ವ್ರತಗಳ ವಿವರ ಈ ಕೆಳಕಂಡಂತಿದೆ.

ಸಮ್ಯಕ್‌ದರ್ಶನ – ದೇವಗುರುಶಾಸ್ತ್ರಸ್ವರೂಪ – ೯ ರಿಂದ ೧೨
ಸಮ್ಯಗ್‌ದರ್ಶನದ ಎಂಟು ಅಂಗಗಳು – ೧೩ ರಿಂದ ೨೦

ಅಹಿಂಸಾಣುವ್ರತ – ೨೧ ರಿಂದ ೨೩
ಸತ್ಯಾಣುವ್ರತ – ೨೪
ಅಚೌರ್ಯಾಣುವ್ರತ – ೨೫ ಅಣುವ್ರತಗಳು – ೫
ಸ್ವಪುರುಷ ಸಂತೋಷವ್ರತ – ೨೬ (೨೧ ರಿಂದ ೨೭ ಪದ್ಯಗಳವರೆಗೆ)
ಪರಿಗ್ರಹ ಪರಮಾಣುವ್ರತ – ೨೭

ದಿಗ್ವ್ರತ – ೨೯ ಅನರ್ಥ ದಂಡವ್ರತ – ೩೦ ಭೋಗೋಪಭೋಗ ಪರಿಮಾಣವ್ರತ – ೩೧	ಗುಣವ್ರತಗಳು – ೩ (೨೯ ರಿಂದ ೩೧ ರವರೆಗಿನ ಪದ್ಯಗಳು)
ದೇಶಾವಕಾಶಿಕವ್ರತ – ೩೨ ಸಾಮ್ರಾಯಿಕ ವ್ರತ – ೩೩ ಪ್ರೋಷೋಧೋಪವಾಸವ್ರತ – ೩೪ ಅತಿಥಿ ಸಂವಿಭಾಗ ವ್ರತ – ೩೫	ಶಿಕ್ಷಾವ್ರತಗಳು – ೪ (೩೨ ರಿಂದ ೨೫ ಪದ್ಯಗಳವರೆಗೆ)

೧೨ ವ್ರತಗಳನ್ನು ಹೇಳಿದ ಬಳಿಕ ಆ ವ್ರತಗಳ ಅತಿಚಾರಗಳನ್ನು ೩೯ನೆಯ ಪದ್ಯದಿಂದ ೧೭೬ನೆಯ ಪದ್ಯದವರೆಗೆ ವಿವರಿಸಿಕೊಂಡು ಬರುತ್ತಾನೆ. ಅತಿಚಾರ ಎಂದರೆ ೧೨ ವ್ರತಗಳನ್ನು ಪಾಲಿಸುವಾಗ ಆ ವ್ರತಗಳನ್ನು ಮೀರಿ ನಡೆಯುವಂತಹ ಅಥವಾ ಘಟಿಸುವಂತಹ ದೋಷಸಹಿತವಾದ ಆಚರಣೆಗಳು. ಅವುಗಳು ಪಾಪಾಚರಣೆಗಳು. ಅವುಗಳನ್ನು ತನ್ನ ಧಾರ್ಮಿಕ ಜೀವನದಲ್ಲಿ ಉಂಟಾಗದಂತೆ ಎಚ್ಚರವಹಿಸಿ ೧೨ ವ್ರತಗಳನ್ನು ಪಾಲಿಸಬೇಕು ಎಂದು ಗೃಹಸ್ಥೆಯಾದ ಶ್ರಾವಕಿಯನ್ನು ಎಚ್ಚರಿಸುತ್ತಾ ಬಂಧುವರ್ಮ ಕವಿ ವಿವರಿಸುತ್ತಾನೆ. ಈ ಎಲ್ಲ ವಿವರಣೆಗಳ ನಂತರ ೧೨ ಅನುಪ್ರೇಕ್ಷೆಗಳನ್ನು ಒಂದೊಂದಾಗಿ ೧೭೮ನೇ ಪದ್ಯದಿಂದ ೧೮೯ನೇ ಪದ್ಯದವರೆಗೆ ವಿವರಿಸುತ್ತಾನೆ.

ಈ ಪ್ರಕಾರ ಬಂಧುವರ್ಮನು ತನ್ನ ಸತಿಧರ್ಮಸಾರ ಎಂಬ ಕೃತಿಯಲ್ಲಿ ಗುಣವ್ರತ, ಸಮ್ಯಕ್‌ದರ್ಶನ, ಶಿಕ್ಷಾವ್ರತ ಮತ್ತು ಅವುಗಳ ಅತಿಚಾರಗಳನ್ನು ಹೇಳುತ್ತಾನೆ. ಇವುಗಳ ನಂತರ ಕವಿಯು ನೇರವಾಗಿ ೧೨ ಅನುಪ್ರೇಕ್ಷೆಗಳನ್ನು ವಿವರಿಸುತ್ತಾನೆ. ಈ ಪ್ರಕಾರದ ವಿವರಣೆ ಬಹುತೇಕ ಯಾವ ಶ್ರಾವಕಾಚಾರಕೃತಿಗಳಲ್ಲಿಯೂ ಕಂಡು ಬರುವುದಿಲ್ಲ. ಬಹುತೇಕ ಎಲ್ಲಾ ಶ್ರಾವಕಾಚಾರ ಕೃತಿಗಳಲ್ಲಿ ೧೨ ವ್ರತಗಳನ್ನು, ಅತಿಚಾರಗಳನ್ನು ಮತ್ತು ಸಮ್ಯಕ್ ದರ್ಶನ ಅದರ ಎಂಟು ಅಂಗ ಸಮ್ಯಕ್‌ಜ್ಞಾನಗಳನ್ನು ಹೇಳಿ, ಅನಂತರ ಸಮ್ಯಕ್‌ಚಾರಿತ್ರ್ಯದ ನಿರೂಪಣೆಯಲ್ಲಿ ಅಷ್ಟಮೂಲಗುಣ ಮತ್ತು ೧೨ ವ್ರತ ಹಾಗೂ ಹನ್ನೊಂದು ಪ್ರತಿಮೆಗಳು ಹಾಗೂ ಸಲ್ಲೇಖನವ್ರತವನ್ನು ಹೇಳಿರುವುದು ಕಂಡುಬರುತ್ತದೆ. ಆದರೆ ಬಂಧುವರ್ಮ ಈ ಕ್ರಮುವನ್ನು ಅನುಸರಿಸಿದಂತೆ ಕಂಡುಬರುವುದಿಲ್ಲ. ಹನ್ನೊಂದು ಪ್ರತಿಮೆಗಳ ಬಗೆಗೆ ವ್ರತಗಳ ನಿರೂಪಣೆಯ ನಂತರ ಈ ಮುಂದಿನಂತೆ ಹೇಳುತ್ತಾನೆ :

ಹನ್ನೆರಡು ತೆರದ ವ್ರತಗಳ
ಚೆನ್ನಾಗಿಯೆ ಕೇಳು ಆವರತೀಚಾರಗಳಂ ।
ಸನ್ನುತ ಮುನಿವರರಿಂದಂ
ಹನ್ನೊಂದುಂ ನೆಲೆಯ ಶ್ರಾವಕರ ಕೇಳ್ ತಿಳಿ ನೀಂ ॥

ಎಂದು ಎರಡೇ ಸಾಲುಗಳಲ್ಲಿ ಹನ್ನೊಂದು ನೆಲೆಗಳ ಬಗೆಗಿನ ತನ್ನ ನಿಲುವನ್ನು ತಿಳಿಸುತ್ತಾನೆ. ಇದನ್ನು ಗಮನಿಸಿದಾಗ ಆ ಹನ್ನೊಂದು ನೆಲೆಗಳನ್ನು ಆಚರಿಸುವ

ಸಾಧ್ಯತೆಗಳು ಜೈನಗೃಹಸ್ಥೆಯಾದವಳಿಗೆ ಇಲ್ಲ ಎನ್ನುವಂತೆ ಕಾಣುತ್ತದೆ. ಅದಕ್ಕಾಗಿಯೇ ಕವಿ ಬಂಧುವರ್ಮನು ಮೇಲಿನ ಪದ್ಯದ ಕೊನೆಯ ಎರಡು ಸಾಲುಗಳಲ್ಲಿ ಮುನಿವರರಿಂದ ಹನ್ನೊಂದು ನೆಲೆಯ ಶ್ರಾವಕರ ಆಚಾರವನ್ನು ನೀನು ಕೇಳಿ ತಿಳಿದುಕೊ ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಏಕೆಂದರೆ ಶ್ರಾವಕಿಯರ ಜೀವನದಲ್ಲಿ ಈ ಹನ್ನೊಂದು ನೆಲೆಗಳ ಆಚರಣೆ ಕಠಿಣ ಎಂದು ಬಂಧುವರ್ಮ ಶ್ರಾವಕಿಯರನ್ನುದ್ದೇಶಿಸಿ, ಆ ಹನ್ನೊಂದು ನೆಲೆಗಳು ಯಾವುವು ಎಂಬುದನ್ನು ಕೇಳಿ ತಿಳಿದುಕೊ ಎಂದು ಮಾತ್ರ ಹೇಳಿದ್ದಾನೆ. ಎರಡನೆಯದಾಗಿ, ಜೈನಶ್ರಾವಕರ ಜೀವನದ ಅಂತಿಮ ಆಚರಣೆಯ ಘಟ್ಟವೇ ಸಲ್ಲೇಖನ ಆಗಿದೆ. ಇದನ್ನು ಶ್ರಾವಕನು ಅಥವಾ ಶ್ರಾವಕಿ ಆಚರಿಸಬೇಕು. ಸಲ್ಲೇಖನ ಸ್ವೀಕರಿಸುವವರು ಮರಣಕಾಲದಲ್ಲಿ ಉತ್ತಮ ಭಾವನೆವುಳ್ಳವರಾಗಿ ಶರೀರದ ಸಂಸಾರದ, ಬದುಕಿನ ಕುರಿತ ಆಸೆ ಆಕಾಂಕ್ಷೆಗಳನ್ನು ತೊರೆದು ಉತ್ತಮ ಧರ್ಮಭಾವನೆಗಳನ್ನು ಭಾವಿಸುತ್ತಾ ಪ್ರಾಣ, ಶರೀರ ತ್ಯಾಗವನ್ನು ಮಾಡಬೇಕೆಂದು ನಿಯಮವಿದೆ. ಬಂಧುವರ್ಮನು ಸಲ್ಲೇಖನದ ಬದಲಿಗೆ ಅನುಪ್ರೇಕ್ಷೆಗಳನ್ನು ಹೇಳುತ್ತಾನೆ. ಅನುಪ್ರೇಕ್ಷೆಗಳು ಮನುಷ್ಯಜೀವನದಲ್ಲಿ ಧರ್ಮಭಾವನೆಯನ್ನು ಹೆಚ್ಚಿಸುವಂತಹ ಭಾವನೆಗಳಾಗಿವೆ, ವಿರಕ್ತಿಯನ್ನು ಮೂಡಿಸುವಂತಹುಗಳಾಗಿವೆ. ಜೈನಶಾಸ್ತ್ರಗಳ ಅನುಸಾರ ೧೨ ಅನುಪ್ರೇಕ್ಷೆಗಳು ಧ್ಯಾನ ಎಂಬ ತಪದಲ್ಲಿ ಮಾಡುವಂತಹ ವಿಶೇಷ ಭಾವನೆಗಳಾಗಿವೆ. ಈ ಕಾರಣವಾಗಿ ಸಲ್ಲೇಖನದ ಬದಲಿಗೆ ಗೃಹಸ್ಥೆಯರಾದವರು ಪದೇ ಪದೇ ವಿಚಾರಮಾಡಬೇಕಾಗಿರುವ ಹನ್ನೆರಡು ಅನುಪ್ರೇಕ್ಷಾ ಭಾವಗಳನ್ನು ತಮ್ಮ ಅಂತ್ಯಕಾಲದಲ್ಲಿಯೂ ಅಥವಾ ಮರಣಕಾಲದಲ್ಲಿಯೂ ಭಾವಿಸುತ್ತಾ ದೇಹತ್ಯಾಗ ವಿಧಿಯನ್ನು ಆಚರಿಸಲಿ ಎಂದು ಪರೋಕ್ಷವಾಗಿ ಹೇಳಿರಬೇಕೆಂದು ಭಾವಿಸಬಹುದಾಗಿದೆ. ಈ ಪ್ರಕಾರ ಸತಿಧರ್ಮಸಾರವು ಒಂದು ಉತ್ಕೃಷ್ಟ ಕೃತಿಯಾಗಿದ್ದು, ಜೈನಗೃಹಸ್ಥೆಯರ ಆಚಾರಪಾಲನೆಯ ವಿವರಗಳನ್ನು ನಿರೂಪಿಸುವಂತಹ ಒಂದು ಗಮನಾರ್ಹ ಕೃತಿ ಎಂದು ಹೇಳಬಹುದಾಗಿದೆ.

ㅁㅁㅁ

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಪ್ರಮುಖ ಸಾಹಿತಿಗಳು

– ಶಿವಲಿಂಗಮೂರ್ತಿ

ಒಂದು ಪ್ರದೇಶದ ಸಂಸ್ಕೃತಿಯ ನಿರ್ಮಾಣದಲ್ಲಿ ಅನೇಕ ಸಂಗತಿಗಳು ಪ್ರಧಾನ ಪಾತ್ರ ವಹಿಸುತ್ತವೆ. ಜೀವನ ವಿಧಾನವನ್ನು ಸಂಸ್ಕೃತಿಯಾಗಿ ಗ್ರಹಿಸುವ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯ, ಶಾಸನ ಸಾಹಿತ್ಯ – ಇವುಗಳು ಸಂಸ್ಕೃತಿ ನಿರ್ಮಾಣದಲ್ಲಿ ಹೇಗೆ ಪಾತ್ರ ವಹಿಸಿವೆ ಎಂಬುದರ ಅಧ್ಯಯನ ಎಷ್ಟು ಮುಖ್ಯವೋ ಶಿಷ್ಟ ಸಾಹಿತ್ಯದ ಅಧ್ಯಯನವೂ ಅಷ್ಟೇ ಮುಖ್ಯವಾಗಿದೆ. ಹೀಗಾಗಿ ಸ್ಥಳೀಯ ಸಂಸ್ಕೃತಿಗೆ ಸಂಬಂಧಿಸಿದ ಲೇಖಕರ/ ಕವಿಗಳ ಮುಖ್ಯ ಕೃತಿಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ತೀ.ನಂ.ಶ್ರೀಕಂಠಯ್ಯ : ೧೯೦೬ ರ ನವೆಂಬರ್ ೨೬ ರಂದು ತಾಲ್ಲೂಕಿನ ಪ್ರಸಿದ್ಧ ಸ್ಥಳ ತೀರ್ಥಪುರದಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ತೀರ್ಥಪುರ, ಚಿಕ್ಕನಾಯಕನಹಳ್ಳಿ, ತುಮಕೂರುಗಳಲ್ಲಿ ಮಾಡಿದರು. ೧೯೨೬ರಲ್ಲಿ ಬಿ.ಎ. ಪದವಿಯನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಪಾಸು ಮಾಡಿದರು. ನಂತರ ಇಂಗ್ಲಿಷ್ ಮತ್ತು ಕನ್ನಡ ಎರಡೂ ವಿಷಯಗಳಲ್ಲಿ ಎಂ.ಎ. ಪದವಿ ಗಳಿಸಿದರು. ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಂದಾಯ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದ ಇತರ ಸಾಹಿತ್ಯದ ಬಗ್ಗೆ, ಅಧ್ಯಾಪನದ ಬಗ್ಗೆ ಮೊದಲಿನಿಂದ ಒಲವಿದ್ದ ಕಾರಣ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾದರು.

ಕನ್ನಡ, ಸಂಸ್ಕೃತ, ಇಂಗ್ಲಿಷ್ ಈ ಮೂರೂ ಭಾಷೆಗಳಲ್ಲಿ ಪ್ರಭುತ್ವ ಹೊಂದಿದ್ದು ಕಾವ್ಯ, ಅಲಂಕಾರ, ವ್ಯಾಕರಣ, ಛಂದಸ್ಸು, ಗ್ರಂಥ ಸಂಪಾದನೆ, ಭಾಷಾಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲೂ ನೈಪುಣ್ಯ ಸಾಧಿಸಿದ್ದರು. ಕವಿ. ವಿಮರ್ಶಕ, ಸಂಶೋಧಕ ಎಲ್ಲವೂ ಆಗಿದ್ದರು. ತೀ.ನಂ.ಶ್ರೀಯವರ ಸಮಯ ಪರಿಪಾಲನೆ, ಬೋಧನಾ ವಿಧಾನ, ಶಿಸ್ತು ಇವು ವಿದ್ಯಾರ್ಥಿಗಳ ಮೇಲೆ ತುಂಬಾ ಪ್ರಭಾವ ಬೀರಿದ್ದವು. "ಅವರ ಪಾಠವನ್ನಾಗಲೀ, ಭಾಷಣವನ್ನಾಗಲೀ ಕೇಳುತ್ತ ಕುಳಿತರೆ ವೇಳೆ ಕಳೆದುದೇ ಅರಿವಾಗುತ್ತಿರಲಿಲ್ಲ. ಒಮ್ಮೆ ಪತ್ರಿಕೋದ್ಯಮವನ್ನು ಕುರಿತು ಅವರು ಮಾಡಿದ ಭಾಷಣವೊಂದನ್ನು ಕೇಳಿ ನಾನು ಬೆರಗಾದುದುಂಟು; ಆ

ವಿಷಯದ ಮೇಲೆ ಅಷ್ಟೊಂದು ಸ್ವಾರಸ್ಯಪೂರ್ಣವಾಗಿ ಮಾತನಾಡಬಹುದೆಂಬ ಕಲ್ಪನೆ ನನಗಿರಲಿಲ್ಲ."[೧] ಹೀಗೆಂದು ತೀ.ನಂ.ಶ್ರೀ. ಅವರ ಅಧ್ಯಾಪನಕ್ಕೆ ಮಾರು ಹೋದ ಸಿ.ಪಿ. ಕೃಷ್ಣಕುಮಾರ್ ಅಭಿಪ್ರಾಯಪಡುತ್ತಾರೆ. ಒಲುಮೆ, ನಂಟರು, ಕಾವ್ಯಸಮೀಕ್ಷೆ, ಸಮಾಲೋಕನ, ಪಂಪ, ಬಿಡಿ ಮುತ್ತು – ಇವು ಅವರ ಸೃಜನಶೀಲ ಕೃತಿಗಳು. ರಾಕ್ಷಸನ ಮುದ್ರಿಕೆ ವಿಶಾಖದತ್ತನ ಮುದ್ರಾರಾಕ್ಷಸವೆಂಬ ಸಂಸ್ಕೃತ ನಾಟಕದ ಅನುವಾದ. ಕನ್ನಡ ಮಧ್ಯಮ ವ್ಯಾಕರಣ ಎಂಬುದು ವ್ಯಾಕರಣ ಕುರಿತದ್ದು. ಭಾರತೀಯ ಕಾವ್ಯಮೀಮಾಂಸೆ ಕೃತಿ–ಕಾವ್ಯ ಮೀಮಾಂಸಾ ಕೃತಿ. ಹೆಣ್ಣು ಮಕ್ಕಳ ಪದಗಳು, ನಂಬಿಯಣ್ಣನ ರಗಳೆ, ಗದಾಯುದ್ಧ ಸಂಗ್ರಹ ಇವು ಸಂಪಾದಿತ ಕೃತಿಗಳಾಗಿವೆ.

'ಒಲುಮೆ' ಕೃತಿ ತೀ.ನಂ.ಶ್ರೀ ಯವರ ಕವಿತಾ ಪ್ರತಿಭೆಗೆ ಹಿಡಿದ ಕೈಗನ್ನಡಿ. ಹೊಸಗನ್ನಡ ಸಾಹಿತ್ಯದಲ್ಲಿ ಪ್ರೇಮಗೀತೆಗಳ ಯುಗವನ್ನು ಉದ್ಘಾಟಿಸಿದ ಕೀರ್ತಿ ಈ ಕೃತಿಯದು. ಇದು ೧೯೩೨ ರಷ್ಟು ಹಿಂದೆಯೇ ಪ್ರಕಟವಾಯಿತು. ಇದರಲ್ಲಿ ಬರುವ ಪ್ರಣಯದ ನವುರಾದ ಶುಚಿ ರುಚಿಯಾದ ಚಿತ್ರಗಳು ಕನ್ನಡಕ್ಕೊಂದು ಹೊಸ ಅನುಭವವನ್ನೇ ತಂದುಕೊಟ್ಟವು."[೨] ತೀ.ನಂ.ಶ್ರೀ ಅವರ ಅಪಾರ ವಿದ್ವತ್ತು ಅವರನ್ನು ವಿವಿಧ ಉನ್ನತ ಹುದ್ದೆಗಳಿಗೇರಿಸಿತು. "ಪ್ರೊಫೆಸರ್ ಶ್ರೀಕಂಠಯ್ಯನವರು ಹಲವಾರು ಸಭೆ ಸಮ್ಮೇಳನಗಳಿಗೆ, ವಿದ್ವದ್ಗೋಷ್ಠಿಗಳಿಗೆ ಅಧ್ಯಕ್ಷರಾಗಿದ್ದರು. ಅವರು ೧೯೫೭ರಲ್ಲಿ ಓರಿಯಂಟಲ್ ಕಾನ್ಫರೆನ್ಸಿನ ದೆಹಲಿ ಸಮ್ಮೇಳನದ ದ್ರಾವಿಡ ವಿಭಾಗಕ್ಕೂ, ೧೯೬೦ ರಲ್ಲಿ ಅಖಿಲ ಭಾರತ ಭಾಷಾವಿಜ್ಞಾನಿಗಳ ಸಂಘಕ್ಕೂ ಅಧ್ಯಕ್ಷರಾಗಿದ್ದರು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಸಂಪಾದಕ ಮಂಡಳಿಯ ಅಧ್ಯಕ್ಷರಾಗಿ, ಮೈಸೂರು ಸರ್ಕಾರದ ವಿಶ್ವಕೋಶದ ಭಾಷಾವಿಭಾಗದ ಮುಖ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಮೈಸೂರು ಸರ್ಕಾರ ಹಾಗೂ ಭಾರತ ಸರ್ಕಾರದ ವಿವಿಧ ಸಲಹಾ ಸಮಿತಿಗಳಲ್ಲಿ ಅವರು ಸದಸ್ಯರಾಗಿದ್ದರು. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ಆಕಾಶವಾಣಿ, ಮಲಯಾಳಂ ನಿಘಂಟು ಸಮಿತಿ, ಪೂನಾದ ಡೆಕ್ಕನ್ ಕಾಲೇಜು ಮೊದಲಾದವುಗಳೊಡನೆ ಅವರು ಸಂಪರ್ಕ ಹೊಂದಿದ್ದರು."[೩]

ತೀ.ನಂ.ಶ್ರೀ. ಯವರ ಕೃತಿ 'ಭಾರತೀಯ ಕಾವ್ಯಮೀಮಾಂಸೆ'ಗೆ '೧೯೮೮–೮೯ ನೇ ಸಾಲಿನ ಪಂಪ ಪ್ರಶಸ್ತಿ' ಲಭಿಸಿತು. ಸಂಸ್ಕೃತದ ಅನೇಕ ಕಾವ್ಯ ಮೀಮಾಂಸೆಯ ಕೃತಿಗಳ ತಳಹದಿಯ ಮೇಲೆ ತೀ.ನಂ.ಶ್ರೀ. ಸಮಗ್ರವಾದ ವಿವೇಚನೆ ನಡೆಸಿದ್ದಾರೆ. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಮೂರು ಭಾಗಗಳಿವೆ. ಮೊದಲನೆಯದು, ಶಾಸ್ತ್ರ ಬೆಳವಣಿಗೆಯನ್ನು

೧. ಕೃಷ್ಣಕುಮಾರ್ ಸಿ.ಪಿ. – ತೀ.ನಂ.ಶ್ರೀ. ಪಥ – ಪರಿಸರ, ತೀ.ನಂ.ಶ್ರೀ ಸಂಸಾರವರ್ಗ, ಬೆಂಗಳೂರು – ೨೦೦೬, ಪುಟ – ೪೮೪.

೨. ಅದೇ, ೪೮೬

೩. ಅದೇ, ೪೯೦

ನಿರೂಪಿಸುತ್ತದೆ; ಎರಡನೆಯದರಲ್ಲಿ ಕವಿ-ಕಾವ್ಯ-ಸಹೃದಯರ ಬಗೆಗಿನ ವಿವರ; ಮೂರನೆಯ ಭಾಗದಲ್ಲಿ ರಸ-ಧ್ವನಿಗಳ ವಿವೇಚನೆ ಇದೆ. ಬಹುಕಾಲದಿಂದ ಕನ್ನಡ ಕಾವ್ಯಮೀಮಾಂಸೆಗೆ ನಾಡಿನ ಬಹುತೇಕ ಎಲ್ಲ ವಿಶ್ವವಿದ್ಯಾನಿಲಯಗಳು ಈ ಕೃತಿಯನ್ನು ಆಕರ ಕೃತಿಯನ್ನಾಗಿ ಆಯ್ಕೆ ಮಾಡಿವೆ. ಆದರೆ ಪ್ರಸ್ತುತ ದೇಸಿ ಕಾವ್ಯಮೀಮಾಂಸೆಗೆ ಈ ಕೃತಿ ಪೂರಕವಾಗಿಲ್ಲ. ಹಾಗಾಗಿ ಕನ್ನಡಕ್ಕೆ ಬೇಕು ಕನ್ನಡದ್ದೇ ಆದ ಕಾವ್ಯಮೀಮಾಂಸೆ ಎಂಬ ಚರ್ಚೆಗಳು ನಡೆದು ಆ ನಿಟ್ಟಿನಲ್ಲಿ ಸ್ವಲ್ಪ ಕೆಲಸ ಆಗಿದೆ. ಈ ಕೃತಿಯನ್ನು 'Indian Poetics' ಎಂದು ಪ್ರೊ. ಎನ್. ಬಾಲಸುಬ್ರಹ್ಮಣ್ಯ ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ಪಂಪ, ಶ್ರೀವಿಜಯ, ಕುಮಾರವ್ಯಾಸ, ಆಂಡಯ್ಯ, ರತ್ನಾಕರವರ್ಣಿ, ಮುದ್ದಣ ಮೊದಲಾದವರ ಕೃತಿಗಳಲ್ಲಿನ ಕಾವ್ಯಮೀಮಾಂಸಾ ಚರ್ಚೆಗಳನ್ನು ಕಟ್ಟಿಕೊಳ್ಳುವ ಮೂಲಕ ಕನ್ನಡ ಕಾವ್ಯಮೀಮಾಂಸೆಯನ್ನು ತುಮಕೂರು ವಿಶ್ವವಿದ್ಯಾನಿಲಯದ ಪಠ್ಯಗಳಲ್ಲಿ, ಡಾ॥ ವೀರಣ್ಣ ದಂಡೆಯವರ 'ಜನಪದ ಕಾವ್ಯ ಮೀಮಾಂಸೆ' ಹಾಗೂ 'ವಿಮರ್ಶಾ ಪ್ರಸ್ಥಾನಗಳು' ಮುಂತಾದ ಕೃತಿಗಳಲ್ಲಿ ಕಾಣಬಹುದಾಗಿದೆ.

ಲಿಂಗದೇವರು ಹಳೆಮನೆ : (೧೯೪೯) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಾಲುಗೋಣ ಇವರ ಜನ್ಮಸ್ಥಳ. ನಾಡಿನ ಹೆಸರಾಂತ ಚಿಂತಕರಲ್ಲಿ ಒಬ್ಬರಾದ ಇವರು ಪ್ರಸಿದ್ಧ ನಾಟಕಕಾರರು, ಅಂಕಣಕಾರರು ಮತ್ತು ವಿಮರ್ಶಕರು. ರಂಗಭೂಮಿ, ನಾಟಕ, ವಯಸ್ಕರ ಶಿಕ್ಷಣ, ಸಾಹಿತ್ಯ ಮತ್ತು ಭಾಷಾವಿಜ್ಞಾನ ಇವರ ಆಸಕ್ತಿಯ ಕ್ಷೇತ್ರಗಳು. ಚಿಕ್ಕದೇವಭೂಪ, ಹೈದರ್, ಅಂತೆಂಬರಗಂಡ, ತಸ್ಕರ ಮತ್ತು ಶಾಪ ಇವರ ಸ್ವಂತ ನಾಟಕಗಳಾದರೆ, ಡಾ॥ ಬೆಥೂನ್, ಧರ್ಮಪುರಿಯ ದೇವದಾಸಿ, ಮದರ್ ಕರೇಜ್, ಮನುಷ್ಯ ಅಂದ್ರೆ ಮನುಷ್ಯಾನೇ ಮತ್ತು ಮಟಾಶ್ ರಾಜ-ಇವು ಇವರ ಅನುವಾದಿತ ನಾಟಕಗಳು. ಪ್ರಸ್ತುತ, ಸಂದರ್ಭ, ನಿಲುವು, ಆಶಯ ಮತ್ತು ಸಂವಾದ – ಇವು ಅಂಕಣ ಬರಹದಿಂದ ಮೂಡಿ ಬಂದ ಐದು ಸಂಪುಟಗಳು. ವಚನಸಾಹಿತ್ಯ ಕುರಿತ ವಿಮರ್ಶಾಕೃತಿ 'ಹಿಂದೂ ಅನಂತ„ "ನಾಡಿನ ಸಾಂಸ್ಕೃತಿಕ ಸಾಮಾಜಿಕ ವಲಯಗಳ ಮೇಲೆ ಪ್ರಭಾವ ಬೀರುತ್ತಲೇ ಇರುವ ವಚನ ಚಳುವಳಿಯ ಒಳಗನ್ನು, ಹೊರಗನ್ನು ಈ ಪುಸ್ತಕ ವಿಶ್ಲೇಷಿಸುತ್ತದೆ. ಈ ಪುಸ್ತಕದ ಮುಖ್ಯ ಸೊಲ್ಲು ಇರುವುದು ಬಸವೇತರ ವಚನಕಾರರ ಪ್ರತಿಭೆಯನ್ನು ಕುರಿತು. ಬಸವಣ್ಣನಂತೆಯೇ ಆ ಕಾಲದ ನೂರಾರು ವಚನಕಾರರು ಅಂದಿನ ಸಾಮಾಜಿಕ ತಳಹದಿಯನ್ನು ಮರುನಿರ್ಮಿಸುವ ಪ್ರಯತ್ನದಲ್ಲಿ ಬಹಳ ಶಕ್ತಿಯುತವಾದ ವಚನಗಳನ್ನು ರಚಿಸಿದ್ದಾರೆ. . . . ಇಂಥ ಮಹತ್ತರ ವಚನಕಾರರ ಪ್ರತಿಭೆಯನ್ನು, ಸಿಟ್ಟನ್ನು, ತತ್ವಾದರ್ಶಗಳನ್ನು ನೇಮ ನಿಷ್ಠೆಗಳನ್ನು ಹಾಗೂ ಶರಣತ್ವವನ್ನು ಕುರಿತು ಈ ಲೇಖನಗಳು ಮಾತನಾಡುತ್ತವೆ."[೪] ಈ ಮೂಲಕ ಬಸವ ಕೇಂದ್ರಿತ ಚರ್ಚೆಗಳನ್ನು ಕೊಂಚ ಅಲುಗಾಡಿಸಿ ಅದರ ವ್ಯಾಪ್ತಿ, ವಿಸ್ತಾರವನ್ನು ಓದುಗರಿಗೆ ತಿಳಿಸಿಕೊಡುತ್ತಾರೆ.

---

೪. ಲಿಂಗದೇವರು ಹಳೆಮನೆ – ಹಿಂದಿಣ ಅನಂತ – ನಿರಂತರ ಪ್ರಕಾಶನ, ಮೈಸೂರು, ೨೦೦೯ರ ಮುನ್ನುಡಿಯಿಂದ.

"ಏಕೆನ್ನ ಪುಟ್ಟಿಸಿದೆಯಯ್ಯ, ಹೆಣ್ಣು ಜನ್ಮದಲ್ಲಿ ಪುಣ್ಯವಿಲ್ಲದ ಪಾಪಿಯ? ನಾನು ಇಹಪರಕೆ ದೂರಳಯ್ಯ' (ನೀಲಮ್ಮನ ವಚನ) ಎಂದು ತಾನು ಇಲ್ಲಿ ಮತ್ತು ಎಲ್ಲಿಯೂ ಸಲ್ಲದವಳು ಎಂಬ ಅನಾಥ ಸ್ಥಿತಿ ಶೂದ್ರರಷ್ಟೇ ಕಳವಳಕಾರಕ ಬದುಕು. . . . ಆಧುನಿಕ ಕಾಲದಲ್ಲಿ ಶೂದ್ರರ ಎಚ್ಚೆತ್ತ ಪ್ರಜ್ಞೆಯನ್ನು ಸಹಿಸಿಕೊಳ್ಳಲಾಗದೆ ಮೇಲ್ವರ್ಗದವರು ನಡೆಸುತ್ತಿರುವಂತಹ ಹಲ್ಲೆಗಳು ಅಂದು ನಡೆದಿದ್ದವು."[೫] ಎಂಬ ಹಳೆಮನೆಯವರ ನಿಲುವಿನಲ್ಲಿ ಸ್ತ್ರೀ ಮತ್ತು ಶೂದ್ರ ಸಮುದಾಯದ ಬಗೆಗಿನ ಕಾಳಜಿಯನ್ನು ಕಾಣಬಹುದು.

"ಲಿಂಗದೇವರು ಹಳೆಮನೆ ಎಡ ಪಂಥೀಯ ಧೋರಣೆಯಿಂದ, ಮಾರ್ಕ್ಸ್‌ವಾದದ ಪ್ರಭಾವದಿಂದ ನಾಟಕ ಬರೆಯಲಾರಂಭಿಸಿದರು. ಅವರು ಮೈಸೂರು ಇತಿಹಾಸವನ್ನು ಹಿನ್ನೆಲೆಯಾಗಿಟ್ಟುಕೊಂಡು 'ಚಿಕ್ಕದೇವಭೂಪ', 'ಹೈದರ್' ಮತ್ತು ಅಂತೆಂಬರಗಂಡ ಎಂಬ ಮೂರು ನಾಟಕಗಳನ್ನು ಬರೆದಿದ್ದಾರೆ. ಚಿಕ್ಕದೇವಭೂಪ ಕರ್ನಾಟಕದ ಪ್ರಥಮ ರೈತ ಬಂಡಾಯದ ವಸ್ತುವನ್ನು ಒಳಗೊಂಡಿದೆ. ಚಿಕ್ಕದೇವರಾಜನ ಅಧಿಕಾರದ ಅವಧಿಯಲ್ಲಿ ಅರಮನೆಯ ಬೊಕ್ಕಸ ತುಂಬಿಸಲು ಅವನು ರೈತರ ಮೇಲೆ ವಿಪರೀತ ತೆರಿಗೆಗಳನ್ನು ಹೇರುತ್ತಾನೆ. ಅದನ್ನು ಪ್ರತಿಭಟಿಸಲು ರೈತರು ದಂಗೆ ಏಳುತ್ತಾರೆ. ವೀರಶೈವ ಧರ್ಮಾಧಿಕಾರಿಗಳು ಅರಮನೆಯಲ್ಲಿ ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ರೈತರ ದಂಗೆಗೆ ಪ್ರೋತ್ಸಾಹ ನೀಡುತ್ತಾರೆ. ಕಡೆಗೆ ರಾಜ ನಿರ್ದಾಕ್ಷಿಣ್ಯವಾಗಿ ದಂಗೆಯನ್ನು ಹತ್ತಿಕ್ಕುತ್ತಾನೆ. ಎಂಬತ್ತರ ದಶಕದಲ್ಲಿ ನಡೆದ ರೈತರ ಪ್ರತಿಭಟನೆ ಮತ್ತು ಅದನ್ನು ಸರ್ಕಾರ ಹತ್ತಿಕ್ಕಿದ ರೀತಿ ಈ ನಾಟಕದ ರಚನೆಗೆ ಪ್ರೇರಣೆ. 'ಹೈದರ್' ಸಾಮಾನ್ಯ ಯುವಕನೊಬ್ಬ ಮೈಸೂರು ಸಂಸ್ಥಾನದ ನವಾಬರಿಗೆ ತನ್ನ ಚಾಣಾಕ್ಷತೆಯಿಂದ ಏರಿ, ಕಡೆಗೆ ತಾನೇ ಸರ್ವಾಧಿಕಾರಿಯಾಗುವುದನ್ನು ಸಾಮ್ರಾಜ್ಯಶಾಹಿ ಬ್ರಿಟಿಷರೊಂದಿಗೆ ಹೋರಾಡುವುದನ್ನು ಚಿತ್ರಿಸುತ್ತದೆ. 'ಅಂತೆಂಬರಗಂಡ' ಸಂಸರ ಬಿರುದೆಂತೆಂಬರ ಗಂಡ, ಮಂತ್ರಶಕ್ತಿ ನಾಟಕಗಳಿಂದ ಪ್ರೇರಿತವಾದದ್ದು. ಹಳೆಮನೆಯವರ ರಣಧೀರ ಪಕ್ಕಾ ರಾಜಕಾರಣಿ, ಅಧಿಕಾರದ ಮೆಟ್ಟಿಲನ್ನು ಏರುತ್ತಾ, ಅದನ್ನು ಭದ್ರಪಡಿಸಿಕೊಳ್ಳಲು ಬೇರೆ ಬೇರೆ ಸಂದರ್ಭದಲ್ಲಿ ಅವನು ಜನಸಾಮಾನ್ಯರನ್ನು ಹೇಗೆ ಬಳಸಿಕೊಂಡ ಎಂಬುದು ನಾಟಕದ ತಿರುಳು. ಹಳೆಮನೆಯವರ ನಾಟಕಗಳು ಐತಿಹಾಸಿಕ ವಸ್ತುವನ್ನು ಒಳಗೊಂಡರೂ ಅವು ಸಮಕಾಲೀನ ರಾಜಕೀಯ ನಾಟಕಗಳಂತೆಯೇ ಕಾಣಿಸುತ್ತವೆ. ಇತಿಹಾಸ ಬರುವುದು ಪುನರ್ ಸೃಷ್ಟಿಸುವುದಕ್ಕಲ್ಲ, ಪುನರ್ ವ್ಯಾಖ್ಯಾನಕ್ಕೆ ಎಂಬ ಮಾತನ್ನು ಅವರ ನಾಟಕಗಳು ಪುಷ್ಟೀಕರಿಸುತ್ತವೆ."[೬]

ಹಳೆಮನೆಯವರ ನೂರಾರು ಲೇಖನಗಳು ಪರಿಸರ, ನೆಲ, ನೀರು, ಕೃಷಿ, ಸರ್ಕಾರದ ಕ್ರಮಗಳು, ಜನರ ಮೌಢ್ಯಗಳು ಇತ್ಯಾದಿಯನ್ನು ಕುರಿತು ಚರ್ಚಿಸುತ್ತವೆ.

---

೫. ಅದೇ ೧೬

೬. ಲಿಂಗದೇವರು ಹಳೆಮನೆ – ರಂಗ ರೂಪಕ ನಿರಂತರ ಪ್ರಕಾಶನ, ಮೈಸೂರು, ೨೦೦೯, ೩೫

ವಸ್ತು ತತ್ಕಾಲವೆನಿಸಿದರೂ, ಅದರೊಳಗಿನ ಸತ್ವ, ವ್ಯಾಪ್ತಿ ದೂರದೃಷ್ಟಿಯುಳ್ಳವಾಗಿವೆ. ಆ ಬಗೆಯ ಒಂದೆರಡು ಅಂಕಣ ಬರಹಗಳನ್ನು ಪ್ರಾತಿನಿಧಿಕವಾಗಿ ಗಮನಿಸಬಹುದು : 'ಸಂವಾದ' ಕೃತಿಯೊಳಗಿನ 'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ.' ಲೇಖನದಲ್ಲಿ ಮಳೆಬಾರದ್ದಕ್ಕಾಗಿ ಸರ್ಕಾರವು ಸರ್ಕಾರಿ ಹಣದಿಂದ ರಾಜ್ಯದ ದೇವಾಲಯಗಳಲ್ಲೆಲ್ಲಾ ಪೂಜೆ ಮಾಡುವಂತೆ ಆದೇಶ ಹೊರಡಿಸಿದ ಬಗ್ಗೆ ಲೇಖಕರಿಗೆ ಸಿಟ್ಟುಕಟ್ಟೆಯೊಡೆದಿದೆ. ಮರ್ಯಾದೆಗೆಟ್ಟ ಸರ್ಕಾರ, ಮರ್ಯಾದೆಗೆ ಕಿಂಚಿತ್ತೂ ಯೋಗ್ಯರಲ್ಲದ ಜನ ಮಾಡಿಕೊಂಡ ಅನೈತಿಕ ಒಡಂಬಡಿಕೆ ಎಂದು ನಿರ್ದಾಕ್ಷಿಣ್ಯವಾಗಿ ನಿಂದಿಸುತ್ತಾರೆ. ಅಕಾಲಿಕ ಮಳೆ, ಬರ, ಹವಾಮಾನ ವೈಪರೀತ್ಯಗಳಿಗೆ ನಿಸರ್ಗವನ್ನು ಮಾನವ ಕ್ರೂರವಾಗಿ ನಡೆಸಿಕೊಂಡುದಾಗಿದೆ. ಕೆರೆಗಳು ಬತ್ತುತ್ತಿರುವ ಬಗ್ಗೆ ಇನ್ನೂರು ಅಡಿಗೂ (ಇಂದು ಸಾವಿರಾರು ಅಡಿ!) ಮಿಗಿಲಾಗಿ ಬೋರ್‌ವೆಲ್ ತೋಡಬೇಕಾಗಿ ಬಂದುದರಿಂದ ಸರ್ಕಾರ ಮತ್ತು ಸಾರ್ವಜನಿಕರು ಗಮನಹರಿಸಬೇಕಿತ್ತು. ಪರಿಸರದ ಮೇಲಿನ ದಾಳಿಯ ಫಲವನ್ನು ಮಾನವ ಇಂದು ಉಣ್ಣುತ್ತಿದ್ದಾನೆ. ಇನ್ನಾದರೂ ಎಚ್ಚೆತ್ತುಕೊಂಡು ಜಾಗೃತಿಯನ್ನು ಮೂಡಿಸಬೇಕಾದ ಸರ್ಕಾರ, ದೇವಾಲಯಗಳಿಗೆ ಮೊರೆ ಹೋಗಿರುವುದು ಕಳವಳವನ್ನುಂಟುಮಾಡಿದೆ. ಸರ್ಕಾರ ಹೂಳೆತ್ತುವ ಬಗ್ಗೆ ಯೋಜನೆ ರೂಪಿಸಿ ಕೈಬಿಟ್ಟಿದ್ದು ಇಲ್ಲಿ ಟೀಕೆಗೆ ಒಳಗಾಗಿದೆ. ಬೃಹತ್ ಅಣೆಕಟ್ಟೆಗಳ ನೀರು ನೇರ ಕೆರೆಗಳಿಗೆ ಹರಿದರೆ ಅಂತರ್ಜಲ ವೃದ್ಧಿಗೊಳ್ಳುತ್ತದೆ– ಈ ಬಗ್ಗೆ ಗಮನ ಹರಿಸಲಿ ಸರ್ಕಾರ ಎಂದು ಮಾರ್ಗದರ್ಶನವೀಯುತ್ತಾರೆ.

ತಾಲ್ಲೂಕಿನ ಜನಪ್ರತಿನಿಧಿಗಳು ಇದುವರೆಗೂ ಹೇಳಿಕೊಳ್ಳುವಂಥ ಕೆಲಸವನ್ನು ಮಾಡಿಲ್ಲ. ತಾಲ್ಲೂಕಿನ ಪ್ರಗತಿಗೆ ಗಮನಾರ್ಹವಾದ ಕೊಡುಗೆಯೇನೂ ಇಲ್ಲ ಎಂದು ವಿಷಾದದಿಂದ ನುಡಿಯುತ್ತಾರೆ–ಹಳೆಮನಿ. "ಯಾವುದೇ ಚುನಾವಣೆಯಾಗಲಿ– ವಿಧಾನಸಭೆ ತಾಲ್ಲೂಕು ಮಂಡಳಿ, ಗ್ರಾಮ ಪಂಚಾಯ್ತಿ–ಅವೆಲ್ಲಾ ಜಾತಿ ಪ್ರದರ್ಶನದ ಮೇಲೆ ನಡೆದದ್ದೇ ಹೆಚ್ಚು. ಈ ತಾಲ್ಲೂಕಿನ ಜನರ ಮತ ಬೆಂಬಲಗಳಿಸಿದ ಯಾವುದೇ ಪ್ರತಿನಿಧಿ ರಾಜ್ಯದ ಅಥವಾ ಜಿಲ್ಲೆಯ ಯಾವುದೇ ನಿರ್ಣಾಯಕ ತೀರ್ಮಾನಗಳಲ್ಲಿ ಗಮನಾರ್ಹ ಕೊಡುಗೆ ಕೊಟ್ಟಿಲ್ಲವೆಂಬುದು ಗಮನಾರ್ಹ. ಈ ತಾಲ್ಲೂಕಿನ ರಾಜಕೀಯ ಎಂದೂ ಸಿದ್ಧಾಂತದ ಮಟ್ಟದಲ್ಲಿ, ಭಾವಿ ಮುಂದಾಳುಗಳನ್ನು ರೂಪಿಸುವ ಹಂತದಲ್ಲಿ ನಡೆದುದೇ ಇಲ್ಲ."[೭] ಆದ್ದರಿಂದ ತಾಲ್ಲೂಕಿನ ಪ್ರಗತಿ ತೀರಾ ಕುಂಠಿತವಾಗಿದೆಯೆಂದೇ ಹೇಳಬಹುದು. ರಾಜಕೀಯ ಶಕ್ತಿ ಪ್ರಬಲ ಆಯುಧವಾಗಿ ಮಾರ್ಪಟ್ಟಿರುವುದರಿಂದ ತಾಲ್ಲೂಕಿನ ಜನಪ್ರತಿನಿಧಿಗಳ ಸಾಧನೆ ಹಳೆಮನೆಯವರಿಗೆ ಕಿಂಚಿತ್ತೂ ತೃಪ್ತಿ ನೀಡಿಲ್ಲ.

---

೭. ಸಿದ್ಧರಾಮಯ್ಯ ಎಸ್.ಜಿ. – ಕಣ್ಣುಗಾಯದ ಕಾಲುದಾರಿಗಳು – ಮುನ್ನುಡಿ : (ಡಾ. ಕೆ. ಮಟ್ಟಸ್ವಾಮಿ) – ಪ್ರಕಟಣಾ ವರ್ಷ – ೨೦೦೯.

ಎಸ್.ಜಿ. ಸಿದ್ದರಾಮಯ್ಯ : ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಿಂಗಾಪುರ ಗ್ರಾಮದಲ್ಲಿ ೧೯೪೬ರಲ್ಲಿ ಜನಿಸಿದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಎಂ.ಎ. ಪದವಿಯನ್ನು ೧೯೭೨ರಲ್ಲಿ ಪಡೆದರು. ಸರ್ಕಾರಿ ಪದವಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಕನ್ನಡದ ಕೈಂಕರ್ಯ ಮಾಡಿದರು. ಗಾಂಧಿ, ಲೋಹಿಯಾ, ಅಂಬೇಡ್ಕರ್ ಹಾಗೂ ಕುವೆಂಪುರವರ ವಿಚಾರಗಳಿಂದ ಪ್ರಭಾವಿತರಾದ ಎಸ್.ಜಿ.ಎಸ್. ನೆಲಮೂಲ ಸಂಸ್ಕೃತಿಯ ಬಗ್ಗೆ ಹೆಚ್ಚು ಕಾಳಜಿ ಹೊಂದಿದ್ದಾರೆ.

ಗಾಲ್ಫ್ ಉಬ್ಬಿನ ಮೇಲೆ, ಕಾಡುವ ಬೇಲಿ ಹೂ, ಅವಳೆದೆಯ ಜಂಗಮ, ಸೊಲ್ಲು ಫಲವಾಗಿ, ಮರುಜೇವಣಿ, ಕರೆ ಬಳಗ–ಕವನ ಸಂಕಲನಗಳನ್ನು ಸಾಲಾವಳಿ, ಎಡೆಗುಂಟೆ ಗಣಿಸಾಲು, ಕೇಡಿಲ್ಲವಾಗಿ, ನಿಶ್ಶಬ್ದದ ಜಾಡು–ವಿಮರ್ಶಾ ಕೃತಿಗಳನ್ನು ಪ್ರಕಟಿಸಿದ್ದಾರೆ.

ಕೃಷಿ ಬದುಕನ್ನು ಪ್ರೀತಿಸಿದಷ್ಟೇ ಉತ್ಕಟವಾಗಿ ಸಾಹಿತ್ಯ ಹಾಗೂ ಬೋಧಕನ ವೃತ್ತಿಯನ್ನು ಪ್ರೀತಿಸಿದವರು. ತಮ್ಮ ತಾತ್ವಿಕತೆಯ ಜೊತೆ ಜೊತೆ ರಾಜಿಯಾಗದ ಮನಸ್ಸಿನ ಶ್ರೀ ಎಸ್.ಜಿ. ಸಿದ್ದರಾಮಯ್ಯನವರು ಗದ್ಯವನ್ನು ಕಾವ್ಯದಷ್ಟೇ ನವಿರಾಗಿ ಬರೆಯಬಲ್ಲರು. ತಮಿಳುನಾಡಿನ ಕಾವೇರಿ ನೀರಿನ ಬೇಡಿಕೆಯನ್ನು 'ಷೈಲಾಕನ ಬೇಡಿಕೆ' ಎಂದು ಹೇಳುತ್ತಲೇ, ಟ್ರಾಕ್ಟರ್ ಅನ್ನು 'ಮಾರಿನೇಗಿಲು' ಎಂದು ಕರೆದು ಯಂತ್ರ ಸಂಸ್ಕೃತಿಯ ಘೋರತೆಯನ್ನು ಹಿಡಿದಿಡಬಲ್ಲರು. ಆಧುನಿಕತೆಯ ವೇಗದ ಬದುಕಿನಲ್ಲಿ ಎಲ್ಲೆಲ್ಲೂ ಮಾನವರದೇ ದರ್ಬಾರು. ಪರಿಸರದ ಜೀವವೈವಿಧ್ಯದ ಒಂದು ಭಾಗವಾಗಿರುವ ಮಾನವ, ಉಳಿದ ಜೀವಿಗಳ ಬದುಕಿನ ಜೊತೆ ಅನ್ಯೋನ್ಯವಾಗಿ ಹೆಜ್ಜೆ ಹಾಕುವುದನ್ನು ಕಲಿತರೆ ಅದೇ ಮಾನವತೆ. "ಈ ಹಿನ್ನೆಲೆಯಲ್ಲಿ ಇಂದು ಶಿಕ್ಷಣವನ್ನು ಮಾನವೀಕರಣಗೊಳಿಸುವ ಅಗತ್ಯವಿದೆ. ಮಾನವೀಕರಣಗೊಳಿಸುವುದೆಂದರೆ, ಅಖಂಡವಾಗಿ ನಿಸರ್ಗ ಧರ್ಮಕ್ಕೆ ಎರವಾಗದಂತೆ ಬಾಳಲು ಕಲಿಸುವುದು; ಜೀವ ಪರವಾಗಿರುವುದು. ಎಲ್ಲ ಕಲೆಗಳೂ ಈ ತತ್ವವನ್ನು ಜೀವನಸೂತ್ರವಾಗಿಸಿಕೊಂಡೇ ಉಸಿರಾಡುತ್ತಿವೆ. ಸಾಹಿತ್ಯ ಈ ಮಾತಿಗೆ ಹೊರತಲ್ಲ. ನಿಜವಾದ ಸಾಹಿತ್ಯ ಮನುಷ್ಯಕೇಂದ್ರಿತ ಮಿತಿಯಲ್ಲಿ ಬದುಕನ್ನು ಗ್ರಹಿಸದೇ ಜೀವಕೇಂದ್ರಿತ ವ್ಯಾಪ್ತಿಯಲ್ಲಿ ಸಂವೇದನಾಶೀಲವಾಗಿರುತ್ತದೆ."[೮] ಹೀಗಾಗಿ ಸಾಹಿತ್ಯ ಅಥವಾ ಸಾಹಿತಿಯ ಹೊಣೆಗಾರಿಕೆ ಜೀವಪರವೆಂಬುದನ್ನು ಒತ್ತಿ ಹೇಳುತ್ತಾರೆ ಎಸ್.ಜಿ.ಎಸ್.

ಎಸ್.ಜಿ.ಎಸ್. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಹೊರತಂದ ಕೃತಿಗಳಲ್ಲಿ 'ದೇಸಿ ಕೃಷಿಜ್ಞಾನ ಮಾಲೆ' ಗಮನಾರ್ಹ. ಮಣ್ಣು ಮತ್ತು ನೀರು, ಅರಣ್ಯ, ಬೀಜ, ಆಹಾರ–ಆರೋಗ್ಯ, ಕೃಷಿ ಆಚರಣೆ, ಕೃಷಿ ಉಪಕರಣಗಳು, ನಿರ್ಮಾಣಕಲೆ, ಕೀಟರೋಗ, ಜಾನುವಾರು, ಕುರಿಸಾಕಣೆ, ತೋಟಗಾರಿಕೆ – ವಿಷಯಗಳನ್ನು ಕುರಿತಂತೆ ತಜ್ಞ ಲೇಖಕರಿಂದ ಕೃತಿಗಳನ್ನು ಬರೆಸಿದ್ದು ಅವರ ದೇಸೀ ಪ್ರಜ್ಞೆಗೆ ಸಾಕ್ಷಿ.

---

೮. ಅದೇ ೧೯೫

5

ದುಬಾರಿ ಕೃಷಿಯಿಂದ ಬೇಸತ್ತವರು ಸಾವಯವ ಕೃಷಿ ಮಾಡುವ ಮೂಲಕ ಕೃಷಿ ದುಂದುವೆಚ್ಚವನ್ನು ಕಡಿತಗೊಳಿಸಬೇಕೆನ್ನುವ ಇವರು ಹಳ್ಳಿಯ ಜೀವನವನ್ನು ಬಿಟ್ಟು ನಗರದ ಬದುಕಿಗೆ ಆಕರ್ಷಿತರಾದವರ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರೆ. "ಇಂದು ನಮ್ಮ ಹಳ್ಳಿಗಳಲ್ಲಿ ಉಳಿದಿರುವವರು ಮುದುಕರು, ಕೈಲಾಗದವರು ಹಾಗೂ ಮಕ್ಕಳು." ಇವರು ಬೇಸಾಯ ಮಾಡುವುದಾದರೂ ಹೇಗೆ ಎಂಬುದು ಇವರ ಪ್ರಶ್ನೆ. ನಿವೃತ್ತಿಯ ನಂತರವೂ ನಗರದಲ್ಲಿ ಹಳ್ಳಿ ಬದುಕಿನ ಬಗ್ಗೆ ಮಾತಾಡುವ ಎಸ್.ಜಿ.ಎಸ್. ಅವರನ್ನು ಬಿಳಿಗೆರೆ ಕೃಷ್ಣಮೂರ್ತಿ ತಮ್ಮ ಭಾಷಣದಲ್ಲಿ ಗ್ರಾಮದ ಜನತೆಯೊಂದಿಗೆ ಬದುಕಿ ಸಾಧಿಸಿ ತೋರಬೇಕೆಂದು ಸವಾಲೆಸೆಯುತ್ತಾರೆ. ಕವಿಯಾಗಿಯೂ ಜನಪ್ರಿಯರಾಗಿರುವ ಎಸ್.ಜಿ.ಎಸ್. ದೇಸೀ ಸಂಸ್ಕೃತಿಯ ಬಗ್ಗೆ ಹೆಚ್ಚು ಒಲವನ್ನು ಹೊಂದಿರುವವರು. 'ಜನವಾಣಿ ಬೇರು, ಕವಿವಾಣಿ ಹೂವು' ಎಂದು ಹೇಳುವಂತೆ ಕವಿವಾಣಿಗೆ ಮೂಲವಾದ ಜನವಾಣಿ ಅರ್ಥಾತ್ ಜನಪದ ಕಾವ್ಯ ನಿಜವಾದ ದೇಸೀಕಾವ್ಯ. ಇಂಥ ಜನಪದ ಹಾಡುಗಳನ್ನು 'ನಾಡಿನ ಕಂಬ' ವೆಂಬ ತಮ್ಮ ಪದ್ಯದಲ್ಲಿ ಸೊಗಸಾಗಿ ವರ್ಣಿಸುತ್ತಾರೆ:

"ಬಾಳಿನ ಬೆವರಿನ
ಬದುಕಿನ ತವರಿನ
ಜೀವ ಜೀವದ ಜೀವನ ಗಾಥೆಯ
ದೇಸಿ ದಿಬ್ಬ ನಾಡಿನ ಕಬ್ಬ"

ಕೃಷಿಯೊಂದಿಗೆ ನಿರಂತರ ತೊಡಗಿರುವ ರೈತರ ಬದುಕು ಬವಣೆಯಿಂದ ಕೂಡಿದೆ. ಪ್ರತಿಯೊಬ್ಬ ಕೃಷಿಕನದೂ ಒಂದೊಂದು ವ್ಯಥೆಯ ಕಥೆಯೇ ಆಗಿದೆ. ಆದರೂ ತನ್ನ ದುಡಿತದಲ್ಲಿ ಬಿಡುವಿನ ವೇಳೆಯಲ್ಲಿ ಜನಪದರು ಕಟ್ಟಿದ ಕಾವ್ಯಗಳೆಷ್ಟು? ಸೃಷ್ಟಿಸಿದ ಕಲೆಗಳೆಷ್ಟು? ಕೇರುವಾಗ, ಕುಟ್ಟುವಾಗ, ನಾಟಿ ಮಾಡುವಾಗ, ಯಕ್ಷಗಾನ, ಬಯಲಾಟಗಳಲ್ಲದೆ ಮಂಟೇಸ್ವಾಮಿ, ಮೈಲಾರಲಿಂಗ ಮುಂತಾದವರ ಬಗ್ಗೆ ರಚಿತವಾದ ಹಾಡುಗಳು; ಸೋಮನಕುಣಿತ, ಡೊಳ್ಳು ಕುಣಿತ, ಗೊರವರ ಕುಣಿತ ಮುಂತಾದ ಕಲೆಗಳಲ್ಲಿ ತನ್ನ ದಣಿವನ್ನು ಮರೆತು ಆನಂದದಲ್ಲಿ ಮೈಮರೆಯುತ್ತಿದ್ದ ಗ್ರಾಮೀಣರ ಬದುಕು ನಿಜವಾಗಿ ಕವಿಗೇ ಅನನ್ಯವಾಗಿ ಕಂಡಿದೆ.

ಎಂ.ವಿ. ನಾಗರಾಜರಾವ್ : ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರು ಹೋಬಳಿಯ ಎಚ್. ಮೇಲನಹಳ್ಳಿಯಲ್ಲಿ ೧೯೪೯ರಲ್ಲಿ ಜನಿಸಿದರು. ಕನ್ನಡ ಮತ್ತು ಹಿಂದಿಯಲ್ಲಿ ಸ್ನಾತಕ ಪದವಿಯನ್ನು ಪಡೆದ ಇವರು ಪದವಿಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿ ಪ್ರಾಂಶುಪಾಲರಾಗಿ ಬಡ್ತಿ ಹೊಂದಿ ನಿವೃತ್ತಿ ಹೊಂದಿದರು. ಉಪನ್ಯಾಸಕರಾಗಿದ್ದಾಗಿನಿಂದಲೂ ವೃತ್ತಿಯ ಜೊತೆಗೆ ಬರವಣಿಗೆ, ಪ್ರಕಟಣೆ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಬಹುಮುಖ ವ್ಯಕ್ತಿತ್ವ ಎಂ.ವಿ. ನಾಗರಾಜರಾಯರದು. ಹಿಂದಿ, ಇಂಗ್ಲಿಷ್‌ನಿಂದ ಪತ್ತೇದಾರಿ

ಕಾದಂಬರಿಗಳ ಅನುವಾದ, ಚೀನಾ, ಶ್ರೀಲಂಕಾ ಮುಂತಾದ ದೇಶಗಳ ಮಕ್ಕಳ ಕತೆಗಳ ಅನುವಾದ, ನಾಟಕಗಳ ಅನುವಾದ, ವಿದ್ಯಾರ್ಥಿಗಳಿಗಾಗಿ ಕನ್ನಡ, ಹಿಂದಿ, ಇಂಗ್ಲಿಷ್ ವ್ಯಾಕರಣ ಕೃತಿಗಳ ರಚನೆಯನ್ನು ಮಾಡಿದ್ದಾರೆ.

ಸಿ.ಬಿ. ಮಲ್ಲಪ್ಪ, ಶ್ರೀ ಸಿದ್ಧಗಂಗಾಕ್ಷೇತ್ರ ಮುಂತಾದ ಕೃತಿಗಳು ಸ್ಥಳೀಯ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ತಮ್ಮದೇ ಆದ ಪಾತ್ರ ವಹಿಸುತ್ತವೆ. ಹಿಂದಿ ಲೇಖಕ ಅಬಿದ್ ಸುರತಿಯ 'ವಾಸ್‌ಕ ಲಜ್ಜಾ' ಕೃತಿಯನ್ನು ಮೊದಲಿಗೆ ಕನ್ನಡಕ್ಕೆ 'ಶೃಂಗಾರ ಶಯ್ಯೆ'ಯೆಂದು ಅನುವಾದಿಸಿದರು. ಆರ್. ಬಸವರಾಜು ಎಂಬ ಗೆಳೆಯರ ಮಾರ್ಗದರ್ಶನದಂತೆ 'ತರಂಗ'ಕ್ಕೆ (ವಾರಪತ್ರಿಕೆ) ಕಾದಂಬರಿಯನ್ನು ಕಳುಹಿಸಿದ್ದರಿಂದ ಅದು ಕಂತುಗಳಲ್ಲಿ ಪ್ರಕಟಗೊಂಡು ಓದುಗರನ್ನು ಆಕರ್ಷಿಸಿತು. ಇದರಿಂದ ಉತ್ಸುಕರಾದ ಲೇಖಕರು ಒಂದಾದ ನಂತರ ಒಂದರಂತೆ ಕಂಪನ, ಅಘೋರಿಗಳ ನಡುವೆ, ಪುನರ್ಮಿಲನ, ಸಾಕ್ಷಾತ್ಕಾರ ಮುಂತಾದ ಕಾದಂಬರಿಗಳನ್ನು ಅನುವಾದಿಸಿದರು. ಎಂ.ವಿ. ನಾಗರಾಜರಾಯರ 'ಶೃಂಗಾರ ಪ್ರಕಾಶನ' ತಾಲ್ಲೂಕಿನಲ್ಲಿ ಸಾಂಸ್ಕೃತಿಕ ಕೊಡುಗೆಯನ್ನು ನೀಡಿದೆ.

ಆರ್. ಬಸವರಾಜು : ದಿನಾಂಕ ೦೪.೦೭.೧೯೩೦ ರಂದು ತಿಪಟೂರು ತಾಲ್ಲೂಕಿನ ಪುಟ್ಟ ಹಳ್ಳಿ ಈಡೇನಹಳ್ಳಿಯ ಬಡಕುಟುಂಬದಲ್ಲಿ ರಂಗೇಗೌಡ ಮತ್ತು ಮರುಳಮ್ಮ ದಂಪತಿಗಳಿಗೆ ಜನಿಸಿದರು. ೧೯೫೫ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇರಿ, ಹಂತ ಹಂತವಾಗಿ ಬಡ್ತಿ ಹೊಂದಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿ ಈಗ ನಿವೃತ್ತಿ ಜೀವನ ನಡೆಸುತ್ತಿದ್ದಾರೆ. ಬಹುಕಾಲದಿಂದ ಇವರು ಚಿಕ್ಕನಾಯಕನಹಳ್ಳಿ ನಗರದಲ್ಲಿ ವಾಸಿಸುತ್ತಿದ್ದಾರೆ. ನೌಕರಿಯಿಂದ ೧೯೮೯ರ ಮಾರ್ಚ್ ೩೧ ರಂದು ನಿವೃತ್ತರಾದರು.

ಶಿವಮೊಗ್ಗದಲ್ಲಿ ಶಿಕ್ಷಕರಾಗಿದ್ದಾಗ ೧೯೫೮ರ ಸಂದರ್ಭದಲ್ಲಿ ಜಿ.ಎಸ್. ಸಿದ್ಧಲಿಂಗಯ್ಯ, ಸಣ್ಣಗುಡ್ಡಯ್ಯ ಮೊದಲಾದವರ ಸ್ನೇಹ, ಪರಿಚಯದಿಂದಾಗಿ ಕಥೆಗಳನ್ನು ಬರೆದರು. ತಾಯಿನಾಡು, ಪ್ರಜಾಮತ ಪತ್ರಿಕೆಗಳಲ್ಲಿ ಅವು ಪ್ರಕಟಗೊಂಡವು. ೧೯೫೮ರಲ್ಲಿ ಮೊದಲ ಕಥಾ ಸಂಕಲನ 'ಅನುರಾಗದ ಸುಳಿಯಲ್ಲಿ' ಪ್ರಕಟವಾಯಿತು. ಶೃಂಗೇರಿಯಲ್ಲಿ ಶಿಕ್ಷಕರಾಗಿದ್ದಾಗ (೧೯೬೦–೬೨) ಲವಕುಶ, ಮಾಂಗಲ್ಯ ಭಾಗ್ಯ ನಾಟಕಗಳು ಪ್ರಕಟಣೆ ಮತ್ತು ಪ್ರದರ್ಶನ ಕಂಡವು. ನಂತರದ ದಿನಗಳಲ್ಲಿ ಕಾದಂಬರಿ, ಜೀವನಚರಿತ್ರೆ, ಹಾಸ್ಯ ಲೇಖನ, ಬಿಡಿ ಲೇಖನಗಳನ್ನು ಬರೆಯುತ್ತಾ ಹೋದರು. ಚಿಕ್ಕನಾಯಕನಹಳ್ಳಿಗೆ ಬಂದಾಗ ಮಿತ್ರರಾದ ನಾಗರಾಜರಾಯರ 'ಶೃಂಗಾರ ಪ್ರಕಾಶನ'ದ ಮೂಲಕ ಹಲವಾರು ಕೃತಿಗಳನ್ನು ಪ್ರಕಟಿಸಿದರು. ಚಿಕ್ಕನಾಯಕನಹಳ್ಳಿಯಲ್ಲಿನ ತಮ್ಮ ಬದುಕಿನಲ್ಲಿ ೨೦ ವರ್ಷಗಳಲ್ಲಿ ೭೦ಕ್ಕೂ ಹೆಚ್ಚು ಕೃತಿಗಳನ್ನು ಬರೆದರು. ಇದುವರೆಗೂ ಒಟ್ಟು ಎಂಬತ್ತಕ್ಕೂ ಹೆಚ್ಚು ಕೃತಿಗಳನ್ನು ಬರೆದಿರುವರು.

ಆರ್. ಬಸವರಾಜು ಬಾಲ್ಯದಲ್ಲಿಯೇ ಸ್ವಾತಂತ್ರ್ಯ ಚಳುವಳಿಯನ್ನು ಕಂಡುಂಡವರು. ಬ್ರಿಟಿಷರ ವಿರುದ್ಧ ರಾಷ್ಟ್ರದಲ್ಲಿ ನಡೆದ ಚಳುವಳಿಗಳು ಇವರ ಮೇಲೆ ಪ್ರಭಾವ ಬೀರಿವೆ. ಸ್ವಾತಂತ್ರ್ಯ ಇವರಿಗೆ ಬಹು ದೊಡ್ಡ ಮೌಲ್ಯವಾಗಿ, ಅಭಿಮಾನದ ಸಂಗತಿಯಾಗಿ ಪರಿಣಮಿಸಿತು. ಈಸೂರಿನಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯನ್ನು ಕುರಿತ ಕಾದಂಬರಿ–ಈಸೂರಿನ ಚಿರಂಜೀವಿಗಳು–ಬರೆಯಲು ಅವರಲ್ಲಿದ್ದ ದೇಶಾಭಿಮಾನ ಮತ್ತು ಸ್ವಾತಂತ್ರ್ಯವೀರರ ಸ್ಮರಣೆ ಇವೆರಡೂ ಕಾರಣವಿರಬಹುದು. ಈಸೂರಿನ ಘಟನೆ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯ ಪುಟಗಳಲ್ಲಿ ಮರೆಯಲಾಗದ ಘಟನೆ. 'ಏಸೂರು ಕೊಟ್ಟರೂ ಈಸೂರು ಕೊಡೆವು' ಎಂದು ಶಪಥಗೈದು ಆತ್ಮಾಭಿಮಾನವನ್ನು ಮೆರೆದು ಹೋರಾಡಿದ ಈಸೂರಿನ ಆಬಾಲ ವೃದ್ಧರಾದಿಯಾಗಿ ಇಡೀ ಸಮುದಾಯ ಜನಸಾಮಾನ್ಯರ ಹೋರಾಟದ ನೈಜ ಘಟನೆ ಅದು. ದತ್ತು ಮಗ ಶಂಕರಪ್ಪನನ್ನು ಮುಂಥಿಟ್ಟುಕೊಂಡು ಬಸವಣ್ಯಪ್ಪ ನಡೆಸಿದ ಕ್ರಾಂತಿಕಾರಕ ಹೋರಾಟ ಅದು. ಆದರೆ ಅಲ್ಲಿ ಗುಣಾತ್ಮಕ ಅಂಶವೆಂದರೆ ಯಾವುದೇ ವ್ಯಕ್ತಿ ಮುಖ್ಯವಾಗುವುದಿಲ್ಲ. ಇಡೀ ಊರಿನ ಸಂಘಟನಾತ್ಮಕ ಆತ್ಮಬಲ ಈ ವ್ಯಕ್ತಿಗಳ ಹಿಂದಿನ ಜೀವಶಕ್ತಿಯಾಗಿದೆ. ವ್ಯಕ್ತಿಗಳು ನಿರ್ದೇಶನ ನೀಡುವ ತಲೆಯಾಳುಗಳಾದರೆ ಇಡೀ ಹೋರಾಟದ ಬಗೆಯನ್ನು ಪರಿಪಾಲಿಸುವ ಕೆಚ್ಚಿನಿಂದ ಮುನ್ನುಗ್ಗುವ ಶಕ್ತಿ ಈಸೂರಿನ ಅಖಂಡ ಜನಸಮುದಾಯದ ಆತ್ಮಶ್ರೀಯಾಗಿದೆ. ಬ್ರಿಟಿಷರ ದಬ್ಬಾಳಿಕೆಯ ವಿರುದ್ಧವಾಗಿ ತಮ್ಮ ಗ್ರಾಮಕ್ಕೆ ಸೀಮಿತಗೊಳಿಸಿಕೊಂಡಂತೆ ಸ್ವತಂತ್ರ ಸರ್ಕಾರವನ್ನು ರಚಿಸಿಕೊಂಡು ಬಾಳುವ ಕ್ರಿಯೆಯಲ್ಲಿ ಈ ಆತ್ಮಶ್ರೀ ಮೆರೆದಿದೆ. ಅಂಥ ಸಂದರ್ಭದಲ್ಲಿ ಜರುಗಿದ ಎಲ್ಲ ಹಿಂಸೆ ಪ್ರತಿರೋಧಗಳಿಗೂ ಆತ್ಮಾಭಿಮಾನದಿಂದ ಎದೆಯೊಡ್ಡಿ ಹೋರಾಡಿದ ಹುತಾತ್ಮರಾದವರ ಕಥೆ ಇದಾಗಿದೆ.

ಸ್ಥಳೀಯ ಸಾಂಸ್ಕೃತಿಕ ಸಂಗತಿಗಳನ್ನು ಅನಾವರಣ ಮಾಡುವ ಅನೇಕ ಕೃತಿಗಳನ್ನು ಆರ್.ಬಿ. ರಚಿಸಿದ್ದಾರೆ. ಉದಾ : ರಂಗಭೂಮಿಯ ಮೂವರು ಮೇರು ನಟರು, ಜನಮೆಚ್ಚಿದ ಜನಪ್ರತಿನಿಧಿ ಸಿ.ಎಚ್. ಲಿಂಗದೇವರು, ಬಹುರೂಪಿ ಬಸವಯ್ಯ, ಮದಲಿಂಗನ ಕಣಿವೆ, ಮೋಡಿ ಮಾಟ ಎಂಬ ಅದ್ಭುತ ಮಾಯಾಜಾಲ ಮುಂತಾದವು. ಪ್ರಸ್ತುತ ಒಂದೆರಡು ಕೃತಿಗಳ ಪರಿಚಯ ಮಾಡಬಹುದಾಗಿದೆ. 'ರಂಗಭೂಮಿಯ ಮೂರು ಮೇರು ನಟರು' ಕೃತಿಯು ಚಿಕ್ಕನಾಯಕನಹಳ್ಳಿಯ ಅಭಿನವ ಭಕ್ತ ಶಿರೋಮಣಿ ಶ್ರೀ ಸಿ.ಬಿ. ಮಲ್ಲಪ್ಪ, ಕಲಾತಪಸ್ವಿ ಬಿ.ಕೆ. ಈಶ್ವರಪ್ಪ ಮತ್ತು ಹಾಸ್ಯ ಕಲಾನಿಪುಣ ಪಂಚಲಿಂಗಯ್ಯನವರ ಬದುಕು ಮತ್ತು ಕಲಾಸೇವೆಯನ್ನು ಕುರಿತದ್ದಾಗಿದೆ. ಹಂದನಕೆರೆಯ ಮೋಡಿ ಕಲಾವಿದನಾದ ಕರಿಯಣ್ಣಶೆಟ್ಟಿಯ ಮೋಡಿ ಕಲೆಯನ್ನು 'ಮೋಡಿ, ಮಾಟ ಎಂಬ ಅದ್ಭುತ ಮಾಯಾಜಾಲ' ಕೃತಿಯಲ್ಲಿ ವಿವರಿಸುವರು. ವಿವಿಧ ಊರುಗಳಲ್ಲಿ ಪ್ರದರ್ಶನ ನಡೆಸಿ ಯಶಸ್ವಿಯಾದ ಪ್ರಸಂಗಗಳನ್ನು ಈ ಕೃತಿ ನಮಗೆ ಕಟ್ಟಿಕೊಡುತ್ತದೆ. 'ಮದಲಿಂಗನ ಕಣಿವೆ' ಕಾದಂಬರಿಯು ಸ್ಥಳೀಯವಾಗಿ ನಡೆದಿರುವ ಐತಿಹಾಸಿಕ ಪ್ರೇಮಕಥನವನ್ನು ಕೆಲ ಕಲ್ಪನೆಯ ಸಂಗತಿಗಳೊಂದಿಗೆ ವಿವರಿಸುತ್ತದೆ.

ಸಾ.ಶಿ. ಮರುಳಯ್ಯ : ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ ಹೋಬಳಿಯಲ್ಲಿ ೨೮ನೇ ಜನವರಿ ೧೯೩೧ ರಂದು ಕೂಲಿ ಮಠದ ಓಚಯ್ಯಗಳಾದ ಶ್ರೀ ಶಿವರುದ್ರಪ್ಪ ಮತ್ತು ಶ್ರೀಮತಿ ಸಿದ್ದಮ್ಮನವರಿಗೆ ಹುಟ್ಟಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೧೯೫೫ ರಲ್ಲಿ ಬಿ.ಎ., ೧೯೫೬ ರಲ್ಲಿ ಎಂ.ಎ., ೧೯೭೧ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಯಲದಿಂದ ಪಿಎಚ್.ಡಿ. ಪದವಿ ಪಡೆದರು. ತುಮಕೂರು, ದಾವಣಗೆರೆ, ಶಿವಮೊಗ್ಗ, ಬೆಂಗಳೂರು ಮುಂತಾದ ಕಡೆಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಶಿವತಾಂಡವ, ಕೆಂಗನಕಲ್ಲು, ವಿಪರ್ಯಾಸ, ಮುಂತಾದ ಕವನ ಸಂಕಲನಗಳನ್ನೂ, ನೆಲದ ಸೊಗಡು ಕಥಾಸಂಕಲನವನ್ನೂ, ಭಾರತರತ್ನ, ಹೂವ ತಂದವರು, ದೇವುಡು, ಕನ್ನಡದ ಮೂರು ಕಟ್ಟಾಳುಗಳು ಮುಂತಾದ ಜೀವನಚಿತ್ರಣಗಳನ್ನೂ; ಮರೀಬೇಡಿ, ಎರಡು ನಾಟಕಗಳು, ವಿಜಯವಾತಾಪಿ ಮುಂತಾದ ನಾಟಕಗಳನ್ನೂ ಬರೆದಿದ್ದಾರೆ. ಭಾಸನ ಮಕ್ಕಳು, ಅಭಿವ್ಯಕ್ತಿ ಮುಂತಾದವು ಇವರ ವಿಮರ್ಶಾ ಕೃತಿಗಳು.

ಸೀತಾವನವಾಸ ಸಂಗ್ರಹ, ಹರಿಹರನ ಹತ್ತು ರಗಳೆಗಳು, ಕೃತಾರ್ಥ, ಗದ್ಯ ಕುಸುಮಾಂಜಲಿ ಮುಂತಾದವು ಸಂಪಾದಿತ ಕೃತಿಗಳು. ಸ್ವಪ್ನವಾಸವದತ್ತ, ಪ್ರಾಥಮಿಕ ಶಿಕ್ಷಣದಲ್ಲಿ ಕನಿಷ್ಠ ಕಲಿಕಾ ಹಂತಗಳು ಇವರ ಅನುವಾದಿತ ಕೃತಿಗಳು. "ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ" ಎಂಬ ವಿಷಯವನ್ನು ಕುರಿತು ಸಂಶೋಧನೆ ಮಾಡಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿ ಪಡೆದರು. ಇದುವರೆಗೂ ಅವರು ೮೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

೧೯೫೩ ರಲ್ಲಿ ಅವರ 'ಶಿವತಾಂಡವ' ಪ್ರಥಮ ಕವನ ಸಂಕಲನ ಬೆಳಕು ಕಂಡಿತು. ಅನಂತರ ಒಂದಾದ ನಂತರ ಒಂದು ಕೃತಿಗಳು ಪ್ರಕಟವಾದವು. ಅವರ ಜನಪದ ಕಥೆಗಳು ಎಂಬ ಸಂಪಾದಿತ ಕೃತಿಯಲ್ಲಿ 'ಹುಳಿಯಾರು ಕೆಂಚಮ್ಮ'ನನ್ನು ಕುರಿತ ಐತಿಹ್ಯದ ವಿವರಗಳನ್ನು ಒಂದೆಡೆ ವಿವರಿಸುತ್ತಾರೆ. ಬೂದಿಹಾಳು, ವಿರಕ್ತ ಮಠದ ಅಧಿಪತಿಗಳಾದ ಶ್ರೀ ಸಿದ್ಧಬಸವ ಶಿವಯೋಗಿಗಳು 'ಶ್ರೀ ಮರುಳಸಿದ್ದೇಶ್ವರ ಮಹಾಪುರಾಣ' ಎಂಬ ಪುರಾಣ ಕಾವ್ಯವನ್ನು ರಚಿಸಿದ್ದರು. ಭಾಮಿನಿ ಷಟ್ಪದಿಯಲ್ಲಿರುವ ಈ ಕೃತಿಯನ್ನು ಸಾ.ಶಿ. ಮರುಳಯ್ಯನವರು ಗದ್ಯರೂಪದಲ್ಲಿ ೧೯೮೫ರಲ್ಲಿ 'ಸಾಮರಸ್ಯದ ಶಿಲ್ಪಿ' ಎಂಬ ಹೆಸರಿನಲ್ಲಿ ತಂದಿದ್ದಾರೆ. ಈ ಕೃತಿಯಲ್ಲಿ ಸ್ಥಳೀಯ ಸ್ಥಳನಾಮಗಳ ವಿವರ, ಪಾಳೇಗಾರರ ವಿಚಾರಗಳು, ಸ್ವಾಮಿಗಳ ಪವಾಡದ ವಿಚಾರ, ಮೊದಲಾದವುಗಳ ವಿವರವಿದೆ.

ತೀ.ನಂ. ಶಂಕರನಾರಾಯಣ : ತೀ.ನಂ. ಶ್ರೀಕಂಠಯ್ಯನವರ ಬಂಧುವರ್ಗದವರು ತೀ.ನಂ. ಶಂಕರನಾರಾಯಣ. ತೀರ್ಥಪುರದವರಾದ ಇವರು ತೀರ್ಥಪುರ ಮತ್ತು ಶೆಟ್ಟಿಕೆರೆಗಳಲ್ಲಿ ಪ್ರಾಥಮಿಕ ಶಿಕ್ಷಣ ಮಾಡಿ ಪ್ರೌಢವ್ಯಾಸಂಗವನ್ನು ಮೈಸೂರಿನಲ್ಲಿ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿಯನ್ನೂ ಮಾನಸಗಂಗೋತ್ರಿಯಲ್ಲಿ ಎಂ.ಎ. ಪದವಿಯನ್ನೂ ರ್‍ಯಾಂಕ್‌ನೊಂದಿಗೆ

ಪಡೆದರು. ಪ್ರಸ್ತುತ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದಲ್ಲಿ ಸಂಶೋಧನಾ ವಿಭಾಗದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜಾನಪದ ಮೈಲಿಗಲ್ಲುಗಳು, ಜಾನಪದ ವಿಚಾರ, ಕಾಡುಗೊಲ್ಲರು ಮುಂತಾದವು ಅವರ ಸ್ವತಂತ್ರ ಕೃತಿಗಳು. 'ಸಂಕೀರ್ಣ ಜನಪದ ಕಥೆಗಳು' ಸಂಪಾದಿತ ಕೃತಿ. ತೀ.ನಂ.ಶ್ರೀ ಯವರಿಗೆ ಅರ್ಪಿಸಿದ 'ಶ್ರೀಕಂಠತೀರ್ಥ' ಎಂಬ ಅಭಿನಂದನಾ ಗ್ರಂಥಕ್ಕೆ ಸಹ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ೧೯೯೮ರಲ್ಲಿ ನಡೆದ ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ಎಂಬ ಅವರ ಸಂಶೋಧನಾ ಮಹಾಪ್ರಬಂಧದಲ್ಲಿ ಕಾಡುಗೊಲ್ಲರ ಜೀವನವಿಧಾನವನ್ನು ಸಮಗ್ರವಾಗಿ ಅಧ್ಯಯನ ಮಾಡಿದ್ದಾರೆ. ಬುಡಕಟ್ಟುಗಳ ವಿವರ, ಸಾಮಾಜಿಕ ಸ್ಥಿತಿಗತಿ, ವೇಷಭೂಷಣ, ಸಾಹಿತ್ಯ, ವೈದ್ಯ, ಕಲೆ, ದೈವಗಳು, ಹಬ್ಬ, ಜಾತ್ರೆ, ಆಚರಣೆಗಳು ಮುಂತಾದವುಗಳ ಆಳವಾದ ಅಧ್ಯಯನ ಮಾಡಲಾಗಿದೆ. ಜಾನಪದೀಯವಾದ ಈ ಅಧ್ಯಯನದಲ್ಲಿ ಈ ಭಾಗದ ಕಾಡುಗೊಲ್ಲರ ಸಾಂಸ್ಕೃತಿಕ ವಿವರಗಳು ಕಂಡುಬರುತ್ತವೆ. ಹೀಗಾಗಿ ಸ್ಥಳೀಯ ಕಾಡುಗೊಲ್ಲರ ಸಾಂಸ್ಕೃತಿಕ ವಿವರಗಳನ್ನು ನೀಡುವ ಮಹತ್ವದ ಕೃತಿಯಾಗಿದೆ. 'ಜಾನಪದ ವಿಚಾರ' ಕೃತಿಯಲ್ಲಿ ವಸ್ತುವೈವಿಧ್ಯವನ್ನೊಳಗೊಂಡ ವಿದ್ವತ್ಪೂರ್ಣ ಪ್ರಬಂಧಗಳಿವೆ. ಅವುಗಳಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಂಸ್ಕೃತಿಯ ಒಂದು ಪ್ರಧಾನ ನೆಲೆಯನ್ನು ಒಳಗೊಂಡ 'ಶೆಟ್ಟಿಕೆರೆಯ ಕೆಂಪಮ್ಮ ಜಾತ್ರೆ' ಪ್ರಬಂಧದಲ್ಲಿ ಜಾತ್ರೆಯ ಸಮಗ್ರ ಅಧ್ಯಯನವನ್ನು ಮಾಡಲಾಗಿದೆ. ಸ್ಥಳೀಯ ಸಂಸ್ಕೃತಿಗೆ ಸಂಬಂಧಿಸಿದಂತೆ ಅಪಾರವಾದ ಅರಿವನ್ನು ಮೂಡಿಸುವಲ್ಲಿ ಇವರ ಈ ಕೃತಿ ಮಹತ್ವಪೂರ್ಣವಾಗಿದೆ.

□□□

ಅನುವಾದಕರಾಗಿ ಎಸ್.ಜಿ. ನರಸಿಂಹಾಚಾರ್ (೧೮೬೨-೧೯೦೭)

– *ಪ್ರೊ. ಕೆ.ಎನ್. ಗಂಗಾನಾಯಕ್*

ಹೊಸಗನ್ನಡ ಅರುಣೋದಯ ಕಾಲದ ಪ್ರವರ್ತಕರು, ಕಣ್ಮಣಿಗಳು, ಪ್ರಸಿದ್ಧ ವಿದ್ವಾಂಸರು ಹಾಗೂ ಶ್ರೇಷ್ಠ ಕವಿಗಳು. ಸಂಸ್ಕೃತ, ತಮಿಳು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದ ಎಸ್.ಜಿ. ನರಸಿಂಹಾಚಾರ್ ಅವರು ಬಿ.ಎಂ.ಶ್ರೀ ಅವರ ಶಿಷ್ಯ ವರ್ಗದಲ್ಲಿ ಪ್ರಮುಖರು. ೧೮೬೨ ರಲ್ಲಿ ಅಳಸಿಂಗಾಚಾರ್ಯ ಮತ್ತು ಸೀತಮ್ಮ ದಂಪತಿಗಳಿಗೆ ಶ್ರೀರಂಗಪಟ್ಟಣದಲ್ಲಿ ಜನಿಸಿದ ಇವರು ಶ್ರೀರಂಗಪಟ್ಟಣ ಮತ್ತು ಮೈಸೂರಿನಲ್ಲಿ ವ್ಯಾಸಂಗ ಮಾಡಿದರು. ಶ್ರೀರಂಗಪಟ್ಟಣದಲ್ಲಿ ಕೆಲಕಾಲ ಉಪಾಧ್ಯಾಯರಾಗಿ ಸೇವೆಸಲ್ಲಿಸಿದ ಇವರು ನಂತರ ೧೮೮೭ ರಲ್ಲಿ ಶಿಕ್ಷಣ ಇಲಾಖೆಯಲ್ಲಿ ಭಾಷಾಂತರಕಾರರಾಗಿ ಸೇವೆ ಸಲ್ಲಿಸಲಾರಂಭಿಸಿದರು. ೧೮೯೧ರಲ್ಲಿ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯಲ್ಲಿ ಸಂಚಾರಿ ಪಂಡಿತರಾಗಿ, ಗ್ರಂಥಪಾಲಕರಾಗಿ ಕಾರ್ಯನಿರ್ವಹಿಸಿದರು. ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಗ ಇವರು ಆದಿಪುರಾಣ (೧೯೦೦) ಮತ್ತು ಜಗನ್ನಾಥವಿಜಯ (೧೯೦೪) ಎಂಬ ಅಮೂಲ್ಯವಾದ ಪ್ರಾಚೀನ ಹಸ್ತಪ್ರತಿಗಳನ್ನು ಸಂಪಾದಿಸಿ, ಪರಿಷ್ಕರಿಸಿ ಪ್ರಕಟಿಸಿದುದು ಕನ್ನಡಕ್ಕೆ ಒಂದು ವರದಾನವಾಗಿ ಪರಿಣಮಿಸಿತು. ಭಾಷಾಂತರಕಾರರಾಗಿದ್ದ ಇವರು ಹಿರಿಯ ಅಧಿಕಾರಿಗಳ ಗಮನ ಸೆಳೆದು ತಮ್ಮ ಹುದ್ದೆಯ ಜೊತೆಗೆ ಆಗಾಗ ಭಾಷಾಂತರಕಾರನ ಕೆಲಸವನ್ನೂ ನಿರ್ವಹಿಸುತ್ತಿದ್ದರೆಂಬುದನ್ನು ಕಾಣಬಹುದು. ಎಂ.ಬಿ. ಶ್ರೀನಿವಾಸಯ್ಯಂಗಾರ್ ಅವರ ಸ್ಥಾನದಲ್ಲಿ ಒಂದು ತಿಂಗಳು ಇಪ್ಪತ್ತಮೂರು ದಿನ ತಾತ್ಕಾಲಿಕ ಭಾಷಾಂತರಕಾರರಾಗಿ ಕೆಲಸ ಮಾಡಿದ್ದ ಇವರು ೧೮೯೨ರಲ್ಲಿ ಶಿಕ್ಷಣ ಇಲಾಖೆಯಲ್ಲಿ ಭಾಷಾಂತರಕಾರರಾಗಿ ನೇಮಕವಾದರು.

೧೮೯೨ರಲ್ಲಿ ಇವರು ಎಂ.ಎ. ರಾಮಾನುಜಯ್ಯಂಗಾರರ ಜೊತೆಗೂಡಿ 'ಕರ್ನಾಟಕ ಕಾವ್ಯಮಂಜರಿ' ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಅದರಲ್ಲಿ ಅನೇಕ ಹಳಗನ್ನಡ ಕಾವ್ಯಗಳನ್ನು ಸಂಗ್ರಹಿಸಲು ಪ್ರಯಾಸಪಟ್ಟು ಯಶಸ್ವಿಯಾಗಿರುವುದನ್ನು ಕಾಣುತ್ತೇವೆ. ಕಾವ್ಯಮಂಜರಿ ಮಾಸಪತ್ರಿಕೆ ಕಾರಣಾಂತರಗಳಿಂದ ನಿಂತುಹೋದ ಮೇಲೆ ೧೮೯೯ ರಲ್ಲಿ ಮತ್ತೆ ಇವರು ಎಂ.ಎ. ರಾಮಾನುಜಯ್ಯಂಗಾರರ ಜೊತೆಗೂಡಿ

'ಕರ್ನಾಟಕ ಕಾವ್ಯಕಲಾನಿಧಿ' ಎಂಬ ಹೊಸ ಪತ್ರಿಕೆಯನ್ನು ಆರಂಭಿಸಿದರು. ಈ ಕಾವ್ಯಮಾಲೆಯಲ್ಲಿ ಆದಿಕಾಲದಿಂದ ಹಿಡಿದು ೨೦ನೆಯ ಶತಮಾನದವರೆಗಿನ ಅನೇಕ ಕವಿಗಳ ಗದ್ಯ, ಚಂಪೂ ಕಾವ್ಯ, ನಾಟಕ, ಕೀರ್ತನೆ, ಶತಕ, ಸಾಂಗತ್ಯ, ನಿಘಂಟು, ಛಂದಸ್ಸು, ವ್ಯಾಕರಣ ಮತ್ತು ಅಲಂಕಾರಶಾಸ್ತ್ರಗಳನ್ನೊಳಗೊಂಡು ಸು. ೭೫ಕ್ಕೂ ಹೆಚ್ಚು ಉದ್ಗ್ರಂಥಗಳನ್ನು ಪರಿಷ್ಕರಿಸಿ ವಿಮರ್ಶಿಸಿರುವುದನ್ನು ಕಾಣಬಹುದು. ಅವುಗಳಲ್ಲಿ ಗದಾಯುದ್ಧ, ಯಶೋಧರ ಚರಿತೆ, ಗಿರಿಜಾ ಕಲ್ಯಾಣ, ಕಬ್ಬಿಗರ ಕಾವ, ರಾಮಾಶ್ವಮೇಧ, ಮೋಹನ ತರಂಗಿಣಿ, ಛಂದೋಂಬುಧಿ, ಮೊದಲಾದವುಗಳು ಪ್ರಮುಖ ಗ್ರಂಥಗಳಾಗಿವೆ. ಹೀಗೆ ಇವರ ಪ್ರತಿಭೆ, ಪಾಂಡಿತ್ಯಗಳೆರಡೂ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ಹೊರಹೊಮ್ಮಿದೆ. 'ಕರ್ನಾಟಕ ಕವಿಚರಿತೆ' ಯ ಪ್ರಥಮ ಸಂಪುಟ ಸಿದ್ಧಗೊಳ್ಳುತ್ತಿದ್ದಾಗ ಇವರು ಆರ್. ನರಸಿಂಹಾಚಾರ್ಯರಿಗೆ ಸಹಾಯಕರಾಗಿದ್ದರಂತೆ.

ಶಿಕ್ಷಣ ಇಲಾಖೆಯಲ್ಲಿ ಭಾಷಾಂತರಕಾರರಾಗಿದ್ದ ಎಸ್.ಜಿ. ನರಸಿಂಹಾಚಾರ್ ಅವರು ಹಳೆಯ ಮೈಸೂರು ಸಂಸ್ಥಾನದಲ್ಲಿ ಕನ್ನಡ ಭಾಷಾ ಸಾಹಿತ್ಯದ ಅಭಿವೃದ್ಧಿಗಾಗಿ ಏರ್ಪಟ್ಟ ಸಮಿತಿಗಳಲ್ಲಿ, ಪಠ್ಯನಿಯಾಮಕ ಸಮಿತಿಗಳಲ್ಲಿ, ವಿವಿಧ ಮಟ್ಟದ ಪರೀಕ್ಷಾ ಮಂಡಳಿಗಳಲ್ಲಿ ಸೇವೆಸಲ್ಲಿಸಿದ್ದಾರೆ. ಹೀಗೆ ಎಸ್.ಜಿ.ನ ಅವರು ವಿದ್ಯಾ ಇಲಾಖೆಯಲ್ಲಿದ್ದುದರಿಂದ ಶಾಲಾಪಠ್ಯಪುಸ್ತಕಗಳ ಅಗತ್ಯವನ್ನು ಪೂರೈಸಬೇಕಾಗಿತ್ತು. ಸ್ವತಃ ಇಂಗ್ಲಿಷ್ ಮತ್ತು ಸಂಸ್ಕೃತ ವಿದ್ವಾಂಸರಾಗಿದ್ದ ಇವರು ಶಾಲಾ ಪಠ್ಯಪುಸ್ತಕಗಳಿಗಾಗಿ ಅನೇಕ ಇಂಗ್ಲಿಷ್ ಕವಿತೆಗಳು ಹಾಗೂ ಸಂಸ್ಕೃತ ಕಾವ್ಯಖಂಡಗಳನ್ನು ಹೊಸಗನ್ನಡಕ್ಕೆ ಅನುವಾದಿಸತೊಡಗಿದರು. ಒಂದು ಹಂತದಲ್ಲಿ ಆಗ ಕನ್ನಡ ಕಾವ್ಯ ಪರಂಪರೆ ತನ್ನ ಸತ್ವವನ್ನು ಕಳೆದುಕೊಂಡಿತ್ತು. ಆಗಿನ ಕನ್ನಡ ಕವಿತೆಗಳು ಸುತ್ತಣ ವಾಸ್ತವ ಬದುಕಿಗೆ ಸ್ಪಂದಿಸದೆ ನೀರಸವೆನಿಸಿದ್ದವು. ಜೊತೆಗೆ ಸಾಂಪ್ರದಾಯಿಕ ಬದುಕಿನಲ್ಲೂ ಇದು ತಲ್ಲೀನತೆಯನ್ನು ಉಳಿಸಿಕೊಳ್ಳದೆ ಅವಸಾನದ ಅಂಚಿನಲ್ಲಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಿದ್ದ ಕಾಲದಲ್ಲಿ ಕನ್ನಡ ಕಾವ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಲು ಎಸ್.ಜಿ. ನರಸಿಂಹಾಚಾರ್ ಅವರು ಶ್ರಮಿಸಿರುವುದನ್ನು ಕಾಣಬಹುದು. ಇವರು ಆಂಗ್ಲ ಕವಿತೆಗಳಲ್ಲಿದ್ದ ಚೆಲುವಿಗೆ ಮನಸೋತು ಅವುಗಳನ್ನು ಕನ್ನಡದಲ್ಲಿ ಅನುವಾದಿಸುವ ಮೂಲಕ ಕನ್ನಡ ಕಾವ್ಯ ಸಂಪ್ರದಾಯವನ್ನು ಶ್ರೀಮಂತಗೊಳಿಸಿದರು. ಇಂಗ್ಲಿಷ್ ಕಾವ್ಯವನ್ನು ಕನ್ನಡದಲ್ಲಿ ಭಾಷಾಂತರ ಮಾಡಿದ ಕೆಲಸಕ್ಕೆ ಸುಮಾರು ಒಂದು ಶತಮಾನದ ಇತಿಹಾಸವಿದೆ. ಎಸ್.ಜಿ.ನ ಅವರು ಈ ದಿಕ್ಕಿನಲ್ಲಿ ಕೆಲಸಮಾಡಿದ ಮೊದಲಿಗರೆಂದು ತಿಳಿದು ಬರುತ್ತದೆ. ಹೀಗೆ ಭಾಷಾಂತರಿಸುವಾಗ ಹೊಸ ಕಾವ್ಯಕ್ಕೆ ಹೊಸ ಭಾಷಾರೂಪ ಹೇಗೆ ಮುಖ್ಯವೋ ಹಾಗೆ ಛಂದಸ್ಸಿನ ವಿಚಾರದಲ್ಲೂ ಹೊಸ ಪ್ರಯೋಗ ನಡೆಯಬೇಕೆಂದು ಹೇಳಿ ಅದನ್ನು ತಮ್ಮ ಕವಿತೆಗಳಲ್ಲಿ ಪ್ರಯೋಗ ಮಾಡಿದ್ದಾರೆ. ಅದರ ಫಲವೇ ಚೌಪದಿ, ಷಟ್ಪದಿ, ಸಾಂಗತ್ಯಗಳಾಗಿ ಇವರ ಕವಿತೆಗಳಲ್ಲಿ ಹೊಸ ರೂಪು ಪಡೆದಿವೆ. ಇವರ ಕಾರ್ಯವೈಖರಿಯನ್ನು ಕುರಿತು ತೀ.ನಂ.ಶ್ರೀ ಅವರು

"ಇಪ್ಪತ್ತನೆಯ ಶತಮಾನದ ಮೊದಲ ದಶಕಗಳಲ್ಲಿ ಪ್ರಚುರವಾಗಿದ್ದ ಕನ್ನಡ ಪಠ್ಯ ಪುಸ್ತಕಗಳಲ್ಲಿ ಸೇರಿದ್ದ ಇಂಗ್ಲಿಷ್ ಪದ್ಯಾನುವಾದಗಳೆಲ್ಲವೂ ನಮಗೆ ತಿಳಿದಮಟ್ಟಿಗೆ ಎಸ್.ಜಿ.ನರಸಿಂಹಾಚಾರ್ಯರವೇ ಎಂದು ತೋರುತ್ತದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ಶ್ರೀ ಅವರಿಗಿಂತ ಮೊದಲು ಇಂಗ್ಲಿಷ್ ಕಾವ್ಯ ಭಾಗಗಳನ್ನು ಅನುವಾದಿಸಿದ ಕೀರ್ತಿ ಎಸ್.ಜಿ.ನ ಅವರಿಗೆ ಸಲ್ಲುತ್ತದೆ. ಆದರೆ ಇವರ ಭಾಷಾಂತರಿತ ಕವನಗಳೆಲ್ಲ ಪಠ್ಯಪುಸ್ತಕಗಳಲ್ಲಿ ಚದುರಿಹೋಗಿವೆ. ಹಾಗಾಗಿ ಅವೆಲ್ಲವೂ ಒಟ್ಟಾಗಿ ಒಂದೆಡೆ ದೊರೆಯದಿರುವುದು ದುರ್ದೈವದ ಸಂಗತಿ.

ಎಸ್.ಜಿ. ನರಸಿಂಹಾಚಾರ್ ಅವರು ಅನುವಾದಿಸಿರುವ ಕೃತಿಗಳು :

೧. ಅಜನೃಪ ಚರಿತೆ – ಕಾಳಿದಾಸನ ರಘುವಂಶ ಕಾವ್ಯದಿಂದ ಅನುವಾದಿಸಿರುವ ಕಾವ್ಯ ಖಂಡಗಳು
೨. ದಿಲೀಪ ಚರಿತೆ – ಮೂಲ ದೊರಕಿಲ್ಲ
೩. ಆರ್ಯ ಮಹಿಮಾದರ್ಶ – ಹೆನ್ರಿ ವರ್ಡ್ಸ್‌ವರ್ತ್ ಲಾಂಗ್‌ಫೆಲೋನ A Pslam of Life – ಎಂಬ ಕವನದ ಒಂದು ಭಾಗದ ಅನುವಾದ.
೪. ಉತ್ತಮ ರಾಜ್ಯ – Felicia Dorothea Hemans ಎಂಬಾಕೆಯ "The Better Land" ಎಂಬ ಕವನದ ಅನುವಾದ.
೫. ಕುರುಡು ಹುಡುಗ – Colley Cibber ಕವಿಯ "The Blind Boy ಎಂಬ ಕವನದ ಅನುವಾದ
೬. ಕೋಗಿಲೆ – William Wordsworth ಕವಿಯ 'To the Cuckoo' ಕವನದ ಅನುವಾದ
೭. ಚಂಡಮಾರುತದ ಪದ್ಯಗಳು – ಷೇಕ್ಸ್‌ಪಿಯರನ 'The Tempest' ನಾಟಕದಲ್ಲಿ ಬರುವ ನಾಲ್ಕು ಪದ್ಯಗಳ ಅನುವಾದ
೮. ನಕ್ಷತ್ರ – Jane Taylor ಕವಿಯ 'The star' ಕವನದ ಅನುವಾದ
೯. ಬಿಡುವು – ಮೂಲ ದೊರಕಿಲ್ಲ
೧೦. ಮಕ್ಕಳು ಮಲಗುವ ಹೊತ್ತು – ಮೂಲ ದೊರಕಿಲ್ಲ
೧೧. ಮರಳಿ ಯತ್ನವ ಮಾಡು – T.H. Palmer ಕವಿಯ Try try again ಕವನದ ಅನುವಾದ
೧೨. ಪ್ರೋಷಿತ ಪ್ರಿಯ ಸಮಾಗಮಂ – ಆಲಿವರ್ ಗೋಲ್ಡ್‌ಸ್ಮಿತ್ ಕವಿಯ The Hermit ಕವನದ ಅನುವಾದ
೧೩. ಉತ್ತರರಾಮಚರಿತಂ – ನಾಟಕದ ಅನುವಾದ
೧೪. ಗಲಿವರನ ದೇಶಸಂಚಾರ – ಜೊನಾಥನ್ ಸ್ವಿಫ್ಟ್‌ನ **'ಗಲಿವರ್ ಟ್ರಾವಲ್ಸ್'** ಕೃತಿಯ ಅನುವಾದ

ಎಸ್.ಜಿ. ನರಸಿಂಹಾಚಾರ್ ಅವರು ಅನುವಾದಿಸಿರುವ, ಆದರೆ ಇದುವರೆವಿಗೂ ಲಭ್ಯವಿಲ್ಲದಿರುವ ಕೃತಿಗಳು :

೧. ಈಸೋಪನ ನೀತಿಕಥೆಗಳು
೨. ಗಯ್ಯಾಳಿಯನ್ನು ಸಾಧು ಮಾಡುವಿಕೆ
೩. ಭಾರವಿ
೪. ಮುಕುಂದಮಾಲೆ

ಈ ಕೃತಿಗಳು ದೊರೆಯುವವರೆಗೆ ಇವುಗಳ ಬಗೆಗೆ ಇದಮಿತ್ಥಂ ಎಂದು ಹೇಳಲು ಸಾಧ್ಯವಿಲ್ಲ. ಆದರೂ ಈಸೋಪನ ನೀತಿಕಥೆಗಳು, ನೀತಿಸಾರವೆಂದೂ, 'ಗಯ್ಯಾಳಿಯನ್ನು ಸಾಧು ಮಾಡುವಿಕೆ' ಷೇಕ್ಸ್‌ಪಿಯರನ 'Taming of the Shrew' ನಾಟಕದ ಅನುವಾದವೆನ್ನಲು ಅವಕಾಶವಿದೆ. ಎಸ್.ಜಿ. ನರಸಿಂಹಾಚಾರ್ ಅವರ ಭಾರವಿ ಕೃತಿಯು ಭಾರವಿಯ ಕಿರಾತಾರ್ಜುನೀಯದ ಪ್ರೇರಣೆಯಿಂದ ರಚಿತವಾದುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. 'ಮುಕುಂದಮಾಲೆ' ಕುಲಶೇಖರ ಆಳ್ವಾರರ ಸಂಸ್ಕೃತ ಶ್ಲೋಕಗಳ ಕನ್ನಡ ರೂಪಾಂತರವೆಂದು ತಿಳಿದುಬರುತ್ತದೆ.

ಎಸ್.ಜಿ.ನ ಅವರ ಕೃತಿಗಳಲ್ಲಿ ಹೆಚ್ಚಿನವು ಅನುವಾದಿತ ಕೃತಿಗಳೇ. ಅವರು ತಮ್ಮ ಅನುವಾದಗಳ ಮೂಲಕ ಹೊಸ ಹಾದಿ ತುಳಿದರೆಂಬುದು ಇದರಿಂದ ತಿಳಿಯುತ್ತದೆ. ಈ ಕಾರಣದಿಂದ ಅವರ ಈ ಕೃತಿಗಳು ಅನುವಾದ ಕ್ಷೇತ್ರದಲ್ಲಿ ಅಮೂಲ್ಯವೂ, ಉಪಯುಕ್ತವೂ ಆದ ಮಾಹಿತಿಗಳಾಗಿವೆ. ಕಾಳಿದಾಸನ 'ರಘುವಂಶ' ಹಾಗೂ ಇನ್ನಿತರ ಕೃತಿಗಳಿಂದ ಪ್ರೇರಣೆ ಪಡೆದು ಭಾಷಾಂತರಿಸಿರುವ ಕೃತಿಗಳು ಹೊಸತನವನ್ನು ಹೆಚ್ಚಾಗಿ ಬಿಂಬಿಸುತ್ತವೆ. ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಯಿಂದ ಅನುವಾದ ಮಾಡುವಾಗಲೂ ಇವರು ಅಚ್ಚಗನ್ನಡ ಶಬ್ದಗಳನ್ನೇ ಹೆಚ್ಚಾಗಿ ಬಳಸಿರುವುದನ್ನು ಕಾಣಬಹುದು. ಇವರ ಅನುವಾದಿತ ಕವಿತೆಗಳೂ ನವನವೀನವಾಗಿದ್ದು, ಹೊಸಗನ್ನಡ ಭಾಷೆಯಲ್ಲಿ ಅವತರಿಸಿದ ಪ್ರಾಚೀನ ಛಂದೋರೂಪವನ್ನು ಒಳಗೊಂಡಿವೆ. ಆದರೂ ಈ ಕವಿತೆಗಳ ವಸ್ತುವಿನಲ್ಲಿ ಹೊಸತನವಿದೆ. ಎಸ್.ಜಿ.ನ ಅವರ ಅನುವಾದಗಳಲ್ಲಿ ಹೆಚ್ಚು ಪದ್ಯಗಳು ಶಾಲೆಯಲ್ಲಿ ಓದುವ ಮಕ್ಕಳಿಗಾಗಿಯೇ ಬರೆದ ಪದ್ಯಗಳಾಗಿವೆ. ಈ ಕವಿತೆಗಳ ಪ್ರಮುಖ ಗುಣವೆಂದರೆ ಸುಲಭವಾಗಿ ಎಲ್ಲರಿಗೂ ಅರ್ಥವಾಗುವಂತಹುದು. ಸರಳತೆ, ಲಾಲಿತ್ಯಗಳು ತುಂಬಿರುವ ಎಸ್.ಜಿ.ನ ಅವರ ಕವನಗಳು ಸುಲಭವಾಗಿ ಎಲ್ಲರಿಗೂ ತಿಳಿಯುವಂತಹ ಶೈಲಿಯಲ್ಲಿವೆ. ಇವರ ಭಾಷೆಯಲ್ಲಿ ಸರಳತೆಯಿದ್ದು, ಅಭಿವ್ಯಕ್ತಿಯಲ್ಲಿ ಒಂದು ಬಗೆಯ ಮಾಧುರ್ಯವಿದೆ. ಇವರು ಇಂಗ್ಲಿಷ್ ಕವಿತೆಗಳನ್ನು ಅನುವಾದಿಸಿದ್ದರೂ ಆ ಅನುವಾದಗಳ ಛಂದಸ್ಸು, ಬಹುಮಟ್ಟಿಗೆ ಹಳೆಯ ಛಂದೋರೂಪದಲ್ಲಿವೆ. ಅದರಲ್ಲೂ ಷಟ್ಪದಿ, ಸಾಂಗತ್ಯ, ಚೌಪದಿಗಳೂ ಪ್ರಮುಖವಾಗಿವೆ. ವರ್ಡ್ಸ್‌ವರ್ತ್ ಕವಿಯ 'To the Cuckoo' ಕನ್ನಡಾನುವಾದದ ಸಾಲುಗಳು ಹೀಗಿವೆ :

"ಬಾರೋ ಬಸಂತದ ಕಂದ ಬಾ ಬಾ ಬಾರೋ
ಹಾರುವ ಹಕ್ಕಿ ನೀನಲ್ಲ
ಸಾರುವ ದನಿ ಮಾಯದ ಗಂಟು ಕಣ್ಣಿಗೆ
ತೋರದ ಹುರುಳಾಗಿ ಸುಳಿವೆ"

ಇದರ ಮೂಲ :

Thrice welcome, darling of spring
Even yet thou art to me
No bird, but an invisible thing
A voice, a mystery

ಮೇಲಿನ ಅನುವಾದದ 'ಬಾರೋ ಬಸಂತದ ಕಂದ ಬಾ ಬಾ ಬಾರೋ' ಎಂಬಲ್ಲಿ 'ಬಾ ಬಾ ಬಾರೋ' ಎಂಬ ಪುನರಾವರ್ತನೆಯ ಮಾತು Thrice welcome ಎಂಬುದರ ಉತ್ತಮ ಭಾಷಾಂತರ. ಉಳಿದ ಭಾಗವನ್ನು ಮೂಲದ ಅನುವಾದ ಎಂಬ ದೃಷ್ಟಿಯಿಂದ ಮೂಲದೊಂದಿಗೆ ತೌಲನಿಕವಾಗಿ ಹೋಲಿಸಿದರೆ ಅಷ್ಟು ಸಂಗತವಾಗಿ ತೋರದಿರಬಹುದು. ಆದರೂ ನವುರಾದ ಭಾವ ಆಸ್ವಾದ ಯೋಗ್ಯವಾಗಿದೆ.

ಎಸ್.ಜಿ.ನ ಅವರ ಲಾಲಿತ್ಯದಿಂದ ಕೂಡಿದ ಅನುವಾದಕ್ಕೆ ಉದಾಹರಣೆಯಾಗಿ 'Twinkle, twinkle, little star' ಎಂಬ ಕವಿತೆಯ ಅನುವಾದವನ್ನು ಇಲ್ಲಿ ಉದಾಹರಿಸಬಹುದು :

ಮಿರುಮಿರು ಹಾ ಕಿರುತಾರಗೆಯೆ
ಅರಿಯೆನು ನಾನೆಲೆ ನೀನಾರೊ
ಧರೆಗಿಳಿಯದೆ ನೀನಿರುತಿಹೆ ದೂರದಿ
ನೆರೆಹೊಳೆಯುವ ವಜ್ರದ ತೆರದಿ

ಇದರ ಮೂಲ :

Twinkle twinkle little star
How I wonder what you are
Up above the world so high
Like a diamond in the sky

ಶರಷಟ್ಪದಿಯ ನಡಿಗೆಯುಳ್ಳ ಹೊಸಗನ್ನಡ ಭಾಷೆಯಲ್ಲಿ ಹರಿಯುವ ಈ ಪದ್ಯದಲ್ಲಿ ಮೂಲದ ಭಾವ ಚೆನ್ನಾಗಿ ಪಡಿಮೂಡಿದೆ. ಇದೇ ಕವಿತೆಯನ್ನು ಪಂಜೆಯವರು ಅನುವಾದಿಸಿದ್ದು ಹಲವು ವಿಧಗಳಲ್ಲಿ ಪಂಜೆಯವರಿಗಿಂತ ಎಸ್.ಜಿ.ನ ಅವರಲ್ಲಿ ಒಂದು ಬಗೆಯ ಹೊಸತನ ತುಂಬಿಕೊಂಡಿರುವುದನ್ನು ಈ ಎರಡು ಅನುವಾದಗಳನ್ನು ತೌಲನಿಕವಾಗಿ ಹೋಲಿಸಿದಾಗ ಗುರುತಿಸುವುದು ಸಾಧ್ಯ. ಅನುವಾದದಲ್ಲಿರುವ 'ಹಾ' ಎಂಬುದು ಮೂಲದಲ್ಲಿರುವ ಭಾವ. ಆದರೂ ಅನುವಾದದಲ್ಲಿ ಬರುವ 'ರ' ಕಾರದ ಪ್ರಚುರತೆಯೇ ಒಂದು ಬಗೆಯ ನಾವೀನ್ಯತೆಗೆ ಕಾರಣವಾಗಿದೆ. ಇಲ್ಲಿರುವ ಕಿರುತಾರಗೆ 'little star' ನ ಯಥಾವತ್ತಾದ ಭಾಷಾಂತರ.

ಇದಲ್ಲದೆ ತಮ್ಮ ಸಮಕಾಲೀನ ಕೃತಿಗಳಿಗೆ ಬೇಕಾದ ಪದ್ಯಭಾಗಗಳನ್ನು ಎಸ್.ಜಿ.ನ ಅವರು ರಚಿಸಿಕೊಟ್ಟ ಉದಾಹರಣೆಗಳಿವೆ. 'ಚಂಡಮಾರುತ' ದಲ್ಲಿರುವ ಪದ್ಯಗಳೂ, ವರದಾಚಾರ್ಯರ ನಾಟಕಗಳಲ್ಲಿ ಬರುವ ಹಾಡುಗಳೂ, ಬಿ. ವೆಂಕಟಾಚಾರ್ಯರ 'ದುರ್ಗೇಶನಂದಿನಿ' ಯಲ್ಲಿ ಬಂದ 'ಶರಣವಿಮಲೆಯ ಚರಣಕೆ' ಎಂದು ಆರಂಭವಾಗುವ ಹಾಡು – ಇವೆಲ್ಲಾ ಎಸ್.ಜಿ.ನ ಅವರವೇ ಎಂಬ ಪ್ರತೀತಿಯಿದೆ.

ಎಸ್.ಜಿ.ನ ಅವರವೇ ಅನುವಾದಗಳನ್ನು ಮೂಲದೊಂದಿಗೆ ತೌಲನಿಕವಾಗಿ ಹೋಲಿಸಿ ನೋಡಿದರೆ ಸಾಕಷ್ಟು ವ್ಯತ್ಯಾಸಗಳಿವೆಯೆಂಬುದು ಸ್ಪಷ್ಟವಾಗುತ್ತದೆ. ಎಸ್.ಜಿ.ನ ಅವರಲ್ಲಿ ಮೂಲ ಎನ್ನುವುದು ಇಡೀ ಅನುವಾದದ ಹಿಂದೆ ಪ್ರೇರಕಶಕ್ತಿಯಾಗಿ ನಿಲ್ಲುತ್ತದೆ. ಆದ್ದರಿಂದ ಮೂಲದ ಭಾವದಿಂದ ಪ್ರೇರಿತವಾದ ಕವಿತಾಶಕ್ತಿ ಸ್ವಂತರಚನೆಯೋ ಎಂಬಷ್ಟು ಮಟ್ಟಿಗೆ ಸ್ವತಂತ್ರ ವಹಿಸುತ್ತದೆ.

ಒಟ್ಟಿನಲ್ಲಿ ಎಸ್.ಜಿ. ನರಸಿಂಹಾಚಾರ್ಯರ ಕವಿತೆಗಳಲ್ಲಿ ತೌಲನಿಕ ದೃಷ್ಟಿಯಿಂದ ಎಷ್ಟೇ ಅರೆ–ಕೊರೆಗಳಿದ್ದರೂ ಐತಿಹಾಸಿಕವಾಗಿ ಅವರ ಪ್ರಯತ್ನಗಳು ಮೌಲ್ಯಯುತವಾದವು. ಇವರ ಅನುವಾದಗಳನ್ನು ಗಮನಿಸಿದಾಗ ಇವರಿಗೆ ಪ್ರಿಯವಾದ ಛಂದೋರೂಪ ಷಟ್ಪದಿಯೆಂಬುದು ತಿಳಿಯುತ್ತದೆ. ಎಸ್.ಜಿ.ನ ಅವರ ಎಲ್ಲಾ ಅನುವಾದಿತ ಕವಿತೆಗಳು ಇಂದು ಉಪಲಬ್ಧವಿಲ್ಲವಾದರೂ, ಉಪಲಬ್ಧವಿರುವ ಅನುವಾದಿತ ಕವಿತೆಗಳು ಅವರ ಪ್ರತಿಭೆಯನ್ನೂ, ಉಭಯ ಭಾಷಾಪ್ರಭುತ್ವವನ್ನೂ, ಸಾಧನೆ– ಸಿದ್ಧಿಗಳನ್ನೂ ಆಮೂಲಾಗ್ರವಾಗಿ ಪ್ರತಿಬಿಂಬಿಸುತ್ತವೆ.

ಹೀಗೆ ಭಾಷಾಂತರದ ಮೂಲಕ ಹೆಸರುವಾಸಿಯಾದ ಎಸ್.ಜಿ. ನರಸಿಂಹಾಚಾರ್ ಅವರು ಅತ್ಯುತ್ತಮ ಸ್ವತಂತ್ರ ಕವಿತೆಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ 'ಗೋವಿನ ಬಾಳು', 'ಕಾವೇರಿಯ ಮಹಿಮೆ' ಮತ್ತು 'ನೇಗಿಲು' – ಪ್ರಸಿದ್ಧವಾದವುಗಳು. ಹೀಗೆ ಎಸ್.ಜಿ.ನ ಅವರು ಶ್ರೇಷ್ಠ ಭಾಷಾಂತರಕಾರರಾಗಿ, ಸೃಜನಶೀಲ ಲೇಖಕರಾಗಿ ಕನ್ನಡ ಸಾರಸ್ವತ ಲೋಕಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

□□□

ಶ್ರೀ ಜಿ.ಎಸ್. ಶಿವರುದ್ರಪ್ಪ ಮತ್ತು ಶ್ರೀ ಚೆನ್ನವೀರ ಕಣವಿ ಕಾವ್ಯದಲ್ಲಿನ ಭಾರತೀಯ ಸಂಸ್ಕೃತಿ, ರಾಷ್ಟ್ರೀಯತೆ, ಸ್ವಾತಂತ್ರ್ಯೋತ್ಸವ ಮತ್ತು ನಾಡು-ನುಡಿ ವಿಚಾರಗಳು (೧೮೬೨-೧೯೦೭)

– ಶ್ರೀ ಅಶೋಕ್ ಜಿ.ಎಸ್.

ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದಲೂ ಕವಿಗಳು ನಾಡು-ನುಡಿ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಸ್ತಾಪ ಮಾಡಿರುವುದು ಕಂಡುಬರುತ್ತದೆ. ಮೊಟ್ಟ ಮೊದಲ ಶಾಸನಗಳಲ್ಲಿ ಕನ್ನಡ ನಾಡಿನ ವಿಚಾರಗಳ ಬಗ್ಗೆ ಚರ್ಚಿಸಿದರೆ ನಂತರದಲ್ಲಿ ನೃಪತುಂಗ, ಅಸಗ, ಗುಣನಂದಿ, ಗುಣವರ್ಮ, ಪಂಪ, ನಾಗವರ್ಮ, ರನ್ನ, ಚಾವುಂಡರಾಯ ಮುಂತಾದ ಪೂರ್ವಕವಿಗಳು ಪ್ರಮುಖವಾಗಿ ಕವಿ-ಕಾವ್ಯ, ನಾಡು ನುಡಿ ಕನ್ನಡ ಎಲ್ಲೆ ಮುಂತಾದವುಗಳ ಬಗ್ಗೆ ಹೇಳುತ್ತಾರೆ.

ಕನ್ನಡ ನಾಡಿನ ಚೆಲುವನ್ನು ಮತ್ತು ಎಲ್ಲೆಯನ್ನು ಕುರಿತು ನೃಪತುಂಗನು **'ಕಾವೇರಿಯಿಂದಮಾ ಗೋದಾವರಿ ವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ'** ಎಂದು ಹೇಳಿದ ಕವಿ ಮುಂದೆ ಈ ನಾಡಿನ ಜನತೆಯ ನಡೆ ನುಡಿ ವಿಚಾರ ಬಂದಾಗ. **'ಪದಸರಿದು ನುಡಿಯಲಂ ನುಡಿದುದನರಿದು ನಡೆಯಲ್ ನಾಡವರ್ಗಳ್' 'ಕುರಿತೋದದೆಯಂ ಕಾವ್ಯ ಪ್ರಯೋಜನ ಪರಿಣತಮತಿಗಳ್'** ಎಂದು ನಾಡಿನ ಜನತೆಯ ಆಚಾರ-ವಿಚಾರಗಳ ಬಗ್ಗೆ ಉದ್ಗಾರ ತೆಗೆಯುತ್ತಾರೆ. ಪಂಪ ಕೂಡ ಈ ದೇಶದಲ್ಲಿ ಮರಿದುಂಬಿಯಾಗಿಯಾದರೂ ಹುಟ್ಟಬೇಕೆಂದು ಆಶಿಸುತ್ತಾನೆ. ಜನ್ನ, ಹರಿಹರ, ರಾಘವಾಂಕ, ಚಾಮರಸ, ರನ್ನ, ಷಡಕ್ಷರಿ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರ ವರ್ಣಿ ಮುಂತಾದ ಮಧ್ಯಕಾಲೀನ ಕವಿಗಳು ಕನ್ನಡ ನಾಡು-ನುಡಿ ವಿಚಾರಗಳ ಬಗ್ಗೆ ತಮ್ಮ ಕಾವ್ಯಗಳಲ್ಲಿ ಹೇಳಿದ್ದಾರೆ.

ಬ್ರಹ್ಮಸಮಾಜ, ಆರ್ಯಸಮಾಜ ಮುಂತಾದ ಸಂಘ ಸಂಸ್ಥೆಗಳು, ರಾಜಾರಾಮ್ ಮೋಹನ್‌ರಾಯ್, ರಾಮಕೃಷ್ಣ ಪರಮಹಂಸ, ವಿವೇಕಾನಂದ, ರವೀಂದ್ರನಾಥ ಟಾಕೂರ್, ಜ್ಯೋತಿ ಭಾಮಲೆ, ಎಂ.ಎನ್. ರಾಯ್, ಮಹಾತ್ಮಗಾಂಧಿ, ಅಂಬೇಡ್ಕರ್,

ರಾಮಸ್ವಾಮಿ ನಾಯಕರ್ ಮುಂತಾದ ವಿವಿಧ ಬಗೆಯ ಚಿಂತಕರು, ದಾರ್ಶನಿಕರು ಭಾರತೀಯ ಸಮಾಜದ ಮೇಲೆ ಜಾಗತಿಕ ಪ್ರಭಾವವನ್ನುಂಟು ಮಾಡಿದರು. ಈ ಅಂಶಗಳು ರಾಷ್ಟ್ರದ ಇತರ ಪ್ರದೇಶಗಳಂತೆಯೇ ಕನ್ನಡ ನಾಡು–ನುಡಿಯ ಮೇಲೂ ಪ್ರಭಾವ ಕಾಣಿಸಿಕೊಂಡಿತು.

ಆಧುನಿಕ ಸಾಹಿತ್ಯದ ಪ್ರಮುಖ ಘಟ್ಟಗಳಲ್ಲಿ ನವೋದಯ ಸಾಹಿತ್ಯ ತುಂಬಾ ಗಮನಾರ್ಹವಾದುದು. ಈ ನವೋದಯ ಸಾಹಿತ್ಯವು ಭಾವುಕತೆ, ನೈತಿಕತೆ, ಕನಸುಗಾರಿಕೆ, ನಾಡು–ನುಡಿ, ಆಚಾರ–ವಿಚಾರಗಳು ಇನ್ನೂ ಹಲವಾರು ಪ್ರಮುಖ ಅಂಶಗಳು ನವೋದಯ ಸಾಹಿತ್ಯದ ಮೇಲೆ ಪ್ರಭಾವ ಬೀರಿವೆ. ನವೋದಯ ಕಾಲದ ಕವಿಗಳು, ಮಹಾ ಮಾನವತಾವಾದಿಗಳೂ, ವಿಚಾರವಾದಿಗಳೂ ಆದ ದ.ರಾ. ಬೇಂದ್ರೆ, ಕುವೆಂಪು, ಕಾರಂತ, ಕೈಲಾಸಂ ಮುಂತಾದವರು ಸಮಾಜದ ದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿರುವುದರ ಜೊತೆಗೆ ನಾಡು ನುಡಿ ವಿಚಾರಗಳನ್ನು ಪ್ರಮುಖವಾಗಿ ಚರ್ಚಿಸಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆ ಹಲವಾರು ಸ್ಥಿತ್ಯಂತರಗಳನ್ನು ಪಡೆದುಕೊಂಡು ಸಮೃದ್ಧವಾಗಿ ಬೆಳೆದು ಬಂದಿರುವುದನ್ನು ನಾವು ಗಮನಿಸಿದ್ದೇವೆ. ಆಯಾ ಕಾಲದ ಕಾವ್ಯ ಧೋರಣೆ ನಿಜವಾಗಿಯೂ ತತ್ಪೂರ್ವದ ಸಾಹಿತ್ಯ ಪರಂಪರೆಯೊಂದಿಗೆ ಸವಾಲಾಗಿ ನಿಲ್ಲುವ ಮತ್ತು ಸ್ಪಷ್ಟವಾಗಿ ಗುರುತಿಸಬಹುದಾದ ಬದಲಾವಣೆಗಳನ್ನು ಅಭಿವ್ಯಕ್ತಿಯಲ್ಲಿ ಸಾಧಿಸಿದ್ದರಿಂದ ಅದು ವಿಶಿಷ್ಟತೆಯನ್ನು ಪಡೆದಿದೆ. ಹಿಂದಿನ ಕನ್ನಡ ಸಾಹಿತ್ಯವು ಕಾಲ ಸ್ಥಿತಿಯನ್ನು ಅನುಸರಿಸಿ ಪ್ರಗತಿಪರವಾಗಿತ್ತು. ಅಂತೆಯೇ ಆಧುನಿಕ ಕನ್ನಡ ಸಾಹಿತ್ಯವು ಆಯಾ ಪರಿಸ್ಥಿತಿಗೆ ಅನುಗುಣವಾಗಿ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ–ಬಂಡಾಯ ಸಾಹಿತ್ಯ ಪಂಥಗಳಾಗಿ ಹೊರಹೊಮ್ಮಿತು. ಇಲ್ಲಿ ಕನ್ನಡದ ಸಮನ್ವಯ ಕವಿಗಳಾದ ಜಿ.ಎಸ್. ಶಿವರುದ್ರಪ್ಪ ಮತ್ತು ಚೆನ್ನವೀರ ಕಣವಿ ಅವರ ಕಾವ್ಯವನ್ನು ಕುರಿತ ಸಮಗ್ರ ತೌಲನಿಕ ವಿವೇಚನೆಯ ಪ್ರಯತ್ನ ಮಾಡಲಾಗಿದೆ. ಸರಳ ಶೈಲಿಯ ಮೂಲಕ ವಿಶಿಷ್ಟ ಅಂಶಗಳನ್ನು ಅನಾವರಣಗೊಳಿಸಿ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕಾವ್ಯಕೃತಿಗಳನ್ನು ನೀಡಿರುವ ಜಿ.ಎಸ್. ಶಿವರುದ್ರಪ್ಪ ಮತ್ತು ಚನ್ನವೀರ ಕಣವಿಯವರ ಕಾವ್ಯದಲ್ಲಿನ ನಾಡು–ನುಡಿ ವಿಚಾರಗಳನ್ನೂ ತೌಲನಿಕವಾಗಿ ವಿವೇಚಿಸಲಾಗಿದೆ.

ಜಿ.ಎಸ್. ಶಿವರುದ್ರಪ್ಪ

ಸಾಹಿತ್ಯವು ಸಮಾಜದ ಪ್ರತಿಬಿಂಬ. ಸಮಾಜದಲ್ಲಿ ನಡೆಯುವ ಆಗುಹೋಗುಗಳು, ಸಮಸ್ಯೆ ಸವಾಲುಗಳು, ನಾಡಿನ ಸಂಸ್ಕೃತಿ, ಆಚಾರವಿಚಾರಗಳು, ಯಾವುದೇ ಕವಿಗಳ ಮೇಲೆ ಪ್ರಭಾವ ಬೀರುತ್ತವೆ. ಜಿ.ಎಸ್.ಎಸ್.ರವರು ಸ್ವಾತಂತ್ರ್ಯಪೂರ್ವದಲ್ಲಿ ಜನಿಸಿದ್ದರಿಂದ ಸ್ವಭಾವತಃ ಸಂಸ್ಕೃತಿ, ಆಚಾರ–ವಿಚಾರಗಳು, ಸಾಮಾಜಿಕ ಚಿತ್ರಣಗಳು, ನಾಡಿನ ಚಳುವಳಿಗಳು, ರಾಷ್ಟ್ರೀಯ ಚಳುವಳಿಗಳು, ರಾಷ್ಟ್ರೀಯ ಚಳುವಳಿಗಳಲ್ಲಿ ಭಾಗವಹಿಸಿದ ವ್ಯಕ್ತಿಗಳ ಚಿತ್ರಣಗಳು ಮುಂತಾದ ವಿಚಾರಗಳನ್ನು ತಮ್ಮ ಕವನಗಳಲ್ಲಿ ಸಹಜವಾಗಿ ಚಿತ್ರಿಸಿರುತ್ತಾರೆ, ಅವುಗಳಲ್ಲಿ ಕೆಲವು ಜನಪ್ರಿಯ ಭಾವಗೀತೆಗಳೂ ಆಗಿವೆ.

'ನಿನ್ನದೆ ನೆಲ' ಎಂಬ ಕವನದಲ್ಲಿ ಭಾರತಮಾತೆಯ ಸಂಸ್ಕೃತಿ, ನೆಲ-ಜಲ, ಭೌಗೋಳಿಕತೆ, ಪ್ರಾಕೃತಿಕ ಸೌಂದರ್ಯ, ಭಾರತ ದರ್ಶನ ಮತ್ತು ಆದರ್ಶ ಮೌಲ್ಯಗಳನ್ನು ನಿರೂಪಿಸಿದ್ದಾರೆ. ಭಾರತ ದೇಶವನ್ನು ಶತಮಾನಗಳಿಂದ ಎಷ್ಟೋ ರಾಜಮಹಾರಾಜರುಗಳು ಆಳ್ವಿಕೆ ಮಾಡಿ ಮತ್ತು ದಾಳಿ ಮಾಡಿ ಮಡಿದುಹೋದರೂ ಈ ನೆಲ, ಜಲ ಎಲ್ಲವೂ ಭಾರತಮಾತೆಯ ಹೆಮ್ಮೆಯ ಜನಗಳದ್ದು; ಇದಕ್ಕೆ ಅನುಮಾನವೇತಕೆ ? ಇಂತಹ ವಿವಿಧ ಸಂಸ್ಕೃತಿಯ ನಾಡನ್ನು ಶತಮಾನಗಳಿಂದ ಉಳಿಸಿ, ಬೆಳಸಿ, ರಕ್ಷಿಸಿದ್ದಾರೆ. ಗಡಿಯುದ್ಧಕ್ಕೂ ಸೈನಿಕರು ಸಿಡಿಗುಂಡಿನಿಂದ ಹತರಾದರೂ ಭಾರತಮಾತೆಯನ್ನು ರಕ್ಷಿಸುವ ಹೆಮ್ಮೆಯು ನಮ್ಮದೇ. ಆದ್ದರಿಂದ ಹಿಮಾಲಯದಲ್ಲಿ ಶಾಂತಿ ನೆಲೆಸಿದೆ.

ನೂರಾಸೆಯ ಹೆಗಲೇರಿಸಿ, ನಡೆದ ದಾರಿ ನಿನ್ನದೆ
ಬರುವ ದಿನದ ಭರವಸೆಗಳ, ಬೆಳೆವ ಹೊಣೆಯು ನಿನ್ನದೆ
ನಿನ್ನದೆ ನೆಲ, ನಿನ್ನದೆ ಜಲ, ನಿನ್ನದೆ ಆಕಾಶ
ಕಿಂಚಿತ್ತೂ ಅನುಮಾನಕೆ, ಇಲ್ಲವೊ ಅವಕಾಶ [ನಿನ್ನದೆ ನೆಲ-ಗೋಡೆ]

ಈ ನಾಡನ್ನು ರಕ್ಷಿಸುವುದು ಮತ್ತು ಉತ್ತುಂಗ ಶಿಖರಕ್ಕೆ ಕೊಂಡೊಯ್ಯುವುದು ನಮ್ಮ ಜವಾಬ್ದಾರಿಯಾಗಿದೆ ಎಂಬುದನ್ನು ಗ್ರಹಿಸಬಹುದು. **'ನಮ್ಮ ಬಾವುಟ'** ಎಂಬ ಕವನವು ನಮ್ಮ ಸ್ವತಂತ್ರ ಭಾರತಮಾತೆಯ ಬಾವುಟದ ವಿಶಿಷ್ಟ ವೈಖರಿಯನ್ನು, ಅದರ ವೈಭವವನ್ನು ತಿಳಿಸುವ ಕವನವಾಗಿದೆ. ಭಾರತ ದೇಶದ ರಾಷ್ಟ್ರಧ್ವಜದ ವಿಶಿಷ್ಟ ಚಿತ್ರಣ ಹೀಗಿದೆ :

ಬಾನ ಬಯಲನೇರಿತಲ್ಲಿ, ನೋಡು ನಮ್ಮ ಬಾವುಟ.
ವೇದ ಋಷಿಯ ಮಂತ್ರ ಪವನ, ತೀಡುತ್ತಿತ್ತು ಮೇಲ್ಗಡೆ,
ದಿವ್ಯಯಜ್ಞ ದೀಪ್ತಿಯಂತೆ, ಜಗದಿಚ್ಛಾ ಚಕ್ರದಂತೆ.
ಮರೆವ ಶೋಕ ಚಕ್ರವಾಯ್ತು, ದೇವತೆಗಳ ನಿಲುಗಡೆ – (ನಮ್ಮ ಬಾವುಟ– ದೇವಶಿಲ್ಪ)

ಭಾರತಮಾತೆಯ ರಾಷ್ಟ್ರಧ್ವಜವು, ಋಷಿಮಂತ್ರ, ಯಜ್ಞಕುಂಡಃ ಹಾಗೂ ದಿವ್ಯಮುನಿಗಳಿಂದ ವಂದಿತವಾಗಿ ರಾಷ್ಟ್ರಧ್ವಜ ಹಾರಾಡುತ್ತಿದೆ. ಈ ಪೃಥ್ವಿ ಇರುವವರೆಗೆ ಈ ಬಾವುಟ ಇರುತ್ತದೆಯೆಂಬ ಕವಿಯ ಆಶಯವನ್ನು ಗಮನಿಸಬಹುದು.

'ಪುರುಷಸೂಕ್ತ' ಕವನವು ನವೋದಯ ಕಾವ್ಯಪರಂಪರೆಯ ಆದರ್ಶ ಕನಸುಗಳನ್ನು, ಉತ್ಸಾಹ ಅಭಿಮಾನಗಳನ್ನು ನೆನಪಿಸುವುದು. ಈ ಕವನ **'ನವಭಾರತ'**ದ ಪರಿಕಲ್ಪನೆಯನ್ನು ಎಲ್ಲರ ಹೃದಯದಲ್ಲಿ ಬಿಂಬಿಸಲು ಹಂಬಲಿಸುತ್ತದೆ. 'ಪುರುಷಸೂಕ್ತ' ವೇದಗಳಲ್ಲಿ ಬಳಕೆಯಾದ ಪದ. 'ವಿಶ್ವಾತ್ಮ' ಎಂಬುದು ಇದರ ಶಬ್ದಾರ್ಥ. ಈ ಪರಿಕಲ್ಪನೆಯನ್ನು ಕವನದಲ್ಲಿ ನವಭಾರತದ ಆತ್ಮ ಅಥವಾ ಚೈತನ್ಯದ ಸ್ವರೂಪವನ್ನು ವರ್ಣಿಸಲು ಬಳಸಿಕೊಳ್ಳಲಾಗಿದೆ.

ಇವನು ಕಣ್ ತೆರೆದು ಸಾವಿರ ದೀಪ
ಮನೆ ಮನೆಗೆ ಸ್ನೇಹ-ವಿಶ್ವಾಸ-ಕರುಣೆ ಪ್ರೀತಿ
ಚಿಕ್ಕೆಯಕ್ಷರಗಳಲ್ಲಿ ಇವನ ಮಂತ್ರದ ವಾಣಿ,
ಕೆಳಗೆ ಎಡವಿದರೂನು ಇಲ್ಲ ಭೀತಿ- (ಪುರುಷಸೂಕ್ತ-ಕಾಡಿನ ಕತ್ತಲಲ್ಲಿ)

ಭಾರತದ ಭೌಗೋಳಿಕ ವರ್ಣನೆಯನ್ನು ಪ್ರಾಕೃತಿಕ ಸೌಂದರ್ಯದ ಹಿನ್ನೆಲೆಯಲ್ಲಿ ನಿರೂಪಿಸುವ ಈ ಕವನ, ಆಧುನಿಕ ಭಾರತೀಯರ ಕಣ್ ತೆರೆದರೆ ಸಾಕು; ಪ್ರೀತಿ, ಸ್ನೇಹ, ಕರುಣೆ, ವಿಶ್ವಾಸಗಳಿಂದ ಎಲ್ಲರನ್ನೂ ಸ್ವೀಕರಿಸುತ್ತದೆ. ಎಂಥ ಸಂದಿಗ್ಧತೆಯನ್ನೂ ಮೀರುವ ಸಾಮರ್ಥ್ಯ ಹೊಂದಿದೆ. ಹೃದಯವಂತಿಕೆ ಇದೆ. ಇದರ ದನಿ ಬಹುಮುಖಿ ಸಂಸ್ಕೃತಿಯ ವೈಶಿಷ್ಟ್ಯಗಳನ್ನು ಮಾಧ್ಯಮಗಳಲ್ಲಿ ಸಾರುತ್ತಿದೆ. ಸಂಶೋಧನೆಗಳಲ್ಲಿ, ವೈಜ್ಞಾನಿಕ ಸಾಧನೆಗಳಲ್ಲಿ ನವಭಾರತ ನಿರ್ಮಾಣವಾಗಿದೆ.

ಕವನ ಕುರಿತು. ಬಿ.ಪಿ. ವೀರೇಂದ್ರ ಕುಮಾರ್ 'ಜಿ.ಎಸ್.ಎಸ್. ಕಾವ್ಯಾಂತರಂಗ', ಕೃತಿಯಲ್ಲಿ ಈ ರೀತಿ ಅಭಿಪ್ರಾಯಪಡುತ್ತಾರೆ. "ಅನೇಕ ಸಂಸ್ಕೃತಿಯ ವಿಭಿನ್ನ ಜೀವನಶೈಲಿಗಳ ಬಹುರೂಫಿ ಭಾರತ ವಾಸ್ತವವಾದುದು. ಈ ಬಹುರೂಪಿಯಾದ ದರ್ಶನವೇ ಭಾರತದ ವಿಶಿಷ್ಟತೆ. ಈ ಅರಿವು ಎಲ್ಲಾ ಭಾರತೀಯನ ಹೃದಯದಲ್ಲೂ ಜಾಗೃತವಾಗಿದೆ ಎನ್ನುವ ಅಚಲ ವಿಶ್ವಾಸ ಈ ಕವನದ ಪ್ರತಿಸಾಲಿನಲ್ಲೂ ವ್ಯಕ್ತಗೊಂಡಿದೆ" ಎನ್ನುತ್ತಾರೆ.

ಭಾರತಮಾತೆಯ ಸಂಸ್ಕೃತಿ, ಇತಿಹಾಸವನ್ನು ಬಿಂಬಿಸುವ ಕವನಗಳೆಂದರೆ **'ಬ್ರಹ್ಮಗಿರಿಯ ದಾರಿಯಲ್ಲಿ', 'ಬ್ರಹ್ಮಗಿರಿಯ ಅಶೋಕನ ಶಾಸನದ ಹತ್ತಿರ'**. ಇವೆರಡು ಕವನಗಳು ಅಶೋಕನ ಕಾಲದ ಇತಿಹಾಸವನ್ನು ಬಿಂಬಿಸುತ್ತವೆ. ಹಿಂದೆ ಅಶೋಕ ಮಹಾರಾಜ ಕಳಿಂಗ ಯುದ್ಧದಲ್ಲಿ ನಿಟ್ಟುರಿಸಿಟ್ಟು ಅಹಿಂಸಾ ಧರ್ಮ ಸ್ವೀಕರಿಸಿ, ಸಿದ್ಧಾರ್ಥ ಅಥವಾ ಬುದ್ಧನ ಬೌದ್ಧಧರ್ಮ ಪ್ರಸಾರ ಮಾಡಲು ದೇಶಾದ್ಯಂತ ಶಾಸನಗಳನ್ನು ಕೆತ್ತಿಸಿದನು. ಕೆಲವು ಸ್ತೂಪಗಳು, ಬಂಡೆಗಲ್ಲಿನ ಶಾಸನಗಳು, ಅಂದಿನಿಂದ ಇಂದಿನವರೆಗೂ ನಮ್ಮ ಭಾರತದ ಇತಿಹಾಸ ಹೇಳುವ 'ಸಂರಕ್ಷಿತ ಶಾಸನ'ಗಳಾಗಿವೆ.

ರಾಮಕೃಷ್ಣ ಪರಮಹಂಸರು, ವಿವೇಕಾನಂದರು, ಶಾರದಾದೇವಿ, ಶ್ರೀ ಅರವಿಂದರು, ರವೀಂದ್ರರು, ಮಹಾತ್ಮಗಾಂಧಿ, ನೆಹರು, ಇನ್ನೂ ಹಲವಾರು ವ್ಯಕ್ತಿಗಳು ಭಾರತದ ರಾಷ್ಟ್ರೀಯ ಚಳುವಳಿಯ ಮತ್ತು ಭಾರತೀಯ ಸಂಸ್ಕೃತಿಯನ್ನು ಬೆಳೆಸಿ, ಉಳಿಸಿ, ರಾಷ್ಟ್ರಕ್ಕೆ ತಮ್ಮ ಸೇವೆಯನ್ನು ಸಮರ್ಪಿಸಿದವರು. ಈ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ ವಿಚಾರಗಳಿಗೆ ಸಂಬಂಧಿಸಿದ ಕವನಗಳನ್ನು ಜಿ.ಎಸ್.ಎಸ್‌ರವರು ರಚಿಸಿರುವುದನ್ನು ಗಮನಿಸಬಹುದು.

'ಕವಿ ರವೀಂದ್ರರನ್ನು ಕುರಿತು' ಎಂಬ ಕವನವು ರಾಷ್ಟ್ರೀಯ ಚಳುವಳಿಯ ನಾಯಕನ ಚಿತ್ರಣವನ್ನು ಬಿಂಬಿಸುತ್ತದೆ. ಚಿಕ್ಕ ಕವನದಲ್ಲಿ ಬೆಳ್ಳಿಮೋಡದ ಗಡ್ಡ, ನಿಲುವಂಗಿ, ಬೈಗು ಬೆಳಗಿನ ಮುಖ, ಸಹೃದಯ ಭಾವನೆಯ ಬಣ್ಣದ ಅಂಗಿತೊಟ್ಟು ನಿಂತ ವ್ಯಕ್ತಿ ಆ ರವೀಂದ್ರರು. **'ಓ ಕವಿವರ್ಯ, ನೀನು ಪ್ರತಿಭೆಯ ಸೂರ್ಯ'** ಎಂದು ಒಂದೇ

ವಾಕ್ಯದಲ್ಲಿ ಅವರ ವ್ಯಕ್ತಿತ್ವದ ಚಿತ್ರಣವನ್ನು ವಿವರಿಸಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ವಿಶ್ವದ ಭೂಪಟದಲ್ಲಿ ಉಳಿಸಿ, ಬೆಳೆಸಿ ಯುವಕರನ್ನು ರಾಷ್ಟ್ರೀಯ ಚಳುವಳಿಯಲ್ಲಿ ಅಂದಿನಿಂದ ಇಂದಿನವರೆಗೂ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತೆ ಮಾಡಿದ ವ್ಯಕ್ತಿ ವಿವೇಕಾನಂದರನ್ನು ಕುರಿತು **'ಶ್ರೀ ವಿವೇಕಾನಂದರಿಗೆ'** ಎಂಬ ಕವನದಲ್ಲಿ ಅವರ ಇಡೀ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ರಾಮಕೃಷ್ಣರ ದಿವ್ಯಸಾನ್ನಿಧ್ಯದಲ್ಲಿ ಬೆಳೆದ ವಿವೇಕಾನಂದರ ಕುರಿತು ಹೀಗೆ ವ್ಯಕ್ತಪಡಿಸಿದ್ದಾರೆ :

ಪರಮಹಂಸಾಚಲದ ಶಿವಗಂಗೆಯನ್ನು ತಂದು
ಜಗಕೆಲ್ಲ ಹರಿಸಿರುವ ಯೋಗಪುರುಷ
ಮುಟ್ಟಿದ್ದು ಹೊನ್ನಾಯ್ತು ದಿವ್ಯ ಪುರುಷ! – *(ಶ್ರೀ ವಿವೇಕಾನಂದರಿಗೆ – ಚೆಲುವು-ಒಲವು)*

ವಿವೇಕಾನಂದರ ವಾಣಿಯನ್ನು ಕೇಳಿ ಚಿಪ್ಪಿನೊಳಗಿದ್ದ ಮಗುವು ಕೂಡ ಎಚ್ಚೆತ್ತು ನಿಷ್ಕ್ರಿಯವಾಗಿದ್ದ ಮಕ್ಕಳೆಲ್ಲವು ಎದ್ದು ರಾಷ್ಟ್ರೀಯ ಚಳುವಳಿಯಲ್ಲಿ ಕ್ರಿಯಾಶೀಲವಾಗುತ್ತಿದ್ದವು. ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿ ಒಂದಾಗುವಂತೆ ಮಾಡಿದ ಚೇತನ ಎಂದು ಅಭಿಪ್ರಾಯಪಡಬಹುದು. **'ವಿವೇಕಾನಂದ'** ಎಂಬ ಕವನದಲ್ಲಿ ಹಿಂದಿನ ಕವನವನ್ನು ಮುಂದುವರಿಸುತ್ತಾರೆ. ಸಮುದ್ರವನ್ನು ದಾಟಿ ಬೇರೆ ಧ್ರುವ ತಲುಪಿ ಪೂರ್ವ ಪಶ್ಚಿಮ ಸಂಸ್ಕೃತಿಯನ್ನು ಒಂದಾಗಿಸಿದ ವಜ್ರದ ಮತ್ತು ಉಕ್ಕಿನ ಮಿಂಚಿನ ಯೋಗಿ.

ಕವಿಋಷಿಯೋಗೀ ಸಂತ
ಲೋಕಾದ್ಯಂತ ನಡೆವ ವಸಂತ– *(ವಿವೇಕಾನಂದ–ತೆರೆದದಾರಿ)*

ವಿವೇಕಾನಂದರಿಗೆ ಮೊಟ್ಟ ಮೊದಲು ಸ್ಫೂರ್ತಿ ನೀಡಿದ್ದು, ಸಂತನನ್ನಾಗಿ ಮಾಡಿದ್ದು ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಶ್ರೀ ಶಾರದಾದೇವಿಯವರು. **'ಶ್ರೀಶಾರದಾದೇವಿಗೆ'** ಎಂಬ ಕವನದಲ್ಲಿ ಮಾತೆಯ ಮಮತೆ ವಾತ್ಸಲ್ಯದಿಂದ ವಿವೇಕಾನಂದರನ್ನು ಬೆಳೆಸಿದರು. ಭಾರತಮಾತೆಯ ಪುತ್ರನನ್ನು ರಾಮಕೃಷ್ಣ ಪರಮಹಂಸರು ತಪಸ್ಸೂರ್ಯ ಕಿರಣ ಬಿಂಬದಿಂದ ಬೆಳೆಸಿದರು. ಎಂದಿದ್ದಾರೆ.

ರಾಮಕೃಷ್ಣ ತಪೋವನದ, ಪರ್ಣಕುಟಿಯ ದೀಪವೆ
ಬಳಿಗೆ ಬಂದ ಹಣತೆಗಳಿಗೆ, ಬೆಳಕನಿತ್ತ ಕಿರಣವೆ
ಮೌನ ಪ್ರಭಾವಲಯವೆ – *(ಶ್ರೀ ಶಾರದಾದೇವಿಗೆ–ಚಕ್ರಗತಿ)*

ವಿವೇಕಾನಂದರು ಈ ಇಬ್ಬರೂ ವ್ಯಕ್ತಿಗಳ ಕೃಪಾಕಟಾಕ್ಷದಿಂದ ಬೆಳೆದ ಹೆಮ್ಮೆಯ ಪುತ್ರ ಎಂದು ಜಿ.ಎಸ್.ಎಸ್. ರವರು ಅಭಿಪ್ರಾಯಪಡುತ್ತಾರೆ. **'ದಕ್ಷಿಣೇಶ್ವರದಲ್ಲಿ'** ಎಂಬ ಕವನದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ಕಾಳಿಕಾಮಾತೆಯ ಶ್ರೀ ಕ್ಷೇತ್ರದ ದಿವ್ಯ ಸನ್ನಿದಿಯಲ್ಲಿ, ಭಕ್ತಿಗೀತೆಗಳ ಗಾಯನ, ತೀರ್ಥಪ್ರಸಾದ, ಮಂಗಳಾರತಿಯಂತಹ ವಾತಾವರಣದಲ್ಲಿ ವಿವೇಕಾನಂದರು ಬೆಳೆದರು ಎಂದು ಹೇಳುತ್ತಾರೆ.

6

ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯನ್ನು ಮಾಡಿ ಸ್ವಾತಂತ್ರ್ಯಗಳಿಸಿದ ಮೇಲೆ ಆ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮದಾಗಿದೆ. ಇಂತಹ ಸಮಯದಲ್ಲಿ ನೂರಾರು ಯೋಜನೆಗಳು ಮತ್ತು ಚಿಂತನೆಗಳು ನಮ್ಮ ಮುಂದಿವೆ. ಇಂತಹ ಸಮಯವನ್ನು **'ಬಿಡುಗಡೆಯ ನೆನಪು'** ಎಂಬ ಕವನದಲ್ಲಿ ಹೀಗೆ ಹೇಳುತ್ತಾರೆ :

ವರುಷಕ್ಕೊಮ್ಮೆ ನಿನಗೆ ನೀರೆರೆದು ಹೊಸ ಬಟ್ಟೆ ತೊಡಿಸಿ
ಸಾಲು ಸೈನ್ಯಗಳ ಗೌರವ ರಕ್ಷೆಯನ್ನಿತ್ತು ನಭಕೆ ಬಾವುಟವೆತ್ತಿ ....
ಹನ್ನೊಂದು ವರುಷ ಹಿಂದೆ ನಟ್ಟ ನಡುರಾತ್ರ
ಹನ್ನೆರಡು ಗಂಟೆಯಲಿ ನಿನಗಾದ ಸೊಗವ *(ಬಿಡುಗಡೆಯ ನೆನಪು– ದೀಪದ ಹೆಜ್ಜೆ)*

ಗೌರವ ರಕ್ಷೆ ನೀಡಿದರೆ ಸಾಲದು, ಇಲ್ಲಿ ಹನ್ನೊಂದು ವರ್ಷದ ಹಿಂದೆ ಸ್ವಾತಂತ್ರ್ಯ ಪಡೆದು 'ನಾವೀಗ ಹೊಸನಾಡನ್ನು ಕಟ್ಟುತ್ತಿದ್ದೇವೆ, ಶುಭಮಸ್ತು ಎನ್ನು'. ನಾವೀಗ ಅನೇಕ ಅಭಿವೃದ್ಧಿ ಸಾಧಿಸಿದ್ದೇವೆ, ಹೊಸನಾಡನ್ನು ಕಟ್ಟಿದ್ದೇವೆ ಎಂದು ಹೇಳಿರುವುದನ್ನು ಗ್ರಹಿಸಬಹುದು.

ಗಾಂಧೀಜಿಯವರು ಭಾರತಕ್ಕೆ ಅಹಿಂಸಾಮಾರ್ಗದಿಂದ ಸ್ವಾತಂತ್ರ್ಯ ಗಳಿಸಿಕೊಟ್ಟವರು. ಇವರನ್ನು ನೆನಪು ಮಾಡಿಕೊಳ್ಳಲು ಗಾಂಧಿ ಜಯಂತಿಯನ್ನು ಆಚರಿಸುತ್ತೇವೆ. ಅದರ ನೆನಪಿಗೋಸ್ಕರ **'ಗಾಂಧಿ ಕಂಡದ್ದು ಮೂರು ಸಲ'** ಎಂಬ ಕವನದ ಮೂಲಕ ಕವಿ ಈ ರೀತಿ ವ್ಯಕ್ತಪಡಿಸುತ್ತಾರೆ. ಒಂಬತ್ತು ವರ್ಷದಿಂದ ನೀನು ಮೇರು ಪರ್ವತದಂತೆ ಬ್ರಿಟಿಷರೆದುರು ನಿಂತು ಸ್ವಾತಂತ್ರ್ಯಗಳಿಸಿಕೊಟ್ಟು ಇಂದು ಬಾವುಟದಲ್ಲಿ ನೆಲೆಸಿರುವೆ.

ಹಿಮಶೈಲ ಶಾಂತಿಯಲಿ ಜ್ವಲಿಸುತಿದೆ ಇದೋ
ಎದೆಯ ದೇಗುಲದಲಿ ನಿತ್ಯಾನಂದಾದೀಪ
ನಿನ್ನರೂಪ – *(ಕಂಡದ್ದು–ಮೂರು ಸಲ–ದೀಪದ ಹೆಜ್ಜೆ)*

ಕರ್ಮಯೋಗಿಯಾಗಿ ಮೊದಲ ಸಲ ಕಂಡೆ, ಎರಡನೆಯ ಸಲ ಆಫ್ರಿಕಾದ ಕಗ್ಗತ್ತಲೆಯಲ್ಲಿ 'ಭಾರತೀಯರ ಬಿಡುಗಡೆಯ ಬೋಧಿ'ಯಾಗಿ ಕಂಡೆ, ಮೂರನೆಯ ಸಲ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾರತದ ಸ್ವಾತಂತ್ರ್ಯದ ವೇಳೆಯಲ್ಲಿ. ಕೊನೆಗೆ,

ನಾ ಕಂಡೆ ಸ್ವತಂತ್ರ ಭಾರತದ
ಜನಸಮುದ್ರದ ತಡಿಯ ಪ್ರಾರ್ಥನಾ ಶೈಲದಲ್ಲಿ,
ಮೂರು ಸಿಡಿಗುಂಡುಗಳ ಪೂಜೆ ಸಂದಿತು ಎದೆಗೆ
ಪಂಜರ ಬಿರಿದು ಹಾರಿತು ಹೊರಗೆ ತನ್ನ ಮನೆಗೆ – (ಕಂಡದ್ದು ಮೂರು ಸಲ–ದೀಪದ ಹೆಜ್ಜೆ)

ಗಾಂಧೀಜಿಯವರ ಅಂದಿನ ನೆನಪುಗಳನ್ನು ಜಿ.ಎಸ್.ಎಸ್ ರವರು ಈ ರೀತಿ ವ್ಯಕ್ತಪಡಿಸುತ್ತಾರೆ.

ಭಾರತದ ರಾಷ್ಟ್ರೀಯತೆ, ಸ್ವಾತಂತ್ರ್ಯ, ಸಂಸ್ಕೃತಿ, ಜಾತಿ, ಮತ, ಪಂಥ ಮುಂತಾದವುಗಳ ವಿವಿಧ ವೈವಿಧ್ಯ ಹಾಗೂ ಐಕ್ಯವನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಜಿ.ಎಸ್.ಎಸ್‌ರವರು **'ಐಕ್ಯಗಾನ'** ಎಂಬ ಕವನದಲ್ಲಿ ಹೀಗೆ ಹೇಳುತ್ತಾರೆ :

ಒಂದೇ ಒಂದೇ ನಾವೆಲ್ಲರೂ ಒಂದೇ, ಈ ದೇಶದೊಳೆಲ್ಲಿದ್ದರು
ಭಾರತ ನಮಗೊಂದೇ, ಮರಕ್ಕೆ ಹಲವು ಕೊಂಬೆಗಳಿದ್ದರೂ ಮರವು ಒಂದೇ
ನಡೆ ನುಡಿ ಬೇರೆ ಇದ್ದರೂ ಬದುಕುವ ಜನ ಒಂದೇ ಧ್ವಜ ಒಂದೇ,

- (ಐಕ್ಯಗಾನ-ಪ್ರೀತಿ ಇಲ್ಲದ ಮೇಲೆ)

ನಮ್ಮೆಲ್ಲರಲ್ಲಿರುವ ಸಂಸ್ಕೃತಿ, ಆಚಾರ, ವಿಚಾರ ಒಂದೇ ಎಂದು ಭಾವಿಸಬೇಕು. ಎಲ್ಲರೂ ಎಲ್ಲರಿಗಾಗಿ, ಎಲ್ಲರೂ ನಮಗಾಗಿ ದುಡಿದು ಐಕ್ಯಗಾನದಿಂದ ರಾಷ್ಟ್ರ ಕಟ್ಟೋಣ ಎಂಬ ಕವಿಯ ಆಶಯವನ್ನು ಗ್ರಹಿಸಬಹುದು.

'ಗೋಡೆ' ಎಂಬ ಕವನದಲ್ಲಿ ಇದುವರೆಗೆ ನಿರೂಪಿಸಿದ ಅನುಸಂಧಾನ ಅಥವಾ ಹೃದಯ ಸಂವಾದಕ್ಕೆ ಅಡೆ-ತಡೆಗಳು ಬಹಳ! 'ನಲ್ಮೆಗೆ ತಡೆಗಳು ಹೇರಳವಾಗಿಹವು' ಎಂಬ ಸೂಕ್ತಿಯನ್ನಿಲ್ಲಿ ಜ್ಞಾಪಿಸಿಕೊಳ್ಳಬಹುದು. ತಾಯಗರ್ಭದ ಹೊಕ್ಕುಳ ಸರಪಳಿಯನ್ನು ಕತ್ತರಿಸಿಕೊಂಡು ಹುಟ್ಟುವ ಮಾನವ ಶಿಶು, ಬೆಳೆಯುತ್ತಾ ಕಾಲ, ದೇಶ, ಭಾಷೆ, ಮತ-ಧರ್ಮ, ಬಣ್ಣ, ಜಾತಿ, ಲಿಂಗ ಮುಂತಾದ ಭೇದಭಾವದ ಸರಪಳಿಗಳಿಂದ ಬಂಧನಕ್ಕೆ ಒಳಗಾಗುತ್ತದೆ. ಅಲ್ಲದೆ ಅಹಂಕಾರ ಮತ್ತು ಮಮಕಾರಗಳಿಂದ ಬಗೆ ಬಗೆಯ ಮನೋವಿಕಾರದ ಗೋಡೆಗಳೆದ್ದು ಅನುಸಂಧಾನ ಅಥವಾ ಹೃದಯ ಸಂವಾದಗಳಿಂದ ದೂರವಾಗುತ್ತದೆ. ಸಂಪರ್ಕದ ಸೇತುವೆಗಳೆಲ್ಲ ಮುರಿದುಬಿದ್ದು, ಬಂಧನದ ಗೋಡೆಗಳೆದ್ದು ವ್ಯಕ್ತಿತ್ವವನ್ನು ಸಮಾಧಿ ಮಾಡುವ ಮೋಸವನ್ನು ಅರಿಯದಿದ್ದರೆ ಹೇಗೆ? ಎಂಬ ವಿಚಾರ ತಿಳಿಸಿದ್ದಾರೆ.

'ಈ ದೇಶದಲ್ಲಿ' ಎಂಬ ಕವನವು ಭಾರತಮಾತೆಯ ಇಂದಿನ ಸಾಮಾಜಿಕ ಪರಿಸ್ಥಿತಿಯನ್ನು ಬಿಂಬಿಸುತ್ತದೆ. ಈ ದೇಶದಲ್ಲಿ ಎಲ್ಲವೂ ಆಮೂಲಾಗ್ರವಾಗಿ ಬದಲಾಗಬೇಕು. ಜಾತಿ, ಮತ, ಪಂಥ ಎಲ್ಲವೂ ಹೋಗಿ ಸಮಾನತೆಯ ಧರ್ಮ ಸ್ಥಾಪನೆಯಾಗಬೇಕು. ವ್ಯಕ್ತಿಪೂಜೆ, ವಂಶಪೂಜೆ ಎಲ್ಲವೂ ನಿಂತು ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ಭಾವನೆ ಉಂಟಾಗಬೇಕೆಂಬ ಆಶಯವನ್ನು ಕವಿ ಇಲ್ಲಿ ವ್ಯಕ್ತಪಡಿಸುವುದನ್ನು ಗಮನಿಸಬಹುದು.

ಚೆನ್ನವೀರ ಕಣವಿ

ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದವರು ಮಹಾತ್ಮಾ ಗಾಂಧೀಜಿಯವರು ಇವರು. ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ತನ್ನ ಸಂಪತ್ತು ಆಸ್ತಿಯನ್ನೆಲ್ಲಾ ಸಾಬರಮತಿ ಆಶ್ರಮಕ್ಕೆ ನೀಡಿ ತುಂಡು ಉಡುಪು ಧರಿಸಿ ದಿನಕ್ಕೆ ಒಂದು ಬಾರಿ ಊಟಮಾಡಿ ಜಾತ್ಯತೀತತೆ ಮತ್ತು ಸಮಾನತೆ ಬೋಧಿಸಿದ ಮಹಾನ್ ವ್ಯಕ್ತಿ ಗಾಂಧಿ ಅವರ ಬಗ್ಗೆ ಚನ್ನವೀರ ಕಣವಿಯವರು ಹಲವಾರು ಕವನಗಳನ್ನು ಬರೆದಿದ್ದಾರೆ. **'ಅಮರ ತೇಜಃಪುಂಜಿ ಮತ್ತು ನಮ್ಮ ಬಾಪು'** ಎಂಬ ಕವನಗಳು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯನ್ನು ಬಿಂಬಿಸುವ ಕವನಗಳು. ಅಮರ ತೇಜಃಪುಂಜಿ ಎಂಬ ಕವನವು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ 'ಓ ತಂದೆ! ನಿನಗಿದೋ

ಈ ನೆಲದ ಕಣಕಣವು' ಕಣ್ಣೀರನ್ನು ಸುರಿಸಿ ಹಲಬಿ ಹಂಬಲಿಸುತ್ತಿದೆ. ಈ ನಾಡು ಅಷ್ಟೇ ಅಲ್ಲದೆ ನಿನ್ನೊಡನೆ ಸಾಗುತ್ತಿದೆ, ವಿಶ್ವವೇ ನಿನ್ನ 'ಸತ್ಯಾಗ್ರ' ಕರುಣೆಯಿಂದ ಪ್ರಭಾವಿತಗೊಂಡಿದೆ.

ಯಾವ ನುಡಿಗಡಣಕೂ ನಿಲುಕದಿಹೆ ಸಿಲುಕದಿಹೆ
ಸಧರ್ಮ ಬೋಧನೆಯ ಶಾಂತಿಯಲಿ ಕರುಣಿಸಿಹೆ
ತತ್ವನಿಕಷಕ್ಕಿಟ್ಟ ತಾಪಸಿಯ ಅಪರಂಜಿ
ನಿನ್ನದಿದೆ ಬಾಪೂಜಿ ಅಮರ ತೇಜಪುಂಜ *(ಅಮರ ತೇಜಃಪುಂಜ – ಕಾವ್ಯಾಕ್ಷಿ)*

'ನಮ್ಮ ಬಾಪು' ಎಂಬ ಕವನವು ಹಿಂದಿನ ಕವನದಲ್ಲಿನ ಮುಂದುವರಿದ ಭಾಗವನ್ನು ಹೇಳುತ್ತದೆ. 'ಮೈಗೆ ಚಿಂದಿಯ ಉಡುಪು ಜಗದ ಉದ್ಧಾರಕನೇ ಬಾಪು' ಎಂದು ಕವಿ ಉದ್ಗಾರ ತೆಗೆಯುತ್ತಾರೆ.

'ನಮ್ಮ ಬಾಪು' ಮತ್ತು **'ಹುತಾತ್ಮ'** ಎಂಬ ಕವನಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಗಾಂಧೀಜಿಯ ವ್ಯಕ್ತಿಚಿತ್ರಣವನ್ನು ಬಿಂಬಿಸುವ ಕವನಗಳಾಗಿವೆ. ನೂರಾರು ವರ್ಷದ ದಾಸ್ಯದ, ಹಾಸ್ಯದ ಬದುಕು ಸಾಕು ಸಾಕೀ ಗೋಳು, ಹೊಸ ಜೀವನ ಸಾಗಿಸೋಣ ಎಂದು ಭಾರತ ಮಾತೆಯ ಜನತೆ ಸಿಡಿದೇಳಬೇಕು ಎಂದು ಮನವಿ ಮಾಡಿಕೊಳ್ಳುತ್ತಾರೆ. ಸರ್ವ ಸುಖಭೋಗಗಳಿಗೆ ತಿಲಾಂಜಲಿಯಿತ್ತು ಭಾರತಮಾತೆಯ ರಾಷ್ಟ್ರನಿರ್ಮಾಣದಲ್ಲಿ ಕ್ರಾಂತಿಗೀತೆಯನ್ನು ಮೊಳಗಿಸಬೇಕು ಮತ್ತು ಕನ್ನಡಾಂಬೆಯ ಸ್ಫೂರ್ತಿಗೊಂಡು ಸಹಕರಿಸಬೇಕೆಂದು ಮನವಿ ಮಾಡಿಕೊಳ್ಳುತ್ತಾರೆ.

೧೯೩೮ ರಿಂದ ೧೯೪೦ ರ ವೇಳೆಗೆ ಕಣವಿಯವರು ವಿದ್ಯಾಭ್ಯಾಸಕ್ಕೆಂದು ಧಾರವಾಡದ ಹತ್ತಿರದ ಗರಗ ಗ್ರಾಮಕ್ಕೆ ಬರಲೇಬೇಕಾಯಿತು. ಆ ವೇಳೆಗೆ ಸ್ವಾತಂತ್ರ್ಯ ಚಳುವಳಿ ಕಾವೇರುತ್ತಿದ್ದ ಕಾಲ. ಶಾಲೆಯ ಹುಡುಗರ ಮುಗ್ಧ ಮನಸ್ಸಿನಲ್ಲಿ ದೇಶಭಕ್ತಿಯ ಕಾವು ಹುಟ್ಟಿಸಿತು. ಕರ್ನಾಟಕ ಏಕೀಕರಣ ಚಳುವಳಿಗೂ ಧಾರವಾಡವೇ ಕೇಂದ್ರವಾಗಿದ್ದರಿಂದ ನಾಡು–ನುಡಿಯ ಬಗೆಗಿನ ಪ್ರೀತಿ ಅಭಿಮಾನ ಸಹಜವಾಗಿಯೇ ಅವರ ಕಾವ್ಯದ ಮೂಲ ಸೆಲೆಗಳಲ್ಲಿ ಒಂದಾಯಿತು. ಮುಖ್ಯವಾಗಿ ಕಣವಿಯವರು ಬೇಂದ್ರೆ, ಪುಟ್ಟಪ್ಪನವರ ರಾಷ್ಟ್ರಗೀತೆಗಳಿಂದ ಪ್ರಭಾವಿತರಾದರೂ 'ಸಂವೇದನೆ ಮತ್ತು ಭಾಷೆ' ಇವೆರಡೂ ಕಣವಿಯ ತನ್ನತನದ ಛಾಪು ಇರುವುದರಿಂದ ಕಾವ್ಯರಚಿಸಲು ಸಾಧ್ಯವಾಯಿತು. ಪರಿಶೀಲನಾರ್ಹವಾದ ತೀಕ್ಷ್ಣತೆ, ಒಳನೋಟಗಳ ಒಲವುಗಳಿಂದ ಬೇರೊಂದು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಅವರನ್ನು ಪ್ರೇರೇಪಿಸಿತು:

ಹಿಮಶೈಲದುತ್ತುಂಗ ಶಿಖರದಿಂದೀ ಸೇತು
ವರೆಗೆ ಹಬ್ಬಿದ ನಾಡು ಭಾರತವಲಾ; ಗಂಗೆ
ಗೋದಾವರಿಯು, ಸಿಂಧು ಕಾವೇರಿಯರು
ತುಂಗೆನರ್ಮದೆಯು, ಕೃಷ್ಣೆ ಓ,
ಬಿಡುಗಡೆಯ ಹಾಡಾಂತುಹರಿಯುವತಿವೆ' *(ನಾವು ನಾಲ್ವತ್ತು ಕೋಟಿ – ಕಾವ್ಯಾಕ್ಷಿ)*

ಭವ್ಯ ಭಾರತದೊಳಗೆ ಸಾಂಸ್ಕೃತಿಕ ಪ್ರತ್ಯೇಕವಾದ ಘನತೆ, ಗೌರವವನ್ನು ಪಡೆದುಕೊಂಡು ಕನ್ನಡ ನಾಡು, ತನ್ನದೇ ಆದ ಶ್ರೀಮಂತ ಸೊಬಗನ್ನು ಪಡೆದುಕೊಂಡಿರುವಲ್ಲಿ ಹಿಂದೆ ಇಲ್ಲ. ಹಾಗೆಯೇ ಸಾಂಸ್ಕೃತಿಕವಾಗಿ ಪ್ರತಿಯೊಬ್ಬ ವ್ಯಕ್ತಿಯ ಆಶಯಗಳು ಒತ್ತು ನೀಡುವುದನ್ನು ಇನ್ನೊಂದು ಅರ್ಥದಲ್ಲಿ ಗಮನಿಸಬೇಕು.

ಅರರೆ ನರಜೀವ ನರನ ನಿರಿಯುವದಿದಿಳ್ಳಿತೆ?,
ಜಾತಿ ಮತ ಪಂಥಗಳ ಕೊಳಚೆಯಲ್ಲಿ ಕಚ್ಚಾಡಿ
ಸೋದರತೆ ಮಾನವತೆ ದಾನವತೆಯಂ ಕೂಡಿ
ಧುಮುಕಲಿದೆ ಬಿಸಿರಕುತ ಜಯ ಜಯವೆನ್ನಿ ಪಾಡಿ'

(ಹೋರು ಬೀಳ್ವನ್ನೆಗಂ-ಕಾವ್ಯಾಕ್ಷಿ)

ಮನುಷ್ಯ ಕುಲಕ್ಕೆ ಸೇರಿದ ನಾವುಗಳೆಲ್ಲ ಜಾತಿ, ಮತ, ಪಂಥಗಳನೆಣಿಸದೆ, ಭಾರತೀಯ ಸಂಸ್ಕೃತಿಯ ಘನತೆಯನ್ನು ಮೆರೆಸುವುದಕ್ಕಾಗಿ, ಬಂದಿವಾಸವನ್ನು ಬಿಡಿಸಿಕೊಂಡು ಸ್ವಾತಂತ್ರ್ಯದಿಂದ ಬದುಕುವುದಕ್ಕಾಗಿ ಒಗ್ಗೂಡಿ ಹೋರಾಡಲು ಸಿದ್ಧರಾಗಬೇಕಾಗಿದೆ ಎನ್ನುವ ಉದ್ದೇಶವನ್ನು ಕವಿಗೆ ಜನರೆದೆಯಲ್ಲಿ ತುಂಬುವ ವೀರ ಸಂಕಲ್ಪವಿದೆ. ಈ ಸಂಕಲ್ಪದ ಸಾರ್ಥಕ ಸ್ವರೂಪವೆನ್ನುವಂತೆ ನಮ್ಮ ದಾಸ್ಯತನದಿಂದ ಬಿಡುಗಡೆಗೊಂಡು ಸ್ವತಂತ್ರ ಭಾರತೀಯ ಹಬ್ಬದ ಬಾವುಟವನ್ನು ಬಾನೆತ್ತರಕ್ಕೆ ಹಾರಿಬಿಟ್ಟಿದ್ದು ಇದೇ ಸಂದರ್ಭದಲ್ಲಿಯೇ. ಹೀಗಾಗಿ ಇದರ ಜ್ವಲಂತ ವ್ಯಾಖ್ಯಾನ ಕವಿಯ ಕಾವ್ಯಧಾರೆಯಲ್ಲಿ ನೇರವಾಗಿ ಹರಿದುಬಂದಿದೆ.

ಕವಿ ತಾನು ಸ್ವಾತಂತ್ರ್ಯದ ದಿನವನ್ನು ಚಾತಕ ಪಕ್ಷಿಯಂತೆ ಕಾದು ಕುಳಿತಾಗ, ಬಹು ದಿನದ ಹಿರಿಯ ಬಯಕೆ ನಿಷೆಯಿಂದ ಉಷೆಯೆಡೆಗೆ, ಬಂಧದಿಂ ಬಿಡುಗಡೆಗೆ ಜನಕೋಟಿ ಸ್ವಾತಂತ್ರ್ಯ ತೀರದೆಡೆಗೆ' ಎನ್ನುತ್ತಾರೆ. ಈ ಉತ್ಸಾಹದ ಹಿಂದಿರುವ ತ್ಯಾಗ, ಶ್ರಮ, ಬಲಿದಾನಗಳನ್ನು ಕವಿ ವರ್ಣಿಸುವ ರೀತಿ ಇದು :

ದೇಶಭಕ್ತರನು ಸರ್ವಶಕ್ತರನು ಸೆರೆಯ ಕಾಳಕಿಳಿಸಿ
ಲಾಠಿ ಗುಂಡು ದುರ್ದಮ್ಯ ಶಿಕ್ಷೆ ಮರ್ದನೆಗೆ ರೂಪುಗೊಳಿಸಿ,
ಜನತೆಯುಸಿರ ಹತ್ತಿಕ್ಕಲೆಂದು ಸುತ್ತಾಡಿತಲ್ಲಿ ದಂಡು
ಅರಸುತನಕೆ ಓಗೊಟ್ಟುದಿಲ್ಲ ಎದೆಗೆಟ್ಟುದಿಲ್ಲ ಬಂಡು'

(ಬಂಧದಿಂ ಬಿಡುಗಡೆ- ಕಾವ್ಯಾಕ್ಷಿ)

ಆಂಗ್ಲರ ಆಳ್ವಿಕೆಯಲ್ಲಿ ಸಿಕ್ಕ ಭಾರತ ಛಿದ್ರಗೊಂಡ ತನ್ನೆಲ್ಲ ಸಂಪತ್ತನ್ನು, ವೈಭವವನ್ನು ಹಾಳುಮಾಡಿಕೊಂಡಿದೆ. ಸ್ವಾತಂತ್ರ್ಯದ ಒಂದೇ ಒಂದು ಬಲದಿಂದ ತನ್ನ ಹಿಂದಿನ ಸಿರಿಯನ್ನು ಮತ್ತು ಹೋಳಾದ ಭಾರತವನ್ನು ಮತ್ತೆ ಬೆಸೆಯುವ ಶಕ್ತಿ ಜನಕೋಟಿಗೆ ಇದ್ದೇ ಇದೆ ಎನ್ನುವ ಹಿರಿದಾದ ಆಶಾವಾದ ಕವಿಯಲ್ಲಿ ಉತ್ಕಟವಾದ ರೀತಿಯಲ್ಲಿ ಮೂಡುತ್ತದೆ.

ಚೆನ್ನವೀರ ಕಣವಿಯವರಂತೆ ಇನ್ನೊಬ್ಬ ಸಂವೇದನಾಶೀಲ ಮಹತ್ವದ ಕವಿಯಾದ ಗಂಗಾಧರ ಚಿತ್ತಾಲರ ಕಾವ್ಯದಲ್ಲಿ ಸ್ವಾತಂತ್ರ್ಯೋತ್ತರದ ಅತಿಯಾದ ಖಾರವಾದ ವಿಡಂಬನೆಯನ್ನು ನಾವು ಗಮನಿಸಬಹುದು. ಬೇಂದ್ರೆಯವರು ಸಾಮಾಜಿಕ ಪ್ರಜ್ಞೆಯುಳ್ಳ

ಹಲವು ಕವಿತೆಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಅವರ 'ಕುರುಡು ಕಾಂಚಾಣ', 'ಭೂಮಿತಾಯಿಯ ಚೊಚ್ಚಿಲ ಮಗ', 'ಪುಟ್ಟ ವಿಧವೆ', 'ತುತ್ತಿನ ಚೀಲ', 'ಹೆಣದ ಹಿಂದೆ', 'ಬಾಳ ಕರವಾಳ', 'ಯಜ್ಞ' ಇತ್ಯಾದಿ ಕವಿತೆಗಳು ಈ ಧೋರಣೆಯುಳ್ಳವು. ಕುವೆಂಪು ಅವರ 'ಕಲ್ಕಿ', 'ಇಂದಿನ ದೇವರು', 'ಅವತಾರ'–ಹೀಗೆ ಇವರಲ್ಲಿಯೂ ಈ ನೆಲೆಯ ಕವಿತೆಗಳನ್ನು ಸಾಕಷ್ಟು ನೋಡುತ್ತೇವೆ. ಪು.ತಿ.ನ., ಬೇಂದ್ರೆ, ಮಾಸ್ತಿಯವರು ತಮ್ಮ ಕವನಗಳಲ್ಲಿ ಉಗ್ರ ಹೋರಾಟವನ್ನು ಸಾರದೆ, ಸುಧಾರಕನ ರೊಚ್ಚನ್ನು ಪ್ರಕಟಿಸದೆ, ಮಾನವೀಯ ಇತ್ಯಾತ್ಮಕತೆಯನ್ನು ಸಾರಿದರು. ಇವರು ಖಂಡಿಸುವ ರೀತಿಯ ಬದಲು ಮಾನವೀಯತೆ ಸಮಾನತೆಯನ್ನು ಆರಾಧಿಸುವ ಕ್ರಮವನ್ನು ಅವರು ಆರಿಸಿಕೊಂಡರು. ಡಿ.ಆರ್. ನಾಗರಾಜ್‌ರವರು **'ಶಕ್ತಿ ಶಾರದೆಯ ಮೇಳ'** ಕೃತಿಯಲ್ಲಿ ಈ ರೀತಿ ಹೇಳುವಂತೆ "ಮನುಷ್ಯ ಮತ್ತು ಸಮಾಜದ ಏಕೀಕೃತ ಸ್ಥಿತಿಗೆ ಭಂಗ ತರುವ ಈ ರೋಗಗಳ ವಿರುದ್ಧ ಕನ್ನಡ ನವೋದಯ ಕವಿತೆಗಳಲ್ಲಿ ಅತ್ಯಂತ ಉಗ್ರವಾಗಿ ಬಂಡೆದ್ದವರೆಂದರೆ ಕುವೆಂಪು" ಎಂದು ಅಭಿಪ್ರಾಯ ಪಡುತ್ತಾರೆ. ಇವರಲ್ಲಿಯೂ ಒಂದು ಸಂಸ್ಕೃತಿಯ ಜಾಯಮಾನದಲ್ಲಿ ಜಾರಿಯಲ್ಲಿರುವ ಮೌಲ್ಯಗಳ ತಿಳುವಳಿಕೆಗಳ ವಿವೇಚನಾಭಿವ್ಯಕ್ತಿಯಿದೆ; ಆಶಯಗಳಲ್ಲಿ, ಆಸಕ್ತಿಗಳಲ್ಲಿ ಒಂದೇ ಧೋರಣೆಯ ಒಲವು ಕಂಡುಬಂದರೂ ಅಭಿವ್ಯಕ್ತಿ ಕ್ರಮ, ವ್ಯವಸ್ಥೆಯ ಆಳದಿಂದ ಹೊರಡುವ ಅರ್ಥ ಧ್ವನಿ ಭಿನ್ನವಾಗಿರುತ್ತದೆ. ಕಣವಿಯವರ ವಿಶಾಲ ಮನಸ್ಸು ಸಾಂಸ್ಕೃತಿಕ ಲೋಕಕ್ಕೆ ಮುಖಾಮುಖಿಯಾಗಿಸುವಂತೆ ವೈಯಕ್ತಿಕ ನೆಲೆಯಲ್ಲಿಯೂ ಅವರು ಮೌಲ್ಯ ಸ್ವೀಕಾರ ಗುಣವನ್ನು ಹೊಂದಿರುವುದು ನವೋದಯ ಪರಂಪರೆಯ ವಿಕಾಸಗುಣವನ್ನೇ ತೋರಿಸುತ್ತದೆ. ಉದಾಹರಣೆಗಾಗಿ ಕಣವಿಯ ಸಮಗ್ರಕಾವ್ಯದ ಕೆಲವು ಸಾಲುಗಳನ್ನು ಗುರುತಿಸಬಹುದು :

ಬರೆದೆನಯ್ಯ ಗುರಿಯು ಚಿತ್ರ ಎದೆಯ ಕುದಿಯಲಿ'–(ಒಳ್ಳುರಿಗೆ–ಕಾವ್ಯಾಕ್ಷಿ)
ಹಿರಿದು ಕಿರಿದೆಂಬುವುದು ಅಲ್ಪಬುದ್ಧಿ – (ಭಾವಜೀವ)
ನಮ್ಮ ಅನುಭವಗಳೇ ನಮ್ಮ ಗಳಿಕೆ
ಕಾಲ ದೊರೆಗಲ್ಲಿನಲಿ ನಿಂತ ಬಾಳ್ಕೆ – (ಹೊಸ ಬಾಳು ನಮ್ಮದಿದೆ– ಆಕಾಶಬುಟ್ಟಿ)
ಬಗಿದು ನೋಡುವ ಬಯಕೆ ಬಗೆಯೊಳಿದೆ; ಮನ್ನಣೆಯ
ಅಳಿಯಾಸೆ ಮಣ್ಣುಗೂಡಲಿ' (ಕವಿತೆಗೆ–ಮಧುಚಂದ್ರ)
ಬರುವುದೆಲ್ಲ ಬರಲಿ ಬಿಡು ಏಕೆ ಅದರ ಚಿಂತೆ? (ಬರುವುದೆಲ್ಲ ಬರಲಿ ಬಿಡು–ಆಕಾಶಬುಟ್ಟಿ)
ಮನವು ಬಾನಗಲ, ಎದೆ ತಿಳಿಗೊಳದೊಲು
ಭಾವಶುದ್ಧ ಸ್ಫಟಿಕ– ಬೆಳದಿಂಗಳು? (ಗೆಳೆತನ– ಆಕಾಶಬುಟ್ಟಿ)

ಇವುಗಳನ್ನು ಗಮನಿಸಿ 'ಕಣವಿಯವರ ಸಂಸ್ಕೃತಿ ಅವರ ಮೂಲಗುಣ; ಶಿಕ್ಷಣದಿಂದ ಪಡೆದ ಮುಖವಾಡವಲ್ಲ' ಎಂದು ಸಂಕ್ರಮಣ ಹೊಸ ಕಾವ್ಯದಲ್ಲಿ ಚಂಪ ರವರು ಅಭಿಪ್ರಾಯಪಡುತ್ತಾರೆ.

ಹೀಗೆ ಈ ತಲಸ್ಪರ್ಶಿಯಾದ ಗುಣದಿಂದಲೇ ಎಲ್ಲಿಯೂ ಅವರ ಭಾವನೆಗಳು ಕೃತಕವೆನ್ನಿಸುವುದಿಲ್ಲ. 'ಸದ್ಯಃ ಪರನಿರ್ವೃತಿ'ಯಂತೆ ಹೃದಯವನ್ನು ಪ್ರೀತಿಯಿಂದ

ಮಾತನಾಡಿಸುತ್ತವೆ. ಕಣವಿಯವರ ನೂರು ಕನಸುಗಳ ಸ್ವರೂಪ ವೈಯಕ್ತಿಕವಿದ್ದಂತೆ ಸಾಮಾಜಿಕವೂ ಆಗಿರುವುದು; ಇವರ ಕೆಲವು ಕವನಗಳನ್ನು ನೋಡಬಹುದು :

ಮನುಕುಲವು ಹೂವಾಗಿ,
ಜಗವು ಜೇಂಗೊಡವಾಗಿ
ಮನವು ತನಿವಣ್ಣಾಗಲೆಂಬ ಹುಚ್ಚು (ಭಾವಜೀವ)
ದೈತ್ಯ ದರ್ಪದ ದುರುಳ ದಾರುಣದ (ಹೋರಟಗೆ)
ಎಂದೆಂದು ನನ್ನ ತಲೆ ಬಾಗದಿರಲಿ (ಬಿನ್ನಹ- ಕಾವ್ಯಾಕ್ಷಿ)
ನಿನ್ನ ನೋವಿನ ನಿನ್ನ ಕಂಬನಿಯೆ ಸಾಕು? (ಕಂಬನಿಯೆ ಸಾಕು-ಆಕಾಶಬುಟ್ಟಿ)
ಯಾವ ಮಂದಿರದ ಆಧಾರಸ್ತಂಭಕೋ
ಕಾಣೆ ಇಂತು ಜೀವಸ್ತಂಭ ಸಿದ್ಧವಾಗಿ, ನಿಂತಿಹುದು ಕರ್ತವ್ಯಬದ್ಧವಾಗಿ!.
(ಬಾಳಕೊರಡು--ಆಕಾಶಬುಟ್ಟಿ)

"ಕಣವಿಯವರು ಕಾವ್ಯ ಆಂತರ್ಯದ ವಿಕಾಸಕ್ಕೆ ಕೊಟ್ಟಷ್ಟು ಅಥವಾ ಇನ್ನೂ ಒಂದು ತೂಕ ಹೆಚ್ಚು ಲಕ್ಷ್ಯವನ್ನು ಸಾಮಾಜಿಕ ಸ್ವಾಸ್ಥ್ಯಕ್ಕೆ ಕೊಟ್ಟಿದ್ದಾರೆ" ಎಂದು ಜಿ.ಎಸ್. ಆಮೂರ 'ಹೊಂಬೆಳಕು' ಪ್ರಸ್ತಾವನೆಯಲ್ಲಿ ಅವರು ಸಮರ್ಥವಾಗಿಯೇ ಗುರುತಿಸುತ್ತಾರೆ. ಕಣವಿಯವರ ಹೆಚ್ಚು ಪದ್ಯಗಳಲ್ಲಿ ಈ ಅಂಶ ಪ್ರಕಟವಾದದ್ದು ನಿಚ್ಚಳವಾಗಿಯೇ ಇದೆ. ಸತ್ಯವಾದ, ಚೆಲುವಾದ, ಅರ್ಥವತ್ತಾದ ಬಾಳನ್ನು ನೆಚ್ಚಿಕೊಂಡು ಹೋಗುವ ಈ ಕವಿ ತಮ್ಮ ಅಂತರಂಗದ ಕುರಿತೇ ಪ್ರಶ್ನೆಯೊಡ್ಡುತ್ತಾರೆ:

'ಕೀಳು ಬಾಳಿನಿಂದ ನೀನು
ಮೇಲಕೆತ್ತಲಾರೆಯೇನು? (ಒಳ್ಗರಿ-ಕಾವ್ಯಾಕ್ಷಿ)
ಕವಿಯಲ್ಲಿ ಎಂಥ ಕಟುವಾದ ಧೈರ್ಯ, ಸಮಾಜದ ಗಂಭೀರ ಸ್ವರೂಪ ಬಾಯಿಬಿಚ್ಚಿದೆ:
ವಿಧಿ ಮಾಟದೇರಾಟ ಹೋರಾಟಗಳಿಗೆಲ್ಲ
ಎದೆಗೊಟ್ಟು ನಿಲ್ಲು ಜೀವ;
ಕಲ್ಲು ಕಲ್ಲಾಗಲೆದೆ ಸಂಕಷ್ಟ ಸಂತತೆಗೆ---- (ನಂಜುಂಡನಾಗಿ ಬಾಳು- ಕಾವ್ಯಾಕ್ಷಿ)
ಬಾಳಿನುಯ್ಯಾಲೆಯನು ತಾಳ್ಮೆಯಲಿ ತೂಗು (ತಾಳ್ಮೆ - ಕಾವ್ಯಾಕ್ಷಿ)

'ಮಧುರ ಚೆನ್ನರ ನೆನಪಿಗೆ' ಮಧುರ ಚೆನ್ನ ನಮ್ಮ ನಾಡಿನ ಜಾನಪದ ಸೊಗಡನ್ನು ಜನತೆಗೆ ನಾಡು ನುಡಿಗೆ ಸೇವೆ ಸಲ್ಲಿಸಿದ ವ್ಯಕ್ತಿ ಮತ್ತು ಬೇಂದ್ರೆಯವರ ಮೇಲೆ ಪ್ರಭಾವ ಬೀರಿದ ವ್ಯಕ್ತಿ. ಅಂಥವರನ್ನು ಕುರಿತು ಕಣವಿಯವರು ಈ ಕವನ ಬರೆದಿದ್ದಾರೆ. ಅವರಾಡುವ ನುಡಿಯಿಂದ ಜನಪದ ಸಾಹಿತ್ಯ ಸೃಷ್ಟಿಯಾದ ನಂತರ ಅದಕ್ಕೆ ಸಂಗೀತದೊಡನೆ ಮೇಳೈಸಿ ಜನಸಾಮಾನ್ಯರಿಗೆ ಜನಪದ ಸಾಹಿತ್ಯ ಸವಿಯನ್ನು ನೀಡಿದವರು. ಅದನ್ನು ಕವಿಯು ಈ ರೀತಿ ಹೇಳುತ್ತಾರೆ :

ಹೂವು ಹೂವಿನ ಜೇನು ತೊಳೆಬಿಡಿಸಿ
ಸುಗ್ಗಿಯಮಾಡಿದರಂದು ನಾಡನಲಿಸಿ (ಮಧುರ ಚೆನ್ನರ ನೆನಪಿಗೆ - ದಾರಿದೀಪ)

ವಿಮರ್ಶಾತ್ಮಕವಾಗಿ ಹೇಳುವುದಾದರೂ ಹಳೆಯ ಕಸದ ರಸವನ್ನು ಗಂಧದೊಡನೆ ತೇದು ಗಮಗಮಿಸುವ ರೀತಿ ಎಂದು ಹೇಳಬಹುದು. ಜನಪದ ಸಾಹಿತ್ಯದ ಎಲ್ಲಾ ರೀತಿ ಎಳೆ ಎಳೆ ಹಿಡಿಸಿ ಸಂಗೀತದೊಡನೆ ಮೇಳೈಸಿ ನಾಡನ್ನು ಕಟ್ಟಿದರು. ನಾಡಿಗೆ ನಮ್ಮ ಜನಪದ ಸಂಸ್ಕೃತಿಯನ್ನು ಪರಿಚಯಿಸಿದರು. ಪ್ರೀತಿಯ ಜಲಧಾರೆಯನ್ನು ಜನಮನಕ್ಕೆ ಪರಿಚಯಿಸಿ ತನುಮನ ಧನ ಅರ್ಪಿಸಿದ ಮಧುರ ಚೆನ್ನರವರನ್ನು ಕಣವಿಯವರು ಸ್ಮರಿಸುವ ರೀತಿ ಹೀಗೆ:

ತನುವು ನಿಸದಿಗೆಗೆಲ್ಲು, ಮನವು ಮಾಸತಿಕಲ್ಲು
ನಿಮ್ಮ ಸಾಧನೆಗೊಂದು ವೀರಗಲ್ಲು!
ಭಾವ ದೇವಾಲಯದಿ ನಿತ್ಯ ನಂದಾದೀಪ
ಶರಣ ಶರಣೆಂಬುದೇ ಕೊನೆಯ ಸೊಲ್ಲು


(ಮಧುರ ಚೆನ್ನರ ನೆನಪಿಗೆ– ದಾರಿದೀಪ)

ತಮ್ಮ ಜೀವಮಾನವೆಲ್ಲವನ್ನೂ ನಾಡಿಗೆ ಸಮರ್ಪಿಸಿ, ಜನಪದ ಕಾವ್ಯ ಜನಸಾಮಾನ್ಯರಿಗೆ ವಿಡಂಬಿಸಿದ ರೀತಿಯನ್ನು ದೇಹ ನಿಶದೀಕಲ್ಲ ಮನಸ್ಸು ಮಾಸತಿಕಲ್ಲು ಎನ್ನುವ ರೀತಿಯಲ್ಲಿ ನಮ್ಮ ನಾಡಿಗೆ ಮರೆಯಲಾರದಂತಹ ಕೆಲಸಮಾಡಿದ್ದಾರೆ.

ಜಿ.ಎಸ್.ಎಸ್. ಮತ್ತು ಕಣವಿಯವರು ಸ್ವಾತಂತ್ರ್ಯ ಪೂರ್ವದ ಘಟನೆ ಮತ್ತು ತುರ್ತು ಪರಿಸ್ಥಿತಿಯಂಥ ಘಟನೆಗಳನ್ನು ಸಮಾಜಮುಖಿಯಾಗಿ ಚಿತ್ರಿಸಿದ್ದಾರೆ. ರಾಜಕೀಯ ಪರಿಸ್ಥಿತಿ ಹಾಗೂ ಈಸ್ಟ್ ಇಂಡಿಯಾ ಆಡಳಿತವನ್ನು ಕಟಕಿಸುವಂತಹ ಕವನಗಳನ್ನು ಬರೆದಿದ್ದಾರೆ.

□□□

ಕೆ.ಸಂ. ೧೯೬೪ – ೫೦೦ ಪ್ರತಿಗಳು – ಮೈವಿಮು – ೨೨–೦೨–೨೦೧೪



ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು